ಶನಿವಾರ ಡಿಸೆಂಬರ್ 13 2025 ₹ 7.00
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮೆಸ್ಸಿ ಪ್ರವಾಸ

ಫುಟ್‌ಬಾಲ್ ದಂತಕತೆ, ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರ ಮೂರು ದಿನಗಳ ಭಾರತ ಪ್ರವಾಸ ಶನಿವಾರ ಆರಂಭವಾಗಲಿದೆ

ಕ್ರಿಸ್‌ಮಸ್ ಸಿದ್ಧತೆ

ಕ್ರಿಸ್‌ಮಸ್ ಹಬ್ಬ ಸಮೀಪಿಸುತ್ತಿರುವುದರಿಂದ ಕೇರಳದಲ್ಲಿ ವ್ಯಾಪಾರಿಯೊಬ್ಬರು ಸಾಂಟಾಕ್ಲಾಸ್ ಮುಖವಾಡ ಮತ್ತು ಗೊಂಬೆಗಳ ಮಾರಾಟದಲ್ಲಿ ತೊಡಗಿದ್ದರು

ಸೆಟ್ಟೇರಿತು 'ಕ್ಲಾಸ್ ಆಫ್ ಮೈಸೂರು'



ಸಾಂಸ್ಕೃತಿಕ ನಗರಿ ಮೈಸೂರಿನ ವ್ಯಕ್ತಿಗಳ ಕಥೆಯನ್ನು ಹೇಳುವ 'ಕ್ಲಾಸ್ ಆಫ್ ಮೈಸೂರು' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಸಿನಿಮಾದಲ್ಲಿ ಅಭಿನಯಿಸುತ್ತಿರುವ ನಟ ದತ್ತಣ್ಣ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರೆ, ನಟಿ ತಾರಾ ಶೀರ್ಷಿಕೆ ಅನಾವರಣಗೊಳಿಸಿದರು. ಎಲ್ಲಾ ಕಲಾವಿದರುಗಳು ರೇಷ್ಮೆ ಪಂಚೆ, ಮೈಸೂರು ಪೇಟದೊಂದಿಗೆ ಆಗಮಿಸಿದ್ದು, ವೇದಿಕೆ ಮೇಲೆ ಮೈಸೂರು ಅರಮನೆ, ಅಂಬಾರಿ ಸೆಟ್ ಸಿದ್ದಗೊಳಿಸಿದ್ದು ವಿಶೇಷವಾಗಿತ್ತು.

ಗೌತಮ್ ಬಸವರಾಜು ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಅವರು ಈ ಹಿಂದೆ 'ಯಥಾಭವ' ಎಂಬ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದರು. 'ಇಲ್ಲಿನ ಅರಮನೆ, ಅಂಬಾರಿ ಸಿನಿಮಾದ ಕಥೆಯನ್ನು ಹೇಳುತ್ತಿದೆ. ನಿವೃತ್ತಿ ಬದುಕಲ್ಲಿ ನಾವು ಏನನ್ನು ಕಳೆದುಕೊಂಡಿರುತ್ತೇವೋ, ಅದನ್ನು ಅನುಭವಿಸಿದರೆ ಹೇಗಿರುತ್ತದೆ ಎಂಬುದನ್ನು ತೋರಿಸುತ್ತಿದ್ದೇವೆ. ಮಿಕ್ಕಿದ್ದನ್ನು ಈಗಲೇ ಹೇಳಿದರೆ ಚಿತ್ರದ ಸಾರಾಂಶವನ್ನು ಬಿಟ್ಟುಕೊಟ್ಟಂತೆ ಆಗುತ್ತದೆ. ಬಹುತೇಕ ಪಾತ್ರಗಳು ಅಂತಿಮವಾಗಿದ್ದು, ಇಬ್ಬರು ನಾಯಕಿಯರ ಹುಡುಕಾಟ ನಡೆದಿದೆ. ಗೋವಾ, ಮಂಗಳೂರು, ಕೊಡಗು, ಬೆಂಗಳೂರು ಸುತ್ತಮುತ್ತ ಎರಡು ಹಂತಗಳಲ್ಲಿ 40 ದಿನಗಳ ಕಾಲ ಚಿತ್ರೀಕರಣ ನಡೆಸುವ ಯೋಜನೆಯಿದೆ. ಫೆಬ್ರುವರಿ 2ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ' ಎಂದರು ನಿರ್ದೇಶಕ.

ದತ್ತಣ್ಣ, ತಾರಾ ಅನುರಾಧ, ರಂಗಾಯಣ ರಘು, ತಬಲ ನಾಣಿ, ವೈಜನಾಥ ಬಿರಾದಾರ್, ಶರತ್ ಲೋಹಿತಾಶ್ವ ಮುಂತಾದವರು ಪ್ರಮುಖ ಪಾತ್ರಗಳಲ್ಲಿದ್ದಾರೆ. ಮಾಕ್ಸ್ ಎಂಟರ್‌ಟೈನ್‌ಮೆಂಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ದೇಶಕರೇ ಬಂಡವಾಳ ಹೂಡುತ್ತಿದ್ದಾರೆ.

'ಒಂದೊಂದು ಪಾತ್ರಕ್ಕೂ ಅದರದ್ದೇ ಆದ ಹಿಂದಿನ ಕಥೆ ಇದೆ. ಪ್ರಸ್ತುತ ಬರುತ್ತಿರುವ ಸಿನಿಮಾಗಳನ್ನು ಹೊರತುಪಡಿಸಿ, ಬೇರೆ ಆಯಾಮದ ವಿಷಯವನ್ನು ಈ ತಂಡ ಆಯ್ದುಕೊಂಡಿದೆ. ಮಕ್ಕಳ ಬದುಕಿಗೆ ಅರ್ಥ ಕೊಡುವುದು ತಾಯಿ. ಆ ಪಾತ್ರದಲ್ಲಿ ಅಭಿನಯಿಸಲು ಅವಕಾಶ ಸಿಕ್ಕಿದೆ. ಮೈಸೂರನ್ನು ಸಾಂಕೇತಿಕವಾಗಿ ತೆಗೆದುಕೊಂಡು, ಸಿನಿಮಾ ರೂಪದಲ್ಲಿ ತೋರಿಸಲಾಗುತ್ತಿದೆ' ಎಂದರು ತಾರಾ.

ನಾಗಾರ್ಜುನ ಶರ್ಮ ಸಾಹಿತ್ಯದ ನಾಲ್ಕು ಹಾಡುಗಳಿಗೆ ಜೋ ಕೋಸ್ಟ ಸಂಗೀತ ಸಂಯೋಜಿಸುತ್ತಿದ್ದಾರೆ. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ಮಾಸ್ತಿ ಸಂಭಾಷಣೆ ಚಿತ್ರಕ್ಕಿದೆ.

ಜೀ5ನಲ್ಲಿ 'ಗ್ರೀನ್'

ಗೋಪಾಲಕೃಷ್ಣ ದೇಶಪಾಂಡೆ

ಕೆಲ ತಿಂಗಳ ಹಿಂದೆ ತೆರೆಕಂಡ ರಾಜ್ ವಿಜಯ್ ನಿರ್ಮಾಣ ಹಾಗೂ ನಿರ್ದೇಶನದ 'ಗ್ರೀನ್' ಚಿತ್ರ ಜೀ5 ಒಟಿಟಿಯಲ್ಲಿ ಸ್ಟ್ರೀಮ್ ಆಗುತ್ತಿದೆ. ಚಿತ್ರದ ಪ್ರಮುಖ ಪಾತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ, ಬಾಲಾಜಿ ಮನೋಹರ್ ನಟಿಸಿದ್ದಾರೆ.

ಹಲವು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಚಲನಚಿತ್ರೋತ್ಸಗಳಲ್ಲಿ ಪ್ರದರ್ಶನಗೊಂಡಿರುವ ಈ ಸಿನಿಮಾ, ಸೈಕಲಾಜಿಕಲ್ ಥ್ರಿಲ್ಲರ್ ಕಥಾಹಂದರ ಹೊಂದಿದೆ. 'ತನ್ನ ಇಡೀ ಜೀವನವನ್ನೇ ನಿಯಂತ್ರಿಸುತ್ತಿರುವ ತನ್ನೊಳಗಿನ ರಾಕ್ಷಸನಿಂದ ಹೊರಬರಲು ಹೋರಾಡುವ ನಾಯಕನ ಕಥೆಯೇ ಗ್ರೀನ್. ತನ್ನ ನಿಯಂತ್ರಣವನ್ನು ಕಳೆದುಕೊಂಡು ನಾಯಕ ಭಯ ಮತ್ತು ಗೊಂದಲದ ವ್ಯೂಹದಲ್ಲಿ ಸಿಲುಕುತ್ತಾನೆ. ಈ ನಡುವೆ ತಾನು ನಿಜವಾಗಿಯೂ ಯಾರು ಎಂಬುದನ್ನು ಹುಡುಕಲು ಪ್ರಯತ್ನಿಸುತ್ತಾನೆ' ಇದುವೇ ಕಥೆಯ ಸಾರಾಂಶ ಎಂದಿದ್ದಾರೆ ರಾಜ್ ವಿಜಯ್. ಆರ್.ಜೆ.ವಿಕ್ಕಿ, ವಿಶ್ವನಾಥ್ ಮಾಂಡಲೀಕ, ಶಿವ ಮಂಜು, ಡಿಂಪಿ ಫಧ್ಯಾ, ಮುರುಡಯ್ಯ, ರಾಮಚಂದ್ರ, ಗಿರೀಶ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ಜ.1ಕ್ಕೆ 'ತೀರ್ಥರೂಪ ತಂದೆಯವರಿಗೆ' ರಿಲೀಸ್

ರಚನಾ ಇಂದರ್

'**ಹೊಂದಿಸಿ ಬರೆಯಿರಿ**' ಸಿನಿಮಾ ಖ್ಯಾತಿಯ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ನಿರ್ದೇಶಿಸಿರುವ 'ತೀರ್ಥರೂಪ ತಂದೆಯವರಿಗೆ' ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದ್ದು, ಚಿತ್ರವು ಜ.1ರಂದು ತೆರೆಕಾಣಲಿದೆ.

ಟ್ರೇಲರ್ ಬಿಡುಗಡೆಗೆ ನಟ ನವೀನ್ ಶಂಕರ್, ನಟಿಯರಾದ ಐಶಾನಿ ಶೆಟ್ಟಿ, ಭಾವನಾ ರಾವ್ ಸೇರಿದಂತೆ 'ಹೊಂದಿಸಿ ಬರೆಯಿರಿ' ತಂಡ ಸಾಥ್ ಕೊಟ್ಟಿತು. ಈ ಸಿನಿಮಾದಲ್ಲಿ ತೆಲುಗಿನ ಕಿರುತೆರೆಯಲ್ಲಿ ಹೆಸರು ಮಾಡಿರುವ ಕನ್ನಡದ ನಿಹಾರ್ ಮುಕೇಶ್ ನಾಯಕನಾಗಿ ನಟಿಸಿದ್ದು, 'ಅಕ್ಷರ' ಎಂಬ ಪಾತ್ರದಲ್ಲಿ ನಟಿ ರಚನಾ ಇಂದರ್ ಜೋಡಿಯಾಗಿದ್ದಾರೆ. ಬದುಕಿನಲ್ಲಾದ ಒಂದು ಚಿಕ್ಕ ತಪ್ಪು ಕುಟುಂಬವನ್ನು ಎಷ್ಟು ದೂರ ಮಾಡುತ್ತದೆ. ಅದು ಒಂದಾಗಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬ ಕಥಾಹಂದರ ಚಿತ್ರದಲ್ಲಿದೆ.

'ಕನ್ನಡದಲ್ಲಿ ತುಂಬಾ ದಿನಗಳ ಬಳಿಕ ಬಣ್ಣ ಹಚ್ಚಿದ್ದೇನೆ. 'ನಾನು ನನ್ನ ಕನಸು' ಆದಮೇಲೆ ರಾಜೇಶ್ ನಟರಂಗ ಅವರ ಜೊತೆಗೆ ತೆರೆಹಂಚಿಕೊಂಡಿದ್ದೇನೆ' ಎಂದು ನಟಿ ಸಿತಾರಾ.

ನಿಹಾರ್ ಮುಕೇಶ್

'ಇದು ಬೇರೆ ಕಥೆಗೆ ಇಟ್ಟ ಶೀರ್ಷಿಕೆ. ನಾನು ನಿಹಾರ್ ಭೇಟಿಯಾದಾಗ ಈ ಕಥೆ ಬಗ್ಗೆ ಚರ್ಚೆ ಮಾಡಿದ್ದೆವು. ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಸೆಳೆಯಲು ಶೀರ್ಷಿಕೆ ಮುಖ್ಯ. ಅದು ಜನಕ್ಕೆ ಹತ್ತಿರವಾಗಿ ಇರಬೇಕು ಹಾಗೂ ಕಥೆಗೆ ಸೂಕ್ತವಾಗಿರಬೇಕು. ಚಿತ್ರದಲ್ಲಿ ಕಲಾವಿದರ ದಂಡೇ ಇದೆ. ಎಲ್ಲಾ ಪಾತ್ರಗಳು ಸಹಜವಾಗಿ, ಉತ್ತಮವಾಗಿ ಮೂಡಿಬಂದಿವೆ' ಎಂದರು ರಾಮೇನಹಳ್ಳಿ ಜಗನ್ನಾಥ್.

ನಟ ನಿಹಾರ್ ಮುಕೇಶ್ ಮಾತನಾಡಿ, 'ನಾನು ಮೈಸೂರು ಹುಡುಗ. ಧಾರಾವಾಹಿಗಳ ಜೊತೆಗೆ ನನ್ನ ಪಯಣ ಆರಂಭವಾಯಿತು. 'ಹೊಂದಿಸಿ ಬರೆಯಿರಿ' ಚಿತ್ರ ನೋಡಿದ ಮೇಲೆ ಜಗನ್ನಾಥ್ ಅವರ ಜೊತೆ ಕೆಲಸ ಮಾಡಬೇಕು ಎಂದುಕೊಂಡೆ. ಅದು ನನಸಾಗಿದೆ. ನಾನು 'ಪೃಥ್ವಿ' ಎಂಬ ಪಾತ್ರ ಮಾಡಿದ್ದೇನೆ' ಎಂದರು.

ರಾಜೇಶ್ ನಟರಂಗ, ಸಿತಾರಾ, ರವೀಂದ್ರ ವಿಜಯ್, ಅಜಿತ್ ಹಂದೆ ಸೇರಿದಂತೆ ಅನುಭವಿ ತಾರಾಬಳಗ ಚಿತ್ರದಲ್ಲಿದೆ. ಚಿತ್ರವು 'ಜೈ ಚಾಮುಂಡೇಶ್ವರಿ ಪ್ರೊಡಕ್ಷನ್ಸ್' ಮೂಲಕ ನಿರ್ಮಾಣ ಆಗಿದ್ದು, ರಾಮೇನಹಳ್ಳಿ ಜಗನ್ನಾಥ್ ಅವರೇ ಕಥೆ ಬರೆದಿದ್ದಾರೆ. 'ಹೊಂದಿಸಿ ಬರೆಯಿರಿ' ಚಿತ್ರ ನಿರ್ಮಾಣ ಮಾಡಿದ್ದ 'ಸಂಡೇ ಸಿನಿಮಾಸ್' ಈ ಚಿತ್ರವನ್ನು ಪ್ರಸ್ತುತಪಡಿಸುತ್ತಿದೆ. ಸಿನಿಮಾ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಚಿತ್ರೀಕರಣಗೊಂಡಿದೆ. ಮೊದಲು ಕನ್ನಡ ಭಾಷೆಯಲ್ಲಿ ಬಿಡುಗಡೆಯಾಗಲಿದ್ದು, ಆ ಬಳಿಕ ತೆಲುಗು ಆವೃತ್ತಿಯು 'ಪ್ರಿಯಮೈನ ನಾನಾಕು' ಎಂಬ ಶೀರ್ಷಿಕೆಯೊಂದಿಗೆ ರಿಲೀಸ್ ಆಗಲಿದೆ. ಚಿತ್ರಕ್ಕೆ ದೀಪಕ್ ಯರಗೇರಾ ಛಾಯಾಚಿತ್ರಗ್ರಹಣ, ಜೋ ಕಾಸ್ಟ ಸಂಗೀತ ಸಂಯೋಜನೆ ಮತ್ತು ಪ್ರಶಾಂತ್ ರಾಜಪ್ಪ ಸಂಭಾಷಣೆಯಿದೆ.

ಡಿಜಿಸಿಎ: ನಾಲ್ವರು ಅಧಿಕಾರಿಗಳು ವಜಾ

ಇಂಡಿಗೊ ಬಿಕ್ಕಟ್ಟು: ಶುಕ್ರವಾರವೂ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ

ಮುಂಬೈ (ಪಿಟಿಐ): ಇಂಡಿಗೊ ವಿಮಾನ ಸೇವೆಯಲ್ಲಿ ಉಂಟಾದ ಭಾರಿ ವ್ಯತ್ಯಯಕ್ಕೆ ಸಂಬಂಧಿಸಿ, ನಾಲ್ವರು ವಿಮಾನ ಕಾರ್ಯಾಚರಣೆ ಇನ್‌ಸ್ಪೆಕ್ಟರ್‌ಗಳನ್ನು ನಾಗರಿಕ ವಿಮಾನಯಾನ ನಿರ್ದೇಶನಾಲಯ(ಡಿಜಿಸಿಎ) ಶುಕ್ರವಾರ ಕೆಲಸದಿಂದ ವಜಾಗೊಳಿಸಿದೆ.

ಡಿಜಿಸಿಎ ಹಿರಿಯ ಅಧಿಕಾರಿಗಳಾಗಿರುವ ವಿಮಾನ ಕಾರ್ಯಾಚರಣೆ ಇನ್‌ಸ್ಪೆಕ್ಟರ್‌ಗಳು ವಿಮಾನಯಾನದ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಾರೆ. ಸುರಕ್ಷತೆ, ಸಮರ್ಪಕ ಸೇವೆಯನ್ನು ಖಚಿತಪಡಿಸಿಕೊಳ್ಳುವ ಹೊಣೆ ಅವರದ್ದಾಗಿರುತ್ತದೆ.

'ಇತ್ತೀಚೆಗೆ ನಡೆದ ಇಂಡಿಗೊ ವಿಮಾನ ಸಂಚಾರದಲ್ಲಿನ ಬಿಕ್ಕಟ್ಟಿನಲ್ಲಿ ವಿಮಾನ ಕಾರ್ಯಾಚರಣೆ ಇನ್‌ಸ್ಪೆಕ್ಟರ್‌ಗಳ ಲೋಪವು ಇರುವುದರಿಂದ ನಾಲ್ವರನ್ನು ವಜಾಗೊಳಿಸಲಾಗಿದೆ. ಅವರು ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

ಸಿಇಒ ಮತ್ತೆ ವಿಚಾರಣೆಗೆ: ಇಂಡಿಗೊ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪೀಟರ್ ಎಲ್ಬರ್ಸ್ ಅವರು ಶುಕ್ರವಾರ ಮತ್ತೆ ವಿಚಾರಣೆಗೆ ಹಾಜರಾಗಿದ್ದಾರೆ.

ಬಿಕ್ಕಟ್ಟಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಗುರುವಾರ ಹಾಜರಾಗುವಂತೆ ಡಿಜಿಸಿಎನ ತನಿಖಾ ತಂಡವು ಪೀಟರ್ ಅವರಿಗೆ ನಿರ್ದೇಶನ ನೀಡಿತ್ತು. ಗುರುವಾರ ಹಾಜರಾಗಿದ್ದ ಅವರನ್ನು ಶುಕ್ರವಾರ ಮತ್ತೆ ವಿಚಾರಣೆಗೆ ಕರೆಯಲಾಗಿತ್ತು.

ದಿನದ ಬೆಳವಣಿಗೆ

- 105;ದೆಹಲಿಯಿಂದ ರದ್ದಾದ ವಿಮಾನಗಳ ಸಂಖ್ಯೆ
- ಇಂಡಿಗೊ ಸಿಇಒ ಪೀಟರ್ ಎಲ್ಬರ್ಸ್ ವಿಚಾರಣೆ

ತಜ್ಞರ ನೇಮಕ

ವಿಮಾನ ಸಂಚಾರ ವ್ಯತ್ಯಯಕ್ಕೆ ಕಾರಣವಾಗಿರುವ ಅಂಶಗಳ ಬಗ್ಗೆ ಅಧ್ಯಯನ ನಡೆಸಲು ಸಂಸ್ಥೆಯ ಹೊರಗಿನ ವಿಮಾನಯಾನ ತಜ್ಞರನ್ನು ನೇಮಿಸಿರುವುದಾಗಿ ಇಂಡಿಗೊ ಶುಕ್ರವಾರ ತಿಳಿಸಿದೆ.

'ಹಿರಿಯ ವಿಮಾನಯಾನ ತಜ್ಞ ಕ್ಯಾಪ್ಟನ್ ಜಾನ್ ಇಲ್ಸನ್ ನೇತೃತ್ವದ ತಂಡವು ಸ್ವತಂತ್ರವಾಗಿ ಅಧ್ಯಯನ ನಡೆಸಿ ವರದಿ ನೀಡಲಿದೆ' ಎಂದು ಇಂಡಿಗೊ ಹೇಳಿದೆ.

ಭಾರತೀಯ ಸ್ಪರ್ಧಾ ಆಯೋಗದಿಂದ ಪರಿಶೀಲನೆ

ನವದೆಹಲಿ (ಪಿಟಿಐ): ದೇಶದ ದೊಡ್ಡ ವಿಮಾನಯಾನ ಸಂಸ್ಥೆ ಇಂಡಿಗೊ ನಿಯಮಗಳನ್ನು ಉಲ್ಲಂಘಿಸಿದೆಯೇ ಎಂಬ ಬಗ್ಗೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಪರಿಶೀಲನೆ ನಡೆಸುತ್ತಿದೆ.

ವಿಮಾನಯಾನ ಸೇವಯಲ್ಲಿ ಇಂಡಿಗೊ ಮೆರೆದಿರುವ ಪ್ರಾಬಲ್ಯ, ಯಾವೆಲ್ಲ ಮಾರ್ಗದಲ್ಲಿ ಪ್ರಾಬಲ್ಯ ಹೆಚ್ಚಿದೆ ಮತ್ತು ಅದನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಯುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಬಗ್ಗೆ ಯಾವುದೇ ಅಧಿಕೃತ ದೂರುಗಳು ಬಂದಿಲ್ಲ. ಆದರೆ ಸಿಸಿಐ ಸ್ವಯಂಪ್ರೇರಿತವಾಗಿ ಪರಿಶೀಲನೆ ನಡೆಸುತ್ತಿದೆ ಎಂದು ಹೇಳಿದ್ದಾರೆ.

'ಆರ್ಥಿಕತೆಯಲ್ಲಿ ದಾಖಲೆ ಮಟ್ಟದ ದೋಷ'

ಪ್ರಸ್ತುತ ಆಡಳಿತದಲ್ಲಿ ಆರ್ಥಿಕತೆಯು ದಾಖಲೆಯ ದೋಷಗಳನ್ನು ಹೊಂದಿದೆ ಮತ್ತು ಸರಿಯಲ್ಲದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಕಾಂಗ್ರೆಸ್ ಸಂಸದ ದೀಪೇಂದರ್ ಸಿಂಗ್ ಹೂಡಾ ಅವರು ಆರೋಪಿಸಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಪೂರಕ ಅಂದಾಜುಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ರೂಪಾಯಿ ಮೌಲ್ಯ ಕುಸಿತ, ಹೆಚ್ಚುತ್ತಿರುವ ಅಸಮಾನತೆ, ಸಾಲ ಹೆಚ್ಚಳ ಮತ್ತು ಪ್ರಮುಖ ವಲಯಗಳಲ್ಲಿ ಸ್ಪರ್ಧೆಗೆ ಅವಕಾಶ ಇಲ್ಲದಾಗಿರುವುದರ ಬಗ್ಗೆ ಕಳವಳ ವ್ಯಕ್ತಪಡಿಸಿದರು.

'ಪ್ರಮುಖ ವಲಯಗಳಲ್ಲಿ ಏಕಸ್ವಾಮ್ಯವನ್ನು ಸರ್ಕಾರ ಬೆಂಬಲಿಸುತ್ತಿದೆ. ಈ ಮಟ್ಟಿನ ಅಧಿಕಾರ ಕೇಂದ್ರೀಕರಣವನ್ನು ನಾನು ಕಂಡಿರಲಿಲ್ಲ. ಉದಾಹರಣೆಗೆ ವಿಮಾನಯಾನ ಮಾರುಕಟ್ಟೆಯು ಶೇ 65ರಷ್ಟು ಇಂಡಿಗೊವನ್ನು ಮತ್ತು ಶೇ 26ರಷ್ಟು ಏರ್‌ಇಂಡಿಯಾವನ್ನು ಅವಲಂಬಿಸಿದೆ. ಹಾಗಾಗಿ ಆ ಎರಡು ಸಂಸ್ಥೆಗಳು ನಿರ್ಧರಿಸಿದ ದರದಲ್ಲೇ ಪ್ರಯಾಣಿಸಬೇಕೇ ಹೊರತು ಬೇರೆ ಆಯ್ಕೆಗಳಿಲ್ಲ' ಎಂದು ಹೇಳಿದರು.

54 ಇಂಡಿಗೊ ವಿಮಾನ ಹಾರಾಟ ರದ್ದು

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಶುಕ್ರವಾರ ಇಂಡಿಗೊ ಸಂಸ್ಥೆಯ 54 ವಿಮಾನಗಳ ಹಾರಾಟ ರದ್ದಾಗಿದೆ.

ಶುಕ್ರವಾರ ದೇಶದ ವಿವಿಧ ಭಾಗಗಳಿಂದ ಬೆಂಗಳೂರಿಗೆ ಬರಬೇಕಿದ್ದ 31 ಹಾಗೂ ಬೆಂಗಳೂರಿನಿಂದ ದೇಶದ ವಿವಿಧ ಭಾಗಕ್ಕೆ ಸಂಚರಿಸಬೇಕಿದ್ದ 23 ವಿಮಾನಗಳ ಕಾರ್ಯಾಚರಣೆ ರದ್ದಾಗಿದೆ ಎಂದು ಮೂಲಗಳು ದೃಢಪಡಿಸಿವೆ.

ಡಿ.1ರಿಂದಲೂ ಇಂಡಿಗೊ ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗುತ್ತಿದೆ. ಕೇಂದ್ರ ಸರ್ಕಾರ ಹೊಸ ಸಿಬ್ಬಂದಿ ವಿರಾಮ ನೀತಿಯನ್ನು ತಾತ್ಕಾಲಿಕವಾಗಿ ಮುಂದೂಡಿದ್ದರೂ ಇಂಡಿಗೊ ವಿಮಾನಯಾನ ಸಂಸ್ಥೆ ಸಹಜ ಸ್ಥಿತಿಗೆ ಬರಲು ಸಾಧ್ಯವಾಗುತ್ತಿಲ್ಲ.

ಜನಗಣತಿಗೆ ₹11,718 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವದ ಅತಿದೊಡ್ಡ ಆಡಳಿತಾತ್ಮಕ ಮತ್ತು ಸಂಖ್ಯಾಶಾಸ್ತ್ರೀಯ ಕಾರ್ಯಕ್ಕೆ ವೇದಿಕೆ ಸಿದ್ಧಪಡಿಸಿರುವ ಕೇಂದ್ರ ಸರ್ಕಾರವು 2027ರ ಜನಗಣತಿ ನಡೆಸಲು ₹11,718.24 ಕೋಟಿಗಳ ಬಜೆಟ್‌ಗೆ ಅನುಮೋದನೆ ನೀಡಿದೆ.

ಮೊದಲ ಬಾರಿಗೆ ಡಿಜಿಟಲ್ ವಿಧಾನದಲ್ಲಿ ನಡೆಯಲಿರುವ ಜನಗಣತಿಗೆ ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. 2027ರ ಜನಗಣತಿಯು ದೇಶದಲ್ಲಿ 16ನೇ ಮತ್ತು ಸ್ವಾತಂತ್ರ್ಯದ ನಂತರದ 8ನೇ ಜನಗಣತಿಯಾಗಲಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಎಲೆಕ್ಟ್ರಾನಿಕ್ ರೂಪದಲ್ಲಿ ಜಾತಿ ದತ್ತಾಂಶ ಸಂಗ್ರಹ

- ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು; 2026ರ ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗೆ ಮನೆ ಪಟ್ಟಿ ಮತ್ತು ವಸತಿ ಗಣತಿ ಮತ್ತು 2027ರ ಫೆಬ್ರುವರಿಯಲ್ಲಿ ಜನಸಂಖ್ಯಾ ಗಣತಿ. (ಲಡಾಖ್, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಜನಸಂಖ್ಯಾ ಗಣತಿಯು 2026ರ ಸೆಪ್ಟೆಂಬರ್‌ನಲ್ಲಿ ನಡೆಯಲಿದೆ)
- ಸುಮಾರು 30 ಲಕ್ಷ ಕ್ಷೇತ್ರ ಕಾರ್ಯಕರ್ತರು ಜನಗಣತಿಯಲ್ಲಿ ಭಾಗಿ
- ದತ್ತಾಂಶ ಸಂಗ್ರಹಣೆಗಾಗಿ ಮೊಬೈಲ್ ಅಪ್ಲಿಕೇಶನ್ ಮತ್ತು ಮೇಲ್ವಿಚಾರಣಾ ಉದ್ದೇಶಕ್ಕಾಗಿ ಕೇಂದ್ರೀಯ ಪೋರ್ಟಲ್ ಬಳಸಲಾಗುತ್ತದೆ.
- ಜನಗಣತಿಯನ್ನು ಯಶಸ್ವಿಯಾಗಿ ನಡೆಸಲು ಸ್ಥಳೀಯ ಮಟ್ಟದಲ್ಲಿ 18,600 ತಾಂತ್ರಿಕ ಮಾನವಶಕ್ತಿಯನ್ನು 550 ದಿನಗಳವರೆಗೆ ನಿಯೋಜಿಸಲಾಗುತ್ತದೆ. ಇದರಿಂದಾಗಿ, ಸರಿಸುಮಾರು 1.02 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಯಾಗಲಿದೆ.
- ಜನಸಂಖ್ಯಾ ಎಣಿಕೆಯಲ್ಲಿ ಜಾತಿ ದತ್ತಾಂಶವನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಸಂಗ್ರಹಿಸಲಾಗುತ್ತದೆ.
- ಆಂಡ್ರಾಯ್ಡ್ ಮತ್ತು ಐಒಎಸ್ ಆವೃತ್ತಿಗಳಿಗೆ ಲಭ್ಯವಿರುವ ಮೊಬೈಲ್ ಅಪ್ಲಿಕೇಶನ್ ಬಳಸಿಕೊಂಡು ದತ್ತಾಂಶ ಸಂಗ್ರಹ
- ಸಂಪೂರ್ಣ ಜನಗಣತಿ ಪ್ರಕ್ರಿಯೆಯನ್ನು ನೈಜ ಸಮಯದಲ್ಲಿ ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು 'ಜನಗಣತಿ ನಿರ್ವಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ (ಸಿಎಂಎಂಎಸ್)' ಎಂಬ ಪೋರ್ಟಲ್ ಅಭಿವೃದ್ಧಿ.
- ಸ್ವಯಂ-ಗಣತಿ ಮಾಡುವ ಆಯ್ಕೆಯನ್ನು ಸಾರ್ವಜನಿಕರಿಗೆ ಒದಗಿಸಲಾಗುವುದು.

ಅಂಗವಿಕಲ ಅಭ್ಯರ್ಥಿಗಳಿಗೆ 'ಆಯ್ಕೆಯ ಕೇಂದ್ರ' ಹಂಚಿಕೆ

ನವದೆಹಲಿ (ಪಿಟಿಐ): ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್ಸಿ) ತನ್ನ ಎಲ್ಲ ಪರೀಕ್ಷೆಗಳಲ್ಲಿ ಅಂಗವಿಕಲ ಅಭ್ಯರ್ಥಿಗಳಿಗೆ 'ಆಯ್ಕೆಯ ಕೇಂದ್ರ'ವನ್ನು ಹಂಚಿಕೆ ಮಾಡಲು ನಿರ್ಧರಿಸಿದೆ.

ಅಂಗವಿಕಲ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಪ್ರಯಾಣಿಸಲು, ತಂಗಲು ಹೆಚ್ಚಿನ ಸಮಸ್ಯೆ ಎದುರಿಸುತ್ತಾರೆ. ಅವರಿಗೆ ಅನುಕೂಲಕರವಾದ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಲು ಅವಕಾಶ ನೀಡುವುದಷ್ಟೇ ಅಲ್ಲದೆ, ಅವರು ಅರ್ಜಿಯಲ್ಲಿ ನಮೂದಿಸಿದ ಮೊದಲ ಕೇಂದ್ರವನ್ನು ಅವರಿಗೆ ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ನಿರ್ಧರಿಸಿದೆ. ಇದರಿಂದ ಅಂಗವಿಕಲ ವ್ಯಕ್ತಿಗಳು ಪರೀಕ್ಷೆಗೆ ಸುಲಭವಾಗಿ ಹಾಜರಾಗಲು ಸಹಕಾರಿ ಆಗಲಿದೆ.

'ಕಳೆದ 5 ವರ್ಷಗಳ ಪರೀಕ್ಷಾ ಕೇಂದ್ರಗಳ ದತ್ತಾಂಶ ವಿಶ್ಲೇಷಿಸಿದ್ದು, ದೆಹಲಿ, ಕಟಕ್, ಪಟ್ನಾ, ಲಖನೌ ಮತ್ತು ಇತರ ಕೆಲ ಕೇಂದ್ರಗಳನ್ನು ಹೆಚ್ಚಿನ ಅಭ್ಯರ್ಥಿಗಳು ಆಯ್ಕೆ ಮಾಡುತ್ತಾರೆ. ಆ ಕೇಂದ್ರಗಳ ಸಾಮರ್ಥ್ಯಕ್ಕಿಂತ ಹೆಚ್ಚಿನ ಅಭ್ಯರ್ಥಿಗಳು ಆಯ್ಕೆ ಮಾಡಿರುವುದನ್ನು ಗಮನಿಸಲಾಗಿದೆ' ಎಂದು ಯುಪಿಎಸ್‌ಸಿ ಅಧ್ಯಕ್ಷ ಅಜಯ್‌ಕುಮಾರ್ ತಿಳಿಸಿದ್ದಾರೆ.

'ಇಂತಹ ಕೇಂದ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಅಂಗವಿಕಲ ಅಭ್ಯರ್ಥಿಗಳಿಗೆ ಸಾಧ್ಯವಾಗುವುದಿಲ್ಲ. ಅನಿವಾರ್ಯವಾಗಿ ದೂರದ ಕೇಂದ್ರ ಆಯ್ಕೆ ಮಾಡಬೇಕಾಗುತ್ತದೆ. ಇನ್ನುಮುಂದೆ, ಇಂತಹ ಕೇಂದ್ರ ಆಯ್ಕೆಗೆ ಅಂಗವಿಕಲ ಅಭ್ಯರ್ಥಿಗಳಿಗೆ ಅವಕಾಶ ದೊರೆಯಲಿದೆ. ಅಲ್ಲದೆ, ಅವರ ಆಯ್ಕೆಯ ಕೇಂದ್ರ ನಿರಾಕರಿಸದಂತೆ ನೋಡಿಕೊಳ್ಳಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

ಎಐಸಿಸಿ ಅಧ್ಯಕ್ಷ ಖರ್ಗೆ ಕಾರ್ಯವೈಖರಿ ವಿರುದ್ಧವೂ ಅಸಮಾಧಾನ

ಕೈಗೆ ಸಿಗದ ರಾಹುಲ್: 'ಕೈ' ಮುಖಂಡ

ಭುವನೇಶ್ವರ(ಪಿಟಿಐ): 'ಪಕ್ಷದ ನಾಯಕ ಹಾಗೂ ಲೋಕಸಭೆಯಲ್ಲಿ ವಿಪಕ್ಷ ನಾಯಕನಾಗಿರುವ ರಾಹುಲ್ ಗಾಂಧಿ ಅವರನ್ನು ಕಾರ್ಯಕರ್ತರು ಭೇಟಿ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸ್ವತಃ ನಾನೇ ಕಳೆದ ಮೂರು ವರ್ಷಗಳಿಂದ ಪ್ರಯತ್ನಿಸುತ್ತಿದ್ದರೂ, ಅವರ ಭೇಟಿಗೆ ಅವಕಾಶ ಸಿಗುತ್ತಿಲ್ಲ' ಎಂದು ಒಡಿಶಾದ ಕಾಂಗ್ರೆಸ್ ಮುಖಂಡ ಹಾಗೂ ಮಾಜಿ ಶಾಸಕರೊಬ್ಬರು ಟೀಕಿಸಿದ್ದಾರೆ.

ಮಾಜಿ ಶಾಸಕ ಮೊಹಮ್ಮದ್ ಮೊಕಿಮ್ ಅಸಮಾಧಾನ ಹೊರಹಾಕಿದ್ದು, ಈ ಕುರಿತು ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರಿಗೆ ಪತ್ರ ಬರೆದಿದ್ದಾರೆ.

ಬಾರಾಬತಿ-ಕಟಕ್ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಮೊಹಮ್ಮದ್ ಅವರು, ಪಕ್ಷದ ನಿಷ್ಠಾವಂತ ಕಾರ್ಯಕರ್ತ ಎಂದೇ ಹೆಸರಾಗಿದ್ದು, ಸುದೀರ್ಘ ಕಾಲದಿಂದಲೂ ಕಾಂಗ್ರೆಸ್‌ನಲ್ಲಿದ್ದಾರೆ. ಅವರ ಮಗಳು ಸದ್ಯ ಶಾಸಕಿಯಾಗಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವ ಹಾಗೂ ಕಾರ್ಯವೈಖರಿಯನ್ನು ಕೂಡ ಅವರು ಪ್ರಶ್ನಿಸಿದ್ದಾರೆ.

'ಪಕ್ಷದ ನಾಯಕತ್ವ ಹಾಗೂ ತಳಮಟ್ಟದ ಕಾರ್ಯಕರ್ತರ ನಡುವಿನ ಅಂತರ ಹೆಚ್ಚುತ್ತಿದೆ. ದೇಶದ ಜನಸಂಖ್ಯೆಯಲ್ಲಿ ಯುವ ಜನರ ಸಂಖ್ಯೆ ಶೇ 65ರಷ್ಟಿದೆ. 83 ವರ್ಷದ ಖರ್ಗೆ ಅವರಿಗೆ ದೇಶದ ಯುವ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

'ಜ್ಯೋತಿರಾದಿತ್ಯ ಸಿಂಧಿಯಾ, ಮಿಲಿಂದ್ ದೇವರ, ಹಿಮಂತ ಬಿಶ್ವ ಶರ್ಮಾ, ಜೈವೀರ ಶೆರ್ಗಿಲ್ ಸೇರಿ ಅನೇಕ ಭರವಸೆಯ ನಾಯಕರು ಪಕ್ಷ ತೊರೆದಿದ್ದಾರೆ. ನಮ್ಮನ್ನು ನಿರ್ಲಕ್ಷಿಸಲಾಗಿದೆ ಮತ್ತು ನಮ್ಮ ಮಾತುಗಳಿಗೆ ಸ್ಪಂದನೆ ಸಿಗುತ್ತಿಲ್ಲ ಎಂಬ ಭಾವನೆ ಮೂಡಿದ್ದರಿಂದಲೇ ಅವರು ಪಕ್ಷ ತೊರೆದಿದ್ದಾರೆ' ಎಂದೂ ಅವರು ಪತ್ರದಲ್ಲಿ ವಿವರಿಸಿದ್ದಾರೆ.

> **ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಪಕ್ಷವನ್ನು ಮುನ್ನಡೆಸಬೇಕು. ಸಚಿನ್ ಪೈಲಟ್, ಡಿ.ಕೆ.ಶಿವಕುಮಾರ್, ಎ.ರೇವಂತ ರೆಡ್ಡಿ, ಶಶಿ ತರೂರ್ ಅವರ ನಾಯಕತ್ವವನ್ನು ಪಕ್ಷ ಬಳಸಿಕೊಳ್ಳಬೇಕು**
> **ಮೊಹಮ್ಮದ್ ಮೊಕಿಮ್,** ಕಾಂಗ್ರೆಸ್‌ನ ಮಾಜಿ ಶಾಸಕ, ಒಡಿಶಾ

ಸರ್ಕಾರ ಒತ್ತಡಕ್ಕೆ ಸಿಲುಕಿದೆ: ರಾಹುಲ್

ನವದೆಹಲಿ (ಪಿಟಿಐ): ವಂದೇ ಮಾತರಂ ಮತ್ತು ಚುನಾವಣಾ ವ್ಯವಸ್ಥೆ ಸುಧಾರಣೆ ಕುರಿತು ಸಂಸತ್ತಿನ ಉಭಯ ಸದನಗಳಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ತಮ್ಮ ಪಕ್ಷದ ಸಂಸದರ ಕಾರ್ಯವೈಖರಿಯನ್ನು ರಾಹುಲ್ ಗಾಂಧಿ ಶ್ಲಾಘಿಸಿದರು.

ಶುಕ್ರವಾರ ನಡೆದ ಕಾಂಗ್ರೆಸ್‌ನ ಲೋಕಸಭಾ ಸದಸ್ಯರ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. ಸಭೆಯಲ್ಲಿ ಅವರು ಸಂಸದರ ಅಭಿಪ್ರಾಯಗಳನ್ನು ಆಲಿಸಿದರು.

ಚರ್ಚೆಗೆ ಕೈಗೆತ್ತಿಕೊಂಡ ಎರಡೂ ವಿಷಯಗಳಲ್ಲಿ ಸರ್ಕಾರವು ಪ್ರತಿಪಕ್ಷಗಳಿಂದ 'ಒತ್ತಡಕ್ಕೆ ಸಿಲುಕಿದೆ' ಎಂದು ರಾಹುಲ್ ಅವರು ಸಭೆಯಲ್ಲಿ ಪಕ್ಷದ ಸಂಸದರಿಗೆ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಮೂವರು ವೈದ್ಯರು, ಮೌಲ್ವಿ ಜೈಲಿಗೆ

ನವದೆಹಲಿ (ಪಿಟಿಐ): ಕೆಂಪುಕೋಟೆ ಬಳಿ ನ.10ರಂದು ನಡೆದಿದ್ದ ಕಾರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿರುವ ಮೂವರು ವೈದ್ಯರು ಹಾಗೂ ಮೌಲ್ವಿಯೊಬ್ಬರನ್ನು ದೆಹಲಿ ನ್ಯಾಯಾಲಯವು 12 ದಿನ ನ್ಯಾಯಾಂಗ ಬಂಧನಕ್ಕೊಪ್ಪಿಸಿದೆ.

ಪ್ರಮುಖ ಆರೋಪಿ ಡಾ. ಬಿಲಾಲ್ ನಸೀರ್ ಮಲ್ಲಾ ಧ್ವನಿ ಮಾದರಿಯನ್ನು ದೃಢೀಕರಿಸಲು, ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅಂಜು ಬಜಾಜ್ ಚಂದನಾ ಅವರ ಮುಂದೆ ಹಾಜರು ಪಡಿಸಲಾಯಿತು.

ಆರೋಪಿಗಳಾದ ಡಾ. ಮುಜಮ್ಮಿಲ್ ಗನ್ನೈ, ಡಾ. ಅದಿಲ್ ರಾಥರ್, ಡಾ. ಶಾಹೀನಾ ಸಯೀದ್ ಮತ್ತು ಮೌಲ್ವಿ ಇರ್ಫಾನ್ ಅಹಮದ್‌ನನ್ನು ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಯಿತು.

ಆಂಧ್ರದಲ್ಲಿ ಕಣಿವೆಗೆ ಉರುಳಿದ ಬಸ್: 9 ಸಾವು

ಕಣಿವೆಗೆ ಉರುಳಿದ ಬಸ್

ಚಿಂತೂರು/ಆಂಧ್ರಪ್ರದೇಶ (ಪಿಟಿಐ): ಅಲ್ಲೂರಿ ಸೀತಾರಾಮರಾಜು ಜಿಲ್ಲೆಯ ಚಿಂತೂರು–ಮಾರೇಡುಮಿಲ್ಲಿ ಘಾಟಿಯಲ್ಲಿ ಶುಕ್ರವಾರ ಬೆಳಗಿನ ಜಾವ 4.30ರ ಸುಮಾರಿಗೆ ಬಸ್ ಕಣಿವೆಗೆ ಉರುಳಿ 9 ಪ್ರಯಾಣಿಕರು ಮೃತಪಟ್ಟು, 23 ಮಂದಿ ಗಾಯಗೊಂಡಿದ್ದಾರೆ.

ಬಸ್ ತೆಲಂಗಾಣದಿಂದ ಚಿಂತೂರಿಗೆ ಹೋಗುವಾಗ ದುರ್ಘಟನೆ ಸಂಭವಿಸಿದೆ. ದಟ್ಟವಾದ ಮಂಜು ಆವರಿಸಿದ್ದರಿಂದ ತಿರುವಿನಲ್ಲಿ ಚಾಲಕನಿಗೆ ರಸ್ತೆ ಕಾಣಿಸದೆ ಕಂದಕಕ್ಕೆ ಉರುಳಿದೆ.

ಚಾಲಕ, ನಿರ್ವಾಹಕ ಸೇರಿ ಒಟ್ಟು 37 ಮಂದಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಮೃತಪಟ್ಟವರು, ಗಾಯಾಳುಗಳನ್ನು ಹೊರತುಪಡಿಸಿ ಐವರು ಸುರಕ್ಷಿತರಾಗಿದ್ದಾರೆ ಎಂದು ಎಸ್‌ಪಿ ಅಮಿತ್ ಬರ್ದಾರ್ ತಿಳಿಸಿದರು.

ಚಿಂತೂರು–ಮಾರೇಡುಮಿಲ್ಲಿ ಘಾಟಿಯ ದುರ್ಗಾ ದೇವಸ್ಥಾನದ ಸಮೀಪದ ತಿರುವಿನಲ್ಲಿ ಬಸ್ ಕಣಿವೆಗೆ ಉರುಳಿದೆ. ಗಾಯಾಳುಗಳಲ್ಲಿ ನಾಲ್ವರ ಸ್ಥಿತಿ ಗಂಭೀರವಾಗಿದೆ ಎಂದು ಹೇಳಿದರು.

ಪ್ರಯಾಣಿಕರಲ್ಲಿ ಹೆಚ್ಚಿನವರು ತೆಲಂಗಾಣದ ಭದ್ರಾಚಲಂನಲ್ಲಿರುವ ಶ್ರೀರಾಮ ಕ್ಷೇತ್ರ ದರ್ಶನಕ್ಕಾಗಿ ಹೊರಟಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೇಂದ್ರದ ಮಾಜಿ ಸಚಿವ ಶಿವರಾಜ್ ಪಾಟೀಲ ಇನ್ನಿಲ್ಲ

ಶಿವರಾಜ್ ಪಾಟೀಲ

ಲಾತೂರ್(ಪಿಟಿಐ): ಕಾಂಗ್ರೆಸ್‌ನ ಹಿರಿಯ ನಾಯಕ ಹಾಗೂ ಕೇಂದ್ರದ ಮಾಜಿ ಗೃಹ ಸಚಿವ ಶಿವರಾಜ್ ಪಾಟೀಲ(90) ಮಹಾರಾಷ್ಟ್ರದ ಲಾತೂರ್‌ನಲ್ಲಿರುವ ಸ್ವಗೃಹ 'ದೇವಘರ್'ನಲ್ಲಿ ಶುಕ್ರವಾರ ನಿಧನರಾದರು.

ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಅಂತ್ಯಕ್ರಿಯೆ ಶನಿವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅವರಿಗೆ ಪುತ್ರ ಶೈಲೇಶ್ ಪಾಟೀಲ ಹಾಗೂ ಸೊಸೆ ಅರ್ಚನಾ ಪಾಟೀಲ ಇದ್ದಾರೆ. ಕಳೆದ ವರ್ಷ ಬಿಜೆಪಿ ಸೇರಿದ್ದ ಅರ್ಚನಾ ಪಾಟೀಲ, ಲಾತೂರು ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕಾಂಗ್ರೆಸ್‌ನ ಅಮಿತ್ ದೇಶಮುಖ್ ವಿರುದ್ಧ ಪರಾಭವಗೊಂಡಿದ್ದರು.

2008ರ ನವೆಂಬರ್ 26ರಂದು ಮುಂಬೈ ಮೇಲೆ ಭಯೋತ್ಪಾದಕರ ದಾಳಿ ನಡೆದಿತ್ತು. ಆಗ, ಶಿವರಾಜ್ ಪಾಟೀಲ ಅವರು ಕೇಂದ್ರ ಗೃಹ ಸಚಿವರಾಗಿದ್ದರು.

ಪಾಟೀಲ ಅವರು 1935ರ ಅಕ್ಟೋಬರ್ 12ರಂದು ಜನಿಸಿದ್ದರು. 1966ರಿಂದ 1970ರ ನಡುವೆ, ಲಾತೂರ್ ಪುರಸಭೆ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ಅವರ ರಾಜಕೀಯ ಪಯಣ ಆರಂಭವಾಗಿತ್ತು.

ಎರಡು ಅವಧಿಗೆ ಶಾಸಕರಾಗಿದ್ದ ಅವರು, ಮಹಾರಾಷ್ಟ್ರ ವಿಧಾನಸಭೆ ಉಪ ಸಭಾಧ್ಯಕ್ಷ, ಸಭಾಧ್ಯಕ್ಷರಾಗಿದ್ದರು. ನಂತರ ಲಾತೂರ್ ಲೋಕಸಭಾ ಕ್ಷೇತ್ರದಿಂದ ಚುನಾಯಿತರಾದ ಅವರು, 1991ರಿಂದ 1996ರವರೆಗೆ ಲೋಕಸಭೆಯ ಸ್ಪೀಕರ್ ಆಗಿದ್ದರು. ಕೇಂದ್ರದಲ್ಲಿ ರಕ್ಷಣೆ, ವಾಣಿಜ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿ ಸೇವೆ ಸಲ್ಲಿಸಿದ್ದರು.

2010ರಿಂದ 2015ರವರೆಗೆ ಪಂಜಾಬ್ ರಾಜ್ಯಪಾಲರಾಗಿದ್ದ ಅವರು, ಕೇಂದ್ರಾಡಳಿತ ಪ್ರದೇಶ ಚಂಡೀಗಢದ ಆಡಳಿತಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದರು.

ಹಲವು ವಿವಾದ, ರಾಜೀನಾಮೆ...

ಶಿವರಾಜ್ ಪಾಟೀಲ ಅವರು ನೀಡಿದ್ದ ಕೆಲ ಹೇಳಿಕೆಗಳು ಹಾಗೂ ನಡೆಗಳು ವಿವಾದಕ್ಕೆ ಕಾರಣವಾಗಿದ್ದವು. ಮುಂಬೈ ಮೇಲಿನ ಉಗ್ರರ ದಾಳಿ ವಿಚಾರದಲ್ಲಿ ಅವರು ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನೂ ನೀಡಬೇಕಾಯಿತು.

2008ರ ನವೆಂಬರ್ 26ರಂದು ಮುಂಬೈನ ತಾಜ್ ಹೋಟೆಲ್ ಮೇಲೆ ಉಗ್ರರು ದಾಳಿ ನಡೆಸಿದ್ದರು. ಆಗ ಕೇಂದ್ರ ಗೃಹ ಸಚಿವರಾಗಿದ್ದ ಶಿವರಾಜ್ ಪಾಟೀಲ ಅವರು, ಆ ದಿನ ರಾತ್ರಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರು. ಮೂರು ವಿಧದ ದಿರಿಸುಗಳನ್ನು ಧರಿಸಿದ್ದ ಅವರ ನಡೆ ವ್ಯಾಪಕ ಟೀಕೆಗೆ ಒಳಗಾಗಿತ್ತು.

ತಮ್ಮ ವಿರುದ್ಧದ ಟೀಕೆಗಳಿಗೆ, 'ಜನರು ಸರ್ಕಾರದ ನೀತಿಗಳನ್ನು ಟೀಕಿಸಬೇಕೇ ಹೊರತು, ನಾನು ಧರಿಸಿದ ಬಟ್ಟೆಗಳ ಕುರಿತಲ್ಲ' ಎಂದು ಪ್ರತಿಕ್ರಿಯಿಸಿದ್ದರು. ನಂತರ, ಅವರು ನವೆಂಬರ್ 30ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರು.

2022ರಲ್ಲಿ ಪುಸ್ತಕವೊಂದರ ಬಿಡುಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, 'ಜಿಹಾದ್ ಪರಿಕಲ್ಪನೆ ಇಸ್ಲಾಮ್‌ನಲ್ಲಿ ಮಾತ್ರವಲ್ಲ, ಭಗವದ್ಗೀತೆ ಹಾಗೂ ಕ್ರೈಸ್ತ ಧರ್ಮದಲ್ಲಿಯೂ ಇದೆ' ಎಂದು ಹೇಳಿದ್ದರು. ಇದು ಕೂಡ ವಿವಾದಕ್ಕೀಡಾಗಿತ್ತಲ್ಲದೇ, ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

ಉನ್ನತ ಶಿಕ್ಷಣ ಕ್ಷೇತ್ರ ನಿಯಂತ್ರಣಕ್ಕೆ 'ವಿಕಸಿತ ಭಾರತ್ ಶಿಕ್ಷಾ ಅಧಿಕ್ಷಣ್' (ವಿಬಿಎಸ್‌ಎ)

ಏಕೀಕೃತ ವ್ಯವಸ್ಥೆಗೆ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಕ್ಷೇತ್ರವನ್ನು ನಿಯಂತ್ರಿಸಲು ಈಗಿರುವ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ), ಎಐಸಿಟಿಇ ಬದಲಾಯಿಸಿ ಏಕೀಕೃತ ವ್ಯವಸ್ಥೆ ರೂಪಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟವು ಒಪ್ಪಿಗೆ ನೀಡಿದೆ.

ಈ ಹಿಂದೆ ಭಾರತ ಉನ್ನತ ಶಿಕ್ಷಣ ಆಯೋಗ (ಎಚ್‌ಇಸಿಐ) ಎಂದು ನಾಮಕರಣ ಮಾಡಿದ್ದ ಪ್ರಸ್ತಾವಿತ ಮಸೂದೆಗೆ 'ವಿಕಸಿತ ಭಾರತ್ ಶಿಕ್ಷಾ ಅಧಿಕ್ಷಣ್' (ವಿಬಿಎಸ್‌ಎ) ಎಂದು ಹೆಸರಿಡಲು ನಿರ್ಧರಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯಲ್ಲಿ ಉನ್ನತ ಶಿಕ್ಷಣ ನಿಯಂತ್ರಣವನ್ನು ಏಕೀಕೃತ ವ್ಯವಸ್ಥೆಗೆ ತರಲು ಪ್ರಸ್ತಾವಿಸಲಾಗಿತ್ತು. ವಿಶ್ವವಿದ್ಯಾಲಯದ ಅನುದಾನ ಆಯೋಗ (ಯುಜಿಸಿ) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು (ಎಐಸಿಟಿಇ) ಹಾಗೂ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಸಂಸ್ಥೆಯೂ(ಎನ್‌ಸಿಟಿಇ) ವಿಬಿಎಸ್‌ಎನಲ್ಲಿ ವಿಲೀನವಾಗಲಿವೆ.

'ವಿಬಿಎಸ್‌ಎ ಮಸೂದೆಗೆ ಸಂಪುಟವು ಒಪ್ಪಿಗೆ ನೀಡಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಯುಜಿಸಿಯು ತಾಂತ್ರಿಕೇತರ ಉನ್ನತ ಶಿಕ್ಷಣವನ್ನು ನೋಡಿಕೊಳ್ಳುತ್ತಿದೆ. ಎಐಸಿಟಿಇಯು ತಾಂತ್ರಿಕ ಶಿಕ್ಷಣದ ಮೇಲುಸ್ತುವಾರಿ ವಹಿಸಿದ್ದರೆ, ಎನ್‌ಸಿಟಿಯು ಶಿಕ್ಷಕರ ಶಿಕ್ಷಣದ ವಿಚಾರದ ಮೇಲೆ ನಿಗಾ ವಹಿಸಿದೆ.

ಉದ್ದೇಶಿತ ಆಯೋಗವು ಉನ್ನತ ಶಿಕ್ಷಣದ ನಿಯಂತ್ರಣಕ್ಕೆ ಏಕೀಕೃತ ವ್ಯವಸ್ಥೆ ಹೊಂದಿರಲಿದೆ. ಆದರೆ, ವೈದ್ಯಕೀಯ ಹಾಗೂ ಕಾನೂನು ಶಿಕ್ಷಣ ಇದರ ವ್ಯಾಪ್ತಿಗೆ ಬರುವುದಿಲ್ಲ. ಈ ನೂತನ ವ್ಯವಸ್ಥೆಯು ನಿಯಂತ್ರಣ, ಮಾನ್ಯತೆ ಹಾಗೂ ವೃತ್ತಿಪರ ಮಾನದಂಡವನ್ನು ನಿಗದಿಪಡಿಸುವ ಗುರಿ ಹೊಂದಬೇಕು ಎಂದು ಶಿಫಾರಸಿನಲ್ಲಿ ತಿಳಿಸಲಾಗಿತ್ತು.

ನಾಗರಿಕ ಪರಮಾಣು ಇಂಧನ ಕ್ಷೇತ್ರ; ಖಾಸಗಿ ಸಹಭಾಗಿತ್ವಕ್ಕೆ ಮುಕ್ತ

2047ರ ವೇಳೆಗೆ 100 ಗಿಗಾವ್ಯಾಟ್ ಅಣುಶಕ್ತಿ ಉತ್ಪಾದನೆ ಗುರಿ ತಲುಪುವ ನಿಟ್ಟಿನಲ್ಲಿ ನಾಗರಿಕ ಪರಮಾಣು ಇಂಧನ ಕ್ಷೇತ್ರವನ್ನು ಖಾಸಗಿ ಸಹಭಾಗಿತ್ವಕ್ಕೆ ಮುಕ್ತಗೊಳಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟವು ಶುಕ್ರವಾರ ಒಪ್ಪಿಗೆ ನೀಡಿದೆ.

ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಹಾಗೂ ಪ್ರಗತಿ ನಿಟ್ಟಿನಲ್ಲಿ ಭಾರತ ಪರಿವರ್ತನೆ (ಶಾಂತಿ) ಮಸೂದೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಳೆದ ಫೆಬ್ರುವರಿಯಲ್ಲಿ ಬಜೆಟ್ ಮಂಡಿಸಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಖಾಸಗಿ ಸಹಭಾಗಿತ್ವದಲ್ಲಿ ಪರಮಾಣು ಇಂಧನ ಕೇಂದ್ರ ಸ್ಥಾಪಿಸುವ ಯೋಜನೆ ಹೊಂದಿರುವುದಾಗಿ ಘೋಷಣೆ ಮಾಡಿದ್ದರು.

ಸಣ್ಣ ಮಾಡ್ಯುಲರ್ ಪರಮಾಣು ಸ್ಥಾವರಗಳ ಅಭಿವೃದ್ಧಿ, ಸಂಶೋಧನೆಗಾಗಿ ₹ 20 ಸಾವಿರ ಕೋಟಿ ಮೊತ್ತದ ಯೋಜನೆಯನ್ನು ಈ ವೇಳೆ ಘೋಷಿಸಿದ್ದರು. ಖಾಸಗಿ ಸಹಭಾಗಿತ್ವದಲ್ಲಿ ದೇಶೀಯವಾಗಿ 2033ರ ವೇಳೆಗೆ ಇಂತಹ 5 ಸ್ಥಾವರಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದೂ ಅವರು ಹೇಳಿದ್ದರು.

prajavani.net prajavani | ಶನಿವಾರ, ಡಿಸೆಂಬರ್ 13, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 343 | ಪುಟ 20 | www.prajavani.net

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಮತ್ತೆ ಅಖಾಡಕ್ಕೆ ವಿನೇಶ್
ಮೂರು ಬಾರಿಯ ಒಲಿಂಪಿಯನ್, ಭಾರತದ ಸ್ಟಾರ್ ಕುಸ್ತಿಪಟು ವಿನೇಶ್ ಫೋಗಟ್ ಅವರು ನಿವೃತ್ತಿಯಿಂದ ಹೊರಬರುವುದಾಗಿ ಶುಕ್ರವಾರ ಹೇಳಿದ್ದಾರೆ

ಸೆನ್ಸೆಕ್ಸ್ 85,267 | ನಿಫ್ಟಿ 26,046 | $/₹ 90.49 | ಚಿನ್ನ (Std. 10g) ₹1,36,650 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,06,000 (ಬೆಂಗಳೂರು)

ರಾಜ್ಯಕ್ಕೆ ಅನುದಾನ ಬರದ ಬರೆ

ಕೇಂದ್ರ ಸರ್ಕಾರದ ಪ್ರಾಯೋಜಕತ್ವದ ಯೋಜನೆಗಳಿಗೂ ಹಣದ ಕೊರತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಈ ವರ್ಷ ₹51,700 ಕೋಟಿ ತೆರಿಗೆ ಪಾಲು ಹಂಚಿಕೆ ಮಾಡಿದೆ. ಕಂತು ಕಂತುಗಳಲ್ಲಿ ರಾಜ್ಯದ ಪಾಲಿನ ಅನುದಾನ ಬಂದಿದೆ. ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಈ ಸಾಲಿನಲ್ಲಿ ₹16,000 ಕೋಟಿ ನೀಡುವುದಾಗಿ ವಾಗ್ದಾನ ಮಾಡಿದೆ. ಆದರೆ, ಈ ವರೆಗೆ ₹7 ಸಾವಿರ ಕೋಟಿಯಷ್ಟೇ ನೀಡಿದೆ. ಇನ್ನೂ ₹9 ಸಾವಿರ ಕೋಟಿ ನೀಡಬೇಕಿದೆ. ಈ ಅನುದಾನ ಶೀಘ್ರ ಬಿಡುಗಡೆಗೆ ಆಗ್ರಹಿಸಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ. ಜಲಜೀವನ್ ಮಿಷನ್ ಯೋಜನೆಯಲ್ಲೂ ಕೇಂದ್ರದ ಪಾಲು ₹4,574 ಕೋಟಿ ಬರಬೇಕಿದೆ

▶ 11

ಎರಡು ವರ್ಷದಿಂದ ಆರೋಗ್ಯ ಅನುದಾನ ಇಲ್ಲ

ಕರ್ನಾಟಕ ರಾಜ್ಯಕ್ಕೆ 15ನೇ ಹಣಕಾಸು ಆಯೋಗ ಶಿಫಾರಸು ಮಾಡಿರುವ ಆರೋಗ್ಯ ಅನುದಾನವನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಎರಡು ವರ್ಷಗಳಿಂದ ಬಿಡುಗಡೆಯೇ ಮಾಡಿಲ್ಲ.

ಆಯೋಗವು 2021–22ರಿಂದ 2025–26ರ ಅವಧಿಗೆ ರಾಜ್ಯಕ್ಕೆ ₹2,928 ಕೋಟಿ ಹಂಚಿಕೆ ಮಾಡಿತ್ತು. ಇಲ್ಲಿಯವರೆಗೆ ₹1,497 ಕೋಟಿ ಬಿಡುಗಡೆ ಆಗಿದೆ. 2024–25, 2025–26ರಲ್ಲಿ ಅನುದಾನವೇ ಬಂದಿಲ್ಲ.

ಕಳೆದ ಐದು ವರ್ಷಗಳಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಅನುದಾನವೆಷ್ಟು, ರಾಜ್ಯ ಖರ್ಚು ಮಾಡಿರುವುದೆಷ್ಟು ಎಂದು ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಅವರು ಲೋಕಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ್ದರು. ಇದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಯ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ.

ಹಣಕಾಸು ಆಯೋಗದ 'ಆರೋಗ್ಯ' ಅನುದಾನ (₹ಕೋಟಿಗಳಲ್ಲಿ)

ವರ್ಷ	ಹಂಚಿಕೆ	ಬಿಡುಗಡೆ
2021-22	551.53	551.53
2022-23	551.53	551.24
2023-24	579.11	395.02
2024-25	608.08	0
2025-2026	638.48	0
ಒಟ್ಟು	2,928.73	1,497.79

ಜಲಜೀವನ್ ಮಿಷನ್ ಅನುದಾನ ಹಂಚಿಕೆ (₹ಕೋಟಿಗಳಲ್ಲಿ)



ಈವರೆಗೆ ಬಿಡುಗಡೆ (₹ಕೋಟಿಗಳಲ್ಲಿ)



- **ಜೆಜೆಎಂ ಬಿಡುಗಡೆಗೆ ಬಾಕಿ ಎಷ್ಟು:** ಈ ಯೋಜನೆಯಡಿ ರಾಜ್ಯದಲ್ಲಿ ಈವರೆಗೆ ₹**36,357** ಕೋಟಿ ಖರ್ಚು ಮಾಡಲಾಗಿದೆ. ಕೇಂದ್ರ ಸರ್ಕಾರವು ತನ್ನ ಪಾಲು ₹**16,360** ಕೋಟಿ ಬಿಡುಗಡೆ ಮಾಡಬೇಕಿತ್ತು. ಆದರೆ, ಈ ವರೆಗೆ ಬಿಡುಗಡೆ ಮಾಡಿರುವುದು ₹**11,786** ಕೋಟಿ ಮಾತ್ರ. ಇದರಿಂದ ಯೋಜನೆಯ ಅನುಷ್ಠಾನಕ್ಕೆ ಹಿನ್ನಡೆಯಾಗಿದೆ ಎಂಬುದು ರಾಜ್ಯ ಸರ್ಕಾರದ ಆರೋಪ.

ಯಾವುದಕ್ಕೆ ಎಷ್ಟು ಬರಬೇಕು

- **ಗ್ರಾಮೀಣ ಕುಡಿಯುವ ನೀರು:** ಕೇಂದ್ರದ ಪಾಲು ₹**1,999** ಕೋಟಿ. ಬಿಡುಗಡೆ ₹**750** ಕೋಟಿ.
- **ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ):** ಕೇಂದ್ರದ ಪಾಲು ₹**400** ಕೋಟಿ. ಯಾವುದೇ ಮೊತ್ತ ಬಿಡುಗಡೆ ಇಲ್ಲ.
- **ಸ್ವಚ್ಛ ಭಾರತ (ನಗರ):** ಕೇಂದ್ರದ ಪಾಲು ₹**300** ಕೋಟಿ. ಈವರೆಗೆ ಅನುದಾನ ಬಿಡುಗಡೆ ಇಲ್ಲ.
- **ಶಾಲಾ ಶಿಕ್ಷಣ:** ₹**1,581** ಕೋಟಿ ಹಂಚಿಕೆ. ₹**755** ಕೋಟಿ ಬಿಡುಗಡೆ.
- **ಗ್ರಾಮ ಸಡಕ್ (ನಾಲ್ಕನೇ ಹಂತ):** ಅನುದಾನ ಶೂನ್ಯ

ಧರ್ಮ ಗುರುವಿಗೆ ಸ್ವಾಗತ

ಪ್ರಜಾವಾಣಿ ಚಿತ್ರ

ಉತ್ತರ ಕನ್ನಡದ ಮುಂಡಗೋಡ ತಾಲ್ಲೂಕಿನ ಟಿಬೆಟನ್ ಕ್ಯಾಂಪ್ ನಂ.2ರ ಡ್ರೆಪುಂಗ್ ತಾಶಿ ಗೋಮಾಂಗ್ ಡಿಬೆಟ್ ಹಾಲ್‌ಗೆ ಆಗಮಿಸಿದ ಟಿಬೆಟಿಯನ್ ಧರ್ಮ ಗುರು 14ನೇ ದಲೈ ಲಾಮಾ ಅವರನ್ನು ಭಿಕ್ಕುಗಳು ಸ್ವಾಗತಿಸಿದರು

ಊಟ: ಬಯಲಾದ ಬಡಿದಾಟ

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಕಾಂಗ್ರೆಸ್ ಹೈಕಮಾಂಡ್ ಸೂಚನೆ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪರಸ್ಪರರಿಗೆ ಏರ್ಪಡಿಸಿದ್ದ ಉಪಾಹಾರ ಕೂಟದ ಬಳಿಕ ತಣ್ಣಗಾಗಿದ್ದ ಬಣ ರಾಜಕೀಯ, ಅಧಿವೇಶನದ ವೇಳೆ ನಡೆಸಲಾಗುತ್ತಿರುವ ಔತಣ ಕೂಟದಿಂದಾಗಿ ಬಣ ಬಡಿದಾಟವಾಗಿ ಬದಲಾಗಿದೆ.

'ಶಿವಕುಮಾರ್ ಬೇಡಿಕೆಯನ್ನು ಹೈಕಮಾಂಡ್ ಒಪ್ಪಿಲ್ಲ. ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿ' ಎಂದು ಯತೀಂದ್ರ ಹೇಳಿದ್ದರು. ಅದಾದ ಬಳಿಕ ಮತ್ತೆ ರಾಜಕೀಯ ಚಟುವಟಿಕೆ ಬಿರುಸು ಪಡೆದಿತ್ತು. ಮಾಜಿ ಶಾಸಕ ಫಿರೋಜ್ ಸೇಠ್ ಅವರ ನಿವಾಸದಲ್ಲಿ ಬುಧವಾರ ರಾತ್ರಿ ನಡೆದ ಔತಣಕೂಟದಲ್ಲಿ ಸಿದ್ದರಾಮಯ್ಯನವರ ಆಪ್ತ ಸಚಿವರು ಪಾಲ್ಗೊಂಡಿದ್ದರು. ಇದಕ್ಕೆ ಪರ್ಯಾಯವೆಂಬಂತೆ, ಕಾಂಗ್ರೆಸ್ ಮುಖಂಡ ಪ್ರವೀಣ್ ದೊಡ್ಡಣ್ಣನವರ ಅವರ ತೋಟದ ಮನೆಯಲ್ಲಿ ಗುರುವಾರ ರಾತ್ರಿ ಔತಣಕೂಟ ನಡೆಯಿತು. ಶಿವಕುಮಾರ್ ಅವರ ಜತೆಯಲ್ಲಿ ಸಚಿವರಾದ ಕೆ.ಎಚ್. ಮುನಿಯಪ್ಪ, ಮಂಕಾಳ ವೈದ್ಯ ಸೇರಿ 25ಕ್ಕೂ ಹೆಚ್ಚು ಶಾಸಕರು ಭಾಗಿಯಾಗಿದ್ದರು.

ಇದರ ಪರಿಣಾಮವೋ ಎಂಬಂತೆ ಶಿವಕುಮಾರ್ ಬಣದ ಆಪ್ತ ಶಾಸಕರು, ಯತೀಂದ್ರ ಅವರಿಗೆ ತಿರುಗೇಟು ನೀಡುವಂತಹ ಹೇಳಿಕೆಯನ್ನು ಶುಕ್ರವಾರ ನೀಡಿದ್ದಾರೆ.

'ಬಲ ಪ್ರದರ್ಶನದ ಅವಶ್ಯ ನನಗಿಲ್ಲ'

'ನಾನು ಯಾವುದೇ ಬಲ ಪ್ರದರ್ಶನ ಮಾಡುತ್ತಿಲ್ಲ' ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿದರು.

'ಔತಣಕೂಟ ಬಲ ಪ್ರದರ್ಶನವೇ' ಎಂಬ ಸುದ್ದಿಗಾರರ ಪ್ರಶ್ನೆಗೆ, 'ಅದರ ಅಗತ್ಯ ನನಗಿಲ್ಲ. ನನ್ನ ಹಿಂದೆ ಯಾರೂ ಬರುವುದು ಬೇಡ, ನನ್ನ ಪರವಾಗಿ ಮಾತನಾಡುವುದೂ ಬೇಡ. ನಾನು ಮುಖ್ಯಮಂತ್ರಿ ಸೇರಿದಂತೆ 140 ಶಾಸಕರದೂ ಒಂದೇ ಕಾಂಗ್ರೆಸ್ ಗುಂಪು' ಎಂದರು.

'ನಾನು ಔತಣಕೂಟ ನಡೆಸಿಲ್ಲ. ದೊಡ್ಡಣ್ಣನವರ ನನ್ನ ಸ್ನೇಹಿತರು. ಕಳೆದ 15 ವರ್ಷಗಳಿಂದ ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಕರೆಯುತ್ತಿದ್ದರು. ನಾನೂ ಸೇರಿದಂತೆ ಒಂದಷ್ಟು ಜನರು ಊಟಕ್ಕೆ ಹೋಗಿದ್ದೆವು, ಅಷ್ಟೇ' ಎಂದು ಹೇಳಿದರು.

'ದಿನ ಒಬ್ಬೊಬ್ಬ ಸ್ಥಳೀಯರು, ನಮ್ಮ ಕ್ಷೇತ್ರದವರು ಪ್ರೀತಿಯಿಂದ ಊಟ ತಂದು ಕೊಡುತ್ತಿದ್ದಾರೆ. ಊಟವನ್ನು ಬೇಡ ಎನ್ನಲು ಆಗುತ್ತದೆಯೇ? ಪ್ರೀತಿಯಿಂದ ಕರೆಯುತ್ತಾರೆ, ಅದಕ್ಕೆ ಒಂದೊಂದು ದಿನ ಒಂದೊಂದು ಕಡೆ ಊಟಕ್ಕೆ ಹೋಗುತ್ತೇವೆ. ನನ್ನ ಕ್ಷೇತ್ರದ ಹುಡುಗನೊಬ್ಬ ಇಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಮನೆಯಿಂದ ಇವತ್ತು ಮುದ್ದೆ, ಉಪ್ಸಾರು ಊಟ ಮಾಡಿ ಕಳಿಸುತ್ತೇವೆ ಎನ್ನುತ್ತಿದ್ದಾನೆ. ಹೀಗೇ ಅವರು ಪ್ರೀತಿಯಿಂದ ಹೇಳಿದಾಗ, ಕರೆದಾಗ ಬೇಡ ಎನ್ನಲು ಆಗುತ್ತದೆಯೇ? ನಾಡಿದ್ದು ನಮ್ಮ ಆಸೀಫ್ ಸೇಠ್, ಫಿರೋಜ್ ಸೇಠ್ ಅವರು ಊಟಕ್ಕೆ ಕರೆದಿದ್ದಾರೆ' ಎಂದು ಅವರು ಹೇಳಿದರು.



ಚಿನಕುರುಳಿ ಪ್ರಕಾಶ್ ಶೆಟ್ಟಿ

ವಿಮಾ ವಲಯ: ಎಫ್‌ಡಿಐ ಶೇ 100ಕ್ಕೆ ಹೆಚ್ಚಿಸುವ ಮಸೂದೆಗೆ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶದ ವಿಮಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯ (ಎಫ್‌ಡಿಐ) ಪ್ರಮಾಣವನ್ನು ಶೇ 100ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಶುಕ್ರವಾರ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಪ್ರಸ್ತುತ ನಡೆಯುತ್ತಿರುವ ಸಂಸತ್ತಿನ ಅಧಿವೇಶನದಲ್ಲಿ ಈ ಮಸೂದೆ ಮಂಡನೆ ಮಾಡುವ ಸಾಧ್ಯತೆ ಇದೆ. ಅಧಿವೇಶನವು ಡಿಸೆಂಬರ್ 19ರಂದು ಕೊನೆಗೊಳ್ಳಲಿದೆ.

ವಿಮಾ ಕಾನೂನುಗಳ (ತಿದ್ದುಪಡಿ) ಮಸೂದೆ 2025, ವಿಮಾ ಕ್ಷೇತ್ರದ ಅಭಿವೃದ್ಧಿ ಮತ್ತು ವಹಿವಾಟನ್ನು ಸರಳಗೊಳಿಸುವ ಉದ್ದೇಶ ಹೊಂದಿದೆ. ಈ ಮಸೂದೆಯನ್ನು ಸೋಮವಾರ ಸಂಸತ್ತಿನಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ತಿಳಿಸಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಈ ವರ್ಷದ ಬಜೆಟ್ ಮಂಡನೆ ವೇಳೆ, ಹಣಕಾಸು ವಲಯದ ಸುಧಾರಣೆಗಳ ಭಾಗವಾಗಿ ಪ್ರಸ್ತುತ ವಿಮಾ ವಲಯದಲ್ಲಿರುವ ಎಫ್‌ಡಿಐ ಮಿತಿಯನ್ನು ಶೇ 74ರಿಂದ ಶೇ 100ಕ್ಕೆ ಹೆಚ್ಚಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದರು. ಇಲ್ಲಿಯವರೆಗೆ ವಿಮಾ ವಲಯವು ₹82 ಸಾವಿರ ಕೋಟಿ ವಿದೇಶಿ ನೇರ ಹೂಡಿಕೆಯನ್ನು ಆಕರ್ಷಿಸಿದೆ.

▶ 10

'ಸಚಿವರು ಭೇಟಿ ನೀಡುತ್ತಿಲ್ಲ'

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): 'ಉತ್ತರಕರ್ನಾಟಕ ಭಾಗದ ವಿಧಾನಸಭಾ ಕ್ಷೇತ್ರಗಳಿಗೆ ಯಾವುದೇ ಸಚಿವ ಭೇಟಿ ನೀಡುತ್ತಿಲ್ಲ. ಇವರಿಗೆ ಜವಾಬ್ದಾರಿ ಇಲ್ಲವೇ? ಇವರು ರಾಜ್ಯದ ಮಂತ್ರಿಗಳಲ್ಲವೇ' ಎಂದು ಕಾಂಗ್ರೆಸ್‌ನ ಬಿ.ಆರ್. ಪಾಟೀಲ ಅವರು ಪ್ರಶ್ನಿಸಿದರು.

ಬಿ.ಆರ್. ಪಾಟೀಲ

ವಿಧಾನಸಭೆಯಲ್ಲಿ ಶುಕ್ರವಾರ ಉತ್ತರ ಕರ್ನಾಟಕದ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, 'ನಮ್ಮ ಭಾಗದ ಬಹುತೇಕ ವಿಧಾನಸಭಾ ಕ್ಷೇತ್ರಗಳು ಹಿಂದುಳಿದಿವೆ. ಯಾವುದೇ ಸಚಿವ ಈ ಭಾಗದಲ್ಲಿ ಓಡಾಡುತ್ತಿಲ್ಲ. ತಮ್ಮ ಸ್ವಂತ ಕ್ಷೇತ್ರಗಳನ್ನು ಬಿಟ್ಟರೆ ಬೆಂಗಳೂರಿಗೆ ಹೋಗುತ್ತಾರೆ. ಬೇರೆ ಎಲ್ಲೂ ಹೋಗುವುದಿಲ್ಲ' ಎಂದು ಕಿಡಿಕಾರಿದರು.

'ಎಸ್.ಆರ್. ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಮುಖ್ಯಮಂತ್ರಿಯಿಂದ ಹಿಡಿದು ಹಿರಿಯ ಸಚಿವರೆಲ್ಲ ಉತ್ತರ ಕರ್ನಾಟಕ ಭಾಗದ ವಿವಿಧ ತಾಲ್ಲೂಕುಗಳಿಗೆ ಪ್ರವಾಸ ಮಾಡಿ ಜನರ ಸಂಕಷ್ಟಗಳನ್ನು ಅರಿತುಕೊಳ್ಳುತ್ತಿದ್ದರು' ಎಂದರು.

▶ 4

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

ಬೆಮೆಲ್‌ನಿಂದ 66 ಮೆಟ್ರೊ ರೈಲು

ಗುಲಾಬಿ ಮಾರ್ಗಕ್ಕೆ ಮೊದಲ ಚಾಲಕರಹಿತ ರೈಲು ಬಿಡುಗಡೆ • 15 ವರ್ಷ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ, ನೀಲಿ ಮತ್ತು ಹಳದಿ ಮಾರ್ಗಗಳಿಗೆ 66 ಚಾಲಕರಹಿತ ಎಂಜಿನ್ ಹೊಂದಿರುವ ಮೆಟ್ರೊ ರೈಲುಗಳನ್ನು ಪೂರೈಸಲಿರುವ ಬಿಇಎಂಎಲ್ (ಬೆಮೆಲ್) 15 ವರ್ಷ ರೈಲುಗಳನ್ನು ನಿರ್ವಹಣೆ ಮಾಡಲಿದೆ.

ಗುಲಾಬಿ ಮಾರ್ಗಕ್ಕೆ ಮೊದಲ ರೈಲು ಕೋಚ್‌ಗಳನ್ನು ಗುರುವಾರ ಬಿಡುಗಡೆ ಮಾಡಿದ್ದು, ಹಂತ ಹಂತವಾಗಿ ಉಳಿದ ಕೋಚ್‌ಗಳನ್ನು ಬಿಡುಗಡೆ ಮಾಡುವುದಾಗಿ ಬಿಇಎಂಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸಾರ್ವಜನಿಕ ವಲಯದ ಉದ್ಯಮ (ಪಿಎಸ್‌ಯು) ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ (ಬಿಇಎಂಎಲ್) ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಶಾಂತನು ರೇ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಜೆ. ರವಿಶಂಕರ್ ರೈಲು ಕೋಚ್‌ಗಳನ್ನು ಹೊಸ ತಿಪ್ಪಸಂದ್ರದಲ್ಲಿರುವ ಬಿಇಎಂಎಲ್ ಕಾರ್ಯಾಗಾರದಲ್ಲಿ ಅನಾವರಣಗೊಳಿಸಿದರು. ಬಳಿಕ ಪರೀಕ್ಷಾರ್ಥ ಸಂಚಾರವನ್ನು ನಡೆಸಲಾಯಿತು.

ನಮ್ಮ ಮೆಟ್ರೊ ನೇರಳೆ ಮತ್ತು ಹಸಿರು ಮಾರ್ಗಗಳಿಗೆ 57 ಮೆಟ್ರೊಗಳನ್ನು ಬಿಇಎಂಎಲ್ ಹಿಂದೆ ಪೂರೈಸಿತ್ತು. ಬಳಿಕ ಹಳದಿ ಮಾರ್ಗಕ್ಕೆ 15 ರೈಲು ಸೇರಿ ಒಟ್ಟು 36 ರೈಲುಗಳನ್ನು ಪೂರೈಸುವ ಗುತ್ತಿಗೆಯನ್ನು ಚೀನಾದ ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ (ಸಿಆರ್‌ಆರ್‌ಸಿ) ನಾನ್‌ಜಿಂಗ್ ಪುಜೆನ್ ಕಂಪನಿ ಪಡೆದಿತ್ತು.

ಮತ್ತೆ 53 ಮೆಟ್ರೊ ಕೋಚ್‌ಗಳನ್ನು ಪೂರೈಸಲು ಬಿಎಂಆರ್‌ಸಿಎಲ್ ಜೊತೆಗೆ ಬಿಇಎಂಎಲ್ ₹3,177 ಕೋಟಿಯ ಒಪ್ಪಂದವನ್ನು 2023ರಲ್ಲಿ ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ ಗುಲಾಬಿ ಮಾರ್ಗಕ್ಕೆ 16 ಹಾಗೂ ನೀಲಿ ಮಾರ್ಗಕ್ಕೆ 37 ಕೋಚ್‌ಗಳನ್ನು ಪೂರೈಸಲಿದೆ. ಇದರ ಜೊತೆಗೆ ₹405 ಕೋಟಿ ವೆಚ್ಚದಲ್ಲಿ ಗುಲಾಬಿ ಮಾರ್ಗಕ್ಕೆ ಏಳು ಕೋಚ್‌ಗಳು, ಹಳದಿ ಮಾರ್ಗಕ್ಕೆ ₹414 ಕೋಟಿ ವೆಚ್ಚದಲ್ಲಿ 6 ಕೋಚ್‌ಗಳನ್ನು ಪೂರೈಸುವ ಒಪ್ಪಂದವನ್ನು ಈ ವರ್ಷ ಮಾಡಿಕೊಂಡಿದೆ.

ಮುಖ್ಯಾಂಶಗಳು

- ನೇರಳೆ, ಹಸಿರು, ಹಳದಿ– ಕಾರ್ಯಾಚರಣೆಯಲ್ಲಿರುವ ಮಾರ್ಗಗಳು
- ಗುಲಾಬಿ, ನೀಲಿ– ಸಂಚಾರಕ್ಕೆ ತಯಾರಾಗುತ್ತಿರುವ ಮಾರ್ಗಗಳು
- ಕಿತ್ತಳೆ, ಬೆಳ್ಳಿ– ಅನುಮೋದನೆ ಗೊಂಡಿರುವ ಮಾರ್ಗಗಳು

ಹೊಸ ತಿಪ್ಪಸಂದ್ರದಲ್ಲಿರುವ ಬಿಇಎಂಎಲ್ ಕಾರ್ಯಾಗಾರದಲ್ಲಿ ಗುಲಾಬಿ ಮಾರ್ಗಕ್ಕೆ ಮೊದಲ ಮೆಟ್ರೊ ಅನಾವರಣಗೊಳಿಸಲಾಯಿತು

ಗುಲಾಬಿ ಮಾರ್ಗ: ಆರು ತಿಂಗಳಲ್ಲಿ ಸಂಚಾರ

ಕಾಳೇನ ಅಗ್ರಹಾರ–ನಾಗವಾರ ಸಂಪರ್ಕಿಸುವ ಗುಲಾಬಿ ಮಾರ್ಗದಲ್ಲಿ ಭಾಗಶಃ ಸಂಚಾರವನ್ನು 2026ರ ಮೇನಲ್ಲಿ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಇಟ್ಟುಕೊಂಡಿದೆ.

21.26 ಕಿ.ಮೀ. ಉದ್ದದ ಈ ಮಾರ್ಗವು ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ 7.50 ಕಿ.ಮೀ. ಎತ್ತರಿಸಿದ ಮಾರ್ಗವನ್ನು ಹಾಗೂ ಅಲ್ಲಿಂದ ನಾಗವಾರದವರೆಗೆ ಸುರಂಗ ಮಾರ್ಗವನ್ನು ಹೊಂದಿದೆ. ಎತ್ತರಿಸಿದ ಮಾರ್ಗದಲ್ಲಿ ಆರು ರೈಲುಗಳೊಂದಿಗೆ ಮೊದಲು ಸಂಚಾರ ಆರಂಭಗೊಳ್ಳಲಿದೆ. ಭೂಗತ ಮಾರ್ಗದಲ್ಲಿ 2026ರ ಡಿಸೆಂಬರ್‌ನಲ್ಲಿ ಆರಂಭಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ರೇಷ್ಮೆ ಮಂಡಳಿಯಿಂದ (ಸೆಂಟ್ರಲ್ ಸಿಲ್ಕ್ ಬೋರ್ಡ್) ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದವರೆಗಿನ ನೀಲಿ ಮಾರ್ಗದಲ್ಲಿ (58.19 ಕಿ.ಮೀ.) ಮೂರು ಹಂತದಲ್ಲಿ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ.

ರೇಷ್ಮೆ ಮಂಡಳಿಯಿಂದ ಕೆ.ಆರ್.ಪುರದವರೆಗೆ 2026ರ ಸೆಪ್ಟೆಂಬರ್‌ನಲ್ಲಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹೆಬ್ಬಾಳದ ವರೆಗೆ 2027ರ ಜೂನ್‌ನಲ್ಲಿ ಹಾಗೂ ಕೆ.ಆರ್.ಪುರದಿಂದ ಹೆಬ್ಬಾಳದವರೆಗೆ 2027ರ ಡಿಸೆಂಬರ್‌ನಲ್ಲಿ ಸಂಚಾರ ಆರಂಭಗೊಳ್ಳುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

22ರಿಂದ 6ನೇ ರೈಲು ಸಂಚಾರ

ಹಳದಿ ಮಾರ್ಗ: 12 ನಿಮಿಷಕ್ಕೆ ಸಂಚಾರ ಅವಧಿ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಡಿ.22ರಿಂದ 6ನೇ ರೈಲು ಸಂಚರಿಸಲಿದೆ. ಸದ್ಯ 15 ನಿಮಿಷಕ್ಕೊಂದು ರೈಲು ಸಂಚರಿಸುತ್ತಿದ್ದು, ಈ ಅವಧಿ 12 ನಿಮಿಷಕ್ಕೆ ಇಳಿಯಲಿದೆ.

ಪಶ್ಚಿಮ ಬಂಗಾಳದ ಟೀಟಾಗಡ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್ ಎಸ್‌ಎಲ್) ಕಾರ್ಯಾಗಾರದಿಂದ ನವೆಂಬರ್ ಕೊನೇ ವಾರದಲ್ಲಿ ರವಾನೆಯಾಗಿದ್ದ ಆರನೇ ರೈಲಿನ ಬೋಗಿಗಳು ಡಿಸೆಂಬರ್ ಮೊದಲ ವಾರದಲ್ಲಿ ಹೆಬ್ಬಗೋಡಿ ಮೆಟ್ರೊ ಡಿಪೊಗೆ ತಲುಪಿದ್ದವು. ಇನ್‌ಸ್ಪೆಕ್ಷನ್ ಬೇ ಲೈನ್‌ನಲ್ಲಿ ಆರಂಭಿಕ ಪರೀಕ್ಷೆಗಳು ನಡೆದಿದ್ದವು. ಬಳಿಕ ರಾತ್ರಿ ವೇಳೆ ಪರೀಕ್ಷಾರ್ಥ ಸಂಚಾರ ನಡೆಸಲಾಗಿತ್ತು.

19.15 ಕಿ.ಮೀ. ದೂರದ ಆರ್.ವಿ. ರಸ್ತೆ–ಡೆಲ್ಟಾ ಎಲೆಕ್ಟ್ರಾನಿಕ್ಸ್ ಬೊಮ್ಮಸಂದ್ರ ನಡುವೆ ಆಗಸ್ಟ್ 11ಕ್ಕೆ ಆರಂಭವಾಗಿರುವ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಸದ್ಯ ಐದು ರೈಲುಗಳು ಪ್ರತಿ 15 ನಿಮಿಷಕ್ಕೊಂದು ಟ್ರಿಪ್‌ನಂತೆ ಸಂಚರಿಸುತ್ತಿವೆ. ಐಟಿ ಹಬ್ ಆಗಿರುವ ಎಲೆಕ್ಟ್ರಾನಿಕ್ ಸಿಟಿಯನ್ನು ಈ ಮಾರ್ಗ ಹಾದು ಹೋಗುತ್ತಿರುವುದರಿಂದ ನಿರೀಕ್ಷೆ ಮೀರಿ ಪ್ರಯಾಣಿಕರು ಮೆಟ್ರೊದಲ್ಲಿ ಸಂಚರಿಸುತ್ತಿದ್ದಾರೆ.

ನಮ್ಮ ಮೆಟ್ರೊ ಹಳದಿ ಮಾರ್ಗದ ರೈಲು

ಚೀನಾದ ಸಿಆರ್‌ಆರ್‌ಸಿ ನಾನ್‌ಜಿಂಗ್ ಪುಜೆನ್ ಕೋ ಲಿಮಿಟೆಡ್‌ನೊಂದಿಗೆ ಉಪ-ಒಪ್ಪಂದದ ಅಡಿಯಲ್ಲಿ ಪಶ್ಚಿಮ ಬಂಗಾಳದ ಟೀಟಾಗಡ ರೈಲ್ ಸಿಸ್ಟಮ್ಸ್ ಲಿಮಿಟೆಡ್‌ನಿಂದ (ಟಿಆರ್‌ಎಸ್‌ಎಲ್) ರೈಲು ಕೋಚ್‌ಗಳು ಪೂರೈಕೆಯಾಗುತ್ತಿವೆ. ಹಳದಿ ಮಾರ್ಗಕ್ಕೆ 15 ರೈಲುಗಳು ಸೇರಿದಂತೆ ಒಟ್ಟು 36 ರೈಲು ಕೋಚ್ ಸೆಟ್‌ಗಳನ್ನು ₹1,578 ಕೋಟಿ ವೆಚ್ಚದಲ್ಲಿ ಟಿಆರ್‌ಎಸ್‌ಎಲ್ ಪೂರೈಸುತ್ತಿದೆ.

ಟೀಟಾಗಡದಿಂದ ಒಟ್ಟು 15 ರೈಲುಗಳು ಹಾಗೂ ಬಿಇಎಂಎಲ್‌ನಿಂದ ಹೆಚ್ಚುವರಿಯಾಗಿ 6 ರೈಲುಗಳು ಹಳದಿ ಮಾರ್ಗಕ್ಕೆ ಪೂರೈಕೆಯಾಗಲಿವೆ. ರೈಲುಗಳ ಪೂರೈಕೆಯಾಗುತ್ತಿದ್ದಂತೆ ಟ್ರಿಪ್‌ಗಳ ನಡುವಿನ ಅಂತರ ಕಡಿಮೆಯಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನೆಲಮಂಗಲ: ಸಮೀಪದ ಪಿಳ್ಳಹಳ್ಳಿಯ ಶ್ರೀಕಾಲ ಭೈರವೇಶ್ವರ ಹಾಗೂ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನದಲ್ಲಿ ಭೈರವಾಷ್ಟಮಿ ಪ್ರಯುಕ್ತ ವಿಶೇಷ ಪೂಜೆ, ರುದ್ರಾಭಿಷೇಕ, ರುದ್ರಹೋಮ, ಪ್ರಸಾದ ವಿನಿಯೋಗ ನಡೆಯಿತು

ಶೀತ ಗಾಳಿ: ನಗರದಲ್ಲಿ ಮೈ ಕೊರೆಯುವ ಚಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೀತ ಗಾಳಿ ಹಾಗೂ ತಾಪಮಾನ ಕುಸಿತದಿಂದ ನಗರದಲ್ಲಿ ದಿನದಿಂದ ದಿನಕ್ಕೆ ಚಳಿ ಹೆಚ್ಚುತ್ತಿದ್ದು, ಜನರು ಚಳಿಯಿಂದ ರಕ್ಷಿಸಿಕೊಳ್ಳಲು ಬೆಚ್ಚನೆಯ ಉಡುಪಿನ ಮೊರೆಹೋಗಲಾರಂಭಿಸಿದ್ದಾರೆ.

ಮುಂಜಾನೆ ಅವಧಿಯಲ್ಲಿ ವಾತಾವರಣದಲ್ಲಿ ಮಂಜು ಕವಿಯುತ್ತಿದೆ. ಇದರಿಂದಾಗಿ ಸಹಜವಾಗಿ ಚಳಿ ಹೆಚ್ಚಿ, ಹೊರಗಡೆ ಓಡಾಟ ಕಷ್ಟಸಾಧ್ಯವಾಗುತ್ತಿದೆ. ಕಳೆದೊಂದು ವಾರದಿಂದ ಗರಿಷ್ಠ ಹಾಗೂ ಕನಿಷ್ಠ ಉಷ್ಣಾಂಶದಲ್ಲಿ ಇಳಿಕೆಯಾಗುತ್ತಿದ್ದು, ಕನಿಷ್ಠ ಉಷ್ಣಾಂಶ 15 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಸಾಮಾನ್ಯಕ್ಕಿಂತ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತವಾಗಿದೆ. ಗರಿಷ್ಠ ಉಷ್ಣಾಂಶವು 27 ಡಿಗ್ರಿ ಸೆಲ್ಸಿಯಸ್ ನಷ್ಟು ವರದಿಯಾಗುತ್ತಿದೆ. ಹಗಲಿನ ಹೊತ್ತು ಕೂಡ ತೇವಾಂಶಯುಕ್ತ ಗಾಳಿಯಿಂದಾಗಿ ಚಳಿ ಇರುವ ಕಾರಣ, ಜನರು ಸ್ವೆಟರ್, ಜಾಕೆಟ್ ಧರಿಸಿಕೊಂಡಿರುವುದು ಸಾಮಾನ್ಯವಾಗಿದೆ.

ಚಳಿಯ ಕಾರಣ ಮಕ್ಕಳು ಮತ್ತು ವೃದ್ಧರು ಕೂಡ ಮನೆಯ ಹೊರಗಡೆ ಅಷ್ಟಾಗಿ ಬರುತ್ತಿಲ್ಲ. ಮುಂಜಾನೆ ಅವಧಿಯಲ್ಲಿ ಉದ್ಯಾನಗಳಿಗೆ ವಾಯು ವಿಹಾರಕ್ಕೆ ತೆರಳುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ.

ನವೆಂಬರ್ ಕೊನೆಯ ವಾರದಿಂದಲೇ ನಗರದಲ್ಲಿ ಚಳಿ ಕಾಣಿಸಿಕೊಂಡಿತ್ತು. ಆ ವೇಳೆ ಕನಿಷ್ಠ ಉಷ್ಣಾಂಶ 18.4 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು. ಶ್ರೀಲಂಕಾದ ಉತ್ತರ ಭಾಗದಲ್ಲಿ ಕಾಣಿಸಿಕೊಂಡಿದ್ದ 'ದಿತ್ವಾ' ಚಂಡಮಾರುತವು ತಮಿಳುನಾಡಿನ ಕರಾವಳಿಯ ಬಳಿ ತಲುಪಿದ ಪರಿಣಾಮ, ಗರಿಷ್ಠ ಉಷ್ಣಾಂಶದಲ್ಲಿಯೂ ಕುಸಿತವಾಗಿತ್ತು.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ, ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಬೆಂಗಳೂರು ನಗರದಲ್ಲಿ ಕನಿಷ್ಠ ಉಷ್ಣಾಂಶ 14.2 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಮುಂದಿನ ಒಂದು ವಾರದ ಅವಧಿಯಲ್ಲಿ ತಾಪಮಾನವು ಇನ್ನಷ್ಟು ಕುಸಿತವಾಗುವ ಸಾಧ್ಯತೆಯಿದೆ. ಕನಿಷ್ಠ ಉಷ್ಣಾಂಶವು 12 ಡಿಗ್ರಿ ಸೆಲ್ಸಿಯಸ್ ವರೆಗೂ ಇಳಿಕೆಯಾಗುವ ಸಂಭವವಿದೆ. ಒಂದು ವೇಳೆ ಇಷ್ಟು ಪ್ರಮಾಣಕ್ಕೆ ಕುಸಿತವಾದರೆ, 2016ರ ನಂತರ ಡಿಸೆಂಬರ್ ತಿಂಗಳಲ್ಲಿ ನಗರದಲ್ಲಿ ದಾಖಲಾದ ಕನಿಷ್ಠ ಉಷ್ಣಾಂಶವಾಗಲಿದೆ. 2016ರ ಡಿ.11ರಂದು ಕನಿಷ್ಠ ಉಷ್ಣಾಂಶವು 12 ಡಿಗ್ರಿ ಸೆಲ್ಸಿಯಸ್ ನಷ್ಟು ವರದಿಯಾಗಿತ್ತು.

ಹವಾಮಾನ ಇಲಾಖೆಯಿಂದ ಸಲಹೆ

- ಶೀತ ಅಲೆಯ ಪ್ರಭಾವದಿಂದ ಚರ್ಮವು ಹಳದಿ ಬಣ್ಣಕ್ಕೆ ತಿರುಗುವಿಕೆ, ಗಟ್ಟಿಯಾಗುವಿಕೆ, ಮರಗಟ್ಟುವಿಕೆ ಮತ್ತು ಕೆಂಪು ಗುಳ್ಳೆಗಳು ಕಾಣಿಸಿಕೊಳ್ಳಬಹುದು. ಇದು ಗ್ಯಾಂಗ್ರೀನ್ ಎಂದು ಕರೆಯಲ್ಪಡುವ ಗಂಭೀರ ಸ್ಥಿತಿಯಾಗಿದ್ದು, ಇಂತಹ ಲಕ್ಷಣಗಳು ಕಾಣಿಸಿಕೊಂಡರೆ ವೈದ್ಯರನ್ನು ಸಂಪರ್ಕಿಸಿ
- ಶೀತ ಅಲೆಯ ಪ್ರಭಾವದಿಂದ ದೇಹದ ಉಷ್ಣತೆ ಇಳಿದು, ನಡುಕ, ಮಾತನಾಡಲು ತೊಂದರೆ, ನಿದ್ರಾಹೀನತೆ, ಸ್ನಾಯುಗಳ ಬಿಗಿತ, ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಇದು ಗಂಭೀರ ಸ್ವರೂಪಕ್ಕೆ ತಿರುಗಿದರೆ ವೈದ್ಯರನ್ನು ಭೇಟಿ ಮಾಡಿ
- ದೇಹದ ಉಷ್ಣತೆ ಕಾಯ್ದುಕೊಳ್ಳಲು ಬೆಚ್ಚಗಿನ ಬಟ್ಟೆಗಳನ್ನು ಧರಿಸಿ. ಶೀತ ಗಾಳಿ ಬೀಸುವ ವೇಳೆ ಆದಷ್ಟು ಮನೆಯ ಒಳಗಡೆಯೇ ಇರಿ
- ದೇಹದ ರೋಗನಿರೋಧಕ ಶಕ್ತಿ ಕಾಪಾಡಿಕೊಳ್ಳಲು ಸಾಕಷ್ಟು ಪ್ರಮಾಣದಲ್ಲಿ ಪೋಷಕಾಂಶಗಳಿಂದ ಕೂಡಿದ ಆಹಾರ ಸೇವಿಸಿ. ನಿಯಮಿತವಾಗಿ ಬಿಸಿ ಪಾನೀಯ ಕುಡಿಯಿರಿ
- ವಾಹನಗಳಲ್ಲಿ ಸಂಚರಿಸುವ ಸಂದರ್ಭದಲ್ಲಿ ಶೀತ ಗಾಳಿಯಿಂದ ರಕ್ಷಿಸಿಕೊಳ್ಳಲು ಮುನ್ನೆಚ್ಚರಿಕೆ ವಹಿಸಿ

ಸುಧಾ, ಮಯೂರ ಓದಿರಿ

ದಾಬಸ್‌ಪೇಟೆಯ ಕಲ್ಲುನಾಯಕನಹಳ್ಳಿಯಲ್ಲಿ ರಾಗಿ, ತೊಗರಿ ಕ್ಷೇತ್ರೋತ್ಸವದಲ್ಲಿ ಕೃಷಿ ವಿಜ್ಞಾನಿ ಹಾಗೂ ಕೃಷಿ ಅಧಿಕಾರಿಗಳು, ರೈತರು ಭಾಗಿಯಾಗಿದ್ದರು

SBI
ಪ್ರಾದೇಶಿಕ ವ್ಯಾಪಾರ ಕಛೇರಿ–02 ಬಾಣಸವಾಡಿ, ನಂ. 253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆಹೆಣ್ಣೂರು ಬಸ್ ಡಿಪೋ ಎದುರು, ಎಚ್‌ಬಿಆರ್ ಲೇಔಟ್, ಬೆಂಗಳೂರು–560043 | ದೂರವಾಣಿ: 080–25944208 /25944212

ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್ ಶಾಖೆಯ ಸ್ಥಳಾಂತರ (ಕೋಡ್ ಸಂಖ್ಯೆ 13175)

ನಮ್ಮ ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್ ಶಾಖೆಯನ್ನು (13175) ಪ್ರಸ್ತುತ ಆವರಣದ ಕಟ್ಟಡವನ್ನು ಕೆಡವಲಾಗಿರುವುದರಿಂದ 15.02.2026 ರಿಂದ ಜಾರಿಗೆ ಬರುವಂತೆ ಹೆಚ್ಚು ಅನುಕೂಲಕರ ಮತ್ತು ವಿಶಾಲವಾದಸ್ಥಳಕ್ಕೆ ಸ್ಥಳಾಂತರಿಸಲಾಗುತ್ತಿದೆ ಎಂದು ಘೋಷಿಸಲು ನಾವು ಸಂತೋಷಪಡುತ್ತೇವೆ.

ಹೊಸ ವಿಳಾಸ: ಇಂದಿರಾ ಓಜಾಸ್, ನೆಲ ಮಹಡಿ, ನಂ.146/8, ನಾಗವಾರದಿಂದ ಥಣಿಸಂದ್ರ ಮುಖ್ಯ ರಸ್ತೆ, ಪ್ರಸ್ತಾವಿತ ಹೊಸ ನಾಗವಾರ ಮೆಟ್ರೋ ನಿಲ್ದಾಣದ ಎದುರು, ಬೆಂಗಳೂರು–560077

ನಮ್ಮ ದೂರವಾಣಿ ಸಂಖ್ಯೆಗಳು 9392169972/9945163175

ಹೊಸ ಸ್ಥಳದಿಂದ ನಿಮಗೆ ಉತ್ತಮ ಸೇವೆ ಸಲ್ಲಿಸಲು ನಾವು ಎದುರು ನೋಡುತ್ತಿದ್ದೇವೆ.

ಸ್ಥಳ: ಬೆಂಗಳೂರು
ದಿನಾಂಕ: 13.12.2025
ಎಸ್ಡಿ/
ಪ್ರಾದೇಶಿಕ ವ್ಯವಸ್ಥಾಪಕಪ್ರಾದೇಶಿಕ ವ್ಯಾಪಾರ ಕಛೇರಿ–02 ಬಾಣಸವಾಡಿ, ಬೆಂಗಳೂರು

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ–14–ಸಿಡಿಎನ್/2025

ಆಡಳಿತದ ಅಡಿಯಲ್ಲಿ ತಾತ್ಕಾಲಿಕ ಆಧಾರದ ಮೇರೆಗೆ ಒಂದು ಯಂಗ್ ಪ್ರೊಫೆಷನಲ್ – 1 ಹುದ್ದೆಗೆ ಆಯ್ಕೆ ಮಾಡಿಕೊಳ್ಳಲು, ಸದರಿ ಸಂಸ್ಥೆಯಲ್ಲಿ ದಿನಾಂಕ 29.12.2025 (ಸೋಮವಾರ) ರಂದು ಬೆಳಗ್ಗೆ 10:30 ಗಂಟೆಗೆ ನೇರ ಸಂದರ್ಶನ ಏರ್ಪಡಿಸಲಾಗಿದೆ. ಕ್ರೋಢಿಕೃತ ಮಾಸಿಕ ವೇತನ ರೂ. 30,000/– ಆಗಿರುತ್ತದೆ. ವಿವರವಾದ ಜಾಹೀರಾತಿಗಾಗಿ ದಯವಿಟ್ಟು ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/–
ಪ್ರಭಾರಿ ಆಡಳಿತಾಧಿಕಾರಿ

ಭೂಮಿ ಬೇಕಾಗಿದೆ

ಬೆಂಗಳೂರು ಮೂಲದ ಹೆಸರಾಂತ ಡೆವಲಪರ್ (ಖರೀದಿ ಅಥವಾ ಜಂಟಿ ಅಭಿವೃದ್ಧಿ ಉದ್ದೇಶ) ವಸತಿ ಅಭಿವೃದ್ಧಿಗಾಗಿ ಬೆಂಗಳೂರು ಮತ್ತು ಸುತ್ತಮುತ್ತಲಿನ ಉತ್ತಮ ಪ್ರದೇಶದಲ್ಲಿ **20,000 ಚದರ ಅಡಿಯಿಂದ 1 ಎಕರೆ** ವರೆಗಿನ ಭೂಮಿ ಬೇಕಾಗಿದೆ.

ಭೂಮಿಯು ಖರಾಬ್/ನಾಲಾ/ಲೇಕ್ ಬೆಡ್/HT ಲೈನ್‌ಗಳು ಇತ್ಯಾದಿಗಳಿಂದ ಮುಕ್ತವಾದ ಸ್ಪಷ್ಟ ಮಾರುಕಟ್ಟೆ ಹಕ್ಕುಪತ್ರವನ್ನು ಹೊಂದಿರಬೇಕು ಮತ್ತು ಕನಿಷ್ಠ 30 ಅಡಿ ಅಗಲದ ಸರಿಯಾದ ಸಂಪರ್ಕ/ಪ್ರವೇಶ ರಸ್ತೆಯನ್ನು ಹೊಂದಿರಬೇಕು.

ತಕ್ಷಣ ಸಂಪರ್ಕಿಸಿ: 92068 66244
ಇಮೇಲ್:bengaluru.land@gmail.com

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–560001
Ph: 080-22867369 e-mail: cgmksamb@gmail.com
ಸಂಖ್ಯೆ: ಕೃಮಾಮಂ/ಲೆವಿ/ಎಫ್‌ಡಿ–ಟೆಂಡರ್/AUCTION105/3480/2025–26 ದಿನಾಂಕ 12.12.2025.

ಇ–ಟೆಂಡರ್ ಕಂ ಇ–ಹರಾಜು ಪ್ರಕಟಣೆ

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ **ರೂ.20.00** ಕೋಟಿಗಳನ್ನು (ರೂಪಾಯಿ ಇಪ್ಪತ್ತು ಕೋಟಿಗಳು ಮಾತ್ರ) e-procurement ಮೂಲಕ ಒಂದು ವರ್ಷದ ಅವಧಿಗೆ ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಕುರಿತು ಆಸಕ್ತ ರಾಷ್ಟ್ರೀಕೃತ/ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ (RRBs) ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು **www.kppp.karnataka.gov.in** ವೆಬ್‌ಸೈಟ್ ನ ಇಂಡೆಂಟ್ ಸಂಖ್ಯೆ :APMC/2025-26/AUCTION105 ರಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **20.12.2025.**

ಸಹಿ/–
ಮುಖ್ಯ ಪ್ರಧಾನ ವ್ಯವಸ್ಥಾಪಕರು
ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/4427/2025–26

IN THE COURT OF THE SENIOR CIVIL JUDGE J.M.F.C. AT NANJANGUD
O.S. No. 57/2024

Plaintiffs : Smt. Gowramma and other
-vs-
Defendants : Sri Puttamallegowda and others
7. Sri K. Sadashiva Son of Kumaraswamy aged about 45 years Residing at Byrapurada Hosa Tirumakudalu village, Kasaba Hobli, T.Narasipura Taluk, Mysuru District
8. Sri Murulidhar Shanakar Habbu Son of Shankar, Aged about 52 years, Residing at # 3, "Samrud", 3rd Cross, Opp. D.L.F Bommanahalli Post, Begur Hobli, Bangalore South Taluk, Bangalore District.

PUBLIC NOTICE

Whereas the plaintiffs have filed the above said suit against the defendants for the relief of partition and separate possession of their share over the suit schedule property and also for the relief of declaration. You are hereby summoned to appear before the court in person or through a pleader duly instructed and able to answer all material questions relating to the above said suit on 20-01-2026 at 11.00 A.M. in default of your appearance before the court on the said date before mentioned, the suit will be heard and determined in your absence as ex-parte.
Schedule : All that piece and parcel of the agricultural land bearing survey No. 145/1A2 measuring to an extend of 0.31.08 guntas situated at Hariharapura (Jodi Inam Iggali) village, Biligere Hobli, Nanjangud Taluk, Mysuru District.
Given under my hand and seal of the court on this the 09th day of December 2025.

By order of the court
Sd/- Chief Ministerial Officer
Court of the Civil Judge
Sr. Division
and J.M.F.C.,
Nanjangud

Sd/- Sri Arjun Gowda T.M.
Advocate for Plaintiffs No. 43, CH-54/2 & 3
II Main, 5th Cross, Jayanagara,
Mysuru-570 014 Mob.: 9620446555

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಗಾಂಧಿನಗರ ವಿಭಾಗ,
2ನೇ ಮಹಡಿ, ಬಿಎಂಪಿ ಕಾಂಪ್ಲೆಕ್ಸ್, ಧನ್ವಂತರಿ ರಸ್ತೆ, ಬೆಂಗಳೂರು–560009.
ಸಂಖ್ಯೆ: ಕಾಪಾಅ/ಗಾಂಧಿನಗರ/ಟೆಂಡರ್/ಕೆಪಿಪಿ/007/2025–26 ದಿನಾಂಕ: 12–12–2025

ತಿದ್ದುಪಡಿ ಪ್ರಕಟಣೆ–1

ವಿಷಯ: ಟೆಂಡರ್ ಮುಂದೂಡಿಕೆ.
ಉಲ್ಲೇಖ: ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ಗಾಂಧಿನಗರ/ಟೆಂಡರ್/ಕೆಪಿಪಿ/007/2025–26 ದಿನಾಂಕ: 04–12–2025.
ತಾಂತ್ರಿಕ ಕಾರಣಗಳಿಂದಾಗಿ ಮೇಲ್ಕಂಡ ಟೆಂಡರ್‌ಅನ್ನು ಮುಂದೂಡಲಾಗಿದೆ.
(1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 26.12.2025ರ ಸಂಜೆ 4.30 ಗಂಟೆವರೆಗೆ. (2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 29.12.2025ರಂದು ಮಧ್ಯಾಹ್ನ 12.30 ಗಂಟೆಗೆ. (3) ಟೆಂಡರ್ ಕಾಲಾವಧಿ: ಟೆಂಡರ್ ತೆರೆಯುವ ದಿನಾಂಕದಿಂದ 28 ದಿನಗಳು.
ಉಳಿದಂತೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬಿಸಿಸಿಸಿ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಸಾರ್ವಜನಿಕ ಆಸ್ಪತ್ರೆ, ಟಿ.ಬಿ.ಸರ್ಕಲ್ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ದೂರವಾಣಿ ಸಂಖ್ಯೆ : 7619126501 ಇ–ಮೇಲ್ : amodbpura02@gmail.com
ಸಂಖ್ಯೆ: ಆ.ಡಿಬಿಪಿ/01/2025–26 ದಿನಾಂಕ: 09.12.2025

ಟೆಂಡರ್ ಪ್ರಕಟಣೆ

ಸಾರ್ವಜನಿಕ ಆಸ್ಪತ್ರೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇಲ್ಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನದ PM–ABHIM ಕಾರ್ಯಕ್ರಮದಡಿ ಐ.ಪಿ.ಹೆಚ್.ಎಲ್ ಪ್ರಯೋಗ ಶಾಲೆಗೆ ಈ ಕೆಳಕಂಡ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದೆ.

1) ತಜ್ಞ ವೈದ್ಯರು (Specialist) Pathologist ಹುದ್ದೆಗಳ ಸಂಖ್ಯೆ: 01, ಮಾಸಿಕ ವೇತನ ರೂ.1,10,000/–

Qualification	Age Limit	Essential	ಮೀಸಲಾತಿ
MD Pathology	Below 45 Years	Internship must be completed Must have KMC Registration	GM

2) ಪ್ರಯೋಗ ಶಾಲಾ ತಂತ್ರಜ್ಞ (Lab Technician) : ಹುದ್ದೆಗಳ ಸಂಖ್ಯೆ: 04, ಮಾಸಿಕ ವೇತನ ರೂ.16,100/–

Qualification	Age Limit	Remarks	ಮೀಸಲಾತಿ
B.Sc in Medical Laboratory Technology (MLT) OR Diploma in Medical Laboratory Technology (DMLT)	Below 40 Years	Should be registered in Karnataka state Para Medical Board	SC-1 (ಪ್ರವ) GM-1 (ಇತರೆ) GM-1 (ಮಹಿಳೆ) ST-1 (ಇತರೆ)

ಷರತ್ತು ಮತ್ತು ನಿಬಂಧನೆಗಳು: (1) ಮೇಲ್ಕಂಡ ಹುದ್ದೆಗಳಿಗೆ ನಿಯಮಾನುಸಾರ ಹಾಗೂ ರಾಜ್ಯ ಮಟ್ಟದಿಂದ ನೀಡಿರುವ ನಿಯಮಾವಳಿ, ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು 'ಮೆರಿಟ್ ಕಮ್ ರೋಸ್ಟರ್' ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. (2) ಈ ಮೇಲ್ಕಂಡ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಚಾಲ್ತಿ ಇರುವ ಸರ್ಕಾರದ ನಿಯಮಗಳಂತೆ ನೇಮಕಾತಿ ಮಾಡಲಾಗುವುದು. (3) ಈ ಮೇಲ್ಕಂಡ ಎಲ್ಲಾ ಹುದ್ದೆಗಳಿಗೆ ಕಂಪ್ಯೂಟರ್‌ನ ಸಾಮಾನ್ಯ ಜ್ಞಾನ ಹೊಂದಿರತಕ್ಕದ್ದು, ಕಂಪ್ಯೂಟರ್ ತರಬೇತಿ ಪ್ರಮಾಣ ಪತ್ರವನ್ನು ಪಡೆದಿರಬೇಕು. (4) ಯಾವುದೇ ಹುದ್ದೆಗೆ ಅಗತ್ಯವಿರುವಷ್ಟು ಅಭ್ಯರ್ಥಿಗಳು ಅರ್ಜಿ ಸಲ್ಲಿಸದೇ ಇದ್ದಲ್ಲಿ ಅಥವಾ ಹೆಚ್ಚುವರಿ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿಗಳಲ್ಲಿ ದಿ: 31.03.2026 ರೊಳಗೆ ಖಾಲಿಯಾಗುವ ಹುದ್ದೆಗಳನ್ನು **Rolling Advertisement** ಆಧಾರದಲ್ಲಿ ನಿಯಮಾನುಸಾರ ಭರ್ತಿ ಮಾಡಲಾಗುವುದು. (5) ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳು ತಮ್ಮ ಇಲಾಖೆಗಳಿಂದ ನಿರಾಕ್ಷೇಪಣಾ (ಎನ್.ಓ.ಸಿ.) ಪತ್ರವನ್ನು ತರತಕ್ಕದ್ದು. **ನೇರ ಸಂದರ್ಶನದ ವಿವರ:–** ಮೇಲ್ಕಂಡ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ಮೇಲ್ಕಂಡ ಹುದ್ದೆಗಳ ವಿದ್ಯಾರ್ಹತೆಗೆ ಸಂಬಂಧಪಟ್ಟ ತಮ್ಮ ಎಲ್ಲಾ ಮೂಲ ದಾಖಲಾತಿಗಳು [Original Documents] ಮತ್ತು ನಕಲು [Xerox] ಪ್ರತಿಗಳೊಂದಿಗೆ, ಆಧಾರ್ ಪ್ರತಿ ಮತ್ತು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರದೊಂದಿಗೆ ದಿನಾಂಕ: 23.12.2025 ರಂದು ಬೆಳಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಸಂದರ್ಶನದ ಸ್ಥಳದಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡು ಅರ್ಜಿಗಳನ್ನು ಪಡೆದುಕೊಳ್ಳತಕ್ಕದ್ದು ಹಾಗೂ ನೋಂದಾಯಿಸಿಕೊಂಡ ಅಭ್ಯರ್ಥಿಗಳಲ್ಲಿ ಹುದ್ದೆಗಳಿಗೆ ಅರ್ಹರಿರುವ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಪರಿಗಣಿಸಲಾಗುವುದು. ಈ ಮೇಲ್ಕಂಡ ನೇಮಕಾತಿಯು ಕೆಲವು ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ. ಸದರಿ ಹುದ್ದೆಗಳ ಆಯ್ಕೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ/ಆಯ್ಕೆ ಸಮಿತಿಯ ನಿರ್ಣಯಗಳು ಅಂತಿಮವಾಗಿರುತ್ತವೆ. **ನೇರ ಸಂದರ್ಶನ ನಡೆಯುವ ಸ್ಥಳ:–** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ, ಕೊಠಡಿ ಸಂಖ್ಯೆ 207, 2ನೇ ಮಹಡಿ, ಬೀರಸಂದ್ರ ಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110 ವಿಶೇಷ ಸೂಚನೆ: ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಹುದ್ದೆಗೆ ಅಗತ್ಯವಿರುವ ಮೂಲ ದಾಖಲಾತಿಗಳೊಂದಿಗೆ ಹಾಜರಾಗುವುದು ಹಾಗೂ ನಕಲು ಪ್ರತಿಗಳಿಗೆ ಸ್ವಯಂ ದೃಢೀಕರಿಸಿ (Self Attested) ಅರ್ಜಿಗೆ ಲಗತ್ತಿಸುವುದು.

ಸಹಿ/–
ಸದಸ್ಯ ಕಾರ್ಯದರ್ಶಿಗಳು,
ಮುಖ್ಯ ವೈದ್ಯಾಧಿಕಾರಿಗಳು ಸಾರ್ವಜನಿಕ ಆಸ್ಪತ್ರೆ,
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ವಾಸಾಸಂಇ/ವಾಪ್ರ/4403/ಶಿರಡಿ ಸಾಯಿ/2025–26

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
ಜಯನಗರ 3ನೇ ಬ್ಲಾಕ್ ಶಾಖೆ
13, 9ನೇ ಮುಖ್ಯ, 3ನೇ ಬ್ಲಾಕ್, ಜಯನಗರ, ಬೆಂಗಳೂರು 560011

ಚಿನ್ನದ ಆಭರಣಗಳ ಹರಾಜಿಗೆ ಸಾರ್ವಜನಿಕ ಸೂಚನೆ

ಕೆಳಗೆ ತಿಳಿಸಲಾದ ಸಾಲಗಾರರು ಹಲವಾರು ಜ್ಞಾಪನೆಗಳನ್ನು ನೀಡಿದ್ದರೂ ಸಹ ನಿಗದಿತ ಸಮಯದೊಳಗೆ ಸಾಲವನ್ನು ಮರುಪಾವತಿಸಲು ಮತ್ತು ಚಿನ್ನದ ಆಭರಣಗಳನ್ನು ಪುನಃ ಪಡೆದುಕೊಳ್ಳಲು ವಿಫಲರಾಗಿದ್ದಾರೆ. ಈ ಸಾಲದ ಖಾತೆಯ ಚಿನ್ನದ ಆಭರಣಗಳು ಅಡಿಯಲ್ಲಿ ವಾಗ್ದಾನ ಮಾಡಿದ ಹಣವನ್ನು **20/12/2025 ರಂದು ಮಧ್ಯಾಹ್ನ 12:00 ಗಂಟೆಗೆ** ಶಾಖೆಯ ಆವರಣದಲ್ಲಿ ಸಾರ್ವಜನಿಕವಾಗಿ ಮಾರಾಟ ಮಾಡಲಾಗುತ್ತದೆ. ಭಾಗವಹಿಸಲು ಇಚ್ಛಿಸುವವರು ಶಾಖೆಯನ್ನು ಸಂಪರ್ಕಿಸಲು ವಿನಂತಿಸಲಾಗಿದೆ. ಯಾವುದೇ ಕಾರಣವನ್ನು ನೀಡದೆ ಯಾವುದೇ ಬಿಡ್ ಅನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ಗ್ರಾಹಕರು ಮರಣ ಹೊಂದಿದ್ದರೆ ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ ಕಾನೂನುಬದ್ಧ ಉತ್ತರಾಧಿಕಾರಿಗೆ ಅನ್ವಯಿಸುತ್ತವೆ ಹರಾಜಿನ ದಿನಾಂಕದ ಮೊದಲು ನವೀಕೃತ ಬಡ್ಡಿ ಮತ್ತು ರೇಸಿಂಗ್ ಶುಲ್ಕಗಳನ್ನು ಪಾವತಿಸಲು ಸಾಲಗಾರನಿಗೆ ಇಲ್ಲಿ ಸೂಚಿಸಲಾಗಿದೆ. ಇಲ್ಲದಿದ್ದರೆ ಅಡವಿಟ್ಟ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿ ಹಣವನ್ನು ಮರುಪಡೆಯಲಾಗುತ್ತದೆ.

ಶಾಖೆಯ ಹೆಸರು
ಎಸ್‌ಬಿಐ ಜಯನಗರ 3ನೇ ಬ್ಲಾಕ್ 40012
ಸಾಲಗಾರನ ಹೆಸರು ಮತ್ತು ಖಾತೆ ಸಂಖ್ಯೆ
ಮಾರುತಿ ನಾಯಕ್ XXXXXX9006
ಸಮತೋಲನ
ರೂ 50,922/– (ವೆಚ್ಚಗಳು ಮತ್ತು ಶುಲ್ಕಗಳನ್ನು ಹೊರತುಪಡಿಸಿ)
ಆಭರಣಗಳ ಸಂಖ್ಯೆ
2
ಒಟ್ಟು ತೂಕ
14.65 ಗ್ರಾಂ

ORCHIDS® The International School
Presents
ಪ್ರಜಾವಾಣಿ
QUIZ CHAMPIONSHIP
2025

ಬೆಂಗಳೂರು ವಲಯದ ಸುತ್ತು
ನಿಮ್ಮ ಪ್ರತಿಭೆಯನ್ನು ತೋರ್ಪಡಿಸಲು ಸದವಕಾಶ!

ಪ್ರಜಾವಾಣಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಅಗ್ರ ಸ್ಪರ್ಧಿಗಳೊಡನೆ ಬುದ್ಧಿವಂತಿಕೆಯ ಸೆಣಸಾಟದಲ್ಲಿ ನಿಮ್ಮ ಜ್ಞಾನದ ಬೆಳಕನ್ನು ಒರೆಗೆ ಹಚ್ಚಿ ಮತ್ತು ಆಕರ್ಷಕ ಬಹುಮಾನಗಳನ್ನು ಗೆಲ್ಲಿ.

ಏಳರಿಂದ 10 ನೆಯ ತರಗತಿಯ ಎಲ್ಲ ವಿದ್ಯಾರ್ಥಿಗಳನ್ನು ಈ ಮೂಲಕ ಆಹ್ವಾನಿಸುತ್ತಿದ್ದೇವೆ!

ವಿಜೇತರನ್ನು ವಿನೂತನ ಕಲಿಕಾ ಕಾರ್ಯಾಗಾರಕ್ಕೆ ಆಹ್ವಾನಿಸಲಾಗುವುದು ಮತ್ತು ಅವರಿಗೆ ಹೊಸ ಸಾಧ್ಯತೆಗಳನ್ನು ಅನ್ವೇಷಿಸುವ ಅವಕಾಶ ದೊರೆಯುವುದು.

ದಿನಾಂಕ	ವಾರ	ಸ್ಥಳ
ಡಿಸೆಂಬರ್ 15, ಮುಂಜಾನೆ 9 ಕ್ಕೆ	ಸೋಮವಾರ	ಆರ್‌ವಿ ಆಡಿಟೋರಿಯಂ (ಆರ್‌ವಿ ಟೀಚರ್ಸ್ ಕಾಲೇಜ್), ರಾಷ್ಟ್ರೀಯ ವಿದ್ಯಾಲಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೇಬಿ ಡಾಲ್ಸ್, ಬೆಂಗಳೂರು, ಕರ್ನಾಟಕ 560011

ಉತ್ತಮೋತ್ತಮರನ್ನು ಸೋಲಿಸಿ ಮತ್ತು ಗ್ರಾಂಡ್ ಫಿನಾಲೆಯಲ್ಲಿ ನಿಮ್ಮ ಸ್ಥಾನವನ್ನು ಹೊಂದಿ.

ಈಗಲೇ ನೋಂದಾಯಿಸಿ
ಉಚಿತ ಪ್ರವೇಶ!!!

ನೋಂದಾಯಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ಅಥವಾ www.prajavani.net ಗೆ ಭೇಟಿ ನೀಡಿ.
ಸಂಪರ್ಕಿಸಿ: 73380 18541 (ಮಧ್ಯಾಹ್ನ 12 ರಿಂದ ಸಂಜೆ 5, ಸೋಮವಾರ-ಶುಕ್ರವಾರ)

Banking Partner: SBI | Refreshment Partner: Mogu Mogu | Special Partner: BHIMA | Nutrition Partner: ನಂದಿನಿ | Associate Sponsors: ಪೂರ್ವಿಕಾ, VIPS 25 Years, talent sprint Part of Accenture, ICS MAHESH PU COLLEGE
Associate Sponsors: SIDDAGANGA, ಮಾರ್ಗದರ್ಶಿ | TV partner: Asianet Suvarna News | Knowledge partner: QURIOSITY

ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಫಲಾನುಭವಿಗಳಿಗೆ ಶಾಸಕ ಎಸ್. ಮುನಿರಾಜು ಟ್ಯಾಕ್ಸಿಗಳನ್ನು ವಿತರಿಸಿದರು

‘ಬಡವರಿಗೆ ನೆರವು ನೀಡುವುದರಿಂದ ಸಾರ್ಥಕತೆ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಜನ್ಮದಿನ ಹಾಗೂ ಹಬ್ಬಗಳಲ್ಲಿ ದುಂದುವೆಚ್ಚ ಮಾಡುವ ಬದಲಾಗಿ ಬಡ ಜನರಿಗೆ ನೆರವು ನೀಡುವ ಮೂಲಕ ಜೀವನದಲ್ಲಿ ಸಾರ್ಥಕತೆ ಮೆರೆಯಬೇಕು’ ಎಂದು ಶಾಸಕ ಎಸ್.ಮುನಿರಾಜು ತಿಳಿಸಿದರು.

ಬಾಗಲಗುಂಟೆಯ ಶ್ರೀಸಾಯಿ ಕಲ್ಯಾಣ ಮಂಟಪದಲ್ಲಿ ತಮ್ಮ ಜನ್ಮದಿನದ ಪ್ರಯುಕ್ತ ಕಾರ್ಯಕರ್ತರು ಆಯೋಜಿಸಿದ್ದ 'ಅಭಿಮಾನೋತ್ಸವ' ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜೀವಿತ ಅವಧಿಯಲ್ಲಿ ಸಮಾಜಕ್ಕೆ ನಾವು ನೀಡುವ ಕೊಡುಗೆ ಶಾಶ್ವತವಾಗಿ ಉಳಿಯಲಿದೆ. ಆದ್ದರಿಂದ, ಮೌಲ್ಯಯುತವಾಗಿ ಸೇವೆ ಮಾಡಿ' ಎಂದು ಮನವಿ ನೀಡಿದರು.

‘ಹಾರ ತುರಾಯಿ ಬದಲಿಗೆ ಸಾವಿರಾರು ಪುಸ್ತಕಗಳನ್ನು ಜನರು ಉಡುಗೊರೆಯಾಗಿ ನೀಡಿದ್ದಾರೆ. ಅವುಗಳನ್ನು ಕ್ಷೇತ್ರದ ಸರ್ಕಾರಿ ಶಾಲಾ–ಕಾಲೇಜುಗಳಿಗೆ ನೀಡುತ್ತೇನೆ' ಎಂದರು.

ಜನ್ಮದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಬಿಜೆಪಿ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಭರತ್ ಸೌಂದರ್ಯ ಅವರ ನೇತೃತ್ವದಲ್ಲಿ ಬಡವರಿಗೆ ತಳ್ಳುವ ಗಾಡಿಯನ್ನು ಮುನಿರಾಜು ವಿತರಿಸಿದರು.

ಇದೇ ವೇಳೆ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಫಲಾನುಭವಿಗಳಿಗೆ ಟ್ಯಾಕ್ಸಿಗಳನ್ನು ವಿತರಿಸಿದರು.

ಅರ್ಜೆಂಟೈನಾದ ಫುಟ್‌ಬಾಲ್ ಐಕಾನ್ ಭಾರತಕ್ಕೆ ಬರುತ್ತಿದೆ.

ದೊಡ್ಡಜಾಲ ಗ್ರಾ.ಪಂ: ನಾಗರಾಜು ಅಧ್ಯಕ್ಷ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ದೊಡ್ಡಜಾಲ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ನಾಗರಾಜು.ಎ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಾಗರಾಜು.ಎ

ಆರ್.ಬೈರೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಶುಕ್ರವಾರ ಚುನಾವಣಾ ಪ್ರಕ್ರಿಯೆ ನಡೆಯಿತು. 14 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ನಾಗರಾಜು ಒಬ್ಬರೇ ನಾಮಪತ್ರ ಸಲ್ಲಿಸಿದ್ದರು.

‘ಕಂದಾಯ ಸಚಿವ ಕೃಷ್ಣ ಬೈರೇಗೌಡರ ಮಾರ್ಗದರ್ಶನದ ಮೇರೆಗೆ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಾಗುವುದು’ ಎಂದು ನಾಗರಾಜು ತಿಳಿಸಿದರು. ಮಾಜಿ ಅಧ್ಯಕ್ಷರಾದ ಎನ್.ಕೆ.ಮಹೇಶ್‌ಕುಮಾರ್, ಹಂಸವೇಣಿ ಮಂಜುನಾಥ್, ಸದಸ್ಯರಾದ ಎಂ.ಚೇತನ್, ಹರಿಪ್ರಕಾಶ್, ಪ್ರಕಾಶ್, ನರಸಿಂಹಯ್ಯ, ಸೌಭಾಗ್ಯಮ್ಮ, ರತ್ನಮ್ಮ, ಮಾಲಾ, ಶ್ರುತಿ ಇದ್ದರು.

‘ವೃದ್ಧನಿಗೆ ₹1.32 ಕೋಟಿ ವಂಚನೆ’

ಅಕ್ರಮ ಹಣ ವರ್ಗಾವಣೆ ಹೆಸರಲ್ಲಿ ಬೆದರಿಕೆ
●ಯಲಹಂಕ ನಿವಾಸಿಗೆ ಡಿಜಿಟಲ್ ಅರೆಸ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಹಣ ವರ್ಗಾವಣೆಯ ಹೆಸರಿನಲ್ಲಿ ‘ಡಿಜಿಟಲ್ ಅರೆಸ್ಟ್’ ಮಾಡುವುದಾಗಿ ವೃದ್ಧರೊಬ್ಬರನ್ನು ಬೆದರಿಸಿ ₹1.32 ಕೋಟಿಯನ್ನು ಸೈಬರ್ ವಂಚಕರು ದೋಚಿದ್ದಾರೆ. ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಡಿ.6ರಂದು ಪ್ರಕರಣ ದಾಖಲಾಗಿದೆ.

87 ವರ್ಷದ ಯಲಹಂಕದ ನಿವಾಸಿ, ನಿವೃತ್ತ ನೌಕರ ಸುಂದರ್‌ರಾಜನ್ ಅವರು ನೀಡಿದ ದೂರಿನ ಮೇರೆಗೆ ಮಾಹಿತಿ ತಂತ್ರಜ್ಞಾನ ಕಾಯ್ದೆ–2008 ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 308(2), 318(4), 319(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನ.19ರಂದು ಅಪರಿಚಿತ ವ್ಯಕ್ತಿಗಳು ಮೂರು ಪ್ರತ್ಯೇಕ ಮೊಬೈಲ್ ಸಂಖ್ಯೆಗಳಿಂದ ವಾಟ್ಸ್‌ಆ್ಯಪ್ ಕರೆ ಮಾಡಿ, ‘ತಾವು ಮುಂಬೈ ಅಪರಾಧ ವಿಭಾಗದ ಪೊಲೀಸರು’ ಎಂದು ಹೇಳಿದ್ದರು. ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವಾಗ 256 ಆಧಾರ್ ಕಾರ್ಡ್‌ಗಳು ಲಭ್ಯವಿದ್ದು, ಅದರಲ್ಲಿ ತಮ್ಮ ಆಧಾರ್ ಕಾರ್ಡ್ ಸಹ ಸಿಕ್ಕಿದೆ. ತನಿಖೆಗಾಗಿ ಮುಂಬೈಗೆ ಬರಬೇಕೆಂದು ಎಸಿಪಿ ಎಂದು ಪರಿಚಯಿಸಿಕೊಂಡಿದ್ದ ವಂಚಕ ಸುಂದರ್‌ರಾಜನ್ ಅವರನ್ನು ಬೆದರಿಸಿದ್ದ ಎಂದು ಪೊಲೀಸರು ಹೇಳಿದರು.

ವಿಡಿಯೊ ಕರೆಯಲ್ಲಿಯೇ ಪರಿಶೀಲನೆ: ‘ಕೆಲವು ನಿಮಿಷ ಕಳೆದ ಮೇಲೆ ಮತ್ತೆ ಕರೆ ಮಾಡಿದ್ದ ಸೈಬರ್ ವಂಚಕರು, ತಾವು ಹಿರಿಯ ನಾಗರಿಕರು ಆಗಿರುವ ಕಾರಣಕ್ಕೆ ಮುಂಬೈಗೆ ಬರುವುದು ಬೇಡ. ವಿಡಿಯೊ ಕರೆಯ ಮೂಲಕವೇ ಎಲ್ಲ ದಾಖಲೆಗಳನ್ನು ಪರಿಶೀಲನೆ ನಡೆಸುತ್ತೇವೆ. ನಮ್ಮ ಅನುಮತಿ ಇಲ್ಲದೆ ಯಾರೊಂದಿಗೆ ಮಾತನಾಡುವಂತಿಲ್ಲ. ಬೇರೆ ಯಾರಿಗೂ ತನಿಖೆಯ ಮಾಹಿತಿ ನೀಡುವಂತಿಲ್ಲ’ ಎಂಬುದಾಗಿ ಬೆದರಿಸಿದ್ದರು. ವಿಷಯ ಬಹಿರಂಗಪಡಿಸಿದರೆ ಬಂಧನ ಮಾಡುವುದಾಗಿ ಹೇಳಿದ್ದರು. ಕರೆ ಮಾಡಿದ ವ್ಯಕ್ತಿಗಳು ನಿಜವಾದ ಪೊಲೀಸರು ಎಂಬುದಾಗಿ ದೂರುದಾರರು ನಂಬಿದ್ದರು ಎಂದು ಸೈಬರ್ ಅಪರಾಧ ವಿಭಾಗದ ಅಧಿಕಾರಿಯೊಬ್ಬರು ಹೇಳಿದರು.

‘ಮತ್ತೆ ಕರೆ ಮಾಡಿದ್ದ ಸೈಬರ್ ವಂಚಕರು, ನಿಮ್ಮ ಖಾತೆಯಲ್ಲಿರುವ ಹಣವನ್ನು ಆರ್‌ಬಿಐ ಕಡೆಯಿಂದ ಪರಿಶೀಲನೆ ನಡೆಸಬೇಕು. ನಾವು ನೀಡುವ ಸರ್ಕಾರಿ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾವಣೆ ಮಾಡಬೇಕು. ಪರಿಶೀಲನೆಯ ಬಳಿಕ, ಹಣವನ್ನು ವಾಪಸ್ ಹಾಕುತ್ತೇವೆ ಎಂಬುದಾಗಿ ವಂಚಕರು ಹೇಳಿದ್ದರು’ ಎಂದು ಮೂಲಗಳು ಹೇಳಿವೆ.

ಮೂರು ಖಾತೆಗಳಿಗೆ ಹಣ ವರ್ಗಾವಣೆ: ನ.19ರಿಂದ ಡಿ.6ರ ವರೆಗೆ ದೂರುದಾರರು, ತಮ್ಮ ಎರಡು ಬ್ಯಾಂಕ್ ಖಾತೆಗಳಿಂದ ಸೈಬರ್ ವಂಚಕರು ನೀಡಿದ ಬೇರೆ ಬೇರೆ ಬ್ಯಾಂಕ್‌ನ ಖಾತೆಗಳಿಗೆ ಹಂತ ಹಂತವಾಗಿ ₹1.32 ಕೋಟಿ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ದೂರುದಾರರಿಗೆ ಸೈಬರ್ ವಂಚನೆ ನಡೆದಿರುವುದು ಗೊತ್ತಾಗಿ, ಎನ್‌ಸಿಆರ್‌ಪಿ ಪೋರ್ಟಲ್ 1930ಗೆ ಕರೆ ಮಾಡಿ ದೂರು ನೀಡಿದ್ದರು. ಬಳಿಕ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಲಾಭಾಂಶ ಆಮಿಷ: ₹98 ಲಕ್ಷ ಕಳೆದುಕೊಂಡ ಯೋಗಗುರು

ಬೆಂಗಳೂರು: ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಯೋಗ ಗುರುಗಳಿಗೆ ₹98.42 ಲಕ್ಷ ವಂಚಿಸಿರುವ ದಂಪತಿಯ ವಿರುದ್ಧ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿಲ್ಸನ್ ಗಾರ್ಡನ್ ನಿವಾಸಿ ಅಂಕಿತ್ ಭಾವುವಾಲಾ ಅವರ ದೂರು ಆಧರಿಸಿ ತಮಿಳುನಾಡಿನ ಯುಗದೇವ್ ಹಾಗೂ ಅವರ ಪತ್ನಿ ಕೀರ್ತಿಪ್ರಿಯಾ ಅವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

‘ಅಂಕಿತ್ ಭಾವುವಾಲಾ ಹಾಗೂ ಪೊನ್ನಮ್ಮ ಯೋಗ ಸಾಧಕರಾಗಿದ್ದು, ‘ಯೋಗರುದ್ರ ಸಂಸ್ಥೆ’ಯಲ್ಲಿ ಪಾಲುದಾರರಾಗಿದ್ದಾರೆ. 2023ರಲ್ಲಿ ಯುಗದೇವ್ ಮತ್ತು ಅವರ ಪತ್ನಿ ಕೀರ್ತಿಪ್ರಿಯಾ ಪರಿಚಯ ಆಗಿದ್ದರು. ತಾವು ಯೋಗ ಮತ್ತು ಅಧ್ಯಾತ್ಮ ಕ್ಷೇತ್ರದಲ್ಲಿ ಆಸ್ತಕಿ ಹೊಂದಿರುವುದಾಗಿ ಹೇಳಿದ್ದರು. ತಾವು ಸಹ ಯೋಗ ಶಿಕ್ಷಕರು ಎಂದು ಪರಿಚಯಿಸಿ ಕೊಂಡಿದ್ದರು.

ಜೆಬಿಡಿ ಫೈನಾನ್ಸ್ ಕಂಪನಿ ನಡೆಸುತ್ತಿರುವುದಾಗಿಯೂ ಮಾಹಿತಿ ನೀಡಿದ್ದರು. ಹರಿಹರನ್ ಎಂಬುವವರು ಹಣಕಾಸು ವಿಭಾಗದ ಮುಖ್ಯಸ್ಥರಾಗಿದ್ದಾರೆ ಎಂದು ಹೇಳಿ ಕೆಲವು ಪ್ರಮಾಣಪತ್ರಗಳನ್ನೂ ತೋರಿಸಿದ್ದರು. ಜೆಬಿಡಿ ವೆಬ್‌ಸೈಟ್ ಮೂಲಕ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರಲಿದೆಯೆಂದು ಹೇಳಿದ್ದರು’ ಎಂದು ಪೊಲೀಸರು ಹೇಳಿದರು.

'ಅಂಕಿತ್ ಭಾವುವಾಲಾ ಅವರು ಜೆಬಿಡಿ ವೆಬ್‌ಸೈಟ್ ಅನ್ನು ನೋಡಿ ಅದು ವೃತ್ತಿಪರತೆಯಿಂದ ಕೂಡಿರಬಹುದು ಎಂದು ಭಾವಿಸಿದ್ದರು. ಯುಗದೇವ್ ಅವರ ಬ್ಯಾಂಕ್ ಖಾತೆಗೆ ₹39.20 ಲಕ್ಷ ಹೂಡಿಕೆ ಮಾಡಿದರೆ, ಪೊನ್ನಮ್ಮ, ಸುಬ್ಬಯ್ಯ ಹಾಗೂ ಯೋಗರುದ್ರ ಸಂಸ್ಥೆಯಿಂದ ₹59.22 ಲಕ್ಷ ವರ್ಗಾವಣೆ ಮಾಡಲಾಗಿತ್ತು. ಮೊದಲು ಹೂಡಿಕೆಗೆ ಬಡ್ಡಿ ರೂಪದಲ್ಲಿ ಸ್ವಲ್ಪ ಹಣ ನೀಡುತ್ತಿದ್ದ ಯುಗದೇವ್ ನಂತರ ಬಡ್ಡಿ ಹಣ ಕೊಟ್ಟಿರಲಿಲ್ಲ.

ಕೆಲವು ತಿಂಗಳಿನಿಂದ ಯುಗದೇವ್ ಮತ್ತು ಅವರ ಪತ್ನಿ ದೂರುದಾರರ ಸಂಪರ್ಕಕ್ಕೆ ಸಿಕ್ಕಿಲ್ಲ. ಆರೋಪಿಗಳು ಒಟ್ಟು ₹98.42 ಲಕ್ಷ ವಂಚಿಸಿದ್ದಾರೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಹೈಟೆನ್ಷನ್ ಮಾರ್ಗದಿಂದ ವಿದ್ಯುತ್ ಪ್ರವಹಿಸಿ ದುರ್ಘಟನೆ

ಗಿಳಿ ರಕ್ಷಣೆಗೆ ಹೋಗಿ ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಿರಿನಗರದ ಅಪಾರ್ಟ್‌ಮೆಂಟ್ ಬಳಿ ಹಾದು ಹೋಗಿರುವ ಹೈಟೆನ್ಷನ್ ವಿದ್ಯುತ್ ಮಾರ್ಗದ ಕಂಬದ ಮೇಲೆ ಕುಳಿತಿದ್ದ ಸುಮಾರು ₹2 ಲಕ್ಷ ಬೆಲೆ ಬಾಳುವ ವಿದೇಶಿ ತಳಿಯ ಗಿಳಿಯನ್ನು ರಕ್ಷಣೆ ಮಾಡಲು ಹೋದ ಯುವಕ, ವಿದ್ಯುತ್ ಆಘಾತದಿಂದ ಶುಕ್ರವಾರ ಮೃತಪಟ್ಟಿದ್ದಾರೆ.

ನಾಗಮಂಗಲದ ಅರುಣ್ ಕುಮಾರ್ (32) ಮೃತಪಟ್ಟವರು.

ಗಿರಿನಗರದ ವೀರಭದ್ರ ನಗರದ ಸಂಬಂಧಿಕರ ಅಂಗಡಿಯೊಂದರಲ್ಲಿ ಅರುಣ್ ಕುಮಾರ್ ಕಳೆದ ಕೆಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಸಂಬಂಧಿ ಲಿಖಿತಾ ಅವರು ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದರು. ವಿದೇಶಿ ಗಿಳಿಯೊಂದನ್ನು ಲಿಖಿತಾ ಸಾಕಿದ್ದರು. ಅಪಾರ್ಟ್‌ಮೆಂಟ್ ಪಕ್ಕದಲ್ಲಿಯೇ ಗಿಳಿ ಆಗಾಗ ಹಾರಾಟ ನಡೆಸುತ್ತಿತ್ತು. ಅರುಣ್ ಕುಮಾರ್ ಅವರೂ ಆ ಗಿಳಿಯನ್ನು ಮುದ್ದಿನಿಂದ ನೋಡಿಕೊಳ್ಳುತ್ತಿದ್ದರು ಎಂದು ಮೂಲಗಳು ಹೇಳಿವೆ.

ಆಗಿದ್ದು ಏನು?: ಶುಕ್ರವಾರ ಬೆಳಿಗ್ಗೆ ಅಪಾರ್ಟ್‌ಮೆಂಟ್ ಬಳಿ ಹಾದು ಹೋಗಿರುವ ಹೈಟೆನ್ಷನ್ ವಿದ್ಯುತ್ ಮಾರ್ಗದ ಕಂಬದ ಮೇಲೆ ಗಿಳಿ ಕುಳಿತಿತ್ತು. ಅದನ್ನು ಕಂಡ ಅರುಣ್ ಕುಮಾರ್ ಅವರು, ವಿದ್ಯುತ್ ಪ್ರವಹಿಸಿ ಗಿಳಿ ಮೃತಪಡಬಹುದು ಎಂಬ ಆತಂಕದಿಂದ ಅದರ ರಕ್ಷಣೆಗೆ ಮುಂದಾಗಿದ್ದರು. ಕಾಂಪೌಂಡ್ ಮೇಲೆ ನಿಂತು ಕಬ್ಬಿಣದ ಪೈಪ್‌ಗೆ ಕೋಲು ಸೇರಿಸಿ ಗಿಳಿಯನ್ನು ಅಲ್ಲಿಂದ ಓಡಿಸಲು ಯತ್ನಿಸಿದ್ದರು. ಆಗ ವಿದ್ಯುತ್ ವೈರ್ ತಾಗಿ ಕಾಂಪೌಂಡ್‌ನಿಂದ ಕೆಳಗೆ ಬಿದ್ದಿದ್ದರು.

ವಿದ್ಯುತ್ ಆಘಾತದಿಂದ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಗಿಳಿಯ ಪ್ರಾಣ ರಕ್ಷಣೆಗೆ ಮುಂದಾಗಿದ್ದ ಅರುಣ್ ಕುಮಾರ್ ಮೃತಪಟ್ಟಿದ್ದಾರೆ. ಗಿಳಿ ಯಾವುದೇ ಅಪಾಯವಿಲ್ಲದೇ ಬದುಕುಳಿದಿದೆ’ ಎಂದು ಮೂಲಗಳು ತಿಳಿಸಿವೆ. ಸ್ಥಳಕ್ಕೆ ಬೆಸ್ಕಾಂ ಮತ್ತು ಕೆಇಬಿ ಅಧಿಕಾರಿಗಳು, ಗಿರಿನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹೈಟೆನ್ಷನ್ ವಿದ್ಯುತ್ ಮಾರ್ಗದಲ್ಲಿ ಕುಳಿತಿದ್ದ ಗಿಳಿ

ಅರುಣ್

ಪ್ರತಿಭಟನೆ

ಅಪಾರ್ಟ್‌ಮೆಂಟ್ ಬಳಿಯೇ ಹೈಟೆನ್ಷನ್ ವಿದ್ಯುತ್ ಮಾರ್ಗ ಇರುವುದು ಸುರಕ್ಷಿತವಲ್ಲ ಎಂದು ನಿವಾಸಿಗಳು ಹೇಳಿದ್ದಾರೆ. ಹೈಟೆನ್ಷನ್ ವಿದ್ಯುತ್ ಮಾರ್ಗವನ್ನು ಬೇರೆಡೆಗೆ ಸ್ಥಳಾಂತರ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

‘ಕಬ್ಬಿಣದ ರಾಡು ಬಳಸಿ ಗಿಳಿಯ ಜೀವ ಉಳಿಸಲು ಯುವಕ ಯತ್ನಿಸಿದ್ದರು. ಆಗ ದುರ್ಘಟನೆ ನಡೆದಿದೆ ಎಂಬುದು ಗೊತ್ತಾಗಿದೆ. ಈ ಸಂಬಂಧ ಗಿರಿನಗರ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು (ಯುಡಿಆರ್) ಪ್ರಕರಣ ದಾಖಲಾಗಿದೆ’ ಎಂದು ಬೆಂಗಳೂರು ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ಅವರು ತಿಳಿಸಿದರು.

ಓಂ ಪ್ರಕಾಶ್ ಕೊಲೆ ಪ್ರಕರಣ ಜೈಲಿನಲ್ಲಿ ಪಲ್ಲವಿ ರಂಪಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ (ಡಿಜಿ ಮತ್ತು ಐಜಿಪಿ) ಓಂ ಪ್ರಕಾಶ್ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ಆರೋಪಿ ಪಲ್ಲವಿ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ರಂಪಾಟ ನಡೆಸಿದ್ದಾರೆ.

ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರನ್ನು ಬಂಧಿಸಿ ಒಂಬತ್ತು ತಿಂಗಳು ಕಳೆದಿದೆ. ಬಂಧನದ ವೇಳೆಯೂ ಪಲ್ಲವಿ ಅವರು ಗಲಾಟೆ ನಡೆಸಿದ್ದರು. ಈಗ ಜೈಲು ಸೇರಿದ ಮೇಲೂ ಗಲಾಟೆ ಮುಂದುವರಿಸಿದ್ದಾರೆ ಎಂದು ಗೊತ್ತಾಗಿದೆ.

‘ತನ್ನನ್ನು ಹೊರಗಡೆ ಬಿಡಿ’ ಎಂದು ಆಗಾಗ ಕೂಗಾಡುತ್ತಾರೆ. ಅವರ ನಿಯಂತ್ರಣವೇ ಮಹಿಳಾ ಸಿಬ್ಬಂದಿಗೆ ದೊಡ್ಡ ಸವಾಲಾಗಿದೆ. ವಿಚಿತ್ರ ವರ್ತನೆ ಹಿನ್ನೆಲೆಯಲ್ಲಿ ಬ್ಯಾರಕ್ ಬಳಿ ಹೆಚ್ಚಿನ ನಿಗಾ ಇಡಲಾಗಿದೆ. ಜೊತೆಗೆ ವೈದ್ಯರಿಂದ ಕೌನ್ಸೆಲಿಂಗ್ ನಡೆಸಲಾಗಿದೆ’ ಎಂದು ಜೈಲಿನ ಮೂಲಗಳು ಹೇಳಿವೆ.

ಓಂ ಪ್ರಕಾಶ್ (68) ಅವರನ್ನು ನಗರದ ಎಚ್ ಎಸ್ ಆರ್ ಲೇಔಟ್ ನಿವಾಸದಲ್ಲಿ ಹತ್ಯೆ ಮಾಡಲಾಗಿತ್ತು. 8ರಿಂದ10 ಬಾರಿ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿತ್ತು. ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ತನಿಖೆ ಪೂರ್ಣಗೊಳಿಸಿದ್ದ ಸಿಸಿಬಿ ಪೊಲೀಸರು, ಆಗಸ್ಟ್‌ನಲ್ಲಿ ನ್ಯಾಯಾಲಯಕ್ಕೆ 1,150 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಅವರ ಪತ್ನಿ ಪಲ್ಲವಿ ಪ್ರಕರಣದ ಪ್ರಮುಖ ಆರೋಪಿ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದರು.

ಉದ್ಯಮಿ ಮೇಲೆ ಗುಂಡು ಹಾರಿಸಿ ಆರೋಪಿ ಪರಾರಿ

ಪ್ರಜವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರ ಮೇಲೆ ದುಷ್ಕರ್ಮಿ ಗುಂಡು ಹಾರಿಸಿ ಪರಾರಿಯಾಗಿದ್ದು, ಆತನ ಪತ್ತೆಗೆ ಬಸವನಗುಡಿ ಠಾಣೆ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಘಟನೆಯಲ್ಲಿ ಉದ್ಯಮಿ ರಾಜಗೋಪಾಲ್ ಅವರು ಗಾಯಗೊಂಡಿದ್ದಾರೆ. ರಾಜಗೋಪಾಲ್ ಅವರು ಬಸವನಗುಡಿಯ ನರ್ತಕಿ ಹಾಗೂ ಕಾರ್ಗಿಲ್ ಬಾರ್ ಆ್ಯಂಡ್ ರೆಸ್ಟೊರೆಂಟ್ ಮಾಲೀಕ.

ಡಿ.10ರಂದು ರಾತ್ರಿ 8.30ರ ಸುಮಾರಿಗೆ ಬಸವನಗುಡಿಯ ಕೃಷ್ಣರಾವ್ ಪಾರ್ಕ್ ಬಳಿ ಗುಂಡಿನ ದಾಳಿ ನಡೆದಿದೆ ಎಂದು ದೂರು ನೀಡಲಾಗಿದೆ.

‘ಗುಂಡಿನ ದಾಳಿಯಿಂದಾಗಿ ಕತ್ತಿನ ಭಾಗಕ್ಕೆ ಗಾಯವಾಗಿದೆ. ಜಯನಗರದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಲಾಗಿದೆ. ಗಾಯಾಳು ಹೇಳಿಕೆ ಸಹ ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ರಾಜಗೋಪಾಲ್

‘ರಾಜ ಗೋಪಾಲ್ ಅವರು ತಮಗೆ ಯಾರ ಮೇಲೆಯೂ ಅನುಮಾನ ಇಲ್ಲ. ಯಾವುದೇ ಬೆದರಿಕೆ ಕರೆಗಳು ಬಂದಿರಲಿಲ್ಲ. ಯಾವ ಕಾರಣಕ್ಕೆ ದುಷ್ಕರ್ಮಿ ಗುಂಡು ಹಾರಿಸಿದ್ದಾನೆ ಎಂದು ತಿಳಿದಿಲ್ಲ ಎಂಬುದಾಗಿ ವಿಚಾರಣೆ ವೇಳೆ ತಿಳಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಪ್ರಕರಣದ ತನಿಖೆಯನ್ನು ತೀವ್ರಗೊಳಿಸಲಾಗಿದೆ. ಕೃತ್ಯಕ್ಕೆ ಯಾವ ಮಾದರಿಯ ಗನ್ ಬಳಸಲಾಗಿತ್ತು ಎಂಬುದನ್ನು ಪರಿಶೀಲಿಸಲಾಗುತ್ತಿದೆ.

ಕೃತ್ಯ ನಡೆದ ಸ್ಥಳದ ಸುತ್ತಮುತ್ತ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಡಿಸಿ ಕಚೇರಿಗೆ ಹುಸಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಾಂಬ್ ಇರಿಸಿರುವು ದಾಗಿ ಶುಕ್ರವಾರ ಬೆದರಿಕೆ ಇ-ಮೇಲ್ ಸಂದೇಶ ಕಳಿಸಲಾಗಿದೆ. ತಪಾಸಣೆ ನಡೆಸಿದ ಬಳಿಕ ಇದು ಹುಸಿ ಬಾಂಬ್ ಬೆದರಿಕೆ ಎಂಬುದು ಗೊತ್ತಾಗಿದೆ.

ಜಿಲ್ಲಾಧಿಕಾರಿ ಕಚೇರಿ ಇ-ಮೇಲ್‌ಗೆ ಬೆಳಿಗ್ಗೆ 6.12ಕ್ಕೆ ಬೆದರಿಕೆ ಸಂದೇಶ ಬಂದಿದೆ. ಬಾಂಬ್ ಸ್ಫೋಟ ಮಾಡಲಿದ್ದು ಮಧ್ಯಾಹ್ನ 2ರೊಳಗೆ ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರನ್ನು ತೆರವುಗೊಳಿಸಬೇಕು ಎಂಬ ಎಚ್ಚರಿಕೆ ಸಂದೇಶ ಇತ್ತು.

ಈ ವಿಚಾರ ಜಿಲ್ಲಾಧಿಕಾರಿ ಆಪ್ತ ಸಹಾಯಕರ ಮೂಲಕ ಪೊಲೀಸರ ಗಮನಕ್ಕೆ ಬಂದಿದೆ. ಇದರಿಂದ ಸ್ಥಳದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಜಿಲ್ಲಾಧಿಕಾರಿ ಎಂ.ಆರ್.ರವಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಜಿಲ್ಲಾಡಳಿತ ಭವನದಲ್ಲಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಪೊಲೀಸರು ಹೊರಗೆ ಕಳಿಸಿ ತಮ್ಮ ಸುಪರ್ದಿಗೆ ಪಡೆದರು.

ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಪರಿಶೀಲನೆ ಬಳಿಕ ಪೊಲೀಸರು ಕಂಪ್ಯೂಟರ್ ವಶಕ್ಕೆ ಪಡೆದು ತಪಾಸಣೆ ನಡೆಸಿದರು. ಅಲ್ಲದೆ, ಜಿಲ್ಲಾಡಳಿತ ಭವನದಲ್ಲಿರುವ ವಿವಿಧ ಇಲಾಖೆಗಳ ಕಚೇರಿಗಳನ್ನೂ ಪರಿಶೀಲಿಸಲಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಅಗ್ನಿಶಾಮಕ ವಾಹನವನ್ನೂ ಸ್ಥಳಕ್ಕೆ ಕರೆಸಲಾಯಿತು.

ಜಿಲ್ಲಾಡಳಿತ ಭವನದಲ್ಲಿ ಅಧಿಕಾರಿಗಳ ಸಭೆ ನಡೆಸುತ್ತಿದ್ದ ಶಾಸಕ ಎಸ್.ಎನ್. ನಾರಾಯಣಸ್ವಾಮಿ, ಈ ವಿಚಾರ ಗೊತ್ತಾಗಿ ಹೊರಬಂದರು. ನಂತರ ಹೊರಗಡೆ ಸಭೆ ನಡೆಸಿದರು. ಕೊನೆಗೆ ಹುಸಿ ಬಾಂಬ್ ಬೆದರಿಕೆ ಇ-ಮೇಲ್ ಎಂದು ಗೊತ್ತಾಯಿತು. ಬೀದರ್ ಜಿಲ್ಲಾಧಿಕಾರಿ ಕಚೇರಿಗೂ ಇದೇ ರೀತಿಯ ಹುಸಿ ಬೆದರಿಕೆ ಇ-ಮೇಲ್ ಸಂದೇಶ ಹೋಗಿದೆ.

ರಸ್ತೆ ದಾಟುವಾಗ ಟ್ರಕ್ ಡಿಕ್ಕಿ: ವೃದ್ಧೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಓಕಳಿಪುರ ರೈಲ್ವೆ ಪ್ಯಾರಲಲ್ ರಸ್ತೆ ದಾಟುತ್ತಿದ್ದ ವೇಳೆ ವೇಗವಾಗಿ ಬಂದ ಟ್ರಕ್ ಡಿಕ್ಕಿ ಹೊಡೆದು ವೃದ್ಧೆ ಮೃತಪಟ್ಟಿದ್ದಾರೆ.

ಶ್ರೀರಾಂಪುರದ ನಿವಾಸಿ ಲಲಿತಮ್ಮ (61) ಮೃತಪಟ್ಟವರು.

ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದ ಲಲಿತಮ್ಮ ಅವರು ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದರು. ಅದೇ ವೇಳೆ ವೇಗವಾಗಿ ಬಂದ ಟ್ರಕ್ ಡಿಕ್ಕಿ ಹೊಡೆದಿದೆ. ಕೆಳಕ್ಕೆ ಬಿದ್ದ ಅವರ ತಲೆಯ ಮೇಲೆಯೇ ಟ್ರಕ್‌ನ ಚಕ್ರಗಳು ಹರಿದ ಪರಿಣಾಮ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಲಲಿತಮ್ಮ

ಮರಣೋತ್ತರ ಪರೀಕ್ಷೆ ನಡೆಸಲು ಮೃತದೇಹವನ್ನು ಬೌರಿಂಗ್ ಆಸ್ಪತ್ರೆಗೆ ರವಾನಿಸಲಾಗಿದೆ. ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಟ್ರಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು. ಶೇಷಾದ್ರಿಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ರೈಲು ನಿಲ್ದಾಣ: ಮಕ್ಕಳ ರಕ್ಷಣೆಗೆ ಆದ್ಯತೆ ನೀಡಿ’

ಬೆಂಗಳೂರು: ದೇಶದ ಎಲ್ಲ ರೈಲು ನಿಲ್ದಾಣಗಳಲ್ಲಿ ಮಕ್ಕಳ ರಕ್ಷಣೆಗೆ ಆದ್ಯತೆ ನೀಡಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಒತ್ತಾಯಿಸಿದ್ದಾರೆ.

ನವದೆಹಲಿಯ ರೈಲ್ ಭವನದಲ್ಲಿ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ಭೇಟಿಯಾಗಿ ಮನವಿಪತ್ರ ಸಲ್ಲಿಸಿರುವ ಶಶಿಧರ ಕೋಸಂಬೆ ಅವರು, ‘ಇತ್ತೀಚೆಗೆ ರೈಲುಗಳಲ್ಲಿ ಮಕ್ಕಳ ಕಳ್ಳಸಾಗಣೆ, ಮಕ್ಕಳ ನಾಪತ್ತೆ, ಮಕ್ಕಳ ಹಕ್ಕುಗಳ ಉಲ್ಲಂಘನೆ ಪ್ರಕರಣಗಳು ಹೆಚ್ಚುತ್ತಿವೆ. ಆದ್ದರಿಂದ ಎಲ್ಲ ರೈಲು ನಿಲ್ದಾಣಗಳಲ್ಲಿ ಮಕ್ಕಳ ಸಹಾಯವಾಣಿ ಸಂಖ್ಯೆ (1098) ಪ್ರದರ್ಶನ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಹೇಳಿದ್ದಾರೆ.

ಆಯೋಗದ ಸದಸ್ಯರಾದ ಶೇಖರಗೌಡ ಜಿ. ರಮತ್ನಾಳ, ಕೆ.ಟಿ. ತಿಪ್ಪೇಸ್ವಾಮಿ, ವೆಂಕಟೇಶ ಉಪಸ್ಥಿತರಿದ್ದರು.

‘ದ್ವೇಷ ಭಾಷಣ ಮಸೂದೆ ಕಾನೂನು ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದ್ವೇಷ ಭಾಷಣ ತಡೆಗೆ ಕಾಂಗ್ರೆಸ್ ಸರ್ಕಾರ ಕಾನೂನು ತರಲು ಹೊರಟಿರುವುದು ಪ್ರಜಾಪ್ರಭುತ್ವದ ಕೊಲೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.

ನಿಖಿಲ್

‘ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳನ್ನು ನಿರ್ಬಂಧಿಸುವ’ ಮಸೂದೆಗೆ ಪಕ್ಷದ ವಿರೋಧವಿದೆ. ಸಂವಿಧಾನ ನೀಡಿರುವ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಸರ್ಕಾರ ಕಿತ್ತುಕೊಳ್ಳುತ್ತಿದೆ. ವಿರೋಧ ಪಕ್ಷ ಹಾಗೂ ಪತ್ರಕರ್ತರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಈ ಮಸೂದೆ ಮೂಲಕ ಕಾಂಗ್ರೆಸ್ ಸರ್ಕಾರವು 1975ರ ತುರ್ತು ಪರಿಸ್ಥಿತಿಯನ್ನು ಮತ್ತೆ ತರುವ ಕುತಂತ್ರ ಮಾಡುತ್ತಿದೆ. ಸರ್ಕಾರ ಪತನವಾಗುವ ದಿನ ದೂರವಿಲ್ಲ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

‘ಗೃಹ ಸಚಿವ ಪರಮೇಶ್ವರ ಅವರು ಮಸೂದೆ ಮಂಡಿಸಿದ್ದಾರೆ. ಅವರಿಗೆ ಏನೂ ಗೊತ್ತಿಲ್ಲ, ಮಸೂದೆಯನ್ನು ಬೇರೆ ಯಾರೋ ತಯಾರಿಸಿ ಗೃಹ ಸಚಿವರ ಮೂಲಕ ಜಾರಿಗೆ ತರಲು ಯತ್ನಿಸುತ್ತಿದ್ದಾರೆ. ಇದರ ವಿರುದ್ಧ ಸದನದ ಒಳಗೆ ಮತ್ತು ಹೊರಗೆ ಜೆಡಿಎಸ್ ಹಾಗೂ ಬಿಜೆಪಿ ಹೋರಾಟ ಮಾಡಲಿದೆ’ ಎಂದು ಹೇಳಿದರು.

ಆರು ತಿಂಗಳಿಂದ ಉತ್ತರ ಕರ್ನಾಟಕದ ರೈತರು ಸಂಕಷ್ಟದಲ್ಲಿದ್ದಾರೆ. ಅತಿವೃಷ್ಟಿಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಕಾಟಾಚಾರದ ಅಧಿವೇಶನ ನಡೆಯುತ್ತಿದೆ. ನಾಡಿನ ಸಮಗ್ರ ಬೆಳವಣಿಗೆ ಬಗ್ಗೆ ಅಧಿವೇಶನದಲ್ಲಿ ಚರ್ಚೆ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಲಿಕಾಪ್ಟರ್‌ನಲ್ಲಿ ಸಂಚರಿಸಲು ₹47 ಕೋಟಿ ವೆಚ್ಚ ಮಾಡಲಾಗಿದೆ. ರಸ್ತೆಯಲ್ಲಿ ಓಡಾಡಿದರೆ ಗುಂಡಿಗಳ ಬಗ್ಗೆ ಗೊತ್ತಾಗುತ್ತಿತ್ತು ಎಂದು ಹೇಳಿದರು.

ಪಕ್ಷದ ಪ್ರಮುಖರ ಸಮಿತಿಯ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ವಿಧಾನ ಪರಿಷತ್ ಮಾಜಿ ಸದಸ್ಯ ತಿಪ್ಪೇಸ್ವಾಮಿ, ವಕ್ತಾರರಾದ ಗಂಗಾಧರ್ ಮೂರ್ತಿ, ಪ್ರದೀಪ್ ಕುಮಾರ್ ಇದ್ದರು.

ಸಂಕ್ಷಿಪ್ತ ಸುದ್ದಿ

ರಾಮಣ್ಣಗೆ ‘ಮಹಾಕವಿ ಕುವೆಂಪು ಪ್ರಶಸ್ತಿ’

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2025ನೇ ಸಾಲಿನ ‘ಮಹಾಕವಿ ಕುವೆಂಪು ಪ್ರಶಸ್ತಿ’ಗೆ ಕನ್ನಡ ಪರ ಹೋರಾಟಗಾರ ಹಾಗೂ ಪತ್ರಕರ್ತ ರಾಮಣ್ಣ ಕೋಡಿಹೊಸಹಳ್ಳಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹15 ಸಾವಿರ ನಗದು, ಕಂಚಿನ ಫಲಕ ಮತ್ತು ಅಭಿನಂದನಾ ಪತ್ರ ಒಳಗೊಂಡಿದೆ. ಜನವರಿ 9ರಂದು ಸಂಜೆ 5 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಬಸವರಾಜ ಕಲ್ಗುಡಿ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

17ಕ್ಕೆ ‘ಬೆಳಗಾವಿ ಚಲೊ’ ಪ್ರತಿಭಟನೆ

ಬೆಂಗಳೂರು: ಒಳಮೀಸಲಾತಿಗೆ ಕಾನೂನಿನ ಸ್ವರೂಪ ನೀಡಬೇಕೆಂದು ಆಗ್ರಹಿಸಿ ಮಾದಿಗ ದಂಡೋರವು ಇದೇ 17ರಂದು ಬೆಳಗಾವಿಯ ಸುವರ್ಣ ವಿಧಾನಸೌಧದ ಮುಂದೆ ಪ್ರತಿಭಟನೆ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾದಿಗ ದಂಡೋರದ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ತ್ರಿಲೋಕ್ ಚಂದರ್, ‘ಒಳಮೀಸಲಾತಿಯನ್ನು ಸಚಿವ ಸಂಪುಟದಲ್ಲಿ ಅಂಗೀಕರಿಸಿ, ಸಂಪೂರ್ಣವಾಗಿ ಜಾರಿಗೊಳಿಸಬೇಕು. ಸಂಘಟನೆಯ ರಾಜ್ಯಾಧ್ಯಕ್ಷ ಬಿ. ನರಸಪ್ಪ ದಂಡೂರ ಅವರ ನಾಯಕತ್ವದಲ್ಲಿ ಉಪವಾಸ ಸತ್ಯಾಗ್ರಹ ಮತ್ತು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದರು.

‘ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರ ನೇತೃತ್ವದ ಆಯೋಗದ ವರದಿ ಅನುಸಾರ ಒಳಮೀಸಲಾತಿ ಜಾರಿಗೊಳಿಸದೆ, ಬಲಾಢ್ಯ ಸಚಿವರ ಕೈಗೊಂಬೆಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾದಿಗ ಸಮುದಾಯಕ್ಕೆ ಅನ್ಯಾಯ ಮಾಡಿದ್ದಾರೆ. ಇದನ್ನು ಸಹಿಸುವುದಿಲ್ಲ’ ಎಂದು ಹೇಳಿದರು.

ಅರ್ಜಿ: ಅವಧಿ ವಿಸ್ತರಣೆ

ಬೆಂಗಳೂರು: ಬೀಡಿ, ಸಿನಿ, ಕಬ್ಬಿಣದ ಅದಿರು, ಸುಣ್ಣದ ಕಲ್ಲು ಮತ್ತು ಡೊಲೊಮೈಟ್ ಗಣಿ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಅವಧಿಯನ್ನು ಡಿ.19ರವರೆಗೆ ವಿಸ್ತರಿಸಲಾಗಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಯೋಜನೆಯಡಿ ಬಾಕಿ ಇರುವ ಅರ್ಜಿಗಳನ್ನು ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್‌ನಲ್ಲಿ (scholarships.gov.in) ನಿಗದಿತ ಸಮಯದೊಳಗೆ ಪರಿಶೀಲನೆ ನಡೆಸುವಂತೆ ಕಾರ್ಮಿಕ ಕಲ್ಯಾಣ ಸಂಸ್ಥೆಯು ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಿದೆ.

ಸಹಾಯಕ್ಕಾಗಿ 080 23471406 ಅಥವಾ 9148240554 ಸಂಪರ್ಕಿಸಬಹುದು. wclwoblr-ka@nic.inಗೆ ಇ ಮೇಲ್ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

‘ಹಾಡು ಹುಟ್ಟಿದ ಸಮಯ’ ನಾಳೆ

ಬೆಂಗಳೂರು: ಕನ್ನಡದ ಹಳೆಯ ಹಾಡುಗಳು ರಚನೆಯಾದ ಕುತೂಹಲಕಾರಿ ಸನ್ನಿವೇಶಗಳನ್ನು ಬಿಚ್ಚಿಡುವ ‘ಹಾಡು ಹುಟ್ಟಿದ ಸಮಯ’ ಕಾರ್ಯಕ್ರಮ ಡಿ.14ರಂದು ಸಂಜೆ 6ಕ್ಕೆ ಕುಮಾರಸ್ವಾಮಿ ಬಡಾವಣೆಯ ದಯಾನಂದ ಸಾಗರ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂಕಣಕಾರ ಎ.ಆರ್. ಮಣಿಕಾಂತ ಸಂಗ್ರಹಿಸಿದ ಮಾಹಿತಿಯನ್ನಾಧರಿಸಿ ನಿರೂಪಕ ಸೌರಭ ಕುಲಕರ್ಣಿ ಕಥೆ ಹೇಳಲಿದ್ದಾರೆ. ಗಾಯಕರಾದ ಸಮನ್ವಿತಾ ಶರ್ಮ, ಅಜಯ್ ವಾರಿಯರ್, ಮೋಹನ್ ಕೃಷ್ಣ ಹಾಡಲಿದ್ದಾರೆ. ಶ್ರೀನಿವಾಸ್ ಸಂಗಡಿಗರ ವಾದ್ಯವೃಂದ ಇರಲಿದೆ. ನಮ್ರತಾ ತಂಡವು ನೃತ್ಯ ಮಾಡಲಿದೆ. ಬುಕ್‌ಮೈಶೋದಲ್ಲಿ ಟಿಕೆಟ್ ಪಡೆದುಕೊಳ್ಳಬಹುದು.

ನಗರದಲ್ಲಿ ಇಂದು

7ನೇ ವರ್ಷದ ಗುರುವಂದನಾ ಕಾರ್ಯಕ್ರಮ: ಸಂಗೀತ ಆರಾಧನೆ: ಪರಮೇಶ್ವರ ಹೆಗಡೆ ಭಟ್ಕಳ ಅವರ ಶಿಷ್ಯವೃಂದ, ಗಾಯನ: ಶ್ರೀನಿವಾಸ ಭಾಗ್ವತ್, ಆಯೋಜನೆ: ಅನಂತಾನುಗ್ರಹ ಸಂಗೀತ ವಿದ್ಯಾಲಯ, ಸ್ಥಳ: ಇಂದಿರಾಕೃಷ್ಣ ವಿದ್ಯಾಶಾಲೆ-ಐ.ಕೆ.ವಿ, ನಂ.44, ವಸಂತಪುರ ಮುಖ್ಯರಸ್ತೆ, ಶಾರದಾನಗರ, ಬಿಕಾಸಿಪುರ, ಬೆಳಿಗ್ಗೆ 8.30ರಿಂದ

ಅಣ್ಣಮ್ಮ ದೇವಿಯ ಉತ್ಸವ ಮತ್ತು ಕರ್ನಾಟಕ ರಾಜ್ಯೋತ್ಸವ: ಧ್ವಜಾರೋಹಣ, ರಂಗೋಲಿ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಆಯೋಜನೆ ಹಾಗೂ ಸ್ಥಳ: ಭುವನೇಶ್ವರಿ ಜನಜಾಗೃತಿ ಸಂಘ, ನಂ.137, 7ನೇ ಮುಖ್ಯರಸ್ತೆ, 8ನೇ ಕ್ರಾಸ್, ಭುವನೇಶ್ವರಿನಗರ, ಟಿ.ದಾಸರಹಳ್ಳಿ, ಬೆಳಿಗ್ಗೆ 9.30ರಿಂದ

‘ಪೂರ್ಣಾಯುರ್ಧಾಮದಲ್ಲಿ ಪ್ರಾಚೀನ ನಕ್ಷತ್ರವನ ನಿರ್ಮಾಣ’ ಹಾಗೂ ಯೋಗ ವೇದಾಂತ ಆಯುರ್ವೇದ ಆಧಾರಿತ ಜೀವನಶೈಲಿ ಶೈಕ್ಷಣಿಕ ಕಾರ್ಯಕ್ರಮ: ಅಧ್ಯಕ್ಷತೆ: ಅಶೋಕ್ ಹಾರನಹಳ್ಳಿ, ಉಪಸ್ಥಿತಿ: ಸ್ವಾಮಿ ಶಿವಪ್ರಕಾಶನಂದ ಸರಸ್ವತಿ, ಜಗನ್ನಾಥ ರಾವ್, ಮುರಳೀಧರ್, ಆಯೋಜನೆ: ಯೋಗ ಪರಿಜ್ಞಾನ ಪ್ರತಿಷ್ಠಾನ, ಸ್ಥಳ: ಪೂರ್ಣಾಯುರ್ಧಾಮ, 7ನೇ ಬ್ಲಾಕ್, ನಾಡಪ್ರಭು ಕೆಂಪೇಗೌಡ ಲೇಔಟ್, ಕೊಮ್ಮಘಟ್ಟ, ಕೆಂಗೇರಿ, ಬೆಳಿಗ್ಗೆ 10

‘ಜಾಯ್ ಆಫ್ ಲರ್ನಿಂಗ್’ ಮಕ್ಕಳ ಉತ್ಸವ: ಅತಿಥಿಗಳು: ದೇವಪ್ಪ ವಿ., ಹರಿ ಮರಾಠ್, ಬ್ರಿಜೇಶ್, ಸ್ಥಳ: ಸರ್ಕಾರಿ ಪ್ರೌಢಶಾಲೆ, ಚೆನ್ನಹಳ್ಳಿ, ಬೆಳಿಗ್ಗೆ 10ರಿಂದ

ಉಪನ್ಯಾಸ-ಸನ್ಮಾನ-ಭರತನಾಟ್ಯ: ‘ಧನಾತ್ಮಕ ಬದುಕಿಗೆ ಗುಣಾತ್ಮಕ ಚಿಂತನೆಗಳು’ ವಿಷಯದ ಬಗ್ಗೆ ಉಪನ್ಯಾಸ: ಹನುಮೇಶಗೌಡ ಪಾಟೀಲ, ಆರೋಗ್ಯ ಸಲಹೆ: ಡಾ.ಪ್ರಮೋದ್ ಎನ್.ಕೆ., ಡಾ.ಸೌಮ್ಯಾ ಬಿ.ಎಂ., ಸನ್ಮಾನ: ಶ್ರುತಿ ಭೂಸನೂರಮಠ, ಭರತನಾಟ್ಯ: ವಿದ್ಯಾಶ್ರೀ ವಿಜಯೇಂದ್ರ ರಾವ್, ಅಧ್ಯಕ್ಷತೆ: ಎಚ್.ಎಲ್. ಮುಕುಂದ, ಆಯೋಜನೆ ಹಾಗೂ ಸ್ಥಳ: ಕ.ವಿ.ಪ್ರ.ನಿ.ನಿ. ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10

ವಾರ್ಷಿಕ ಸರ್ವಸದಸ್ಯರ ಸಭೆ ಹಾಗೂ ಪ್ರತಿಭಾ ಪುರಸ್ಕಾರ, ಶಿಕ್ಷಕರಿಗೆ ಸನ್ಮಾನ ಮತ್ತು ವಿದ್ಯಾರ್ಥಿ ವೇತನ ವಿತರಣೆ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎಂ. ಈರಪ್ಪ ರೆಡ್ಡಿ, ಆಯೋಜನೆ: ಪಾವಗಡ ತಾಲ್ಲೂಕು ಕ್ಷೇಮಾಭಿವೃದ್ಧಿ ಮತ್ತು ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಮಹಾರಾಣಿ ವಿಜ್ಞಾನ ಕಾಲೇಜು ಸಭಾಂಗಣ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಬೆಳಿಗ್ಗೆ 10

‘ಸಾಮಾಜಿಕ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಮಾಧ್ಯಮಗಳ ಪಾತ್ರ’ ಚಿಂತನಾ ಸಮಾವೇಶ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ: ಸುಬ್ಬು ಹೊಲೆಯಾರ್, ಆಯೋಜನೆ: ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಹೋಟೆಲ್ ಕಾನಿಷ್ಕ, ಗಾಂಧಿನಗರ, ಬೆಳಿಗ್ಗೆ 11.30

‘ಪಶ್ಚಿಮಘಟ್ಟದಲ್ಲಿ ನದಿ ತಿರುವು ಯೋಜನೆಗಳು: ಬೇಡ್ತಿ-ಅಘನಾಶಿನಿ ಕಣ್ಣೀರು’ ಜನಜಾಗೃತಿ ಚಿಂತನ ಮಂಥನ: ಸಾನ್ನಿಧ್ಯ: ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಅತಿಥಿಗಳು: ತೇಜಸ್ವಿನಿ ಅನಂತಕುಮಾರ್, ಉಲ್ಲಾಸ ಕಾರಂತ, ಅನಂತ ಹೆಗಡೆ ಅಶೀಸರ, ಅಶೋಕ ಹಾರ್ನಳ್ಳಿ, ಅಭಿಪ್ರಾಯ ಮಂಡನೆ: ಟಿ.ವಿ. ರಾಮಚಂದ್ರ, ಶ್ರೀನಿವಾಸ ರೆಡ್ಡಿ, ಸುರೇಶ್ ಹೆಬ್ಳೀಕರ್, ಎ.ಕೆ. ವರ್ಮಾ, ಯು.ವಿ. ಸಿಂಗ್, ವಿಕಾಸ ತಾಂಡೇಲ, ಉಪಸ್ಥಿತಿ: ವಾಮನ ಆಚಾರ್ಯ, ರಾಮಕೃಷ್ಣ ಶೇರುಗಾರ, ಜಿ.ವಿ. ಹೆಗಡೆ ಹುಳಗೋಳ, ಎಸ್.ಎಂ.ಹೆಗಡೆ ಗೌರಿಬಣ್ಣಿಗೆ, ಎಲ್.ಎನ್. ಹೆಗಡೆ ಬೊಮ್ಮನಳ್ಳಿ, ರಾಮಕೃಷ್ಣ ನೀರ್ನಳ್ಳಿ, ತಿಮ್ಮಪ್ಪ ಭಟ್, ಆಯೋಜನೆ: ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ, ಸ್ವರ್ಣವಲ್ಲೀ ಮಹಾಸಂಸ್ಥಾನ ಸೋಂದಾ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 2.30

ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ

ರಂಗಚಿಂತಕ ಪ್ರೊ.ಕ.ವೆಂ. ರಾಜಗೋಪಾಲ್-100: ಮಧ್ಯಾಹ್ನ 3.30ಕ್ಕೆ ‘ಪ್ರೊ.ಕ.ವೆಂ. ರಾಜಗೋಪಾಲ ವ್ಯಕ್ತಿತ್ವ-ಒಡನಾಟ’ ವಿಚಾರಸಂಕಿರಣ: ಎಚ್.ಎಸ್. ಶಿವಪ್ರಕಾಶ್, ಎಚ್.ಎಸ್. ರಾಘವೇಂದ್ರ ರಾವ್, ಜೆ. ಶ್ರೀನಿವಾಸ ಮೂರ್ತಿ, ಎಸ್.ಸಿ. ಶರ್ಮ, ಅಧ್ಯಕ್ಷತೆ: ಸಿ. ವೀರಣ್ಣ, ಸಂಜೆ 6.30ಕ್ಕೆ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಬಿ.ಕೆ. ಹರಿಪ್ರಸಾದ್, ಪುಸ್ತಕ ಬಿಡುಗಡೆ: ಹಂಪ ನಾಗರಾಜಯ್ಯ, ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, ಪ್ರಾಸ್ತಾವಿಕ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಮಾನಸ, ಹಂಸಿನಿ ನಾಗೇಂದ್ರ, ಕೆ.ಆರ್. ನಂದಿನಿ, ಸಂಜೆ 7.30ಕ್ಕೆ ‘ಅನುಗ್ರಹ’ ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಪ್ರೊ.ಕ.ವೆಂ. ರಾಜಗೋಪಾಲ್ ಜನ್ಮಶತಮಾನೋತ್ಸವ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ



ಕ.ವೆಂ. ರಾಜಗೋಪಾಲ್

ಲಯನ್ಸ್ ಪ್ರಾಂತೀಯ ಸಮ್ಮೇಳನ: ಉದ್ಘಾಟನೆ: ಬಿ.ಬಿ. ರಘುನಾಥ್, ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್-317ಎ, ಸ್ಥಳ: ಕಾಸಿಯಾ ಸಭಾಂಗಣ, ವಿಜಯನಗರ, ಮಧ್ಯಾಹ್ನ 3

ಯಕ್ಷ ಭಾವ ಸಂಗಮ: ದೇವಿದಾಸ್ ವಿರಚಿತ ‘ಭೀಷ್ಮ ಪರ್ವ’ ಹಾಗೂ ಹಟ್ಟಿಯಂಗಡಿ ರಾಮ್ ಭಟ್ ವಿರಚಿತ ‘ಸುಭದ್ರಾ ಕಲ್ಯಾಣ’ ಯಕ್ಷಗಾನ ಪ್ರದರ್ಶನ, ಮುಮ್ಮೇಳ: ಕೊಂಡದಕುಳಿ ರಾಮಚಂದ್ರ ಹೆಗಡೆ, ತೋಟಿಮನೆ ಗಣಪತಿ ಹೆಗಡೆ,ಥಂಡಿಮನೆ ಶ್ರೀಪಾದ ಭಟ್, ಹಿಲ್ಲೂರು ಮಂಜು, ಪ್ರಶಾಂತ್ ಹೆಗಡೆ, ನಾಗೇಶ್ ಕುಳಿಮನೆ, ಆತ್ರೇಯ ಗಾಂವ್ಕರ್, ವಿನಾಯಕ ಕಲಗದ್ದೆ, ಅಶೋಕ್ ಭಟ್ ಸಿದ್ದಾಪುರ, ಕೆ.ಜಿ. ಮಂಜುನಾಥ್, ಚಪ್ಪರಮನೆ ಶ್ರೀಧರ್ ಹೆಗಡೆ, ಸದಾಶಿವ ಮಲವಳ್ಳಿ, ರಾಮಕೃಷ್ಣ ಭಟ್, ಸಂಯೋಜನೆ: ವಿನಾಯಕ ಭಟ್ಟ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ರಾತ್ರಿ 10

ಆಚಾರ್ಯರ ಪುಣ್ಯಾರಾಧನೆ: ಸಾನ್ನಿಧ್ಯ: ಸುಬುಧೇಂದ್ರತೀರ್ಥ ಸ್ವಾಮೀಜಿ, ಬನ್ನಂಜೆ ಪುರಸ್ಕಾರ: ಕೆ.ಪಿ. ರಾವ್, ವರ್ಷದ ಅತಿಥಿ: ವಿನಯ ವಾರಾಣಸಿ, ಸಾಂಸ್ಕೃತಿಕ ಸ್ಮರಣೆ: ಎಂ.ಡಿ. ಕೌಶಿಕ್, ಆಯೋಜನೆ: ಬನ್ನಂಜೆ ಗೋವಿಂದಾಚಾರ್ಯ ಪ್ರತಿಷ್ಠಾನ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 4

ಭರನಾಟ್ಯ ಯಕ್ಷ ಗಾನ ವೈಭವ: ಅಧ್ಯಕ್ಷತೆ: ಶಾಮ್ ಭಟ್, ನಿರ್ದೇಶನ: ಆರ್.ಕೆ. ಬೆಳ್ಳಾರೆ, ‘ದಶಾವತಾರಂ’ ಭರತನಾಟ್ಯ: ಪ್ರಣತಿ ಚೈತನ್ಯ ಪದ್ಯಾಣ ಮತ್ತು ಬಳಗ, ಯಕ್ಷಗಾನ ಪ್ರದರ್ಶನ, ಆಯೋಜನೆ: ಯಕ್ಷ ಮಿತ್ರರು ಬೆಂಗಳೂರು ಟ್ರಸ್ಟ್, ಸ್ಥಳ: ಶಬರಿಗಿರಿ, 2ನೇ ಅಡ್ಡರಸ್ತೆ, ಎಸ್.ಎಲ್.ಎನ್. ಎನ್ಕ್ಲೇವ್, ಕರಿಓಬನಹಳ್ಳಿ, ಅಂದ್ರಹಳ್ಳಿ ರಸ್ತೆ, ಸಂಜೆ 4.30

‘ಸಂಬಂಧ-ನಾಟ್ಯಾನಂದ’ ಶೀರ್ಷಿಕೆಯಡಿ ಭರತನಾಟ್ಯ-ಭಾವನೃತ್ಯ: ಆಯೋಜನೆ: ಚಿತ್ರನಾಟ್ಯ ಫೌಂಡೇಷನ್, ಸ್ಥಳ: ಕುಮಾರವ್ಯಾಸ ಮಂಟಪ, ಕನ್ನಡ ಸಹೃದಯರ ಪ್ರತಿಷ್ಠಾನ, 57ನೇ ಬಿ ಅಡ್ಡರಸ್ತೆ, ರಾಜಾಜಿನಗರ 4ನೆ ಬ್ಲಾಕ್, ಸಂಜೆ 5.30

ಊಂಜಲ್ ಸಂಗೀತೋತ್ಸವ: ಗಾಯನ: ಮಾನಸಾ ಜಯರಾಜ್ ಕುಲಕರ್ಣಿ, ಹಾರ್ಮೋನಿಯಂ: ಕೃಷ್ಣಮೂರ್ತಿ, ತಬಲಾ: ಅಭಿಜಿತ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

ದಾಸವಾಣಿ-ಸಂತವಾಣಿ ಸಂಗೀತ ಪ್ರದರ್ಶನ: ಪುತ್ತೂರು ನರಸಿಂಹ ನಾಯಕ್, ಆಯೋಜನೆ: ಪರಮ್ ಫೌಂಡೇಷನ್, ಸ್ಥಳ: ಎಡಿಎ ರಂಗಮಂದಿರ, ಸಂಜೆ 6.30

ಔಷಧ ರಹಿತ ಪ್ರಕೃತಿ ಚಿಕಿತ್ಸೆ ಬಗ್ಗೆ ಉಪನ್ಯಾಸ: ಡಾ.ನಂ.ನಂಜೇಶ್ ಕೊಪ್ಪ, ಆಯೋಜನೆ: ನೇಚರ್ ಕ್ಯೂರ್, ಸ್ಥಳ: ಯಶೋರಾಮ ಮಿನಿ ಹಾಲ್, ನೇತಾಜಿ ಸರ್ಕಲ್ ರಸ್ತೆ, ಮತ್ತೀಕೆರೆ, ಸಂಜೆ 6.30

20ನೇ ವರ್ಷದ ಸೀರತ್ ಅಭಿಯಾನ, ವಿಚಾರಗೋಷ್ಠಿ: ‘ಶೋಷಿತ ಸಮಜಾ ಹಾಗೂ ಮಾನವ ಘನತೆ ಹಾಗೂ ಪ್ರವಾದಿ ಮುಹಮ್ಮದ್’, ಅತಿಥಿಗಳು: ಯೋಗೇಶ್ ಮಾಸ್ಟರ್, ಡಿ. ಮನೋಹರ್ ಚಂದ್ರ ಪ್ರಸಾದ್, ಅಧ್ಯಕ್ಷತೆ: ರಫೀಉದ್ದೀನ್ ಕುದ್ರೋಳಿ, ಆಯೋಜನೆ: ಯುನಿವೆಫ್ ಕರ್ನಾಟಕ, ಸ್ಥಳ: ಬ್ಯಾರಿ ಸೌಹಾರ್ದ ಭವನ, ಬಿಡಿಎ ಕಾಂಪ್ಲೆಕ್ಸ್ ಎದುರು, ಎಚ್‌ಬಿಆರ್ ಬಡಾವಣೆ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಇಂದು ಜೀವನ ಶೈಲಿ ಕಾರ್ಯಕ್ರಮ

ಬೆಂಗಳೂರು: ಯೋಗ ಪರಿಜ್ಞಾನ ಪ್ರತಿಷ್ಠಾನ, ಪೂರ್ಣಾಯುರ್ಧಾಮದ ಆಶ್ರಯದಲ್ಲಿ ನಾಡಪ್ರಭು ಕೆಂಪೇಗೌಡ ಲೇಔಟ್ 7ನೇ ಬ್ಲಾಕ್‌ನಲ್ಲಿರುವ ಪೂರ್ಣಾಯುರ್ಧಾಮದಲ್ಲಿ ಡಿಸೆಂಬರ್ 13ರ ಬೆಳಿಗ್ಗೆ 10 ರಿಂದ ಪ್ರಾಚೀನ ನಕ್ಷತ್ರ ವನ ನಿರ್ಮಾಣ ಹಾಗೂ ಯೋಗ, ವೇದಾಂತ ಆಯುರ್ವೇದ ಆಧಾರಿತ ಜೀವನ ಶೈಲಿ ಶೈಕ್ಷಣಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿಭು ಫೌಂಡೇಷನ್ ಹಾಗೂ ಶಿವಮೊಗ್ಗದ ವಿಶ್ವಂ ಓಆರ್‌ಜಿ ಫೌಂಡೇಷನ್ ಸಹಯೋಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಲೋಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಅಶೋಕ ಹಾರನಹಳ್ಳಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ 9449002020

‘ಪರಿಶಿಷ್ಟರಿಗೆ 3,200 ನ್ಯಾಯಬೆಲೆ ಅಂಗಡಿ’

ಹೊಸ ಮೀಸಲಾತಿ ಅನುಸಾರ ಮಂಜೂರು: ಕೆ.ಎಚ್. ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣಸೌಧ): ‘ಹೊಸ ಮೀಸಲಾತಿ ಅನುಸಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರಿಗಾಗಿ 3,200 ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಲಾಗಿದೆ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ಕೆ.ಎಚ್. ಮುನಿಯಪ್ಪ

ರಾಜ್ಯದ ಗ್ರಾಮೀಣ ಭಾಗದಲ್ಲಿ ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಆರಂಭಿಸುವ ಕುರಿತಂತೆ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರು ಸರ್ಕಾರದ ಸೆಳೆದರು. ಅದಕ್ಕೆ ಉತ್ತರಿಸಿದ ಮುನಿಯಪ್ಪ, ‘ನಿಯಮದಂತೆ 3 ಕಿ.ಮೀ.ಗೊಂದು ನ್ಯಾಯಬೆಲೆ ಅಂಗಡಿ ತೆರೆಯಲಾಗುವುದು. ಒಂದು ವೇಳೆ ನ್ಯಾಯಬೆಲೆ ಅಂಗಡಿಗಳಿಲ್ಲದ ಕಡೆಗಳಲ್ಲಿ ಸಂಚಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸಲಾಗುವುದು’ ಎಂದರು.

‘ಗುಡ್ಡಗಾಡು ಪ್ರದೇಶದಲ್ಲಿ ಕಡಿಮೆ ಪಡಿತರ ಚೀಟಿದಾರರಿದ್ದರೂ ಸಂಚಾರಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸುತ್ತೇವೆ. ಗ್ರಾಮಾಂತರ ಭಾಗದಲ್ಲಿ 500 ಮತ್ತು ನಗರ ಪ್ರದೇಶದಲ್ಲಿ 800 ಪಡಿತರ ಚೀಟಿಗೊಂದು ನ್ಯಾಯಬೆಲೆ ಅಂಗಡಿ ತೆರೆಯಲಾಗಿದೆ. ಇದೀಗ ಎಸ್‌ಸಿ, ಎಸ್‌ಟಿ ಸಮುದಾಯದವರಿಗಾಗಿ ಹೊಸದಾಗಿ 3,200 ನ್ಯಾಯ ಬೆಲೆ ಅಂಗಡಿ ತೆರೆಯಲು ಅನುಮತಿ ನೀಡಲಾಗಿದೆ’ ಎಂದರು.

‘ನೇಕಾರರ ಬಿಲ್ ಮೊತ್ತ ಮನ್ನಾ: ಸಿ.ಎಂ ಜೊತೆ ಚರ್ಚೆ’

‘ವಿದ್ಯುತ್ ಮಗ್ಗಗಳಿಗೆ 10 ಎಚ್‌ಪಿವರೆಗೆ 2023ರ ನವೆಂಬರ್‌ನಿಂದ ಜಾರಿ ಮಾಡಿರುವ ಉಚಿತ ವಿದ್ಯುತ್ ಪೂರೈಕೆ ಯೋಜನೆಯನ್ನು 2023ರ ಏಪ್ರಿಲ್‌ನಿಂದಲೇ ಅನ್ವಯಗೊಳಿಸಬೇಕೆಂಬ ನೇಕಾರರ ಬೇಡಿಕೆಯನ್ನು ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನಿಸಲಾಗುವುದು’ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಶಶಿಕಲಾ ಜೊಲ್ಲೆ ಅವರ ಪ್ರಶ್ನೆಗೆ ಸಚಿವರು ಉತ್ತರಿಸಿದರು.

‘ನೇಕಾರರ ವಿದ್ಯುತ್ ಬಿಲ್ ಅಂದಾಜು ₹20 ಕೋಟಿಯಷ್ಟು ಬಾಕಿ ಇದೆ. ಅದನ್ನು ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಹೊರೆಯಾಗುವುದಿಲ್ಲ. ಈ ಕುರಿತು ತೀರ್ಮಾನ ಕೈಗೊಳ್ಳುವವರೆಗೆ ವಿದ್ಯುತ್ ಪೂರೈಕೆ ಕಂಪನಿಗಳು ನೇಕಾರ ಕೈಮಗ್ಗಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸದಂತೆ ನಿರ್ದೇಶನ ನೀಡಬೇಕು’ ಎಂದು ಜೊಲ್ಲೆ ಆಗ್ರಹಿಸಿದರು. ಬಿಜೆಪಿಯ ಸಿದ್ದು ಸವದಿ, ಬಿ.ವೈ. ವಿಜಯೇಂದ್ರ, ಪ್ರಭು ಚವ್ಹಾಣ್ ದನಿಗೂಡಿಸಿದರು.

‘ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ಹತ್ತು ಎಚ್‌ಪಿ ವರೆಗಿನ ವಿದ್ಯುತ್ ಮಗ್ಗಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. 2023ರ ನವೆಂಬರ್‌ನಿಂದ ಈ ಆದೇಶ ಜಾರಿಗೆ ಬಂದಿದ್ದು, ಅಂದಿನಿಂದ ಅನ್ವಯವಾಗುತ್ತಿದೆ. ನೇಕಾರರ ಬೇಡಿಕೆಯಂತೆ ಹತ್ತರಿಂದ 20 ಎಚ್‌ಪಿವರೆಗಿನ ಪ್ರತಿ ಯೂನಿಟ್‌ಗೆ ₹1.25 ರಿಯಾಯಿತಿ ದರದಲ್ಲಿ ವಿದ್ಯುತ್ ಸೌಲಭ್ಯ ನೀಡಲಾಗುತ್ತಿದೆ. ಈ ಯೋಜನೆಗಳಿಂದ ಸರ್ಕಾರಕ್ಕೆ ವಾರ್ಷಿಕ ಸುಮಾರು ₹130 ಕೋಟಿ ವೆಚ್ಚವಾಗುತ್ತಿದೆ’ ಎಂದು ಸಚಿವರು ವಿವರಿಸಿದರು.

‘ಅನೇಕ ನೇಕಾರರು ಉಚಿತ ವಿದ್ಯುತ್ ಯೋಜನೆ ಜಾರಿಗೆ ಬರುವವರೆಗೆ ವಿದ್ಯುತ್ ಬಿಲ್ ಪಾವತಿ ಮಾಡಿದ್ದಾರೆ. ಕೆಲವರು ಮಾತ್ರ ಬಾಕಿ ಉಳಿಸಿಕೊಂಡಿದ್ದಾರೆ. ಯಾವುದೇ ಯೋಜನೆ ಸರ್ಕಾರದ ಆದೇಶ ಹೊರಬಿದ್ದ ನಂತರ ಅನ್ವಯವಾಗುತ್ತದೆ. ಆದರೂ, ಆದೇಶ ಹೊರಬೀಳುವ ಹಿಂದಿನ ಅವಧಿಗೂ ಅನ್ವಯ ಮಾಡಬೇಕು ಎಂಬ ಬೇಡಿಕೆಗಳಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ’ ಎಂದರು.

ಹು–ಧಾ ಪಾಲಿಕೆ ವಿಭಜನೆಗೆ ನಿಯೋಗ

‘ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯನ್ನು ವಿಭಜಿಸಿ, ಪ್ರತ್ಯೇಕ ಧಾರವಾಡ ಮಹಾನಗರಪಾಲಿಕೆಯಾಗಿ ಮಾಡುವ ಪ್ರಸ್ತಾವವನ್ನು ರಾಜ್ಯಪಾಲರಿಗೆ ಸಲ್ಲಿಸಲಾಗಿದೆ. ಆದಷ್ಟು ಬೇಗ ಅನುಮೋದನೆ ನೀಡುವಂತೆ ಮನವಿ ಮಾಡಲು ರಾಜ್ಯಪಾಲರ ಬಳಿ ನಿಯೋಗ ಕೊಂಡೊಯ್ಯಲಾಗುವುದು’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಪ್ರಸಾದ್ ಅಬ್ಬಯ್ಯ ಮಾತನಾಡಿ, ‘ಧಾರವಾಡ ಮಹಾನಗರಪಾಲಿಕೆಯನ್ನಾಗಿ ಜನವರಿ ತಿಂಗಳಲ್ಲಿಯೇ ಅಧಿಸೂಚನೆ ಹೊರಡಿಸಿದ್ದರೂ ಈವರೆಗೂ ಕಾರ್ಯಗತ ಆಗಿಲ್ಲ. ಅನುಮೋದನೆಗಾಗಿ ರಾಜ್ಯಪಾಲರಿಗೆ ಸಲ್ಲಿಸಿದ ಕಡತ ಏಳು ತಿಂಗಳಿನಿಂದ ಅವರ ಬಳಿಯೇ ಇದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಅದಕ್ಕೆ ಉತ್ತರಿಸಿದ ಸಚಿವರು, ‘ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆಯನ್ನು ವಿಭಜಿಸಿ, ಪ್ರತ್ಯೇಕ ಧಾರವಾಡ ಮಹಾನಗರಪಾಲಿಕೆ ರಚಿಸಲು ಮತ್ತು ಉಳಿದ ಪ್ರದೇಶವನ್ನು ಹುಬ್ಬಳ್ಳಿ ಮಹಾನಗರಪಾಲಿಕೆ ಎಂದು ಮುಂದುವರಿಸಲು ಉದ್ದೇಶಿಸಿ, ಬಾಧಿತರಿಂದ ಆಕ್ಷೇಪಣೆ, ಸಲಹೆಗಳನ್ನು ಆಹ್ವಾನಿಸಿ 2025ರ ಜ. 21ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಆಕ್ಷೇಪಣೆ, ಸಲಹೆಗಳ ಕುರಿತ ವರದಿಯನ್ನು ಪೌರಾಡಳಿತ ನಿರ್ದೇಶನಾಲಯದಿಂದ ಧಾರವಾಡ ಜಿಲ್ಲಾಧಿಕಾರಿಗೆ ಸಲ್ಲಿಸಲಾಗಿದ್ದು, ಆ ವರದಿ ಸಹಿತ ರಾಜ್ಯಪಾಲರ ಅನುಮೋದನೆ ಸಲ್ಲಿಸಲಾಗಿದೆ’ ಎಂದರು.

‘ಬೆಳೆ ವಿಮೆ ದೊಡ್ಡ ಗೋಲ್‌ಮಾಲ್’

ಪ್ರಜಾವಾಣಿ ವಾರ್ತೆ

ಸುವರ್ಣ ವಿಧಾನಸೌಧ (ಬೆಳಗಾವಿ): ಬೆಳೆ ವಿಮೆ ಯೋಜನೆ ಅಡಿಯಲ್ಲಿ ಬಹಳ ದೊಡ್ಡ ಗೋಲ್‌ಮಾಲ್ ನಡೆಯುತ್ತಿದೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಶುಕ್ರವಾರದ ಕಲಾಪದ ವೇಳೆ ಬಿಜೆಪಿಯ ಕೇಶವ ಪ್ರಸಾದ್ ಅವರು ನಿಯಮ 68ರ ಅಡಿಯಲ್ಲಿ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ಮತ್ತು ಬೆಳೆ ನಷ್ಟ ಪರಿಹಾರದ ಕುರಿತು ಮಾತನಾಡಿದರು. ‘ರೈತರಿಗೆ ಬೆಳೆ ವಿಮೆ ಮಾಡಿಸುವ ವ್ಯವಸ್ಥೆಯನ್ನು ಸರ್ಕಾರವು ಮಾಡಿದರೆ, ಆರ್ಥಿಕ ಸಂಕಷ್ಟಕ್ಕೆ ರೈತರು ಸಿಲುಕಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸಬಹುದು’ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಈಶ್ವರ ಖಂಡ್ರೆ, ‘2016ರಿಂದ 2024ರವರೆಗೆ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಖಾಸಗಿ ವಿಮಾ ಕಂಪನಿಗಳು ಪ್ರತಿ ವರ್ಷ ಸರಾಸರಿ ₹10,000 ಕೋಟಿ ಲಾಭ ಮಾಡಿಕೊಂಡಿವೆ. ಆದರೆ ರೈತರಿಗೆ ಪರಿಹಾರ ಸಿಗುತ್ತಿಲ್ಲ. ಬೆಳೆ ನಷ್ಟವಾದ ಮೂರು ದಿನಗಳ ಒಳಗೆ ವೆಬ್‌ಲಿಂಕ್ ಅಥವಾ ದೂರವಾಣಿ ಕರೆ ಮೂಲಕ ರೈತರು ದೂರು ನೀಡಬೇಕು ಎಂಬ ಷರತ್ತನ್ನು ಈ ಕಂಪನಿಗಳು ವಿಧಿಸಿವೆ. ಆದರೆ ಆ ವೆಬ್‌ಲಿಂಕ್‌ಗಳು ಕೆಲಸ ಮಾಡುವುದಿಲ್ಲ. ದೂರವಾಣಿ ಕರೆಗಳನ್ನು ಸ್ವೀಕರಿಸುವುದಿಲ್ಲ. ಕಾಲಮಿತಿಯಲ್ಲಿ ದೂರು ನೀಡಿಲ್ಲ ಎಂಬುದನ್ನೇ ನೆಪ ಮಾಡಿಕೊಂಡು ವಿಮಾ ಪರಿಹಾರ ನಿರಾಕರಿಸುತ್ತವೆ’ ಎಂದು ಹೇಳಿದರು.

ವಿಧಾನಪರಿಷತ್ ಕಲಾಪದಲ್ಲಿ ಸಚಿವ ಈಶ್ವರ ಖಂಡ್ರೆ ಮಾತನಾಡಿದರು

ಕೇಶವ ಪ್ರಸಾದ್ ಅವರು, ‘ಸಮಸ್ಯೆಗಳು ಇದ್ದರೆ ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕು’ ಎಂದರು. ಖಂಡ್ರೆ ಅವರು, ‘ಈಗಾಗಲೇ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಪ್ರಸ್ತಾವ ಕಳುಹಿಸಿದ್ದೇವೆ. ಈವರೆಗೆ ಏನೂ ಪ್ರಗತಿ ಆಗಿಲ್ಲ’ ಎಂದರು.

ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ.ಪ್ರಾಣೇಶ್, ‘ರಾಜ್ಯ ಸರ್ಕಾರವು ಕೇಂದ್ರಕ್ಕೆ ಪತ್ರ ಬರೆದರೆ ಸಾಲದು. ಅದರ ಬೆನ್ನು ಬೀಳಬೇಕು’ ಎಂದು ಸಲಹೆ ನೀಡಿದರು.

ನೀರಾವರಿ ಸಮಸ್ಯೆ ಕುರಿತು ಮಾತನಾಡಿದ ಬಿಜೆಪಿಯ ವೈ.ಎಂ. ಸತೀಶ್, ‘ತುಂಗಭದ್ರಾ ಜಲಾಶಯದಲ್ಲಿ ಬಹಳಷ್ಟು ಹೂಳು ತುಂಬಿದೆ. ಇದರಿಂದ ಗರಿಷ್ಠ ಪ್ರಮಾಣದ ನೀರು ಸಂಗ್ರಹವಾಗುತ್ತಿಲ್ಲ. ಇದಕ್ಕೆ ಪರಿಹಾರವಾಗಿ ಹಿಂದಿನ ಬಿಜೆಪಿ ಸರ್ಕಾರವು ನವಿಲೆ ಸಮಾನಾಂತರ ಜಲಾಶಯವನ್ನು ಘೋಷಿಸಿತ್ತು. ರಾಜ್ಯ ಸರ್ಕಾರವು ಆ ಜಲಾಶಯ ನಿರ್ಮಿಸಿದರೆ ಬಳ್ಳಾರಿ, ವಿಜಯನಗರ, ರಾಯಚೂರು ಭಾಗದ ರೈತರಿಗೆ ಅನುಕೂಲವಾಗಲಿದೆ. ದೊಡ್ಡ ಜಲಾಶಯಗಳ ಹೊರತಾಗಿ ಕೆರೆಗಳಿಗೆ ನೀರು ತುಂಬಿಸುವ, ಮಳೆ ನೀರು ಸಂಗ್ರಹಿಸುವ ಉಪಕ್ರಮಗಳನ್ನು ಕೈಗೊಳ್ಳಬೇಕು’ ಸರ್ಕಾರಕ್ಕೆ ಸಲಹೆ ನೀಡಿದರು.

> ಈ ಸರ್ಕಾರವು ರೈತರ ಸಮಸ್ಯೆಗಳನ್ನು ಸ್ವತಃ ತಾನೆ ಅರಿತುಕೊಂಡು ಪರಿಹರಿಸುವ ಕೆಲಸವನ್ನು ಮಾಡುವುದೇ ಇಲ್ಲ. ಸಣ್ಣಪುಟ್ಟ ಸಮಸ್ಯೆಗೆ ರೈತರು ಬೀದಿಗಿಳಿದು ಹೋರಾಟ ನಡೆಸಬೇಕಾದ ಸ್ಥಿತಿ ಇದೆ
> **ಕೆ.ಎಸ್.ನವೀನ್,** ವಿಧಾನ ಪರಿಷತ್ತಿನಲ್ಲಿ ಬಿಜೆಪಿ ಸದಸ್ಯ

ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ರಂಜು ಪಿ

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಶುಕ್ರವಾರ ವಿಧಾನಪರಿಷತ್ ಕಲಾಪವನ್ನು ವಿದ್ಯಾರ್ಥಿಗಳು ವೀಕ್ಷಿಸಿದರು

‘ಗೃಹಲಕ್ಷ್ಮಿ ಹಣ ಬಾಕಿ ಇದ್ದರೆ ತಕ್ಷಣ ಬಿಡುಗಡೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ (ಸುವರ್ಣ ವಿಧಾನಸೌಧ): ‘ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಆಗಸ್ಟ್ ತಿಂಗಳವರೆಗೆ ಹಣ ಪಾವತಿ ಮಾಡಲಾಗಿದೆ. ಒಂದು ವೇಳೆ ಫೆಬ್ರುವರಿ ಮತ್ತು ಮಾರ್ಚ್ ತಿಂಗಳ ಹಣ ಅವರ ಖಾತೆಗಳಿಗೆ ಜಮೆ ಆಗಿಲ್ಲ ಎಂದಾದರೆ ತಕ್ಷಣ ಬಿಡುಗಡೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಲಕ್ಷ್ಮಿ ಹೆಬ್ಬಾಳಕರ ಅವರು ವಿಧಾನಸಭೆಗೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ವಿರೋಧ ಪಕ್ಷಗಳ ಸದಸ್ಯರು ಆರೋಪಿಸಿದರು. ಈ ಬಗ್ಗೆಯೂ ಸಚಿವರಿಂದ ಸೋಮವಾರ ಸ್ಪಷ್ಟನೆ ಕೊಡಿಸಲಾಗುವುದು ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ಅವಧಿ ಬಳಿಕ ವಿಷಯ ಪ್ರಸ್ತಾಪಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಡಿ. 9ರಂದು ಸದಸ್ಯರು ಸದನದಲ್ಲಿ ಕೇಳಿದ ಪ್ರಶ್ನೆಗೆ ಲಕ್ಷ್ಮಿ ಹೆಬ್ಬಾಳಕರ ಸುಳ್ಳು ಮಾಹಿತಿ ನೀಡಿದ್ದಾರೆ. ಫೆಬ್ರುವರಿ ಹಾಗೂ ಮಾರ್ಚ್ ತಿಂಗಳ ಗೃಹಲಕ್ಷ್ಮಿ ಹಣ ನೀಡಿಲ್ಲ ಎಂದು ಹೇಳುತ್ತಿದ್ದರೂ ವಿರೋಧ ಪಕ್ಷದ ಸದಸ್ಯರೇ ದಡ್ಡರು ಎಂಬಂತೆ ಮಾತನಾಡಿದ್ದಾರೆ. ಸೆಪ್ಟೆಂಬರ್‌ವರೆಗೆ ಹಣ ನೀಡಿದ್ದೇವೆ ಎಂದು ಸುಳ್ಳು ಹೇಳಿದ್ದಾರೆ. ಸದನಕ್ಕೆ ತಪ್ಪು ಮಾಹಿತಿ ನೀಡಿದ ಸಚಿವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಅವರಿಂದ ಸುಳ್ಳು ಹೇಳಿಸಿದ ಅಧಿಕಾರಿಯನ್ನು ಅಮಾನತು ಮಾಡಬೇಕು’ ಎಂದು ಒತ್ತಾಯಿಸಿದರು.

ಬಿಜೆಪಿಯ ವಿ. ಸುನಿಲ್ ಕುಮಾರ್, ಮಹೇಶ ಟೆಂಗಿನಕಾಯಿ ಸೇರಿದಂತೆ ಕೆಲವು ಸದಸ್ಯರು, ‘ಸಚಿವರು ನೀಡಿದ ತಪ್ಪು ಮಾಹಿತಿಯಿಂದ ಸದನದ ಹಕ್ಕು ಚ್ಯುತಿ ಆಗಿದೆ. ಸದನದ ದಿಕ್ಕು ತಪ್ಪಿಸಿ ಅವಮಾನ ಮಾಡಲಾಗಿದೆ’ ಎಂದರು.

ಆಗ ಸಿದ್ದರಾಮಯ್ಯ ಅವರು, ‘ಲಕ್ಷ್ಮಿ ಹೆಬ್ಬಾಳಕರ ಸದ್ಯ ಸದನದಲ್ಲಿ ಉಪಸ್ಥಿತರಿಲ್ಲ. ಆಗಸ್ಟ್‌ವರೆಗೆ ಎಲ್ಲ ಹಣ ಪಾವತಿ ಮಾಡಲಾಗಿದೆ. ಸೆಪ್ಟೆಂಬರ್ ಹಾಗೂ ಅಕ್ಟೋಬರ್ ಹಣವನ್ನು ಸದ್ಯದಲ್ಲೇ ಪಾವತಿಸಲಾಗುವುದು. ಫೆಬ್ರುವರಿ, ಮಾರ್ಚ್ ತಿಂಗಳ ಹಣ ನೀಡಿಲ್ಲ ಎಂದಾದರೆ ಕೂಡಲೇ ಬಿಡುಗಡೆ ಮಾಡಿಸಲಾಗುವುದು’ ಎಂದರು.

‘ನೀವು ಹೇಳುವುದೆಲ್ಲ ಸುಳ್ಳಲ್ಲವೇ?’

‘ಲಕ್ಷ್ಮಿ ಹೆಬ್ಬಾಳಕರ ಸದನಕ್ಕೆ ಸುಳ್ಳು ಹೇಳಿದ್ದಾರೆ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆರ್. ಅಶೋಕ ಆಗ್ರಹಿಸಿದರು. ಆಗ ಮುಖ್ಯಮಂತ್ರಿ, ‘ವಿರೋಧ ಪಕ್ಷದವರು ಇರುವುದೇ ಸುಳ್ಳು ಹೇಳೋಕೆ ಎಂದು ನೀವೇ ಹೇಳಿದ್ದಿರಿ. ಹಾಗಾದರೆ ನೀವು ಹೇಳೋದೆಲ್ಲವೂ ಸುಳ್ಳು ಎಂದು ತಾನೇ’ ಎಂದು ಪ್ರಶ್ನಿಸಿದರು.

ಆಗ ಅಶೋಕ, ‘ನಾವು ಮಾತ್ರ ಎಂದು ಹೇಳಿಲ್ಲ. ವಿರೋಧ ಪಕ್ಷದಲ್ಲಿ ಇರುವವರೆಲ್ಲ ಸುಳ್ಳು ಹೇಳುತ್ತಾರೆ ಎಂದು ನಿಮ್ಮನ್ನೂ ಸೇರಿಸಿ ಹೇಳಿದ್ದೇನೆ’ ಎಂದರು. ಈ ವೇಳೆ ಸಿದ್ದರಾಮಯ್ಯ, ‘ನಾನು ವಿರೋಧ ಪಕ್ಷದಲ್ಲಿ ಇದ್ದಾಗ ಎಂದೂ ಸುಳ್ಳು ಹೇಳಿಲ್ಲ’ ಎಂದು ತಿರುಗೇಟು ನೀಡಿದರು.

ಪ್ರಶ್ನೋತ್ತರ

‘ಕನ್ನಡ ಫಲಕಕ್ಕೆ ಕಣ್ಗಾವಲು ವಾಹನ’

ವಿಧಾನಪರಿಷತ್

ನಾಮಫಲಕಗಳಲ್ಲಿ ಕನ್ನಡ ಕಡ್ಡಾಯ ನಿಯಮ ಪಾಲನೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಲು ಕಣ್ಗಾವಲು ವಾಹನ ನಿಯೋಜಿಸಲಾಗುವುದು. ಕನ್ನಡದಲ್ಲಿ ನಾಮಫಲಕ ಅಳವಡಿಸದ ಸಂಘ–ಸಂಸ್ಥೆಗಳ ವಿರುದ್ಧ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಯ ಅನ್ವಯ ₹5,000ರಿಂದ ₹10,000 ದಂಡ ವಿಧಿಸಲಾಗುವುದು. ಎರಡು ಅವಕಾಶಗಳ ನಂತರವೂ ಅಳವಡಿಸಿಕೊಳ್ಳದಿದ್ದರೆ ಪ್ರತಿ ತಪಾಸಣೆಯ ವೇಳೆ ₹20,000 ದಂಡ ವಸೂಲಿ ಮಾಡಲಾಗುವುದು. ಈ ಕುರಿತು ಎಲ್ಲ ಜಿಲ್ಲಾಧಿಕಾರಿಗಳಿಗೂ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ (ಪ್ರಶ್ನೆ: ಕಾಂಗ್ರೆಸ್‌ನ ಉಮಾಶ್ರೀ)

‘ಗ್ರಂಥಾಲಯ ಮೇಲ್ವಿಚಾರಕರ ಖಾತೆಗೆ ಹಣ’

ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಾಲಯ ಮೇಲ್ವಿಚಾರಕರಿಗೆ ಪ್ರತಿ ತಿಂಗಳು ನೇರ ನಗದು ಪಾವತಿ ವ್ಯವಸ್ಥೆಯ ಮೂಲಕ ಗೌರವಧನ ಪಾವತಿಸಲಾಗುವುದು. ಪ್ರತಿ ಗ್ರಂಥಪಾಲಕರಿಗೆ ₹16,382 ನಿಗದಿ ಮಾಡಿದೆ. ಸರ್ಕಾರ ನೇರವಾಗಿ ₹12,000 ನೀಡುತ್ತಿದ್ದು, ಉಳಿದ ಮೊತ್ತವನ್ನು ಗ್ರಾಮ ಪಂಚಾಯಿತಿಗಳಲ್ಲಿ ಸಮಗ್ರಹವಾಗುವ ಗ್ರಂಥಾಲಯ ಕರದಲ್ಲಿ ಭರಿಸಲು ಸೂಚಿಸಲಾಗಿದೆ. ಪ್ರತಿ ತಿಂಗಳು ಹಣ ಜಮೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು

ಗ್ರಾಮೀಣಾಭಿವದ್ಧಿ ಸಚಿವ ಪ್ರಿಯಾಂಕ್ ಖರ್ಗೆ (ಪ್ರಶ್ನೆ: ಬಿಜೆಪಿಯ ಡಿ.ಎಸ್.ಅರುಣ್)

‘ಗ್ರಾಮಗಳನ್ನು ಕೈಬಿಡುವುದು ಕಷ್ಟದ ಕೆಲಸ’

ವಿಧಾನಸಭೆ

ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾ ನಗರ ಪಾಲಿಕೆಗಳನ್ನಾಗಿ ಉನ್ನತೀಕರಿಸುವ ವೇಳೆ ಹತ್ತಿರ ಇರುವ ಗ್ರಾಮಾಂತರ ಪ್ರದೇಶಗಳನ್ನೂ ಸೇರಿಸಿ ಗಡಿ ನಿಗದಿಪಡಿಸಲಾಗುತ್ತಿದೆ. ಆದರೆ, ಕೆಲವು ಶಾಸಕರು ನಗರಸಭೆ ವ್ಯಾಪ್ತಿಯಿಂದ ಗ್ರಾಮಗಳನ್ನು ಕೈಬಿಡುವಂತೆ ಮನವಿ ಮಾಡುತ್ತಿದ್ದಾರೆ. ಇದು ಕಷ್ಟದ ಕೆಲಸ

ಬೈರತಿ ಸುರೇಶ್, ನಗರಾಭಿವೃದ್ಧಿ ಸಚಿವ

(ಪ್ರಶ್ನೆ ಬಿಜೆಪಿಯ ದಿನಕರ ಶೆಟ್ಟಿ)

‘ಸಚಿವರು ಭೇಟಿ ನೀಡುತ್ತಿಲ್ಲ’

ಒಂದನೇ ಪುಟದಿಂದ...

‘ಈಗ ಸಚಿವರಿಗೆ ಏನಾಗಿದೆ. ಖಾನಾಪುರ, ಔರಾದ, ನಿಪ್ಪಾಣಿ, ಬಸವ ಕಲ್ಯಾಣ, ಆಳಂದ, ಗುರುಮಠಕಲ್ ಇಲ್ಲಿಗೆ ಎಷ್ಟು ಮಂತ್ರಿಗಳು ಭೇಟಿ ನೀಡಿದ್ದಾರೆ’ ಎಂದು ಪ್ರಶ್ನಿಸಿದರು.

‘ಬೆಳಗಾವಿ ಬರುವ ಮಂತ್ರಿಗಳು ನಮ್ಮ ಭಾಗಕ್ಕೆ ಭೇಟಿ ನೀಡಿದ್ದಾಗಿ ಹೇಳುತ್ತಾರೆ. ಬೆಳಗಾವಿ ಎಂದರೆ ಉತ್ತರ ಕರ್ನಾಟಕವೇ? ಬೆಳಗಾವಿಯಿಂದ ಕಲಬುರಗಿಗೆ 400 ಕಿ.ಮೀ ದೂರ ಇರುವುದು ಅವರಿಗೇನಾದರೂ ಗೊತ್ತಿದೆಯೆ? ಇದು ನಮ್ಮ ಕಾಲದಲ್ಲಿ ಮಾತ್ರವಲ್ಲ ಬಿಜೆಪಿ ಕಾಲದಲ್ಲೂ ಹೀಗೆ ಇತ್ತು’ ಎಂದು ದೂರಿದರು.

‘ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ನೋಡಿದರೆ ನಮ್ಮ ಭಾಗದ ಸ್ಥಿತಿ ಗೊತ್ತಾಗುತ್ತದೆ. ಕಲ್ಯಾಣ ಕರ್ನಾಟಕದ ಭಾಗದ ಎರಡು ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದರೆ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಅನುತ್ತೀರ್ಣರಾಗುತ್ತಾರೆ. ಇದಕ್ಕೆ ಕಾರಣವೇನು ಎಂದು ಸರ್ಕಾರ ಆತ್ಮ ವಿಮರ್ಶೆ ಮಾಡಿಕೊಂಡಿದೆಯೇ? ಈ ಭಾಗದಲ್ಲಿ ವಿದ್ಯಾರ್ಥಿಗಳ ತಂದೆ–ತಾಯಿ ಶಿಕ್ಷಣ ಪಡೆದಿರುವುದಿಲ್ಲ. ಶಾಲೆಗಳಲ್ಲಿ ಪಾಠ ಸರಿಯಾಗಿ ನಡೆಯುವುದಿಲ್ಲ, ಒಟ್ಟಾರೆ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಸ್ಥಿತಿಯೇ ಇಲ್ಲ’ ಎಂದು ಹೇಳಿದರು.

‘ರಾಜ್ಯದಲ್ಲಿ 54 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಇದರಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ 24 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಉಳಿದಿವೆ. ನಮ್ಮ ಭಾಗದಲ್ಲಿ ಆರೋಗ್ಯ ಕೇಂದ್ರಗಳ ಕೊರತೆ ಇದ್ದು 300 ಆರೋಗ್ಯ ಕೇಂದ್ರ ಗಳನ್ನು ಮಂಜೂರು ಮಾಡಬೇಕು’ ಎಂದು ಬಿ.ಆರ್. ಪಾಟೀಲ ಒತ್ತಾಯಿಸಿದರು.

‘ಅಭಿವೃದ್ಧಿ ಕುರಿತು ಆತ್ಮವಿಮರ್ಶೆ ಆಗಲಿ’

ಸರ್ಕಾರ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗೂ ಹೆಚ್ಚು ಕಡಿಮೆ ಸಮಾನವಾಗಿ ಅನುದಾನ ನೀಡುತ್ತದೆ. ಆದರೆ, ಉತ್ತರ ಕರ್ನಾಟಕದಲ್ಲಿ ಅಭಿವೃದ್ಧಿ ಕಾರ್ಯ ಆಗುತ್ತಿಲ್ಲ. ಹಾಗಿದ್ದರೆ ಅನುದಾನ ಎಲ್ಲಿ ಸೋರಿ ಹೋಗುತ್ತಿದೆ. ಈ ಕುರಿತು ಮುಖ್ಯಮಂತ್ರಿಯವರು ಮತ್ತು ಈ ಭಾಗದ ರಾಜಕಾರಣಿಗಳು ಚಿಂತನೆ ನಡೆಸಬೇಕು

ಸಿ.ಬಿ. ಸುರೇಶ್‌ಬಾಬು, ಜೆಡಿಎಸ್

‘ತಲಾ ಆದಾಯದಲ್ಲಿ ಹಿಂದೆ’

ತಲಾ ಆದಾಯದಲ್ಲಿ ಕಲ್ಯಾಣ ಕರ್ನಾಟಕ ತುಂಬಾ ಹಿಂದೆ. ಇಡೀ ದೇಶ ದಲ್ಲಿ ಕರ್ನಾಟಕದ ತಲಾ ಆದಾಯದಲ್ಲಿ ನಂಬರ್ 1 ಇದೆ. ಆದರೆ, ರಾಜ್ಯ ದಲ್ಲಿ ದಕ್ಷಿಣದ ಜಿಲ್ಲೆಗಳಿಗೆ ಹೋಲಿಸಿದರೆ ಕಲ್ಯಾಣ ಕರ್ನಾಟಕ ಜಿಲ್ಲೆಗಳ ತಲಾ ಆದಾಯ ತುಂಬಾ ಹಿಂದಿದೆ. ಬೆಂಗಳೂರಿನ ತಲಾ ಆದಾಯ ₹6 ಲಕ್ಷ ಆದಾಯ ಇದ್ದರೆ ಕಲ್ಯಾಣ ಕರ್ನಾಟಕ ಭಾಗದಲ್ಲಿ ₹1.30 ಲಕ್ಷ ಇದೆ.

ಡಾ.ಶೈಲೇಂದ್ರ ಬೆಲ್ದಾಳೆ, ಬಿಜೆಪಿ

‘ಕಲಾಪಕ್ಕೆ ಹಾಜರಾಗದ ಸತೀಶ’

ಸಚಿವ ಸತೀಶ ಜಾರಕಿಹೊಳಿ ಒಂದು ದಿನವೂ ಸದನಕ್ಕೆ ಬಂದಿಲ್ಲ. ಬೆಳಗಾವಿಯವರೇ ಆಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಬೆಳಗಾವಿಯಲ್ಲಿ ಇದ್ದರೂ ಸದನಕ್ಕೆ ಬಂದಿಲ್ಲ. ಮುಖ್ಯಮಂತ್ರಿ ಆಕಾಂಕ್ಷಿ ಆಗಿರುವ ಅವರು ಈ ರೀತಿ ನಡೆದುಕೊಳ್ಳುವುದು ಸರಿಯೇ? ಮಂತ್ರಿಗಳ ರೋಸ್ಟರ್ ಪಟ್ಟಿಯ ಪ್ರಕಾರ ಯಾವ ಸಚಿವರೂ ವಿಧಾನಸಭೆಗೆ ಬರುತ್ತಿಲ್ಲ.

ಅರವಿಂದ ಬೆಲ್ಲದ, ಬಿಜೆಪಿ

> ಚಿಕ್ಕೋಡಿಯನ್ನು ಜಿಲ್ಲಾ ಕೇಂದ್ರವಾಗಿ ಘೋಷಿಸಬೇಕು. ಗಡಿಭಾಗದ ಹಿಂದುಳಿದಿರುವ ಜಿಲ್ಲೆಗಳಿಗೆ ಹೆಚ್ಚಿನ ಅನುದಾನ ನೀಡಬೇಕು
> **ಗಣೇಶ ಹುಕ್ಕೇರಿ,** ಕಾಂಗ್ರೆಸ್

ಚರ್ಚೆಗೆ ಅವಕಾಶ ಕೇಳಿದ ಎಚ್‌.ಕೆ. ಪಾಟೀಲ

ಉತ್ತರ ಕರ್ನಾಟಕ ಕುರಿತ ಚರ್ಚೆ ಯಲ್ಲಿ ಭಾಗವಹಿಸಲು ಅವಕಾಶ ನೀಡುವಂತೆ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರು ಸಭಾಧ್ಯಕ್ಷರಿಗೆ ಕೋರಿಕೆ ಸಲ್ಲಿಸಿದ ಕುರಿತು ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

‘ಉತ್ತರ ಕರ್ನಾಟಕದ ಕುರಿತು ಚರ್ಚೆಯಲ್ಲಿ ನಾನೂ ಭಾಗವಹಿಸಬೇಕಿದೆ. ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲಬೇಕಿದೆ’ ಎಂದು ಎಚ್.ಕೆ.ಪಾಟೀಲ ಹೇಳಿದರು.

ಇದಕ್ಕೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಕರಾರು ಎತ್ತಿದರು. ‘ಉತ್ತರ ನೀಡಬೇಕಾದ ಸ್ಥಾನದಲ್ಲಿರುವ ಸಚಿವರೇ ಚರ್ಚೆಯಲ್ಲಿ ಭಾಗವಹಿಸುವುದು ಸರಿಯಲ್ಲ. ಉತ್ತರ ಹೇಳುವ ಸಂದರ್ಭದಲ್ಲಿ ನೀವು ಹೇಳಬೇಕಾಗಿರುವುದನ್ನು ಹೇಳಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ’ ಎಂದರು. ಇದಕ್ಕೆ ವಿ.ಸುನಿಲ್ ಕುಮಾರ್, ಆರಗ ಜ್ಞಾನೇಂದ್ರ ಧ್ವನಿಗೂಡಿಸಿ, ‘ಇದು ಸತ್‌ಸಂಪ್ರದಾಯವಲ್ಲ. ಈ ಬಗ್ಗೆ ರೂಲಿಂಗ್ ನೀಡಬೇಕು’ ಎಂದು ಸಭಾಧ್ಯಕ್ಷರನ್ನು ಒತ್ತಾಯಿಸಿದರು.

ಬಿಜೆಪಿ ಸದಸ್ಯರ ಒತ್ತಡಕ್ಕೆ ಮಣಿದ ಎಚ್.ಕೆ.ಪಾಟೀಲ ಅವರು ‘ಈಗ ಚರ್ಚೆಯಲ್ಲಿ ಭಾಗಹಿಸುವುದಿಲ್ಲ. ಉತ್ತರ ಹೇಳುವ ಸಂದರ್ಭದಲ್ಲಿ ನನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತೇನೆ’ ಎಂದರು.

ಸಿ.ಎಂ, ಡಿಸಿಎಂ ಬಣ ಗುದ್ದಾಟ ಜೋರು

ಸುವರ್ಣ ವಿಧಾನಸೌಧ (ಬೆಳಗಾವಿ): ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲೀಗ ಔತಣ ಕೂಟದ ರಾಜಕೀಯ ಗರಿಗೆದರಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣಗಳ ಚಟುವಟಿಕೆ ಜೋರಾಗಿದ್ದು, ನಾಯಕತ್ವ ಬದಲಾವಣೆಯ ವಿಷಯ ಮತ್ತೆ ಮುನ್ನೆಲೆಗೆ ಬಂದಿದೆ. ತಮ್ಮ ನಾಯಕರ ಪರ ಹೇಳಿಕೆಗಳು, ಎದುರಾಳಿ ಬಣದವರ ಮೇಲೆ ಟೀಕಾಪ್ರಹಾರಗಳೂ ಶುರುವಾಗಿವೆ.

‘ಔತಣಕೂಟಕ್ಕೆ ನಾನೇನು ಮಾಡಲಿ’

ಯತೀಂದ್ರ

‘ಔತಣಕೂಟ ಸಭೆ ಮಾಡಿದರೆ ಅದಕ್ಕೆ ನಾನೇನು ಮಾಡಲಿ. ಅವರು ನಿತ್ಯ ಎಲ್ಲ ಶಾಸಕರು, ಸಚಿವರನ್ನು ಕರೆದು ಸಭೆ ಮಾಡುತ್ತಿದ್ದಾರೆ. ಅದಕ್ಕೆ ನಾನೇನು ಮಾಡಲಿ’ ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಪ್ರಶ್ನಿಸಿದರು.

ಶಿವಕುಮಾರ್ ಬಣದ ಸಚಿವರು, ಶಾಸಕರು ಔತಣ ಕೂಟ ಸಭೆ ನಡೆಸಿರುವ ಬಗ್ಗೆ ಸುದ್ದಿಗಾರರು ಕೇಳಿದಾಗ ಅವರು ಈ ರೀತಿ ಪ್ರತಿಕ್ರಿಯಿಸಿದರು.

‘ನಾನು ಏನು ಹೇಳಬೇಕೊ ಅದನ್ನು ಹೇಳಿ ಆಗಿದೆ. ಬೇರೆಯವರು ಏನು ಹೇಳುತ್ತಾರೊ ಅದರ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ’ ಎಂದೂ ಹೇಳಿದರು.

‘ಅಧಿವೇಶನ ಮುಗಿದ ತಕ್ಷಣ ಡಿಕೆಶಿ ಸಿ.ಎಂ’

‘ಅಧಿವೇಶನ ಮುಗಿದ ತಕ್ಷಣ ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುತ್ತಾರೆ’ ಎಂದು ರಾಮನಗರದ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

‘ನನ್ನ ಹಣೆಯಲ್ಲಿ ಬರೆದಿದ್ದಕ್ಕೆ ನಾನು ಶಾಸಕ ಆಗಿಲ್ಲವೇ? ಹಾಗೆಯೇ ಶಿವಕುಮಾರ್ ಅವರ ಹಣೆಯಲ್ಲಿ ಬರೆದಿದೆ. ಅವರು ಮುಖ್ಯಮಂತ್ರಿ ಆಗುತ್ತಾರೆ. ಗುರುವಾರ ನಾವು 55 ಜನ ಶಾಸಕರು ಊಟಕ್ಕೆ ಸೇರಿದ್ದೆವು. ಊಟ ಮಾಡಿದ್ದೇವೆ ಅಷ್ಟೇ’ ಎಂದರು.

‘ಅವರು ಕಷ್ಟಪಟ್ಟಿದ್ದಕ್ಕೆ ಅಧಿವೇಶನ ಮುಗಿದ ಬಳಿಕ ಆದಷ್ಟು ಬೇಗ ಆ ಫಲ ಸಿಗುತ್ತದೆ. ನಂಬರ್ ಮುಖ್ಯ ಅಲ್ಲ, ಹೈಕಮಾಂಡ್‌ನ ನಿರ್ದೇಶನ ಮುಖ್ಯ. ಹೈಕಮಾಂಡ್ ಹೇಳಿದರೆ ಯಾರು ಯಾಕೆ ಕೇಳಲ್ಲ? ಸಂಖ್ಯಾಬಲ ಮುಖ್ಯ ಅಲ್ಲ’ ಎಂದು ಹೇಳಿದರು.

‘ಡಿಕೆಶಿ ಯಾಕೆ ಸಿ.ಎಂ ಆಗಬಾರದು’

‘ಶಿವಕುಮಾರ್ ಅವರು ಎಂಟು ಬಾರಿ ಶಾಸಕರಾಗಿ, ಹಲವು ಇಲಾಖೆಗಳ ಮಂತ್ರಿಯಾಗಿ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದಾರೆ. ಹೀಗಾಗಿ ಅವರಿಗೂ ಮುಖ್ಯಮಂತ್ರಿಯಾಗುವ ಅವಕಾಶ ಸಿಗಬೇಕು’ ಎಂದು ಬಿಜೆಪಿ ಉಚ್ಚಾಟಿತ ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು.

ಗುರುವಾರ ನಡೆದ ಔತಣ ಕೂಟದಲ್ಲಿ ಭಾಗಿಯಾಗಿದ್ದ ಸೋಮಶೇಖರ್ ಅವರು, ‘ಶಿವಕುಮಾರ್ ಆಪ್ತರೊಂದಿಗೆ ನಡೆದ ಭೋಜನಕೂಟದಲ್ಲಿ ರಾಜಕೀಯ ಚರ್ಚೆ ನಡೆದಿಲ್ಲ’ ಎಂದರು.

‘ಅತಂತ್ರರಿಗೆ ಮಾತನಾಡುವ ನೈತಿಕತೆ ಇಲ್ಲ’

‘ಅನರ್ಹರಾಗಿರುವ ಶಾಸಕರಿಗೆ ನಮ್ಮ ಪಕ್ಷದ ಬಗ್ಗೆ ಮಾತಾಡುವ ನೈತಿಕತೆ ಇಲ್ಲ. ನಾನು ಇದ್ದೇನೆ ಎಂದು ತೋರಿಸಿಕೊಳ್ಳುವುದಕ್ಕೆ ಮಾತನಾಡುತ್ತಾರೆ’ ಎಂದು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹೇಳಿದರು.

ಎಸ್.ಟಿ. ಸೋಮಶೇಖರ್ ಮಾತಿಗೆ ತಿರುಗೇಟು ನೀಡಿದ ಅವರು, ‘ಬಿಜೆಪಿಯಿಂದ ಉಚ್ಚಾಟಿತರಾಗಿರುವ ಸೋಮಶೇಖರ್ ಸ್ವತಂತ್ರರಾಗಿದ್ದು, ನಮ್ಮ ಪಕ್ಷಕ್ಕೆ ಸೇರುವುದಕ್ಕೆ ಆಗುವುದಿಲ್ಲ. ಅವರು ಅಲ್ಲೂ ಇಲ್ಲ ಇಲ್ಲೂ ಇಲ್ಲ ಅತಂತ್ರರು’ ಎಂದರು.

‘ಡಿಕೆಶಿ ಮುಖ್ಯಮಂತ್ರಿ ಆಗುತ್ತಾರೆ’

‘ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು, ಆಗುತ್ತಾರೆ. ಯಾವುದೇ ಕ್ಷಣದಲ್ಲಾದರೂ ಆಗಬಹುದು’ ಎಂದು ಮದ್ದೂರು ಶಾಸಕ ಉದಯ ಕದಲೂರು ಹೇಳಿದರು.

ಔತಣಕೂಟ ಸಭೆಯಲ್ಲಿ ಭಾಗವಹಿಸಿದ್ದ ಅವರು, ‘ನಾವೆಲ್ಲಾ ಊರು ಬಿಟ್ಟು ಬಂದಿದ್ದೇವೆ, ಅದಕ್ಕೆ ಔತಣಕ್ಕೆ ಸೇರಿದ್ದೆವು. ಅದರಲ್ಲಿ ತಪ್ಪಿಲ್ಲ’ ಎಂದರು.

‘ಯತೀಂದ್ರ ಹೇಳಿಕೆಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲ. ಡಿ.ಕೆ. ಶಿವಕುಮಾರ್ ಜೊತೆ ಎಲ್ಲ 140 ಶಾಸಕರು ಇದ್ದಾರೆ. ಎಲ್ಲರಿಗೂ ಬಿ ಫಾರಂ ಕೊಟ್ಟವರು ಶಿವಕುಮಾರ್’ ಎಂದರು.

‘ನಾಯಕತ್ವದ ಕುರಿತು ಹೇಳಿಕೆ ನೀಡದಂತೆ ಯಾರು ಹೇಳಿಲ್ಲ, ಈ ಬಗ್ಗೆ ಹೈಕಮಾಂಡ್ ಚರ್ಚೆ ಮಾಡಲಿದೆ’ ಎಂದೂ ಉದಯ್ ಹೇಳಿದರು.

ವರಿಷ್ಠರಿಗೆ ಮಾಹಿತಿ ಕೊಡುವೆ: ಬೇಳೂರು

‘ನಾನು ದೆಹಲಿಗೆ ಹೋಗಿ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಎಲ್ಲ ಮಾಹಿತಿ ನೀಡುತ್ತೇನೆ’ ಎಂದು ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಹೇಳಿದರು.

‘ಔತಣಕೂಟ ಸಭೆ ನಡೆಸುವುದರಿಂದ ವಿರೋಧ ಪಕ್ಷದವರಿಗೆ ನಾವು ಆಹಾರ ಆಗುತ್ತಿದ್ದೇವೆ. ಅಧಿವೇಶನ ನಡೆಯುತ್ತಿರುವಾಗ, ಯಾರೂ ಹೇಳಿಕೆಗಳನ್ನು ಕೊಡಬಾರದು. ಯಾರು ಯಾವುದೇ ಹೇಳಿಕೆಗಳನ್ನು ನೀಡಿದರೂ ಸಚಿವರಾಗಲು ಸಾಧ್ಯ ಇಲ್ಲ. ಮುಖ್ಯಮಂತ್ರಿ ಮಾಡಲು ಸಾಧ್ಯವಿಲ್ಲ’ ಎಂದರು.

ಎಂಎಲ್‌ಸಿ ಮಾತನಾಡಿದ್ದಕ್ಕೆ ಮಹತ್ವ ಇಲ್ಲ: ಬಸವರಾಜ ಶಿವಗಂಗಾ

‘ನಾನು ಶಾಸಕ, ನನಗೆ ವೋಟ್ ಇದೆ. ಶಾಸಕರು ಮಾತನಾಡಿದರೆ ಮಾತ್ರ ಮಹತ್ವ ಕೊಡಿ. ಎಂಎಲ್‌ಸಿ (ವಿಧಾನಪರಿಷತ್ ಸದಸ್ಯ) ಮಾತನಾಡಿದ್ದಕ್ಕೆ ಮಹತ್ವವನ್ನೇ ಕೊಡಬೇಡಿ’ ಎಂದು ಚನ್ನಗಿರಿ ಶಾಸಕ ಬಸವರಾಜ ಶಿವಗಂಗಾ ಅವರು ಯತೀಂದ್ರ ಅವರನ್ನು ಉದ್ದೇಶಿಸಿ ಹೇಳಿದರು.

‘ಯತೀಂದ್ರ ಅವರಿಗೆ ನಮ್ಮ ಹೈಕಮಾಂಡ್ ಹೇಳಿದೆಯಾ? ಜೆ.ಎಚ್. ಪಟೇಲ್ ನನ್ನ ದೊಡ್ಡಪ್ಪ. ನಾನೂ ಮುಖ್ಯಮಂತ್ರಿಯಾಗಿದ್ದವರ ಮಗನೇ. ಹಾಗಂತ ನಾನು ಹೇಳಿಬಿಟ್ಟರೆ ಎಲ್ಲವೂ ನಡೆಯುತ್ತದೆಯೇ’ ಎಂದರು.

‘ಶಿವಕುಮಾರ್ ಮುಖ್ಯಮಂತ್ರಿ ಆಗುವ ಸಮಯ ಬರುತ್ತದೆ. ಡಿಸೆಂಬರ್ ಮುಗಿಯಲಿ, ರಕ್ತದಲ್ಲಿ ಬರೆದುಕೊಟ್ಟ ಬಗ್ಗೆ ಹೇಳುತ್ತೇನೆ. ರಕ್ತ ಇದೆಯಾ, ಒಣಗಿದೆಯಾ ಅಂತ ಜನವರಿಯಲ್ಲಿ ಮಾತನಾಡುತ್ತೇನೆ’ ಎಂದು ಹೇಳಿದರು.

‘ಪಾರ್ಟಿ ಮಾಡಲು ಬಂದಿದ್ದೀರಾ?’

ವಿಜಯೇಂದ್ರ

‘ಕಾಂಗ್ರೆಸ್ ನಾಯಕರು ತಮ್ಮ ಕುರ್ಚಿ ಉಳಿಸಿಕೊಳ್ಳಲು ಇಲ್ಲಿಯೂ ‘ಡಿನ್ನರ್ ಪಾರ್ಟಿ’ ಮುಂದುವರಿಸಿರುವುದು ನಾಡಿನ ಜನತೆ ಮತ್ತು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ. ನೀವಿಲ್ಲಿ ಅಧಿವೇಶನಕ್ಕೆ ಬಂದಿದ್ದೀರಾ, ಪಾರ್ಟಿ ಮಾಡಲು ಬಂದಿದ್ದೀರಾ?’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿ ಕಾರಿದರು.

‘ನೀವೇನೂ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಅಲ್ಲ. ಇಡೀ ರಾಜ್ಯದ ಮುಖ್ಯಮಂತ್ರಿ. ಇಷ್ಟೊಂದು ಗೊಂದಲ ಇಟ್ಟುಕೊಂಡು ಕಾಟಾಚಾರಕ್ಕೆ ಬೆಳಗಾವಿಯಲ್ಲಿ ಅಧಿವೇಶನ ನಡೆಸುವುದು ಬೇಡ. ಅಧಿವೇಶನ ಮುಂದೂಡಿ ಎಂದು ಸಲಹೆ ನೀಡಿದ್ದೆ. ಇವರು ಜನಾಧಿವೇಶನವನ್ನು ತಮ್ಮ ಕುರ್ಚಿ ಕಾಪಾಡುವ ಅಧಿವೇಶನ ಮಾಡಿಕೊಳ್ಳುತ್ತಿದ್ದಾರೆ’ ಎಂದು ದೂರಿದರು.

‘ಮುಖ್ಯಮಂತ್ರಿ ಕುರ್ಚಿ ಉಳಿಸಿಕೊಳ್ಳಲು ಕಸರತ್ತು ಮಾಡುತ್ತಿದ್ದಾರೆ. ಶಿವಕುಮಾರ್ ತಂಡವು ಸಿದ್ದರಾಮಯ್ಯ ಅವರನ್ನು ಕುರ್ಚಿಯಿಂದ ಹೇಗೆ ಬೀಳಿಸಬೇಕು ಎಂದು ತಂತ್ರಗಾರಿಕೆ ರೂಪಿಸಲು ಸಭೆ ಮಾಡುತ್ತಿದೆ. ಆಡಳಿತ ಯಂತ್ರ ಕುಸಿದು ಬಿದ್ದಿದೆ’ ಎಂದು ವಿಜಯೇಂದ್ರ ಆಪಾದಿಸಿದರು.

> ಶಾಸಕಾಂಗ ಪಕ್ಷ ಸಭೆಯಲ್ಲಿ ಎಐಸಿಸಿ ವೀಕ್ಷಕರ ಮುಂದೆಯೇ ಮುಖ್ಯಮಂತ್ರಿ ಆಯ್ಕೆ ಮಾಡಲಾಗಿದೆ. ಆಗ ಯಾವುದೇ ಗಡುವು ನೀಡಿಲ್ಲ. ಸದ್ಯ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದು, ಕುರ್ಚಿ ಖಾಲಿ ಇಲ್ಲ
> **ಕೆ.ಜೆ. ಜಾರ್ಜ್,** ಇಂಧನ ಸಚಿವ

> ಸಿದ್ದರಾಮಯ್ಯ ಅವರು ಜವಾಬ್ದಾರಿಯಿಂದ ಮಾತನಾಡುತ್ತಿದ್ದು, ಗೌರವಯುತವಾಗಿ ನಡೆದುಕೊಳ್ಳುತ್ತಿದ್ದಾರೆ. ಅದು ನಮಗೂ ಮಾರ್ಗದರ್ಶನವಾಗಿದ್ದು, ಅದೇ ನಮಗೆ ಅಂತಿಮ
> **ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ
90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
https://bit.ly/40dPCqy

‘ಉತ್ತರ’ದಲ್ಲಿ ಘಟಕ: ರಿಯಾಯಿತಿ

ಬೆಳಗಾವಿ: ಹುಬ್ಬಳ್ಳಿ- ಧಾರವಾಡ, ಬೆಳಗಾವಿ ಭಾಗದಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್ ಕಾರಿಡಾರ್ ಸ್ಥಾಪನೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಉತ್ತರ ಕರ್ನಾಟಕ ಭಾಗದ ಯಾವುದೇ ಜಿಲ್ಲೆಯಲ್ಲಿ ಏರೋಸ್ಪೇಸ್ ಬಿಡಿಭಾಗ ತಯಾರಿಕೆ ಘಟಕ ಸ್ಥಾಪಿಸಲು ಮುಂದೆ ಬಂದರೂ ರಿಯಾಯಿತಿ, ಪ್ರೋತ್ಸಾಹಕ ಕ್ರಮಕೈಗೊಳ್ಳಲಾಗುವುದು’ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಅರವಿಂದ ಬೆಲ್ಲದ, ‘ದೇವನಹಳ್ಳಿಯ ಚನ್ನರಾಯ ಪಟ್ಟಣದಲ್ಲಿ 1,777 ಎಕರೆ ಜಮೀನು ಏರೋಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಸ್ವಾಧೀನ ಪಡಿಸಿಕೊಂಡು ಕೈಬಿಡಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಭೂಮಿ ಲಭ್ಯತೆಯಿದ್ದು ಈ ಭಾಗದಲ್ಲಿ ಏರೋಸ್ಪೇಸ್ ಪಾರ್ಕ್ ಮಾಡಬೇಕು’ ಎಂದು ಮನವಿ ಮಾಡಿದರು.

ಬಫರ್ ರಸ್ತೆ ಕಾಮಗಾರಿ ಶೀಘ್ರ ಆರಂಭ

ಸರ್ಜಾಪುರ–ಈಜಿಪುರದಲ್ಲಿ 47 ಕಿ.ಮೀ. ಉದ್ದದ ರಸ್ತೆ ಕಾಮಗಾರಿ: ಮಹೇಶ್ವರ್ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಚಾರಯುಕ್ತ' ಯೋಜನೆಯಡಿ 47 ಕಿ.ಮೀ. ಉದ್ದದ ಬಫರ್ ರಸ್ತೆಗಳ ಕಾಮಗಾರಿಯನ್ನು ಈ ತಿಂಗಳಾಂತ್ಯದೊಳಗೆ ಪ್ರಾರಂಭಿಸಬೇಕು' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಗಳ ಸಮನ್ವಯ ಸಭೆಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ನಗರದಲ್ಲಿ ಹೆಚ್ಚುವರಿ ರಸ್ತೆಗಳನ್ನು ಒದಗಿಸಲು, ಕಾಲುವೆಗಳನ್ನು ರಕ್ಷಿಸಲು, ಬಫರ್ ವಲಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲು, ಸುಸ್ಥಿರ ಸಾರಿಗೆಯನ್ನು ಉತ್ತೇಜಿಸಲು ಹಾಗೂ ನೆರೆಹೊರೆಯ ರಸ್ತೆಗಳನ್ನು ಬಲಪಡಿಸಲು ಸುಮಾರು 300 ಕಿ.ಮೀ ಉದ್ದದ ಬಫರ್ ರಸ್ತೆಗಳನ್ನು ನಿರ್ಮಿಸಲು ಯೋಜಿಸಲಾಗಿದೆ. ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿ, ಕೂಡಲೇ ಕಾಮಗಾರಿ ಪ್ರಾರಂಭಿಸಬೇಕು ಎಂದರು.



ಬಫರ್ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ, ಪಾಲಿಕೆವಾರು ರಸ್ತೆಗಳ ಮತ್ತು ಸ್ವತ್ತು/ಸರ್ವೇ ಮಾಹಿತಿ ಸಲ್ಲಿಸಬೇಕು. ನಂತರ ವಿನ್ಯಾಸ ಪರಿಶೀಲನೆ ನಡೆಸಿ, ಮುಖ್ಯ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲು ಖಾಸಗಿ ಜಾಗಗಳು ಬೇಕಾದಲ್ಲಿ ಟಿಡಿಆರ್/ಪ್ರೀಮಿಯಂ ಎಫ್.ಎ.ಆರ್ ನೀಡುವ ಮೂಲಕ ಜಾಗ ವಶಕ್ಕೆ ಪಡೆದು ಕಾಮಗಾರಿ ಆರಂಭಿಸಲು ನಿರ್ದೇಶನ ನೀಡಿದರು.

ಈಜಿಪುರ ಒಳವರ್ತುಲ ರಸ್ತೆಯಿಂದ ಸರ್ಜಾಪುರ ಹೊರವರ್ತುಲ ರಸ್ತೆಯವರೆಗೆ 2.6 ಕಿ.ಮೀ ಉದ್ದದ ಬಫರ್ ರಸ್ತೆ ಕಾಮಗಾರಿಯನ್ನು ರಕ್ಷಣಾ ಇಲಾಖೆ ಜಾಗದ ಬಳಿ ಆರ್‌ಸಿಸಿ ಗೋಡೆಯೊಂದಿಗೆ ₹44 ಕೋಟಿ ವೆಚ್ಚದಲ್ಲಿ ಈಗಾಗಲೇ ಕಾಮಗಾರಿ ಆರಂಭಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ನಗರದಲ್ಲಿ ಹೊಸದಾಗಿ ಡಾಂಬರೀಕರಣಗೊಂಡಿರುವ ರಸ್ತೆಗಳಲ್ಲಿ ಲೇನ್ ಮಾರ್ಕಿಂಗ್ ಮಾಡಬೇಕು. ಜೊತೆಗೆ ಕರ್ಬ್‌ಗಳಿಗೆ ಪೇಂಟಿಂಗ್, ಜೀಬ್ರಾ ಕ್ರಾಸಿಂಗ್ ಹಾಗೂ ಕ್ಯಾಟ್ ಐಸ್ ಅಳವಡಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಮಹೇಶ್ವರ್ ರಾವ್ ಸೂಚಿಸಿದರು.

ಸೂಚನೆಗಳು

- ಮೆಟ್ರೊ ನಿಲ್ದಾಣಗಳಲ್ಲಿ ಬಹುಹಂತದ ಪಾರ್ಕಿಂಗ್ ವ್ಯವಸ್ಥೆಗೆ ಪಟ್ಟಿ ನೀಡಿ
- ಬೆಸ್ಕಾಂ, ಜಲಮಂಡಳಿ, ಕೆಪಿಟಿಸಿಎಲ್, ಗೇಲ್ ಸೇರಿದಂತೆ ಇತರೆ ಇಲಾಖೆಗಳು ರಸ್ತೆ ಕತ್ತರಿಸಿ ನಡೆಸುತ್ತಿರುವ ಕಾಮಗಾರಿಗೆ ವೇಗ ನೀಡಬೇಕು
- ಕೇಂದ್ರ ನಗರ ಪಾಲಿಕೆಯಲ್ಲಿ ಖರೀದಿಸಿರುವ ಟೋಯಿಂಗ್ ವಾಹನಗಳ ಬಳಕೆಯಾಗಬೇಕು
- ಮರ ಗಣತಿ ಕಾರ್ಯವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಿ, 2026ರ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು

'ಖಾಸಗಿಯವರಿಗೆ ರಸ್ತೆಗಳ ನಿರ್ವಹಣೆ ಜವಾಬ್ದಾರಿ ವಹಿಸಲು ಚಿಂತನೆ'

'ನಗರದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲು ಚಿಂತನೆ ನಡೆಸಲಾಗಿದೆ' ಎಂದು ಮಹೇಶ್ವರ್ ರಾವ್ ತಿಳಿಸಿದರು.

'ರಸ್ತೆಗಳನ್ನು ನಿರ್ಮಿಸಿ, ಅಭಿವೃದ್ಧಿಗೊಳಿಸಿದ ಮೇಲೆ ಅವುಗಳನ್ನು ಪಾಲಿಕೆ ವತಿಯಿಂದ ನಿರ್ವಹಣೆ ಮಾಡಲಾಗುತ್ತಿದೆ. ಖಾಸಗಿ ಸಂಸ್ಥೆಗಳು ರಸ್ತೆಗಳ ನಿರ್ವಹಣೆಗೆ ಮುಂದೆ ಬಂದಿದ್ದು, ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ' ಎಂದರು.

ಚರ್ಚ್‌ಸ್ಟ್ರೀಟ್, ರಿಚ್ಮಂಡ್ ರಸ್ತೆ ಮತ್ತು ವಿಠ್ಠಲ ಮಲ್ಯ ರಸ್ತೆಗಳ ನಿರ್ವಹಣೆ ಜವಾಬ್ದಾರಿಯನ್ನು ಅನ್‌ಬಾಕ್ಸಿಂಗ್ ಬಿಎಲ್‌ಆರ್ ಫೌಂಡೇಷನ್‌ಗೆ ಕಳೆದ ವರ್ಷ ವಹಿಸಲಾಗಿದೆ. ಇದೇ ರೀತಿ ಹಲವು ಕಂಪನಿಗಳಿಗೆ ಬೇರೆ ರಸ್ತೆಗಳ ನಿರ್ವಹಣೆ ಜವಾಬ್ದಾರಿ ವಹಿಸಲು ಹಿಂದೆಯೇ ನಿರ್ಧರಿಸಲಾಗಿತ್ತು. ಅದು ಇನ್ನೂ ಕಾರ್ಯಗತವಾಗಿಲ್ಲ.

₹68.61 ಕೋಟಿ ಮೌಲ್ಯದ ಭೂ ಒತ್ತುವರಿ ತೆರವು

ಭೂ ಕಬಳಿಕೆದಾರರ ವಿರುದ್ಧ ನಗರ ಜಿಲ್ಲಾಡಳಿತ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಶವಂತಪುರ, ವರ್ತೂರು, ಜಿಗಣಿ, ಸರ್ಜಾಪುರ ಹೋಬಳಿಯಲ್ಲಿ ಒತ್ತುವರಿ ಮಾಡಿಕೊಂಡಿದ್ದ ₹68.61 ಕೋಟಿ ಮೌಲ್ಯದ 9 ಎಕರೆ ಸರ್ಕಾರಿ ಜಮೀನನ್ನು ಬೆಂಗಳೂರು ನಗರ ಜಿಲ್ಲಾಡಳಿತ ವಶಕ್ಕೆ ಪಡೆದಿದೆ.

ಜಿಲ್ಲಾಧಿಕಾರಿ ಜಿ.ಜಗದೀಶ್ ನೇತೃತ್ವದಲ್ಲಿ ಶುಕ್ರವಾರ ಕಂದಾಯ ಇಲಾಖೆ ಅಧಿಕಾರಿಗಳ ತಂಡ ಕಾರ್ಯಾಚರಣೆ ನಡೆಸಿ ಒತ್ತುವರಿಯಾಗಿದ್ದ ಗೋಕಟ್ಟೆ, ಕುಂಟೆ, ಗೋಮಾಳ, ಖರಾಬು, ಕೆರೆ ಜಾಗಗಳನ್ನು ವಶಕ್ಕೆ ಪಡೆಯಿತು.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕಾಚೋಹಳ್ಳಿ ಗ್ರಾಮದ ಸರ್ವೆ ನಂಬರ್ 43ರ 1.20 ಎಕರೆ ಗೋಮಾಳ ತೆರವು ಮಾಡಿದ್ದು, ಇದರ ಅಂದಾಜು ಮೌಲ್ಯ ₹12 ಕೋಟಿ. ಇದಲ್ಲದೇ ಯಶವಂತಪುರ ಹೋಬಳಿಯ ಕಾಚೋಹಳ್ಳಿ ಗ್ರಾಮದ ಸ.ನಂ. 71ರ 6.08 ಎಕರೆ ಖರಾಬು ಕೆರೆ ಒತ್ತುವರಿ ತೆರವುಗೊಳಿಸಲಾಗಿದೆ. ಇದರ ಅಂದಾಜು ಮೌಲ್ಯ ₹50 ಕೋಟಿ.

ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಕೊಡತಿ ಗ್ರಾಮದ ಸ.ನಂ.184ರಲ್ಲಿರುವ ಅಂದಾಜು ₹1.50 ಕೋಟಿ ಮೌಲ್ಯದ 5 ಗುಂಟೆ ಗೋಕಟ್ಟೆ ವಶಕ್ಕೆ ಪಡೆಯಲಾಗಿದೆ.

ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಎಸ್. ಮೇಡಹಳ್ಳಿ ಗ್ರಾಮದ ಸ.ನಂ.19ರ 8 ಗುಂಟೆ ಒತ್ತುವರಿ ತೆರವುಗೊಳಿಸಿದ್ದು, ಇದರ ಅಂದಾಜು ಮೌಲ್ಯ ₹40 ಲಕ್ಷ. ಜಿಗಣಿ ಹೋಬಳಿಯ ಮಹಾಂತಲಿಂಗಪುರ ಗ್ರಾಮದ ಸ.ನಂ.56ರ 10 ಗುಂಟೆ ಗೋಮಾಳ ವಶಪಡಿಸಿಕೊಂಡಿದ್ದು, ಇದರ ಅಂದಾಜು ಮೌಲ್ಯ ₹46 ಲಕ್ಷವಾಗಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಅಜ್ಜನಹಳ್ಳಿ ಗ್ರಾಮದ ಸ.ನಂ. 111ರ 5 ಗುಂಟೆ ಖರಾಬು ಒತ್ತುವರಿ ತೆರವುಗೊಳಿಸಿದ್ದು, ಇದರ ಮೌಲ್ಯ ₹25 ಲಕ್ಷ. ಬೇಗೂರು ಹೋಬಳಿಯ ಚಿಕ್ಕತೋಗೂರು ಗ್ರಾಮದ ಸ.ನಂ.18ರ ₹1.50 ಕೋಟಿ ಮೌಲ್ಯದ 3 ಗುಂಟೆ ಗೋಮಾಳ ಒತ್ತುವರಿ ತೆರವುಗೊಳಿಸಲಾಗಿದೆ.

ಯಲಹಂಕ ಹೋಬಳಿಯ ಲಕ್ಷ್ಮಿಸಾಗರ ಗ್ರಾಮದ ಸ.ನಂ. 35/1ರ 22 ಗುಂಟೆ ಖರಾಬು ಒತ್ತುವರಿ ತೆರವುಗೊಳಿಸಿದ್ದು, ಅಂದಾಜು ಮೌಲ್ಯ ₹2.50 ಕೋಟಿ ಎಂದು ಪ್ರಕಟಣೆ ತಿಳಿಸಿದೆ.

ಮುಖ್ಯಾಂಶಗಳು

- 9 ಎಕರೆ ಸರ್ಕಾರಿ ಜಮೀನು ವಶಕ್ಕೆ
- ಡಿ.ಸಿ ನೇತೃತ್ವದಲ್ಲಿ ಕಾರ್ಯಾಚರಣೆ

ಶಾಂತಿನಗರ ವಿಧಾನಸಭಾ ಕ್ಷೇತ್ರಕ್ಕೆ ಅನುದಾನ ಹಂಚಿಕೆ

ಬಿಡಿಎ ಅಧ್ಯಕ್ಷರ ಕ್ಷೇತ್ರಕ್ಕೆ ₹55.65 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶಾಂತಿನಗರ ವಿಧಾನಸಭಾ ಕ್ಷೇತ್ರಕ್ಕೆ ₹55.65 ಕೋಟಿ ಅನುದಾನ ಹಂಚಿಕೆ ಮಾಡಿದೆ. ಈ ಕ್ಷೇತ್ರವನ್ನು ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಎನ್.ಎ. ಹ್ಯಾರಿಸ್ ಪ್ರತಿನಿಧಿಸುತ್ತಿದ್ದಾರೆ.

ವಿಶೇಷವೆಂದರೆ, ಈ ಕಾಮಗಾರಿಗಳನ್ನು ಮಹಾನಗರ ಪಾಲಿಕೆಯ ಸುಪರ್ದಿಯಲ್ಲಿರುವ ಬಡಾವಣೆಗಳಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿದೆ.

ಸಾಮಾನ್ಯವಾಗಿ ಪ್ರಾಧಿಕಾರ ತನ್ನ ಸಂಪನ್ಮೂಲಗಳನ್ನು ಹೊಸ ಬಡಾವಣೆಗಳ ನಿರ್ಮಾಣ ಹಾಗೂ ಬಡಾವಣೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುತ್ತದೆ. ಆದರೆ, ಪ್ರಾಧಿಕಾರವು ನಗರದ ಹೃದಯಭಾಗದಲ್ಲಿರುವ ಕ್ಷೇತ್ರಕ್ಕೆ ಅನುದಾನ ಹಂಚಿಕೆ ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ.

ದೊಮ್ಮಲೂರು 1ನೇ ಹಂತದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಹೆಚ್ಚುವರಿ ತರಗತಿ ಕೊಠಡಿಗಳ ನಿರ್ಮಾಣ, ದೊಮ್ಮಲೂರು 2ನೇ ಹಂತದಲ್ಲಿ ಸರ್ಕಾರಿ ಕಾಲೇಜಿನಲ್ಲಿ ಕಟ್ಟಡ ನಿರ್ಮಾಣ, ಜೋಗುಪಾಳ್ಯದಲ್ಲಿ ಕ್ರೀಡಾಂಗಣ ಮತ್ತು ಆಸ್ಟಿನ್ ಟೌನ್‌ನ ಆಟದ ಮೈದಾನದಲ್ಲಿ ಫುಟ್‌ಬಾಲ್ ಕ್ರೀಡಾಂಗಣ ನಿರ್ಮಾಣ ಈ ಯೋಜನೆಗಳಲ್ಲಿ ಸೇರಿವೆ.

ಈ ನಾಲ್ಕು ಕಾಮಗಾರಿಗಳಿಗೆ ಪ್ರತಿಯೊಂದಕ್ಕೂ ಸುಮಾರು ₹11 ಕೋಟಿಯಿಂದ ₹20 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಪಾಲಿಕೆ ಸಹ ಶಾಲಾ ಕಟ್ಟಡಗಳ ನವೀಕರಣ ಮತ್ತು ಆಟದ ಮೈದಾನಗಳ ನಿರ್ವಹಣೆಗೆ ಬಜೆಟ್‌ನಲ್ಲಿ ಅನುದಾನ ಮೀಸಲಿಡುತ್ತದೆ.

ಆಸ್ಟಿನ್ ಟೌನ್‌ನ ನಿವಾಸಿ, ವಕೀಲ ಕ್ಲಿಫ್ಟನ್ ಡಿ'ರೋಸಾರಿಯೋ ಮಾತನಾಡಿ, 'ಬಿಡಿಎ ಅನುದಾನ ಹಂಚಿಕೆಯಲ್ಲಿ ಪಾರದರ್ಶಕತೆ ಇಲ್ಲ. ನಾವು ಅಭಿವೃದ್ಧಿಯ ವಿರೋಧಿಗಳಲ್ಲ, ಆದರೆ, ಫುಟ್‌ಬಾಲ್ ಮೈದಾನವನ್ನು ಕ್ರೀಡಾಂಗಣವನ್ನಾಗಿ ಪರಿವರ್ತಿಸುವುದಕ್ಕೆ ವಿರೋಧವಿದೆ. ಈ ಯೋಜನೆ ಕೈಬಿಟ್ಟು ಆಸ್ಟಿನ್ ಟೌನ್ ಮೈದಾನವನ್ನು ಹಾಗೆಯೇ ಉಳಿಸಬೇಕು. ಅಭಿವೃದ್ಧಿ ಎಂದರೆ 100 ವರ್ಷಗಳ ಇತಿಹಾಸವನ್ನು ಅಳಿಸುವುದಲ್ಲ. ಈಗಾಗಲೇ ಒಂದು ಕಿಲೋ ಮೀಟರ್ ದೂರದಲ್ಲಿ ಮತ್ತೊಂದು ಫುಟ್‌ಬಾಲ್ ಕ್ರೀಡಾಂಗಣವಿದೆ' ಎಂದು ಹೇಳಿದರು.

ಬಿಡಿಎ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡ ಬಡಾವಣೆ, ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ, ಅರ್ಕಾವತಿ ಬಡಾವಣೆ ಮತ್ತು ಇತರೆ ಬಡಾವಣೆಗಳಲ್ಲಿ ಮೂಲಸೌಕರ್ಯ ಕೊರತೆ ಬಗ್ಗೆ ನಾಗರಿಕರು ಹಲವು ಬಾರಿ ದೂರು ನೀಡಿದ್ದಾರೆ. ಅಲ್ಲದೇ ಪೆರಿಫೆರಲ್ ರಿಂಗ್ ರೋಡ್ (ಪಿಆರ್‌ಆರ್1) ಮತ್ತು ಶಿವರಾಮ ಕಾರಂತ ಬಡಾವಣೆ ಯೋಜನೆಗೆ ಭೂಮಿ ಬಿಟ್ಟುಕೊಟ್ಟಿರುವ ಸಂತ್ರಸ್ತರು ಪರಿಹಾರಕ್ಕೆ ಕಾಯುತ್ತಿದ್ದಾರೆ.

ಮುಖ್ಯಾಂಶಗಳು

- ಪಾಲಿಕೆ ಸುಪರ್ದಿಯ ಬಡಾವಣೆಗಳಲ್ಲಿ ಕಾಮಗಾರಿ
- ಚರ್ಚೆಗೆ ಗ್ರಾಸವಾದ ಅನುದಾನ ಹಂಚಿಕೆ
- ಕಾಮಗಾರಿಗೆ ₹11– 20ಕೋಟಿ ಖರ್ಚು ಅಂದಾಜು

ಈಜಿಪುರ ಮೇಲ್ಸೇತುವೆ ಕಾಮಗಾರಿ ಯಾವಾಗ ಮುಗಿಯಲಿದೆ: ಆಯುಕ್ತರಿಗೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

'ಬೆಂಗಳೂರು ಮೂಲಸೌಕರ್ಯ' ಸಂವಾದದಲ್ಲಿ ಆರ್. ಗಾಯತ್ರಿ ಶೆಟ್ಟಿ, ಉಮಾ ರೆಡ್ಡಿ, ಮಹೇಶ್ವರ್ ರಾವ್, ಎಲ್.ಕೆ. ಅತೀಕ್, ನರೇಶ್ ನರಸಿಂಹನ್, ದಿನೇಶ್ ವರ್ಮಾ ಭಾಗವಹಿಸಿದ್ದರು

ಬೆಂಗಳೂರು: 'ಶಿಲಾಯುಗದಿಂದ ನಡೆಯುತ್ತಿರುವ ಈಜಿಪುರ ಮೇಲ್ಸೇತುವೆ ಕಾಮಗಾರಿ ಮುಗಿಯುತ್ತದೆಯೇ? ಮೇಲ್ಸೇತುವೆ ಅಂತ್ಯವಾಗುವ ಕಡೆ ಭೂಸ್ವಾಧೀನವಾಗದೆ ಕಾಮಗಾರಿ ಆರಂಭಿಸಿದ್ದು ಏಕೆ? ಮೆಟ್ರೊ ಬರದಂತೆ ತಡೆದಿರುವ ಈ ಮೇಲ್ಸೇತುವೆ ಉಪಯೋಗ ಆಗುವುದೇ? ಟ್ರಂಪ್ ಮಧ್ಯಸ್ಥಿಕೆ ವಹಿಸಿದ್ದು ನಿಜವೇ?'

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಟೀರಿಯರ್ ಡಿಸೈನರ್ಸ್ ಆಯೋಜಿಸಿದ್ದ 'ಡಿಸೈನೂರು 5.0'ನಲ್ಲಿ 'ಬೆಂಗಳೂರು ಮೂಲಸೌಕರ್ಯ' ಸಂವಾದ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಎಲ್.ಕೆ. ಅತೀಕ್ ಸೇರಿದಂತೆ ತಜ್ಞರು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರಿಗೆ ಕೇಳಿದ ಪ್ರಶ್ನೆಗಳಿವು.

'ಒಂದು ಮೇಲ್ಸೇತುವೆ ಆರಂಭಿಸುವ ಮೊದಲು ಅದಕ್ಕೆ ಬೇಕಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ಎಂಜಿನಿಯರ್‌ಗಳಿಗೆ ಅನಿಸುವುದಿಲ್ಲವೇ? ಮೇಲ್ಸೇತುವೆಯನ್ನು ಶಿಲಾಯುಗದಿಂದ ನಡೆಸುತ್ತಿದ್ದೀರಿ, ಅದು ಎಲ್ಲಿ ಅಂತ್ಯಗೊಳ್ಳುತ್ತದೆ? ಇಲ್ಲಿ ಸಾಧ್ಯವಾಗದಿದ್ದರೆ ಸಿಲ್ಕ್‌ಬೋರ್ಡ್‌ಗೆ ತೆಗೆದುಕೊಂಡು ಹೋಗಿಬಿಡಿ' ಎಂದು ವೆಂಕಟರಾಮನ್ ಅಸೋಸಿಯೇಟ್ಸ್‌ನ ವ್ಯವಸ್ಥಾಪಕ ಪಾಲುದಾರ ನರೇಶ್ ನರಸಿಂಹನ್ ಪ್ರಶ್ನಿಸಿದರು.

'ಕಾನೂನು ತೊಡಕಾಗಿದ್ದು, ಒಂದು ಭಾಗದಲ್ಲಿ ರ‍್ಯಾಂಪ್ ಕೆಲಸ ನಡೆಯುತ್ತಿದೆ. ಮುಂದಿನ ಜೂನ್–ಜುಲೈನಲ್ಲಿ ಈಜಿಪುರ ಮೇಲ್ಸೇತುವೆ ಕಾಮಗಾರಿ ಮುಗಿಯಲಿದೆ' ಎಂದು ಮಹೇಶ್ವರ್ ರಾವ್ ಉತ್ತರಿಸಿದಾಗ, 'ಯಾವ ವರ್ಷ, ಮತ್ತೊಮ್ಮೆ ಹೇಳಿ' ಎಂದು ಅವರನ್ನು ಪ್ರಶ್ನಿಸಲಾಯಿತು.

'ನಗರದ ಪ್ರತಿಯೊಂದು ಪ್ರಮುಖ ಸ್ಥಳದಲ್ಲೂ 'ನೆರೆಹೊರೆ ಪ್ರದೇಶ'ವನ್ನು ಅಭಿವೃದ್ಧಿ ಮಾಡಬೇಕು. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡಬೇಕು. ಸಾರ್ವಜನಿಕ ಸ್ಥಳಗಳಾದ ಉದ್ಯಾನ ಹಾಗೂ ಮೈದಾನಗಳಿಗೆ ಮುಕ್ತ ಪ್ರವೇಶ ನೀಡಬೇಕು. ಪ್ರವಾಸಿಗರನ್ನು ಆಕರ್ಷಿಸುವ ಸ್ಥಳಗಳನ್ನು ನಗರದಲ್ಲಿ ನಿರ್ಮಿಸಬೇಕು. ಒಂದು ರಸ್ತೆಯಲ್ಲಿ ಯಾವುದಾದರೊಂದು ದಿನ ವಾಹನ ಸಂಚಾರ ನಿಲ್ಲಿಸಿ, ಆಚರಣೆಗಳಿಗೆ ಅನುವು ಮಾಡಿಕೊಡಬೇಕು' ಎಂದು ಬೆಂಗಳೂರು ಬಿಸಿನೆಸ್ ಕಾರಿಡಾರ್ (ಬಿಬಿಸಿ) ವಿಶೇಷ ಉದ್ದೇಶ ಘಟಕದ ಅಧ್ಯಕ್ಷರೂ ಆಗಿರುವ ಎಲ್.ಕೆ. ಅತೀಕ್ ಹೇಳಿದರು.

'ನಗರದಲ್ಲಿ ಒಂದು ಚರ್ಚ್ ಸ್ಟ್ರೀಟ್, ಒಂದು ಉತ್ತಮ ಫುಟ್‌ಪಾತ್ ಇದ್ದರೆ ಸಾಲದು. ಪ್ರತಿ ಸ್ಥಳದಲ್ಲೂ ನಗರವನ್ನು ಬಿಂಬಿಸುವ ಅಭಿವೃದ್ಧಿಗಳಿರಬೇಕು. ಬೀದಿದೀಪ, ಪಾದಚಾರಿಗಳು ಒಂದೊಂದು ಕಡೆ ಒಂದು ರೀತಿ ಇದ್ದರೆ, ನಗರದ ಐಕಾನ್ ಆಗಲು ಸಾಧ್ಯವಿಲ್ಲ' ಎಂದು ನರೇಶ್ ಅಭಿಪ್ರಾಯಪಟ್ಟರು.

'ಕ್ಷಿಪ್ರ ಬೆಳವಣಿಗೆಯಿಂದ ಮುಂದಿನ 30 ವರ್ಷಗಳಲ್ಲಿ ಬೆಂಗಳೂರಿನ ಜನಸಂಖ್ಯೆ 3.3 ಕೋಟಿಗೆ ಮುಟ್ಟುವ ನಿರೀಕ್ಷೆ ಇದ್ದು, ಮೂಲ ಸೌಕರ್ಯ ಸೇರಿದಂತೆ ನಿರ್ಮಾಣ ಕಾರ್ಯಗಳು ಹೆಚ್ಚಾಗಲಿವೆ. ಇದರಿಂದ ದೂಳು ಹೆಚ್ಚಾಗುತ್ತದೆ. ಮಾಲಿನ್ಯರಹಿತ ಗುಣಮಟ್ಟದ ಗಾಳಿ ಇರುವಂತೆ ನೋಡಿಕೊಳ್ಳಲು ಹಲವು ಪ್ರಯತ್ನ ಮಾಡಲಾಗುತ್ತಿದೆ. ಕಸವನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಿ, ಸ್ವಚ್ಛತೆಯನ್ನು ಕಾಪಾಡಲು ಕಾರ್ಯಾಚರಣೆ ನಡೆಯುತ್ತಿದೆ' ಎಂದು ಮಹೇಶ್ವರ್ ರಾವ್ ಹೇಳಿದರು.

ಗಾಯತ್ರಿ ನಮಿತ ಆರ್ಕಿಟೆಕ್ಟ್ಸ್ ಸಹಾಯಕ ಸಂಸ್ಥಾಪಕಿ ಆರ್. ಗಾಯತ್ರಿ ಶೆಟ್ಟಿ ಸಂವಾದ ನಡೆಸಿಕೊಟ್ಟರು. ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ, ಎಸಿಇ ಗ್ರೂಪ್ ಆಫ್ ಆರ್ಕಿಟೆಕ್ಟ್ಸ್ ವ್ಯವಸ್ಥಾಪಕ ನಿರ್ದೇಶಕ ದಿನೇಶ್ ವರ್ಮಾ ಭಾಗವಹಿಸಿದ್ದರು.

ಕೊಬ್ಬರಿ ಎಂಎಸ್‌ಪಿ ₹400 ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: 2026ರ ಹಂಗಾಮಿಗೆ ಕೊಬ್ಬರಿಯ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಶುಕ್ರವಾರ ಅನುಮೋದನೆ ನೀಡಿದೆ.

ಮಿಲ್ಲಿಂಗ್ (ಚಿಕ್ಕ ಚಿಕ್ಕ ತುಂಡು) ಕೊಬ್ಬರಿಯ ಎಂಎಸ್‌ಪಿಯನ್ನು ಕ್ವಿಂಟಲ್‌ಗೆ ₹445 ಹೆಚ್ಚಿಸಿ ₹12,027ಕ್ಕೆ ನಿಗದಿಪಡಿಸಲಾಗಿದೆ. ಉಂಡೆ ಕೊಬ್ಬರಿಯ ಎಂಎಸ್‌ಪಿಯನ್ನು ಕ್ವಿಂಟಲ್‌ಗೆ ₹400 ಹೆಚ್ಚಿಸಿ ₹12,500ಕ್ಕೆ ನಿಗದಿ ಮಾಡಲಾಗಿದೆ. ತೆಂಗಿನ ಬೆಳೆಗಾರರಿಗೆ ಉತ್ತಮ ಲಾಭ ಖಚಿತಪಡಿಸಲು ಮತ್ತು ತೆಂಗಿನ ಉತ್ಪನ್ನಗಳಿಗೆ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಉತ್ಪಾದನೆ ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸಿನ ಮೇರೆಗೆ ಕೊಬ್ಬರಿಯ 'ನ್ಯಾಯಯುತ ಮತ್ತು ಸರಾಸರಿ ಗುಣಮಟ್ಟ'ಕ್ಕೆ ಎಂಎಸ್‌ಪಿ ನಿಗದಿಪಡಿಸಲಾಗಿದೆ. ಬೆಂಬಲ ಬೆಲೆ ಯೋಜನೆಯಡಿ ರಾಷ್ಟ್ರೀಯ ಕೃಷಿ ಸಹಕಾರಿ ಮಾರುಕಟ್ಟೆ ಒಕ್ಕೂಟ (ನಾಫೆಡ್) ಹಾಗೂ ರಾಷ್ಟ್ರೀಯ ಸಹಕಾರಿ ಗ್ರಾಹಕರ ಒಕ್ಕೂಟವು (ಎನ್‌ಸಿಸಿಎಫ್) ಕೇಂದ್ರ ನೋಡಲ್ ಏಜೆನ್ಸಿಗಳಾಗಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತವೆ ಎಂದು ವೈಷ್ಣವ್ ಹೇಳಿದರು.

2014ರಿಂದ ಕೇಂದ್ರ ಸರ್ಕಾರವು ಮಿಲ್ಲಿಂಗ್ ಕೊಬ್ಬರಿಯ ಎಂಎಸ್‌ಪಿಯನ್ನು ಗಣನೀಯವಾಗಿ ಹೆಚ್ಚಿಸಿದೆ. 2014ರ ಮಾರುಕಟ್ಟೆ ಋತುವಿನಲ್ಲಿ ಕ್ವಿಂಟಲ್‌ಗೆ ಎಂಎಸ್‌ಪಿ ₹5,250 ಇತ್ತು. ದಶಕದಲ್ಲಿ ಬೆಂಬಲ ಬೆಲೆ ಶೇ 129ರಷ್ಟು ಜಾಸ್ತಿ ಆಗಿದೆ. ಉಂಡೆ ಕೊಬ್ಬರಿಯ ಬೆಲೆಯು ಕ್ವಿಂಟಲ್‌ಗೆ ₹5,500ರಿಂದ ₹12,500ಕ್ಕೆ ಏರಿಕೆಯಾಗಿದ್ದು, ಶೇ 127ರಷ್ಟು ಹೆಚ್ಚಳವಾಗಿದೆ ಎಂದು ಮಾಹಿತಿ ನೀಡಿದರು.

ಬೆಳೆಗಾರರಿಗೆ ಲಾಭದಾಯಕ ಬೆಲೆ ಒದಗಿಸುವ ಸಲುವಾಗಿ ಸರ್ಕಾರವು 2018-19ರ ಬಜೆಟ್‌ನಲ್ಲಿ, ಎಲ್ಲ ಬೆಳೆಗಳ ಎಂಎಸ್‌ಪಿಯನ್ನು ಅಖಿಲ ಭಾರತ ಸರಾಸರಿ ಉತ್ಪಾದನಾ ವೆಚ್ಚದ ಕನಿಷ್ಠ 1.5 ಪಟ್ಟು ಮಟ್ಟದಲ್ಲಿ ನಿಗದಿಪಡಿಸಲಾಗುವುದು ಎಂದು ಘೋಷಿಸಿತ್ತು ಎಂದು ಅವರು ನೆನಪಿಸಿದರು.

ದೇಶದಲ್ಲಿ ಕೊಬ್ಬರಿ ಮಾರುಕಟ್ಟೆ ಋತುವು ಸಾಮಾನ್ಯವಾಗಿ ಜನವರಿಯಿಂದ ಏಪ್ರಿಲ್‌ವರೆಗೆ ಇರುತ್ತದೆ. ಕರ್ನಾಟಕ, ತಮಿಳುನಾಡು ಮತ್ತು ಕೇರಳದಲ್ಲಿ ಅಧಿಕ ಪ್ರಮಾಣದಲ್ಲಿ ಕೊಬ್ಬರಿ ಉತ್ಪಾದನೆ ಆಗುತ್ತದೆ.

'ಮನರೇಗಾ' ಮರುನಾಮಕರಣಕ್ಕೆ ಒಪ್ಪಿಗೆ

ಕೇಂದ್ರ ಸಚಿವ ಸಂಪುಟವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು (ಮನರೇಗಾ) 'ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ' (ಪಿಬಿಜಿಆರ್‌ವೈ) ಎಂದು ಮರು ನಾಮಕರಣ ಮಾಡಲು ಶುಕ್ರವಾರ ಅನುಮೋದನೆ ನೀಡಿದೆ.

ಗ್ರಾಮೀಣ ಭಾಗದ ಬಡಜನರಿಗೆ ವರ್ಷದಲ್ಲಿ 125 ದಿನಗಳು ಕೆಲಸವನ್ನು ಖಾತರಿಪಡಿಸಲು ಸರ್ಕಾರ 'ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಖಾತರಿ' ಮಸೂದೆಯನ್ನು ತರಲಿದೆ. ಕನಿಷ್ಠ ವೇತನವನ್ನು ದಿನಕ್ಕೆ ₹240ಕ್ಕೆ ಪರಿಷ್ಕರಿಸುವ ಪ್ರಸ್ತಾವವನ್ನೂ ಇದು ಒಳಗೊಂಡಿದೆ. ಈ ಯೋಜನೆಗಾಗಿ ಸರ್ಕಾರ ₹1.51 ಲಕ್ಷ ಕೋಟಿ ಹಂಚಿಕೆ ಮಾಡಲಿದೆ ಎಂದು ಮೂಲಗಳು ತಿಳಿಸಿವೆ. ಈ ಯೋಜನೆಯನ್ನು 2005ರಲ್ಲಿ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ' ಎಂದು ಪರಿಚಯಿಸಲಾಯಿತು. ನಂತರ 2009ರಲ್ಲಿ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆ' ಎಂದು ಮರು ನಾಮಕರಣ ಮಾಡಲಾಗಿತ್ತು.



ಮತ ಕಳವು ವಿರುದ್ಧ ಪ್ರತಿಭಟನೆ: ಡಿಕೆಶಿ ಇಂದು ದೆಹಲಿಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮತ ಕಳ್ಳತನ ವಿರುದ್ಧದ ಹೋರಾಟದಲ್ಲಿ ಭಾಗವಹಿಸಲು ಶನಿವಾರ (ಡಿ.13) ದೆಹಲಿಗೆ ತೆರಳುತ್ತಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.



ಸುದ್ದಿಗಾರರ ಜತೆ ಮಾತನಾಡಿದ ಅವರು, 'ಲೋಕಸಭೆ ಚುನಾವಣೆ ಸಮಯದಲ್ಲಿ ಆಗಿರುವ ಮತ ಕಳ್ಳತನವನ್ನು ರಾಹುಲ್ ಗಾಂಧಿ ಅವರು ಸಾಕ್ಷ್ಯಸಹಿತ ಜನರ ಮುಂದಿಟ್ಟಿದ್ದಾರೆ. ಚುನಾವಣಾ ಆಯೋಗವು ನಿರ್ದಿಷ್ಟ ರಾಜಕೀಯ ಪಕ್ಷದ ಅಸ್ತ್ರವಾಗಿದ್ದು, ನಾವು ಅದರ ವಿರುದ್ಧ ಹೋರಾಟ ಮಾಡುತ್ತಿದ್ದೇವೆ' ಎಂದರು.

'2023ರಲ್ಲೇ ನಾವು ಚಿಲುಮೆ ಅಕ್ರಮದ ಮೂಲಕ ಮತ ಕಳ್ಳತನವನ್ನು ಪತ್ತೆ ಮಾಡಿದ್ದೆವು. ನಾನು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೆಲ್ಲರೂ ಚುನಾವಣಾ ಆಯೋಗಕ್ಕೆ ದೂರು ನೀಡಿ ಹೋರಾಟ ಮಾಡಿದೆವು. ಮತಕಳವು ವಿಚಾರವಾಗಿ ರಾಜ್ಯದಲ್ಲಿ ನಡೆಸಿದ ಸಹಿ ಸಂಗ್ರಹ ಅಭಿಯಾನದಲ್ಲಿ 1.43 ಕೋಟಿ ಸಹಿ ಸಂಗ್ರಹವಾಗಿದೆ' ಎಂದರು.

'ಮಾಧ್ಯಮ ಅಕಾಡೆಮಿ ಸಿಬ್ಬಂದಿ ಪಿಂಚಣಿಗೆ ಅರ್ಹರಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಾಧ್ಯಮ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ನೌಕರರು, ಸರ್ಕಾರಿ ನೌಕರರಾಗಿದ್ದರೂ ಪಿಂಚಣಿ ಪಡೆಯಲು ಅರ್ಹರಲ್ಲ' ಎಂದು ಹೈಕೋರ್ಟ್ ತೀರ್ಪು ನೀಡಿದೆ.

'ಅರ್ಜಿದಾರರಿಗೆ ಪಿಂಚಣಿ ಮತ್ತು ಭತ್ಯೆ ಬಿಡುಗಡೆ ಮಾಡಬೇಕು' ಎಂದು ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಕನ್ನಡ ಸಂಸ್ಕೃತಿ ಹಾಗೂ ಮಾಹಿತಿ ಇಲಾಖೆ ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಅಕಾಡೆಮಿ ಮತ್ತು ಮಂಡಳಿಯ ಸಿಬ್ಬಂದಿ ಸರ್ಕಾರಿ ಸಿಬ್ಬಂದಿ ಏನಿದ್ದರೂ ಸಂಬಂಧಿತ ನಿಯಮಗಳ ಅಡಿಯಲ್ಲಿ ಅವರ ಸೇವೆಯನ್ನು ಪಿಂಚಣಿಗೆ ಅರ್ಹಗೊಳಿಸುವ ಯಾವುದೇ ನಿಬಂಧನೆಗಳಿಲ್ಲ. ಆದಾಗ್ಯೂ, ಅರ್ಜಿದಾರರ ಉದ್ಯೋಗವನ್ನು ಪಿಂಚಣಿಗೆ ಅರ್ಹ ಎಂದು ಪರಿಗಣಿಸಬೇಕೊ ಅಥವಾ ಹೇಗೆ ಎಂಬ ನಿರ್ಧಾರ ಕೈಗೊಳ್ಳುವುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಈ ಸಂಬಂಧ ನಾಲ್ಕು ತಿಂಗಳ ಒಳಗಾಗಿ ಮಾಧ್ಯಮ ಅಕಾಡೆಮಿ ಮತ್ತು ಮದ್ಯಪಾನ ಸಂಯಮ ಮಂಡಳಿಯ ವಾದವನ್ನು ಆಲಿಸಿದ ನಂತರ ಮಾಹಿತಿಯುಕ್ತ ಆದೇಶವನ್ನು ಹೊರಡಿಸಬಹುದು' ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ.

ತುಂಗಭದ್ರಾ ಅಣೆಕಟ್ಟೆಯ ಕ್ರಸ್ಟ್‌ಗೇಟ್‌ನ ಭಾಗವನ್ನು ತುಂಡರಿಸಲಾಯಿತು

24ನೇ ಗೇಟ್ ತೆರವು ಕಾರ್ಯ ಆರಂಭ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 24ನೇ ಕ್ರಸ್ಟ್ ಗೇಟ್ ತೆರವು ಕಾರ್ಯ ಶುಕ್ರವಾರ ಆರಂಭವಾಗಿದ್ದು, ಈ ಗೇಟ್‌ನ 10 ಅಡಿ ಭಾಗವನ್ನು ಗ್ಯಾಸ್ ಕಟ್ಟರ್ ಮೂಲಕ ಕತ್ತರಿಸಲಾಯಿತು. ಈಗಾಗಲೇ 18 ಮತ್ತು 20ನೇ ಗೇಟ್‌ಗಳ 10 ಅಡಿಯಷ್ಟು ಅಗಲದ ಹಲಗೆಯನ್ನು ಕತ್ತರಿಸಿ ತೆಗೆಯಲಾಗಿದೆ.

ಕಾಲುವೆಗಳಿಗೆ ಈಗ 10,972 ಕ್ಯೂಸೆಕ್ ಮತ್ತು ನದಿಗೆ 5,900 ಕ್ಯೂಸೆಕ್ ನೀರು ಹರಿಯುತ್ತಿದೆ. ಈ ಮೂಲಕ ಪ್ರತಿದಿನ 1.8 ಟಿಎಂಸಿ ಅಡಿಯಷ್ಟು ನೀರು ಜಲಾಶಯದಿಂದ ಖಾಲಿಯಾಗುತ್ತಿದೆ. ಸದ್ಯ ಜಲಾಶಯದಲ್ಲಿ 59.85 ಟಿಎಂಸಿ ಅಡಿ ನೀರು ಸಂಗ್ರಹವಿದೆ. ಈ ಸಂಗ್ರಹ ಮಟ್ಟ 43 ಟಿಎಂಸಿ ಅಡಿಗೆ ಕುಸಿದ ತಕ್ಷಣ ಹಳೆ ಗೇಟ್‌ಗಳ ಸ್ಥಳದಲ್ಲಿ ಹೊಸ ಗೇಟ್ ಅಳವಡಿಕೆ ಆರಂಭವಾಗಲಿದೆ. ಬಹುತೇಕ ಡಿಸೆಂಬರ್ 20ರ ನಂತರ ಇದಕ್ಕೆ ಚಾಲನೆ ಸಿಗಬಹುದು ಎಂದು ಹೇಳಲಾಗಿದೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರ.ಪ್ರಾ.

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/135/2025-26 **ಪ್ರಕಟಣೆ** ದಿನಾಂಕ: 12.12.2025

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಸತಿ"** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀಮತಿ ದೀಪಾ ಪ್ರಶಾಂತ್ ಕೋಂ. ಪ್ರಶಾಂತ್ ಎಸ್.ಎನ್., ಶ್ರೀ ಎಸ್. ಅಜಯ್ ಬಿನ್ ಹೆಚ್. ಶ್ರೀನಿವಾಸ್, ಶ್ರೀ ನಾರಾಯಣಸ್ವಾಮಿ ಎಲ್‌ಎನ್. ಬಿನ್ ನಾರಾಯಣಪ್ಪ, 22ನೇ ವಾರ್ಡ್, ಶಾಂತಿನಗರ್, ದೇವನಹಳ್ಳಿ ಟೌನ್, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.	ದೇವನಹಳ್ಳಿ	ಚನ್ನರಾಯಪಟ್ಟಣ	ಚನ್ನಹಳ್ಳಿ	9/3 9/4	1–08 2–15½	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಸದರಿ ಪ್ರದೇಶದಲ್ಲಿ ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ, ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ. ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ, ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/4434/ಆಕಾರ್/2025–26

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/ಸಾ.ಪ್ರಕಟಣೆ/2025–26 ದಿನಾಂಕ: 12.12.2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 4(ಎ) (1)ರನ್ವಯ ಸರ್ಕಾರದಿಂದ ಅಧಿಸೂಚನೆ ಸಂಖ್ಯೆ:ನಅಇ 36 ಬಿಎಂಆರ್ 2016, ದಿನಾಂಕ: 24.06.2016ರಂತೆ 'ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/36/ಬಿಎಂಆರ್/2014 ದಿನಾಂಕ: 21.10.2016ರ ಅಧಿಸೂಚನೆಯಲ್ಲಿ ಕಲಂ 4(ಸಿ)(1)ರ ಅಡಿಯಲ್ಲಿ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶವು ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ 47 ಗ್ರಾಮಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ 65 ಗ್ರಾಮಗಳು, ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ 79 ಗ್ರಾಮಗಳು, ಹೊಸಕೋಟೆ ತಾಲ್ಲೂಕಿನ 51 ಗ್ರಾಮಗಳು, ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ 32 ಗ್ರಾಮಗಳು, ಮಾಗಡಿ ತಾಲ್ಲೂಕಿನ 36 ಗ್ರಾಮಗಳು ಮತ್ತು ರಾಮನಗರ ತಾಲ್ಲೂಕಿನ 13 ಗ್ರಾಮಗಳು ಒಟ್ಟು 323 ಗ್ರಾಮಗಳನ್ನು ಒಳಗೊಂಡಂತೆ ವಿಸ್ತೀರ್ಣ 96031.39ಹೆಕ್ಟೇರ್ (960.31ಚ.ಕಿ.ಮೀ) ಇರುತ್ತದೆ.

ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ತಯಾರಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಉಪನಗರ ವರ್ತುಲ ರಸ್ತೆ (STRR) ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಯಾವುದೇ ಭೂಪರಿವರ್ತಿತ ಜಮೀನುಗಳನ್ನು ಅಭಿವೃದ್ಧಿಪಡಿಸುವ ಮುಂಚೆ ಅಂದರೆ ವಿನ್ಯಾಸ ಅಭಿವೃದ್ಧಿ ಸಂಬಂಧ ವಿನ್ಯಾಸ ನಕ್ಷೆ, ಕಟ್ಟಡ ನಿರ್ಮಾಣ ಸಂಬಂಧ ಪ್ರಾರಂಭಿಕ ಪ್ರಮಾಣ ಪತ್ರವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ಈ ಪ್ರಾಧಿಕಾರದಿಂದ ಅನುಮೋದನೆ ಪಡೆಯುವುದು ಕಡ್ಡಾಯವಾಗಿರುತ್ತದೆ.

ಆದ್ದರಿಂದ, ಈ ಕೆಳಕಂಡ ಅಂಶಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಅನಧಿಕೃತ ಲೇಔಟ್ ನಿರ್ಮಾಣದಾರರಿಗೆ ಹಾಗೂ ನಿವೇಶನ ಖರೀದಿದಾರರಿಗೆ ಎಚ್ಚರಿಕೆ ನೀಡಲಾಗಿದೆ.

- ಭೂಪರಿವರ್ತಿತ ಜಮೀನುಗಳಲ್ಲಿ ಲೇಔಟ್ ನಿರ್ಮಾಣ/ ವಿನ್ಯಾಸ ಅಭಿವೃದ್ಧಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17ರನ್ವಯ ಈ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಲೇಔಟ್ ನಿರ್ಮಾಣ/ ವಿನ್ಯಾಸ ಅಭಿವೃದ್ಧಿಪಡಿಸುವುದು ಅನಧಿಕೃತ ನಿವೇಶನಗಳನ್ನು ರಚನೆ ಮಾಡಿದಂತೆ ಆಗುತ್ತದೆ. ಅಂತಹ ಅನಧಿಕೃತ ಲೇಔಟ್‌ಗಳನ್ನು ನೆಲಸಮಗೊಳಿಸಿ ಮೂಲ ಸ್ಥಿತಿಗೆ ತರಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(4)ರಲ್ಲಿ ಅವಕಾಶ ಕಲ್ಪಿಸಿರುವುದನ್ನು ಅನಧಿಕೃತ ಲೇಔಟ್ ನಿರ್ಮಾಣಗಾರರ ಗಮನಕ್ಕೆ ತರಲಾಗಿದೆ.
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 76ಎಂ ರ ಪ್ರಕಾರ ನೀವು ಬೇರೆ ಯಾವುದೇ ಅನುಮತಿ ಪಡೆದಿದ್ದರು, ಈ ಪ್ರಾಧಿಕಾರದಿಂದ ಅನುಮತಿ ಪಡೆಯದಿದ್ದರೆ, ಅದು ಕಾನೂನಿನಂತೆ ಪಡೆದ ಅನುಮತಿಯಾಗಿರುವುದಿಲ್ಲ. ಆದ್ದರಿಂದ ಲೇಔಟ್ ನಿರ್ಮಾಣ /ವಿನ್ಯಾಸ ಅಭಿವೃದ್ಧಿ/ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮತಿ ಪಡೆಯಲು ಸೂಚಿಸಲಾಗಿದೆ.
- ಪ್ರಾಧಿಕಾರದ ವ್ಯಾಪ್ತಿಯಲ್ಲಿ ಖಾಸಗಿಯವರು ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕರು ನಿವೇಶನಗಳನ್ನು ಕ್ರಯಕ್ಕೆ ಪಡೆಯುವ ಮೊದಲು ಪ್ರಾಧಿಕಾರದಿಂದ ವಿನ್ಯಾಸ ನಕ್ಷೆ ಅನುಮೋದನೆ ಆಗಿರುವುದನ್ನು ಖಚಿತಪಡಿಸಿಕೊಂಡು ನಿವೇಶನ ಖರೀದಿಸಲು ತಿಳಿಸಲಾಗಿದೆ.
- ಈ ಪ್ರಾಧಿಕಾರದಿಂದ ಅನುಮೋದನೆಯಾಗದ ವಿನ್ಯಾಸಗಳಲ್ಲಿ ಹಾಗೂ ಈ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಪಡೆದು ನಿವೇಶನಗಳನ್ನು ಬಿಡುಗಡೆ ಪಡೆಯದ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕರನ್ನು ಎಚ್ಚರಿಸಲಾಗಿದೆ. ಅಂತಹ ನಿವೇಶನಗಳ ಖರೀದಿಯಿಂದ ಮುಂದೆ ಆಗಬಹುದಾದ ಯಾವುದೇ ತೊಂದರೆಗಳಿಗೆ ನಿವೇಶನ ಖರೀದಿದಾರರೇ ಜವಾಬ್ದಾರರಾಗಿರುತ್ತಾರೆ.
- ಅನುಮೋದಿತ ವಿನ್ಯಾಸದಲ್ಲಿನ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿರುವ ರಸ್ತೆಗಳು, ಉದ್ಯಾನವನ ಹಾಗೂ ಬಯಲು ಪ್ರದೇಶ ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗಗಳು ಸಾರ್ವಜನಿಕ ಆಸ್ತಿಗಳಾಗಿದ್ದು, ಅವುಗಳನ್ನು ಅತಿಕ್ರಮಿಸುವುದು, ಅನಧಿಕೃತವಾಗಿ ಬಳಸುವುದು ಕಾನೂನು ಬಾಹಿರವಾಗಿರುತ್ತದೆ. ಆದಕಾರಣ ಅವುಗಳನ್ನು ಅತಿಕ್ರಮಿಸಿದಲ್ಲಿ ಅಥವಾ ಅನಧಿಕೃತವಾಗಿ ಉಪಯೋಗಿಸುತ್ತಿದ್ದಲ್ಲಿ ಕೂಡಲೇ ಸ್ವಯಂ ತೆರವುಗೊಳಿಸಿಕೊಳ್ಳಲು ತಿಳಿಸಲಾಗಿದೆ.
- ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಸತಿ/ ವಸತಿಯೇತರ ವಿನ್ಯಾಸ ನಕ್ಷೆ ಅನುಮೋದನೆ ಪಡೆಯಲು ಯಾವುದೇ ಕನಿಷ್ಠ ವಿಸ್ತೀರ್ಣದ ಮಿತಿ ಇರುವುದಿಲ್ಲ.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಯಾವುದೇ ಅನಧಿಕೃತ ಕಟ್ಟಡ/ ಬೆಳವಣಿಗೆಗಳ ವಿರುದ್ಧ ಕ್ರಮಕೈಗೊಳ್ಳಲು ಬಿಎಂಆರ್ ವ್ಯಾಪ್ತಿಯಲ್ಲಿ ಸರ್ಕಾರವು ವಿಶೇಷ ಕಾರ್ಯನಿರತ ಪಡೆ (Special Task Force) ರಚಿಸಿದ್ದು, ಸದರಿ ಕಾರ್ಯನಿರತ ಪಡೆಗೆ ಪೊಲೀಸ್ ಅಧೀಕ್ಷಕರು ಮುಖ್ಯಸ್ಥರಾಗಿರುತ್ತಾರೆ ಎಂದು ಸಾರ್ವಜನಿಕರಿಗೆ ಮಾಹಿತಿಗಾಗಿ ತಿಳಿಸಲಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/4421/NR/2025-26

ಮಾಯಾಲೋಕದಿ ಮನ ಗೆದ್ದವರು

ಬೆರಳಂಚಲ್ಲೇ ಲೋಕವನ್ನು ಹಿಡಿದಿಡುವ ಸಾಮಾಜಿಕ ಜಾಲತಾಣಗಳ ಈ ಯುಗದಲ್ಲಿ ಯಾರು ಬೇಕಾದರೂ ದಿಢೀರನೆ ಪ್ರಖ್ಯಾತಿ, ಕುಖ್ಯಾತಿಯನ್ನು ಗಳಿಸಿಬಿಡಬಹುದು. ಎಲ್ಲರ ಕಣ್ಸೆಳೆಯುವ ಬಟ್ಟಲುಗಣ್ಣಿನ ಚಂದದ ಹುಡುಗಿ, ವಕ್ರ ಕಂಠದಿಂದ ಹಾಡುವವರು, ಒಂದೊಳ್ಳೆ ಪ್ರತಿಭೆ, ಯಾರದ್ದೋ ಒಳ್ಳೆಯ ಕೆಲಸ, ಇನ್ಯಾರದ್ದೋ ಕೆಟ್ಟ ಕೆಲಸ... ಹೀಗೆ ನಮ್ಮೆಲ್ಲ ಅಭಿವ್ಯಕ್ತಿಗೂ ವೇದಿಕೆ ಕಲ್ಪಿಸುವ ಸಾಮಾಜಿಕ ಜಾಲತಾಣ, ಅದರಲ್ಲೂ ಈ ರೀಲ್ಸ್ ಲೋಕ ನಮಗರಿವಿಲ್ಲದೇ ನಮ್ಮ ಮೇಲೆ ಬೀರುತ್ತಿರುವ ಪ್ರಭಾವ ದೊಡ್ಡದು. ಹಾಗೇ 2025ರಲ್ಲಿ ವೈರಲ್ ಆದ ನಮ್ಮ ನಡುವಿನ ಆಯ್ದ ಕೆಲವು ಹೆಣ್ಣುಮಕ್ಕಳ ಚಿತ್ರಣ ಇಲ್ಲಿದೆ.

• ಸುಷ್ಮಾ ಸವಸುದ್ದಿ

ಗುರಿ ಸೇರಿದ ಬಾಣ

‘ಹೂವಿನ ಬಾಣದಂತೆ’ ಎಂಬ ಸುಶ್ರಾವ್ಯವಾದ ಹಾಡನ್ನು ತನ್ನದೇ ವಿಭಿನ್ನ ಧಾಟಿಯಲ್ಲಿ ಹಾಡಿ, ಮೂಲ ಹಾಡಿನ ಧಾಟಿಯನ್ನೇ ಮರೆಸಿದ ಹುಡುಗಿ ನಿತ್ಯಶ್ರೀ ಈಗ ಕನ್ನಡಿಗರಿಗೆಲ್ಲ ಪರಿಚಿತ. ಸ್ನೇಹಿತರನ್ನು ರಂಜಿಸಲು ಹಾಡಿದ ಹಾಡು ಕರ್ನಾಟಕವನ್ನೇ ರಂಜಿಸಿದ್ದು ಈ ರೀಲ್ಸ್ ಯುಗದ ಅಚ್ಚರಿ. ತನ್ನ ಸುತ್ತ ಇದ್ದ ಸ್ನೇಹಿತರೆಲ್ಲ ತಮ್ಮ ಹಾಡಿಗೆ ನಗುತ್ತಿದ್ದರೂ ತಾನು ಮಾತ್ರ ಹಾಡುತ್ತಲೇ ಇದ್ದ ಆ ಹುಡುಗಿಯ ಮೊಗದಲ್ಲಿನ ಮುಗ್ಧತೆ ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡಿತು. ಒಂದು ಹಾಡು ಆಕೆಗೆ ರಾತ್ರೋರಾತ್ರಿ ಹೆಸರು ತಂದುಕೊಟ್ಟಿತು. ಬೀದಿಗಳಲ್ಲಿ ಬ್ಯಾನರ್, ಸಮಾರಂಭಗಳ ಉದ್ಘಾಟನೆಗೆ ಆಹ್ವಾನ, ಮೀಡಿಯಾದಲ್ಲಿ ಸಂದರ್ಶನ, ಮೂರಂಕಿಯಲ್ಲಿದ್ದ ಇನ್‌ಸ್ಟಾ ಫಾಲೋವರ್ಸ್ ಸಂಖ್ಯೆ ಐದಂಕಿಗೆ ಏರಿಕೆ... ಹೀಗೆ ಅನಿರೀಕ್ಷಿತ ಸಂತಸ ಆ ಹೆಣ್ಣುಮಗಳನ್ನು ಹುಡುಕಿ ಬಂದರೆ, ಸೋಷಿಯಲ್ ಮೀಡಿಯಾದ ವೈರಲ್ ಗೀಳಿಗೆ ಇರುವ ಶಕ್ತಿ ನೋಡಿ ಅಚ್ಚರಿ ಪಡುವ ಸರದಿ ಜನರದ್ದಾಗಿತ್ತು.

ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಮೊಸಳೆಕೊಪ್ಪ ಗ್ರಾಮದ ನಿತ್ಯಶ್ರೀ, ಪದವಿ ಶಿಕ್ಷಣ ಪಡೆಯಲು ಮೈಸೂರಿನಲ್ಲಿ ನೆಲಸಿದ್ದಾರೆ. ತಮಗೆ ನಟಿಯಾಗುವ ಆಸೆ ಇದೆ ಎಂದು ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿಕೊಂಡಿದ್ದು, ತಮ್ಮ ವೈರಲ್ ವಿಡಿಯೊಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಹಾಗಂತ ಈ ರೀಲ್ಸ್ ಲೋಕ ಎಲ್ಲವನ್ನೂ ವೈರಲ್ ಮಾಡಿಬಿಡಲಾರದು, ಅದಕ್ಕೂ ತನ್ನದೇ ಇಷ್ಟಾನಿಷ್ಟಗಳಿವೆ ಎಂಬುದೂ ಇಲ್ಲಿ ಸ್ಪಷ್ಟವಾಯಿತು. ನಿತ್ಯಶ್ರೀ ತಮ್ಮದೇ ಧಾಟಿಯಲ್ಲಿ ಇನ್ನೊಂದು ಹಾಡು ಹೇಳಿದಾಗ ಜನ ಅದನ್ನು ಮೆಚ್ಚಲಿಲ್ಲ, ಅದು ವೈರಲ್ ಆಗಲಿಲ್ಲ ಅನ್ನುವುದೂ ಗಮನಾರ್ಹ.

ನಿತ್ಯಶ್ರೀ

ಭೇದವಿಲ್ಲದ ಭಾವಕ್ಕೆ ಸಂದ ಗೌರವ

ಪುಣ್ಯಾ

ಮೈಸೂರಿನ ಯುವ ದಸರಾದಲ್ಲಿ ‘ಏಳು ಮಲೆ ಮೇಲೇರಿ ನಿಂತಾನವ್ವ ಮಾದೇವಾ’ ಹಾಡಿಗೆ ಯುವತಿಯೊಬ್ಬಳು ಹುಡುಗನೊಬ್ಬನೊಂದಿಗೆ ನೃತ್ಯ ಮಾಡಿದ ವಿಡಿಯೊ ಸಖತ್ ವೈರಲ್ ಆಯಿತು. ತನ್ನ ಪಾಡಿಗೆ ತಾನು ನರ್ತಿಸುತ್ತಿದ್ದಾಗ, ಪಾಪ್‌ಕಾರ್ನ್ ಮಾರುತ್ತಾ ಬಂದ ಹುಡುಗನೂ ಅವಳೊಟ್ಟಿಗೆ ಹೆಜ್ಜೆ ಹಾಕಲು ಆರಂಭಿಸಿದ. ಅವನು ತನ್ನ ಸ್ನೇಹಿತನೋ ಸಹೋದರನೋ ಎಂಬಂತೆ ಆ ಯುವತಿ ಅದೇ ಹುಮ್ಮಸ್ಸಿನಿಂದ ತಾನೂ ಅವನೊಂದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದಳು. ಇದು ಅನಿರೀಕ್ಷಿತವಾಗಿದ್ದರೂ ಆ ಹಾಡಿಗೂ ಅವರಿಬ್ಬರ ನೃತ್ಯದ ಜುಗಲ್‌ಬಂದಿಗೂ ಚಂದದ ಹೊಂದಾಣಿಕೆ ಇತ್ತು. ಇದನ್ನು ಸೆರೆಹಿಡಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಪ್ರಕಟವಾಗುತ್ತಿದ್ದಂತೆಯೇ ನೋಡುಗರ ಮೆಚ್ಚುಗೆಗೆ ಪಾತ್ರವಾಗಿ ಬಹುಬೇಗ ವೈರಲ್ ಆಗಿಬಿಟ್ಟಿತು. ಪಾಪ್‌ಕಾರ್ನ್ ಪೊಟ್ಟಣಗಳಿದ್ದ ಪ್ಲಾಸ್ಟಿಕ್ ಕೈಚೀಲಗಳನ್ನು ಹಿಡಿದೇ ಆತ ತನ್ನೊಟ್ಟಿಗೆ ನರ್ತಿಸಲು ಮುಂದಾದಾಗ, ಒಂದು ಕ್ಷಣವೂ ಯೋಚಿಸದೆ ಅವನೊಂದಿಗೆ ಹೆಜ್ಜೆ ಹಾಕಿದ್ದು ಅವಳ ನಿಷ್ಕಲ್ಮಷ ಮನಸ್ಸಿಗೆ ಸಾಕ್ಷಿ ಎಂದು ಬಹುತೇಕ ನೋಡುಗರು ಕಮೆಂಟಿಸಿದರು.

> ಆ ವಿಡಿಯೊ ವೈರಲ್ ಆಗಿದ್ದು ಅನಿರೀಕ್ಷಿತ. ಮಧ್ಯಮ ವರ್ಗದ ಕುಟುಂಬದವಳಾದ ನಾನು, ಯಾವ ಭೇದವೂ ಇಲ್ಲದೆ ಎಲ್ಲರನ್ನೂ ಗೌರವಿಸುವ ವಾತಾವರಣದಲ್ಲಿ ಬೆಳೆದವಳು. ಈಗ ಕೆಲಸದ ನಡುವೆ ಬಿಡುವಿದ್ದಾಗ ರೀಲ್ಸ್ ಮಾಡುತ್ತಾ ಖುಷಿಯಾಗಿದ್ದೇನೆ.
> ಪುಣ್ಯಾ

ಮೈಸೂರಿನ ಆಸ್ಪತ್ರೆಯೊಂದರಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿರುವ ಪುಣ್ಯಾ, ಚಿತ್ರನಟ ಸುದೀಪ್ ಅವರ ಕಟ್ಟಾ ಅಭಿಮಾನಿ. ಸುದೀಪ್ ಅವರನ್ನು ಖುದ್ದಾಗಿ ತೋರಿಸುವ ಆಮಿಷ ಒಡ್ಡಿ, ಆಕೆ ಪಿಯುಸಿಯಲ್ಲಿ ಚೆನ್ನಾಗಿ ಓದುವಂತೆ ನೋಡಿಕೊಂಡಿದ್ದರು ಅವರ ತಾಯಿ. ಆದರೆ ಆ ಆಸೆಯನ್ನು ಈಡೇರಿಸಲು ಮಾತ್ರ ಅವರಿಗೆ ಸಾಧ್ಯವಾಗಿರಲಿಲ್ಲ. ವೈರಲ್ ಆದ ಬಳಿಕ ನೀಡಿದ ಸಂದರ್ಶನವೊಂದರಿಂದ ವಿಷಯ ತಿಳಿದ ಸುದೀಪ್, ಸ್ವತಃ ಪುಣ್ಯಾ ಅವರನ್ನು ಕರೆಸಿಕೊಂಡು ಭೇಟಿಯಾಗಿದ್ದು ವಿಶೇಷ.

ವೈರಲ್ ಆದ ಇತರರು

ಚಿತ್ರಾ ಪುರುಷೋತ್ತಮ್



ರೆಮೋನಾ ಇವೆಟ್ ಪಿರೇರಾ



ದೀಕ್ಷಾ

ರಿತುಪರ್ಣ ಕೆ.ಎಸ್

ಕರ್ನಾಟಕ ಮೂಲದ ಬಾಡಿಬಿಲ್ಡರ್ ಮತ್ತು ಫಿಟ್‌ನೆಸ್ ತರಬೇತುದಾರರಾದ ಚಿತ್ರಾ, ತಮ್ಮ ವಿವಾಹದ ಸೀರೆಯನ್ನು ಉಟ್ಟು ಸ್ನಾಯುಗಳನ್ನು ಪ್ರದರ್ಶಿಸಿದ ವಿಡಿಯೊದಿಂದ ವೈರಲ್ ಆದರು.

ಮಂಗಳೂರಿನ ಯುವತಿ ರೆಮೋನಾ 170 ಗಂಟೆ ನಿದ್ದೆಯಿಲ್ಲದೆ ನಿರಂತರವಾಗಿ ಭರತನಾಟ್ಯ ಪ್ರದರ್ಶನ ನೀಡಿ ‘ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್’ಗೆ ಸೇರಿದರು. ಇವರ ಈ ಸಾಧನೆ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೆಯಾಯಿತು.

ದೀಕ್ಷಾ ಅವರು 216 ಗಂಟೆಗಳ ನಿರಂತರ ಭರತನಾಟ್ಯ ಪ್ರದರ್ಶನ ನೀಡಿ, ರೆಮೋನಾ ಅವರ ‘ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್’ನ ದಾಖಲೆಯನ್ನು ಮುರಿದರು.

ತೀರ್ಥಹಳ್ಳಿಯ ಯುವತಿ ರಿತುಪರ್ಣ, ರೋಲ್ಸ್ ರಾಯ್ಸ್‌ನ ಜೆಟ್ ಎಂಜಿನ್ ಉತ್ಪಾದನಾ ವಿಭಾಗದಲ್ಲಿ ದೊಡ್ಡ ಸಂಬಳದ (ವಾರ್ಷಿಕ ₹ 72.3 ಲಕ್ಷ) ಕೆಲಸ ಪಡೆದು ಸುದ್ದಿಯಾದರು. ವೈಫಲ್ಯಗಳ ನಂತರವೂ ಸಾಧನೆ ಮಾಡಿದ ಇವರ ಕಥೆ ಹಲವರಿಗೆ ಸ್ಫೂರ್ತಿಯಾಯಿತು.

ಅಳುವ ಮಗುವಿಗೆ ಅಮ್ಮನಾದಾಕೆ...

ಚಂದ್ರಪ್ರಭಾ ಗೌಡ

ನವೆಂಬರ್ 1ರಂದು ಚಂದ್ರಪ್ರಭಾ ಗೌಡ ಅವರಿಗೆ ಒಂದು ಕರೆ ಬಂತು. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಕುಂಬ್ರದ ಬಳಿ ಕಾರು ಮತ್ತು ರಿಕ್ಷಾ ನಡುವೆ ಅಪಘಾತ ನಡೆದಿದ್ದು, ಗಾಯಗೊಂಡವರನ್ನು ರಕ್ಷಿಸಲು ಸಹಾಯಹಸ್ತ ನೀಡಿ ಎಂದು ಕೇಳಿದ್ದ ಆ ಕರೆಗೆ ಚಂದ್ರಪ್ರಭಾ ತಕ್ಷಣವೇ ಸ್ಪಂದಿಸಿದರು, ಆಸ್ಪತ್ರೆಯತ್ತ ಧಾವಿಸಿದರು. ಐಸಿಯುನಿಂದ ಮಗುವೊಂದರ ಆಕ್ರಂದನ ಕೇಳಿಬರುತ್ತಿತ್ತು. ಅಲ್ಲಿದ್ದ ಮೂರು ತಿಂಗಳ ಮಗು ತೀವ್ರವಾಗಿ ಗಾಯಗೊಂಡಿತ್ತು. ಮೂಗಿನಿಂದ ರಕ್ತ ಒಸರುತ್ತಿದ್ದ, ಕಣ್ಣಿಗೆ ಗಾಯವಾಗಿದ್ದ ಮಗುವನ್ನು ಎತ್ತಿಕೊಂಡ ಚಂದ್ರಪ್ರಭಾ ಅವರಿಗೆ, ವೈದ್ಯರು ಸ್ಕ್ಯಾನ್ ಮಾಡಿಸಿಕೊಂಡು ಬರಲು ತಿಳಿಸಿದರು. ತಕ್ಷಣವೇ ಆಂಬುಲೆನ್ಸ್ ಏರಿ, ಮಗುವನ್ನು ಮಡಿಲಿಗೆ ಹಾಕಿಕೊಂಡು ಸ್ಕ್ಯಾನಿಂಗ್ ಸೆಂಟರ್‌ಗೆ ಕರೆದೊಯ್ದರು. ‘ಕಷ್ಟಕಾಲಕ್ಕೆ ಹಗ್ಗವೂ ಹಾವಿನಂತೆ’ ಎನ್ನುವ ಹಾಗೆ, ಆ ದಿನ ಅಷ್ಟು ಸುಲಭದಲ್ಲಿ ಸ್ಕ್ಯಾನಿಂಗ್ ಮಾಡಿಸಲು ಆಗಲಿಲ್ಲ. ಎರಡು, ಮೂರು ಸೆಂಟರ್‌ಗಳಿಗೆ ತಿರುಗಿ, ಕೊನೆಗೂ ಸ್ಕ್ಯಾನಿಂಗ್ ಮಾಡಿಸಿ, ಮಗುವಿಗೆ ಅಪಾಯವಿಲ್ಲ ಎಂಬುದನ್ನು ತಿಳಿದುಕೊಂಡರು. ಈ ಎಲ್ಲದರ ನಡುವೆ, ಅದೇ ಅಪಘಾತದಲ್ಲಿ ಕೊನೆಯುಸಿರೆಳೆದಿದ್ದ ಇನ್ನೊಂದು ಮಗುವಿಗೆ ಮುಂದಿನ ವ್ಯವಸ್ಥೆಯನ್ನೂ ಅವರು ಕಲ್ಪಿಸಿದ್ದರು.

ಆಂಬುಲೆನ್ಸ್‌ನಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದ್ದ ಈ ದೃಶ್ಯ ಬಹುಬೇಗ ಎಲ್ಲೆಡೆ ವೈರಲ್ ಆಗಿತ್ತು. ಆಂಬುಲೆನ್ಸ್ ಡ್ರೈವರ್ ಸಹ ಇದನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಈ ಮಾತೃಹೃದಯಿಯ ಕೆಲಸ ನಾಡಿನಾದ್ಯಂತ ಮೆಚ್ಚುಗೆ ಪಡೆಯಿತು.

> ಈಗ ಕೊಂಚ ಕೆಲಸದ ಒತ್ತಡದಲ್ಲಿದ್ದೇನೆ. ಸದ್ಯದಲ್ಲೇ ಮತ್ತೆ ಆ ಮಗುವನ್ನು ಭೇಟಿಯಾಗಲು ಹೊರಟಿರುವೆ
> ಚಂದ್ರಪ್ರಭಾ ಗೌಡ

ಅಪಘಾತವಾದಾಗ ನೋಡಿ ಮರುಗುವುದು, ಹೀಗಾಗಬಾರದಿತ್ತು ಎನ್ನುವುದು, ಏನೂ ಆಗದಿರಲಿ ಎಂದು ಪ್ರಾರ್ಥಿಸುವುದು ಸಹಜ. ಆದರೆ ರಕ್ತ ಒಸರುತ್ತಿರುವ ಯಾರದ್ದೋ ಮಗುವನ್ನು ತನ್ನೆದೆಗೆ ಆನಿಸಿಕೊಂಡು, ಅದರ ಚಿಕಿತ್ಸೆಗಾಗಿ ಅಲೆದಾಡಿದ್ದು ಜನರ ಮನಸ್ಸನ್ನು ತಟ್ಟಿತು. ಯಾವ ಧರ್ಮ, ಯಾರ ಮಗು, ಯಾವ ಊರು ಏನನ್ನೂ ಅರಿಯದೆ ಸಹಾಯಕ್ಕೆ ಮುಂದಾದ ಆ ಮಾನವೀಯ ಹೃದಯಕ್ಕೆ ಸಾಮಾಜಿಕ ಜಾಲತಾಣ ಶರಣೆಂದಿತು.

ಇಬ್ಬರು ಮಕ್ಕಳ ತಾಯಿಯಾದ ಚಂದ್ರಪ್ರಭಾ ಅವರು ಶಾಲಾ ಶಿಕ್ಷಕಿ. ರಾಜಕೀಯದಲ್ಲೂ ಸಕ್ರಿಯರಾಗಿದ್ದಾರೆ. ತಾವು ಕಾಪಾಡಿದ ಆ ಮಗುವಿನೊಂದಿಗೆ ಬಾಂಧವ್ಯ ಬೆಳೆಸಿಕೊಂಡಿರುವ ಅವರು ಈಗಲೂ ಸಂಪರ್ಕದಲ್ಲಿದ್ದಾರೆ.

ಪುಟ್ಟ ಪೋರಿಯ ಪ್ರತಿಭಾ ಪಯಣ

‘ಲೋಕದ ಡೊಂಕ ನೀವೇಕೆ ತಿದ್ದುವಿರಿ...’ ಎನ್ನುತ್ತಾ ಕಾರ್ಯಕ್ರಮದ ವೇದಿಕೆಯ ಮೇಲೆ, ಶರಣರ ಸನ್ನಿಧಿಯಲ್ಲಿ ತನ್ನ ತೊದಲು ನುಡಿಯಲ್ಲೇ ಬಸವಣ್ಣನವರ ವಚನವನ್ನು ಹೇಳುತ್ತಾ, ಅದಕ್ಕೆ ತಕ್ಕಂತೆ ಅಭಿನಯಿಸಿದ ನಾಲ್ಕು ವರ್ಷದ ಪೋರಿಯ ವಿಡಿಯೊವೊಂದು ಸದ್ದು ಮಾಡಿತು. ವಿಜಯಪುರದ ಸಿಂದಗಿ ತಾಲ್ಲೂಕಿನ ಈ ಮುದ್ದು ಗೊಂಬೆ, ಎಲ್‌ಕೆಜಿ ಓದುತ್ತಿರುವ ದಿತಿ ಶಿರಶ್ಯಾಡ.

ಈ ವಿಡಿಯೊ ವೈರಲ್ ಆದ ಮೇಲೆ ದಿತಿಯ ಬಹುಮುಖ ಪ್ರತಿಭೆಯೂ ಅನಾವರಣಗೊಂಡಿತು. ಈ ಮಗು 100ಕ್ಕೂ ಅಧಿಕ ವಚನಗಳನ್ನು ನಿರರ್ಗಳವಾಗಿ ಹೇಳುತ್ತದೆ. ಶ್ರೀರಾಮನ ವಂಶಸ್ಥರ ಹೆಸರು, 40 ಶ್ಲೋಕಗಳು, 60 ಸಂವತ್ಸರಗಳ ಹೆಸರು, ಶಬರಿಮಲೆ ದೇಗುಲದ 18 ಮೆಟ್ಟಿಲುಗಳ ಹೆಸರು ಮತ್ತು ವೈಶಿಷ್ಟ್ಯ, 200ಕ್ಕೂ ಅಧಿಕ ಗಾದೆಗಳು, 30ಕ್ಕೂ ಹೆಚ್ಚು ಒಡಪುಗಳು, ಅಶೋಕ ಚಕ್ರದೊಳಗಿನ 24 ಗೆರೆಗಳ ಅರ್ಥ, ಕರ್ನಾಟಕದ ಜಿಲ್ಲೆಗಳು, ದೇವಸ್ಥಾನಗಳ ವಿಶೇಷ, ಸಿದ್ದೇಶ್ವರ ಶ್ರೀಗಳ ಹಿತನುಡಿ ಮಾತ್ರವಲ್ಲದೆ ಭಾರತದ ಸಂವಿಧಾನದ ಪೀಠಿಕೆಯನ್ನೂ ಸರಾಗವಾಗಿ ಹೇಳುತ್ತಾಳೆ. ಆಕೆಯ ಈ ಪ್ರತಿಭೆ ‘ಇಂಡಿಯಾ ವರ್ಲ್ಡ್ ರೆಕಾರ್ಡ್ಸ್’ನಲ್ಲೂ ದಾಖಲಾಗಿದೆ.

> ದಿತಿ ಒಂದೂವರೆ ವರ್ಷದವಳಿದ್ದಾಗಲೇ ಒಳ್ಳೆಯ ಜ್ಞಾಪಕಶಕ್ತಿ ಹೊಂದಿದ್ದಳು. ಅದನ್ನು ಗಮನಿಸಿ ಅವಳಿಗೆ ಮಾರ್ಗದರ್ಶನ ನೀಡಿದೆವು. ಈಗ ಎಲ್ಲೆಡೆ ಜನ ಅವಳನ್ನು ಗುರುತಿಸುತ್ತಾರೆ.
> ಸರಸ್ವತಿ, ದಿತಿ ತಾಯಿ

ದಿತಿಯ ತಂದೆ ಹನುಮಂತ ಶಿಕ್ಷಕರು. ತಾಯಿ ಸರಸ್ವತಿಯೂ ಶಿಕ್ಷಕಿಯಾಗಿದ್ದರು. ಆದರೆ, ಮಗಳ ಪಾಲನೆಗಾಗಿ ಆಕೆ ತಮ್ಮ ವೃತ್ತಿ ಬದುಕಿಗೆ ವಿರಾಮ ನೀಡಿದ್ದಾರೆ.

ದಿತಿ

ತಿಂಡಿ ತಯಾರಿಸಿದ ಸಂಭ್ರಮದಲ್ಲಿ ಅಮ್ಮ ಮಹಾದೇವಿ ಮತ್ತು ಮಗ ನಾಗೇಶ್

ಹೇಳ್ತೇವ್ ಕೇಳ್ರೀ ಸವಿರುಚಿಯ ಸೊಬಗ

‘ತಿಂದ್ರ ಗಿರ್‌sss ಅನ್ಬೇಕು ಅಂಥ ರೆಸಿಪಿ ಇವತ್ ಹೇಳ್‌ಕೊಡ್ತೀವಿ. ಅದಾ ಗಿರ್ಮಿಟ್... ಉಳ್ಳಾಗಡ್ಡಿ, ಹುಂಚಿಕಾಯಿ, ಬೆಲ್ಲ ಸೇರ್ಸಿ ಮಾಡಿದ್ರಿ ಅಂದ್ರ ಮಸ್ತ್ ಆಕ್ಕತಿ. ಈ ಚಳಿ ಹೊತ್ನ್ಯಾಗ ಸಂಜೀಕ ಬಾಯಿರುಚಿಗೆ ಇದ್ನ ಮಾಡಿ ತಿನ್ರಿ. ಬಾಳ್ ಛಲೋ ಅನಸ್ತತಿ...’

ಹೀಗೆ ಉತ್ತರ ಕರ್ನಾಟಕದ ಶೈಲಿಯಲ್ಲಿ, ಆ ಭಾಗದ ಅಡುಗೆ ರೆಸಿಪಿಗಳನ್ನು ಉಣಬಡಿಸುತ್ತಿರುವ ಅಮ್ಮ– ಮಗನ ‘ಸವಿರುಚಿ ಸೊಬಗು’ ಯೂಟ್ಯೂಬ್ ಚಾನೆಲ್ ತೆರೆದೆವೆಂದರೆ ‘ಟಪ್‌ss... ಟಪ್‌ss’ ಎನ್ನುತ್ತಾ ಜೋಳದ ರೊಟ್ಟಿ ಬಡಿಯುವ ಸದ್ದು ಕಿವಿಗೆ ರಾಚುತ್ತದೆ. ಜೋಳದ ಹಿಟ್ಟು ಜಿಗುಟ್ ಮಾಡಿಕೊಳ್ಳುವಲ್ಲಿಂದ ಹಿಡಿದು ಒಲೆಯ ಮೇಲೆ ರೊಟ್ಟಿ ಉಬ್ಬಿ ಬರುವವರೆಗೆ ಹದವಾದ ರೊಟ್ಟಿ ಮಾಡುವವರೆಗಿನ ರಹಸ್ಯವನ್ನು ಎಳೆಎಳೆಯಾಗಿ ಬಿಚ್ಚಿಡುವ ಅಮ್ಮ ಮಹಾದೇವಿ– ಮಗ ನಾಗೇಶ್ ಮಾಡಲಗಿ ಅವರ ಜೋಡಿ ತಿನಿಸುಪ್ರಿಯರನ್ನು ಹಿಡಿದಿಟ್ಟಿದೆ.

ಅತಿ ಕಷ್ಟ ಎನಿಸುವಂತಹ ಸಾಂಪ್ರದಾಯಿಕ ಅಡುಗೆಗಳನ್ನು ಸುಲಭದಲ್ಲಿ, ಅಡುಗೆ ಮನೆಯಲ್ಲಿ ಲಭ್ಯ ಇರುವಂತಹ ವಸ್ತುಗಳಲ್ಲೇ ಈಗಿನ ಕಾಲಕ್ಕೆ ತಕ್ಕಂತೆ ತಯಾರಿಸುವ ವಿಧಾನಗಳನ್ನು ಯೂಟ್ಯೂಬ್ ಅಂಗಳದಲ್ಲಿ ಹರಹಿದ್ದಾರೆ ಅಮ್ಮ– ಮಗ. ‘ಗುಳ್ಳಡಿಕಿ ಉಂಡಿ’ ಅದಕ್ಕೊಂದು ಉದಾಹರಣೆ. ಈ ಉಂಡಿ ತಯಾರಿಸಲು ಹಿಂದೆ ಒರಳುಕಲ್ಲು, ಒನಕೆ ಬಳಸುತ್ತಿದ್ದರು. ಈಗಿನ ಅಡುಗೆ ಮನೆಗಳಲ್ಲಿ ಅವೆಲ್ಲ ಸಿಗುವುದು ದುರ್ಲಭ. ಹಾಗಂತ ಸಾಂಪ್ರದಾಯಿಕ ಅಡುಗೆಗಳನ್ನು ಮಾಡದೆ ಬಿಡಲಾದೀತೇ? ಇಂಥ ತಿಂಡಿಗಳನ್ನೂ ಸುಲಭದಲ್ಲಿ ಮಾಡಿ ಸವಿಯಿರಿ ಎನ್ನುತ್ತಾರೆ ನಾಗೇಶ್.

ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಎಸ್‌ಎಸ್‌ಎಲ್‌ಸಿ ಓದುತ್ತಿದ್ದ ನಾಗೇಶ್ ಅವರಿಗೆ ಅಡುಗೆ ಯೂಟ್ಯೂಬ್ ಚಾನೆಲ್ ಶುರು ಮಾಡಬೇಕೆಂಬ ಆಲೋಚನೆ ಹೊಳೆಯಿತು. ಮದುವೆ ಮತ್ತಿತರ ಕಾರ್ಯಕ್ರಮಗಳ ಸಮಯದಲ್ಲಿ ಅಡುಗೆ ಕೆಲಸಕ್ಕೆ ಹೋಗುತ್ತಿದ್ದ ಅಮ್ಮನ ಕೈರುಚಿಯನ್ನು ಬಹುಜನರಿಗೆ ಉಣಬಡಿಸುವ ಆಶಯ ಸಾಕಾರಗೊಂಡಿದ್ದು ಅಂಥದ್ದೊಂದು ಚಾನೆಲ್ ಆರಂಭದ ಮೂಲಕ. ಅಕ್ಕ ಜ್ಯೋತಿಯೂ ಅಮ್ಮ– ತಮ್ಮನ ಈ ಕಾರ್ಯಕ್ಕೆ ಜೊತೆಯಾದರು. ಹೀಗೆ ಶುರುವಾದ ಚಾನೆಲ್ ನಂತರ ಬದುಕಿಗೇ ಆಧಾರವಾಯಿತು.

7.5 ಲಕ್ಷ ವೀಕ್ಷಕ ವಲಯವನ್ನು ಹೊಂದಿರುವ ಇವರ ಚಾನೆಲ್‌ನಲ್ಲಿ ಈವರೆಗೆ 1,200ಕ್ಕೂ ಹೆಚ್ಚು ಬಗೆಯ ಖಾದ್ಯಗಳನ್ನು ಹಂಚಿಕೊಳ್ಳಲಾಗಿದೆ, 15 ಕೋಟಿಗೂ ಹೆಚ್ಚು ವೀಕ್ಷಣೆಯನ್ನು ಪಡೆದಿದೆ. ‘ಅಮ್ಮ ಮಾಡುವ ಅಡುಗೆಗಳು ಕೇವಲ ಪದಾರ್ಥಗಳಿಂದ ತುಂಬಿರಲ್ಲ. ಬದಲಾಗಿ ಪ್ರೀತಿಯೂ ತುಂಬಿರುತ್ತದೆ. ಅದೇ ಆ ಅಡುಗೆಯ ರುಚಿಗೂ ಕಾರಣವಾಗಿರುತ್ತದೆ’ ಎಂದು ತಮ್ಮ ಚಾನೆಲ್‌ನ ಡಿಸ್‌ಕ್ರಿಪ್ಷನ್‌ನಲ್ಲಿ ಬರೆದುಕೊಂಡಿರುವ ಸಾಲುಗಳೇ ಅಡುಗೆ ಬಗೆಗಿನ ಒಲುಮೆ, ಪ್ರೀತಿಯನ್ನು ಸಾಕ್ಷೀಕರಿಸುತ್ತವೆ.

ಆರೋಗ್ಯಕರ ಪೇಯ, ಖಾದ್ಯಗಳು, ಬಾಣಂತಿಯರಿಗೆ ಕೊಡುವ ವಿವಿಧ ಬಗೆಯ ಪೌಷ್ಟಿಕ ಖಾದ್ಯಗಳು, ಉತ್ತರ ಕರ್ನಾಟಕ ಭಾಗದ ಸಿಹಿ ಖಾದ್ಯಗಳನ್ನು ಹಿರಿಯರು ಮಾಡುತ್ತಿದ್ದ ಶೈಲಿಯಲ್ಲೇ ಹೇಳಿಕೊಡುತ್ತಾರೆ ಮಹಾದೇವಿ. ಬಾಣಂತಿಯರಿಗೆ ಕೊಡುವ ಕೊಬ್ಬರಿ ಖಾರ, ಅಳವಿ ಪಾಯಸ, ಹುರುಳಿ ಶುಂಠಿ, ಮೆಂತೆ ಲಡ್ಡು, ಮೆಂತೆ ಚಟ್ನಿಯಂತಹ ರೆಸಿಪಿಗಳು ಹೆಚ್ಚು ಜನರನ್ನು ಸೆಳೆದಿವೆ.

-ಸುಮಾ ಬಿ

> ಯಾವುದೇ ಅಡುಗೆಗೆ ಹೊರಗೆ ಸಿಗುವ ಮಸಾಲೆಗಿಂತ ಮನೆಯಲ್ಲೇ ತಯಾರಿಸಿ ಮಾಡಿದರೆ ರುಚಿ ಹೆಚ್ಚು. ಪದಾರ್ಥಗಳು, ತರಕಾರಿಗಳನ್ನು ಆನ್‌ಲೈನ್‌ನಲ್ಲಿ ತರಿಸುವುದಕ್ಕಿಂತ ಅಂಗಡಿಗೆ ಹೋಗಿ ತಾಜಾ ಇರುವುದನ್ನು ತಂದು ಮಾಡಿದರೆ ಆರೋಗ್ಯಕ್ಕೂ ರುಚಿಗೂ ಒಳ್ಳೆಯದು.
> ನಾಗೇಶ್ ಮಾಡಲಗಿ

ರಸಾಸ್ವಾದ

ಮಾಡಿ ನೋಡಿ ಮಡಿಗಡುಬು

ಉತ್ತರ ಕರ್ನಾಟಕದ ಸಾಂಪ್ರದಾಯಿಕ ತಿಂಡಿ ಮಡಿಗಡುಬು ಸುಲಭದಲ್ಲಿ ತಯಾರಿಸಬಹುದಾದ ಸ್ವಾದಿಷ್ಟ ಸಿಹಿ ಖಾದ್ಯ. ಚಕೋಲಿ, ಬೆಲ್ಲದ ಕಡುಬು... ಹೀಗೆ ಹಲವು ಹೆಸರುಗಳ ನಂಟು ಇದಕ್ಕೆ.

ಏನೇನು ಬೇಕು?: ಒಂದು ಕಪ್ ಗೋಧಿಹಿಟ್ಟು, ಅರ್ಧ ಕಪ್ ಬೆಲ್ಲ, ಅರ್ಧ ಚಮಚ ಏಲಕ್ಕಿ ಪುಡಿ, ಅರ್ಧ ಕಪ್ ಒಣಕೊಬ್ಬರಿ ತುರಿ, ಸಣ್ಣಗೆ ಹೆಚ್ಚಿದ ಬಾದಾಮಿ, ಪಿಸ್ತಾ, ಸ್ವಲ್ಪ ಉಪ್ಪು.

ಹೀಗೆ ಮಾಡಿ: ಗೋಧಿಹಿಟ್ಟಿಗೆ ಸ್ವಲ್ಪ ಉಪ್ಪು ಸೇರಿಸಿ ನೀರು ಹಾಕಿ ಚಪಾತಿ ಹಿಟ್ಟಿನ ಹದಕ್ಕೆ ಕಲಸಬೇಕು. ಬಳಿಕ ಸ್ವಲ್ಪ ಎಣ್ಣೆ ಸವರಿ 10 ನಿಮಿಷ ಬಿಡಿ. ನಂತರ ಚಪಾತಿಗಿಂತಲೂ ಸ್ವಲ್ಪ ದಪ್ಪಗೆ ಲಟ್ಟಿಸಿ ಶಂಕರಪೋಳಿ ರೀತಿ ಕತ್ತರಿಸಿ ಇಟ್ಟುಕೊಳ್ಳಬೇಕು. ಬಳಿಕ ಇನ್ನೊಂದು ಪಾತ್ರೆಯಲ್ಲಿ ಬೆಲ್ಲ ಹಾಗೂ ಸ್ವಲ್ಪ ನೀರು ಹಾಕಿ ಕುದಿಯಲು ಇಡಬೇಕು. ಬೆಲ್ಲ ಪೂರ್ತಿ ಕರಗಿದ ನಂತರ ಕತ್ತರಿಸಿಟ್ಟ ಗೋಧಿಹಿಟ್ಟಿನ ತುಂಡುಗಳನ್ನು ಹಾಕಬೇಕು. ಅವು ಬೆಲ್ಲದ ನೀರಿನಲ್ಲಿ ಚೆನ್ನಾಗಿ ಬೇಯುವವರೆಗೂ ಬಿಡಬೇಕು. ಬೆಂದಾದ ಬಳಿಕ ತುರಿದ ಒಣಕೊಬ್ಬರಿ, ಏಲಕ್ಕಿ ಪುಡಿ, ಕತ್ತರಿಸಿದ ಒಣಹಣ್ಣುಗಳನ್ನು ಹಾಕಿ ಮಗುಚಬೇಕು. ಬಳಿಕ ಇದನ್ನು ಬೇರೊಂದು ಪಾತ್ರೆಗೆ ಹಾಕಿ ಮೇಲೊಂದಿಷ್ಟು ಒಣಕೊಬ್ಬರಿ ತುರಿ, ಒಣಹಣ್ಣುಗಳನ್ನು ಅಲಂಕಾರಕ್ಕೆ ಉದುರಿಸಿದರೆ ಮಡಿಗಡುಬು ತಿನ್ನಲು ಸಿದ್ಧ. ಇದನ್ನು ತುಪ್ಪ ಅಥವಾ ಹಾಲಿನ ಜೊತೆ ಸವಿದರೆ ಹೆಚ್ಚು ರುಚಿ.

ಮದುವೆಗೆ ಮೊದಲೇ ಮಾತನಾಡಿ

ಭಾವಯಾನ

• ಶಾಂತಿ ವಾಸು



ಮೆಟ್ಟಿಲು ಹತ್ತುತ್ತಿದ್ದ ಮೇಧಾಳಿಗೆ ಎದುರು ಸಿಕ್ಕ ಮಾನಸಿ ‘ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕಿತ್ತು ಅಕ್ಕ’ ಎಂದಳು. ಮೇಧಾ ನೀಡುವ ಕೌಟುಂಬಿಕ ಸಲಹೆಗಳಿಗಾಗಿ ಅಪಾರ್ಟ್‌ಮೆಂಟಿನ ಹಲವರು ಆಗಾಗ ಹೀಗೆ ಎಡತಾಕುತ್ತಾರೆ. ಮೇಧಾ ನಗುತ್ತಾ ‘ಅದಕ್ಕೇನು, ಬಾ’ ಎಂದು ತನ್ನ ಮನೆಗೆ ಕರೆದೊಯ್ದಳು.

ಕಾಫಿ ಹೀರುತ್ತಾ ‘ಅಕ್ಕ ನಮ್ಮನೇನಲ್ಲಿ ನಂಗೆ ಮದುವೆ ಮಾಡೋಕ್ಕೆ ಪ್ಲ್ಯಾನ್ ಮಾಡ್ತಿದ್ದಾರೆ. ನಂಗೆ ಆಗಾಗ ಟೂರ್ ಮಾಡೊ ಅಭ್ಯಾಸ. ಮದುವೆ ಆದ್ರೆ ಅದೆಲ್ಲಾ ತಪ್ಪಿಹೋಗುತ್ತೆ ಅನ್ನೋ ಭಯ’ ಅಂದಳು ಮಾನಸಿ. ಒಂದಷ್ಟು ಹೊತ್ತು ಯೋಚಿಸಿದ ಮೇಧಾ ‘ಟೂರ್ ಹೋಗ್ಲೇಬೇಕು ಅಂತ ಏನಿದೆ? ಜೀವನವನ್ನು ಬಂದ ಹಾಗೆ ಸ್ವೀಕರಿಸೋದನ್ನ ಕಲೀಬೇಕು. ನಿನ್ನ ಮದುವೆಯಾಗೋ ಹುಡುಗನಿಗೂ ನಿನ್ನ ಹಾಗೆ ಬಿಡೋಕ್ಕೇ ಆಗಲ್ಲ ಅನ್ನೋ ಯಾವುದೋ ಅಭ್ಯಾಸ ಇದ್ರೆ ಏನು ಮಾಡ್ತೀಯ?’ ಎಂದು ಪ್ರಶ್ನಿಸಿದಳು.

ಮಾನಸಿ ಕಣ್ಣು ದೊಡ್ಡದು ಮಾಡಿ ‘ಹೌದಲ್ವಾ ಅಕ್ಕ, ಏನು ಮಾಡಲಿ ನೀವೇ ಸಲಹೆ ಕೊಡಿ’ ಅಂದಾಗ ‘ಹುಡುಗನ ಮನೆಯವರಿಗೆ ನಿನ್ನ ಈ ಆಸೆಯನ್ನು ಮುಚ್ಚಿಡದೇ ಮನಬಿಚ್ಚಿ ಹೇಳು. ಒಪ್ಪಿದರೆ ಮುಂದುವರಿಯುತ್ತಾರೆ, ಇಲ್ಲದಿದ್ದರೆ ಇಲ್ಲ. ಆಮೇಲೆ ನೋಡ್ಕೊಳ್ಳೋಣ ಅಂತ ಅಮೂಲ್ಯವಾದ ಜೀವನವನ್ನ ಪ್ರಯೋಗಕ್ಕೆ ಒಡ್ಡಿಕೊಳ್ಳಬೇಡ. ಹ್ಞಾಂ, ಹುಡುಗನಿಗೂ ಆ ತರಹದ ಆಸೆಗಳು ಏನಾದರೂ ಇವೆಯಾ ಅಂತ ಕೇಳುವುದನ್ನು ಮಾತ್ರ ಮರೀಬೇಡ’ ಅಂದಾಗ ಮಾನಸಿಗೆ ಸಮಾಧಾನವಾಯಿತು.

ಮದುವೆಯ ನಂತರ ಹುಡುಗಿಯು ಹುಡುಗನ ಮನೆಗೆ ಹೋಗುವುದು ಭಾರತೀಯ ಸಂಸ್ಕೃತಿ. ಹಾಗಾಗಿ, ಯುವಜೋಡಿ ಈಗಿನ ಪೀಳಿಗೆಯದಾದರೂ ಭಾಗಶಃ ಹುಡುಗನನ್ನು ಬೆಳೆಸಿರುವವರು ಸ್ವಲ್ಪ ಹಿಂದಿನ ಪೀಳಿಗೆಯವರು ಎನ್ನುವುದು ನೆನಪಿನಲ್ಲಿ ಇರಲಿ. ತಮಗೆ ಸರಿ ಅನ್ನಿಸುವ ಕೆಲ ಹವ್ಯಾಸಗಳು ತಾವು ಹೊಕ್ಕ ಮನೆಯವರಿಗೂ ಇಷ್ಟವಾಗುತ್ತವೆಯೋ ಇಲ್ಲವೋ ಎಂದು ಯೋಚಿಸುವುದು ಒಳ್ಳೆಯದು. ಹುಡುಗ, ಹುಡುಗಿ ಕೂಡ ಇಂತಹ ಅಭ್ಯಾಸಗಳ ಬಗ್ಗೆ ಮದುವೆಗೆ ಮೊದಲೇ ಪರಸ್ಪರ ಮಾತನಾಡಿಕೊಂಡರೆ ವಿಚ್ಛೇದನಗಳ ಸಂಖ್ಯೆ ತಗ್ಗಬಹುದು.

ದುಃಖ– ಖಿನ್ನತೆ: ವ್ಯತ್ಯಾಸ ಅರಿಯಿರಿ

ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

• **ಅತಿಯಾದ ದುಃಖ ಮತ್ತು ಖಿನ್ನತೆಯ ನಡುವೆ ಇರುವ ವ್ಯತ್ಯಾಸವೇನು?**

ಶಿಲ್ಪಶ್ರೀ, ಮೈಸೂರು

ದುಃಖ ಮತ್ತು ಖಿನ್ನತೆಯನ್ನು ಅನೇಕರು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ. ಇವೆರಡರ ಮಧ್ಯೆ ಸಂಬಂಧವಿದೆಯಾದರೂ ಅವು ಒಂದೇ ಅಲ್ಲ. ದುಃಖವು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಘಟನೆಯಿಂದ ಪ್ರಚೋದನೆಗೆ ಒಳಗಾಗುತ್ತದೆ. ಉದಾಹರಣೆಗೆ, ಆರ್ಥಿಕ ನಷ್ಟ, ವೈಫಲ್ಯ, ಸಂಘರ್ಷ, ಹತಾಶೆ, ಕೊರಗು ಅಥವಾ ನಿರಾಶೆಯಂತಹ ಅನೇಕ ಕಾರಣಗಳು ದುಃಖವನ್ನು ಉಂಟುಮಾಡಬಹುದು. ಆದರೆ, ದುಃಖವು ಸಾಂದರ್ಭಿಕವಾಗಿ ಕಾಣಿಸಿಕೊಂಡು, ಪರಿಸ್ಥಿತಿ ಬದಲಾದ ಮೇಲೆ ಕಡಿಮೆಯಾಗುತ್ತದೆ.

ಖಿನ್ನತೆಗೆ ಎಷ್ಟೋ ಬಾರಿ ಸ್ಪಷ್ಟ ಕಾರಣಗಳು ಇರಬೇಕಾಗಿಲ್ಲ. ಕೆಲವೊಮ್ಮೆ ಸುಮಾರಾಗಿ ಎರಡು ವಾರಗಳಿಗಿಂತಲೂ ಹೆಚ್ಚಿನ ಕಾಲ ಒಬ್ಬ ವ್ಯಕ್ತಿ ನಿರಂತರವಾಗಿ ದುಃಖಿತನಾಗಿದ್ದರೆ ಅಥವಾ ಜೀವನದ ಪರಿಸ್ಥಿತಿಗಳು ಉತ್ತಮಗೊಂಡಾಗಲೂ ಸುಧಾರಿಸದೇ ಹೋದರೆ, ಆಗ ಅದನ್ನು ಖಿನ್ನತೆ ಎಂದು ಪರಿಗಣಿಸಬೇಕಾಗಬಹುದು. ಆದರೆ ಆ ನಿರ್ಧಾರವನ್ನು ನುರಿತ ಮನಃಶಾಸ್ತ್ರಜ್ಞರು ಅಥವಾ ಮನೋವೈದ್ಯರು ಮಾಡಬೇಕೇ ವಿನಾ ಸಾಮಾನ್ಯ ಜ್ಞಾನದಿಂದ ಯಾರೂ ಸ್ವತಃ ಅಂತಹ ನಿರ್ಧಾರಕ್ಕೆ ಬರಬಾರದು.

ಎಷ್ಟೋ ಬಾರಿ ನಾವು ದುಃಖಿತರಾಗಿದ್ದಾಗಲೂ ಅದರಿಂದ ನಮ್ಮ ದಿನನಿತ್ಯದ ಕೆಲಸಗಳ ಮೇಲೆ ದೊಡ್ಡ ಅಡ್ಡಪರಿಣಾಮವೇನೂ ಆಗಿರುವುದಿಲ್ಲ. ಕೆಲಸದ ನಿಖರತೆ ಕಡಿಮೆ ಆಗಬಹುದು ಅಥವಾ ಎಲ್ಲೋ ಕೆಲವೊಂದು ವಿಚಾರಗಳು ಗಮನಕ್ಕೆ ಬಾರದಿರಬಹುದು ಅಥವಾ ಮರೆತುಹೋದ ಹಾಗೆ ಆಗಬಹುದು. ಆದರೂ ಜೀವನಚಕ್ರ ತನ್ನ ಹಾದಿಯಲ್ಲೇ ಸಾಗುತ್ತಿರುತ್ತದೆ. ಆದರೆ ಖಿನ್ನತೆಯು ನಿದ್ರೆ, ಹಸಿವು, ಶಕ್ತಿ, ಏಕಾಗ್ರತೆ, ಕೆಲಸ, ಸಂಬಂಧಗಳು ಮತ್ತು ಒಟ್ಟಾರೆ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತದೆ. ಮಾತ್ರವಲ್ಲ, ದಿನಚರಿಯು ಏರುಪೇರಾಗುತ್ತದೆ. ದುಃಖದಲ್ಲಿದ್ದ ಮಾತ್ರಕ್ಕೆ ನಾವು ಇತರ ಭಾವನೆಗಳಿಂದ ಸಂಪೂರ್ಣವಾಗಿ ನಿಶ್ಚೇಷ್ಟಿತರಾಗುವುದಿಲ್ಲ.

ಹೊರ ಪ್ರಪಂಚದ ಜೊತೆಗಿನ ಸಂಪರ್ಕದಲ್ಲಿ ದೊಡ್ಡ ಮಟ್ಟಿಗಿನ ವ್ಯತ್ಯಯವೇನೂ ಆಗುವುದಿಲ್ಲ. ಆದರೆ ಖಿನ್ನತೆಯಲ್ಲಿ ಭಾವನಾತ್ಮಕ ಮರಗಟ್ಟುವಿಕೆ (ನಂಬ್‌ನೆಸ್) ಅಥವಾ ಶೂನ್ಯ ಭಾವ (ಎಂಪ್ಟಿನೆಸ್) ಇರುತ್ತದೆ. ಒಂದು ಕಾಲದಲ್ಲಿ ಸಂತೋಷಪಡಿಸುತ್ತಿದ್ದ ವಿಷಯಗಳು ಯಾವುದೇ ಆಸಕ್ತಿ ಉಂಟು ಮಾಡುವುದಿಲ್ಲ.

ಒಬ್ಬ ವ್ಯಕ್ತಿ ದುಃಖದಲ್ಲಿ ಇದ್ದರೂ ಆತನ ಆಲೋಚನೆಗಳು ಸಮತೋಲನದಲ್ಲಿ ಇರುತ್ತವೆ. ಆದರೆ, ಖಿನ್ನತೆಯಲ್ಲಿ ಇರುವಂತಹ ವ್ಯಕ್ತಿಗೆ ಯಾವಾಗಲೂ ನಕಾರಾತ್ಮಕ, ಹತಾಶ ಆಲೋಚನೆಗಳು ಬರುತ್ತವೆ. ಜೀವನಾಸಕ್ತಿ ಕಡಿಮೆ ಆಗುತ್ತದೆ. ಎಷ್ಟೋ ಬಾರಿ ತಮ್ಮದೇ ಆದ ಗುಂಗಿನಲ್ಲಿ ಇರುತ್ತಾರೆ. ಏಕಾಂತವನ್ನು ಬಯಸುತ್ತಾರೆ. ಇತರರೊಂದಿಗೆ ಬೆರೆಯಲು ಇಷ್ಟಪಡುವುದಿಲ್ಲ. ತಮ್ಮೊಳಗೆ ಆಗುತ್ತಿರುವ ತಳಮಳವನ್ನು ಯಾರೊಡನೆಯೂ ಹೇಳಿಕೊಳ್ಳುವುದಕ್ಕೆ ಅವರು ತಯಾರಿರುವುದಿಲ್ಲ. ಮಾತ್ರವಲ್ಲ, ತಮ್ಮ ಜೀವನದ ಸಮಸ್ಯೆಯ ಜಂಜಾಟದಿಂದ ಹೊರಬರಬಹುದು ಎಂಬ ಆಶಾಭಾವ ಅವರಲ್ಲಿ ಇರುವುದಿಲ್ಲ. ಹಾಗಾಗಿ, ಅದು ಮತ್ತೆ ಮತ್ತೆ ಅವರನ್ನು ತನ್ನದೇ ಆದ ಕೂಪಕ್ಕೆ ಸೆಳೆಯುತ್ತದೆ.

ತೀವ್ರವಾದ ದುಃಖವು ಖಿನ್ನತೆಗಿಂತ ಭಿನ್ನವಾಗಿರುತ್ತದೆ. ಆದರೆ, ಎಚ್ಚರಿಕೆ ವಹಿಸಬೇಕಾದದ್ದು ಏನೆಂದರೆ, ಅತಿಯಾದ ದುಃಖವನ್ನು ತಾತ್ಕಾಲಿಕ ಎಂದು ಅಲಕ್ಷ್ಯ ಮಾಡಿದರೆ, ಅದೇ ಆಮೇಲೆ ಖಿನ್ನತೆಗೆ ಕಾರಣವಾಗಬಹುದು. ಹಾಗಾಗಿ, ಯಾವುದೇ ಕಾರಣಕ್ಕೂ ತೀವ್ರವಾದ ದುಃಖದಲ್ಲಿ ಕಳೆದುಹೋಗಬೇಡಿ.

ಎಚ್.ಎಂ. ರೇವಣ್ಣ ಪುತ್ರನ ಕಾರು ಡಿಕ್ಕಿ: ವ್ಯಕ್ತಿ ಸಾವು

ಹಿಟ್ ಆ್ಯಂಡ್ ರನ್ ಪ್ರಕರಣ; 'ಕಾರು ಓಡಿಸುತ್ತಿದ್ದುದು ನಾನಲ್ಲ, ಚಾಲಕ: ಶಶಾಂಕ್'

ಪ್ರಜಾವಾಣಿ ವಾರ್ತೆ


ರಾಜೇಶ್

ಮಾಗಡಿ: ಗ್ಯಾರಂಟಿ ಯೋಜನೆಗಳ ರಾಜ್ಯಮಟ್ಟದ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ ಅವರ ಪುತ್ರ ಆರ್.ಶಶಾಂಕ್ ಅವರ ಕಾರು ಗುರುವಾರ ರಾತ್ರಿ ತಾಲ್ಲೂಕಿನ ಗುಡೇಮಾರನ ಹಳ್ಳಿ ಮುಖ್ಯರಸ್ತೆಯ ಸಿಡಿಗನಹಳ್ಳಿ ಬಳಿ ಸ್ಕೂಟರ್‌ಗೆ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಬೆಳಗುಂಬ ಗ್ರಾಮದ ರಾಜೇಶ್ (27) ಮೃತಪಟ್ಟವರು. ಬೆಂಗಳೂರಿನ ಖಾಸಗಿ ಕಂಪನಿಯ ಉದ್ಯೋಗಿಯಾಗಿದ್ದ ಅವರು, ಕೆಲಸ ಮುಗಿಸಿಕೊಂಡು ರಾತ್ರಿ 10ಕ್ಕೆ ಮನೆಯತ್ತ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ.

ಮಾಗಡಿಯಿಂದ ಬೆಂಗಳೂರು ಕಡೆಗೆ ಹೊರಟಿದ್ದ ಶಶಾಂಕ್ ಅವರಿದ್ದ ಕಾರು ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಗಂಭೀರವಾಗಿ ಗಾಯಗೊಂಡ ರಾಜೇಶ್ ಸ್ಥಳದಲ್ಲೇ ಕೊನೆಯುಸಿರೆಳೆದರು ಎಂದು ಮೂಲಗಳು ತಿಳಿಸಿವೆ.

ಅಪಘಾತ ನಂತರ ಚಾಲಕ ಕಾರನ್ನು ನಿಲ್ಲಿಸದೆ ಸ್ಥಳದಿಂದ ಪರಾರಿಯಾಗಿದ್ದಾನೆ. ಸ್ಥಳದಲ್ಲಿದ್ದ ಕೆಲವರು ಗುಡೇಮಾರನಹಳ್ಳಿ ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದಾರೆ. ಜೊತೆಗೆ ಕಾರನ್ನು ಬೆನ್ನಟ್ಟಿ ಹೋಗಿ ಬೆಂಗಳೂರು- ಮಂಗಳೂರು ರಾಷ್ಟ್ರೀಯ ಹೆದ್ದಾರಿ ಲಕ್ಕೇನಹಳ್ಳಿ ಬಳಿ ಅಡ್ಡಗಟ್ಟಿದ್ದಾರೆ. ಆಗ ಕಾರಿನಲ್ಲಿದ್ದ ವ್ಯಕ್ತಿ ಎಚ್.ಎಂ.ರೇವಣ್ಣ ಅವರ ಪುತ್ರ ಶಶಾಂಕ್ ಎಂದು ಗೊತ್ತಾಗಿದೆ. ಕುದೂರು ಠಾಣೆ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ, ಶವವನ್ನು ಮಾಗಡಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ಮರಣೋತ್ತರ ಪರೀಕ್ಷೆ ನಂತರ ಕುಟುಂಬದವರಿಗೆ ಶವ ಹಸ್ತಾಂತರಿಸಲಾಗಿದೆ.

ಎಫ್‌ಐಆರ್‌ನಲ್ಲಿ ವಾಹನ ಸಂಖ್ಯೆ; ಚಾಲಕನ ಹೆಸರಿಲ್ಲ

ಮೃತ ಯುವಕನ ಸಂಬಂಧಿ ಮಾಗಡಿ ತಿರುಮಲೆಯ ರಾಜೇಶ್ ಕುದೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಗುರುವಾರ ರಾತ್ರಿ ಮಾಗಡಿ ಗುಡೇಮಾರನಹಳ್ಳಿ ಮುಖ್ಯ ರಸ್ತೆಯಲ್ಲಿ ಕೆಎ 51 ಎಂಸಿಸ್ಯು. 0555 ಕಾರು ಮುಂದೆ ಹೋಗುತ್ತಿದ್ದ ಬೈಕ್ ಓವರ್ ಟೇಕ್ ಮಾಡಲು ಹೋಗಿ ಎದುರುಗಡೆಯಿಂದ ಬರುತ್ತಿದ್ದ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ತಲೆಗೆ ತೀವ್ರ ಪೆಟ್ಟು ಬಿದ್ದು ಬೈಕ್ ಸವಾರ ರಾಜೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರಿನ ಚಾಲಕನನ್ನು ಪತ್ತೆಹಚ್ಚಿ ಕಾನೂನಿನ ರೀತಿ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಈ ದೂರಿನ ಮೇರೆಗೆ ಕುದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆದರೆ, ಅಪಘಾತ ಎಸಗಿದ ಕಾರು ಮತ್ತು ವಿಚಾರದ ಕಾಲಂನಲ್ಲಿ ವಾಹನದ ಸಂಖ್ಯೆ ನಮೂದಿಸಲಾಗಿದೆ. 'ಕಾರು ಚಾಲಕ' ಎಂದಷ್ಟೇ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದು,ಹೆಸರು ನಮೂದಿಸಿಲ್ಲ.

'ಚಾಲಕ ಕಾರು ಓಡಿಸುತ್ತಿದ್ದ'

ಶಶಾಂಕ್ ರೇವಣ್ಣ

'ನಾನು ಕಾರು ಚಲಾಯಿಸುತ್ತಿರಲಿಲ್ಲ. ನಮ್ಮ ಚಾಲಕ ನಾಗರಾಜ್ ಕಾರು ಓಡಿಸುತ್ತಿದ್ದ' ಎಂದು ಶಶಾಂಕ್ ರೇವಣ್ಣ ಹೇಳಿದ್ದಾರೆ.

'ಮಾಗಡಿ ತೋಟದ ಮನೆಯಲ್ಲಿ ಪೂಜೆ ಮುಗಿಸಿ ಮಗಳೊಂದಿಗೆ ಐವರು ಕಾರಿನಲ್ಲಿ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದೆವು. ಸಿಡಿಗನಹಳ್ಳಿ ಸಮೀಪ ಎದುರಿನಿಂದ ಎರಡು ಬೈಕ್‌ಗಳು ಅತಿ ವೇಗವಾಗಿ ಬಂದು ನಮ್ಮ ಕಾರಿಗೆ ಗುದ್ದಿದವು. ಕಾರಿನಲ್ಲಿದ್ದ ಮಗಳು ಭಯಪಡುತ್ತಾಳೆ ಎಂದು ಅಪಘಾತ ನಡೆದ ಸ್ಥಳದಿಂದ ಸ್ವಲ್ಪ ಮುಂದೆ ಹೋದೆವು. ನನ್ನ ತಂದೆಗೆ ಮಾಹಿತಿ ನೀಡಿ ಕಾರನ್ನು ಅಲ್ಲೇ ಕಳಿಸಿ, ಬೇರೆ ಕಾರಿನಲ್ಲಿ ನಾವು ಬೆಂಗಳೂರು ತಲುಪಿದೆವು' ಎಂದು ಅವರು ಹೇಳಿದರು.

ಮಾಗಡಿಯ ತಮ್ಮ ತೋಟದ ಮನೆಯಲ್ಲಿ ಗುರುವಾರ ಪೂಜಾ ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಹೊರಟಿದ್ದ ಎಚ್.ಎಂ.ರೇವಣ್ಣ ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿದರು. 'ಎರಡು ಬೈಕ್ ನನ್ನ ಮಗನ ಕಾರಿಗೆ ಬಂದು ಗುದ್ದಿವೆ. ಬೈಕ್ ಸವಾರ ಕೆಳಗೆ ಬಿದ್ದು ಸಾವನ್ನಪ್ಪಿದ್ದಾನೆ. ಅದಕ್ಕಾಗಿ ವಿಷಾದಿಸುತ್ತೇನೆ. ಮೃತನ ಮನೆಗೆ ತೆರಳಿ ಸಾಂತ್ವನ ಹೇಳುತ್ತೇನೆ. ಕಾನೂನಿನ ಪ್ರಕಾರ ಕುಟುಂಬಕ್ಕೆ ಏನು ಪರಿಹಾರ ತಲುಪಬೇಕು ತಲುಪಲಿ. ನಾನು ಅವರ ಕುಟುಂಬದ ಜತೆ ನಿಲ್ಲುವ ಕೆಲಸ ಮಾಡುತ್ತೇನೆ' ಎಂದು ಅವರು ತಿಳಿಸಿದರು.

ಮೀಸಲಾತಿ ಹಂಚಿಕೆ: ಕಾನೂನು ರೂಪಿಸಲು ಆಂಜನೇಯ ಆಗ್ರಹ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿ ಹಂಚಿಕೆ ಹಾಗೂ ಅನುಷ್ಠಾನದ ವಿಷಯದಲ್ಲಿ ರಾಜ್ಯ ಸರ್ಕಾರ ಕಾನೂನು ರೂಪಿಸಬೇಕು. ಒಳ ಮೀಸಲಾತಿ ಜಾರಿ ಬಳಿಕವೂ ಮುಂದುವರಿದಿರುವ ಗೊಂದಲಗಳನ್ನು ನಿವಾರಿಸಬೇಕು' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್.ಆಂಜನೇಯ ಒತ್ತಾಯಿಸಿದರು.

'ಮೀಸಲಾತಿ ಪ್ರಮಾಣ ಏರಿಕೆ ಮಾಡಿರುವ ಕ್ರಮದ ವಿರುದ್ಧ ಕೆಲವರು ಕೋರ್ಟ್‌ಗೆ ಹೋಗಿದ್ದಾರೆ. ಕಾನೂನು ರೂಪಿಸುವ ಮೂಲಕ ಸರ್ಕಾರ ಈ ದಾವೆ ಕೋರ್ಟ್‌ನಲ್ಲಿ ನಿಲ್ಲದಂತೆ ನೋಡಿಕೊಳ್ಳಬೇಕು. ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳು ಮೀಸಲಾತಿ ಏರಿಕೆ ಮಾಡಿರುವುದನ್ನು ಸಮರ್ಥಿಸಿ ಕಾನೂನು ರೂಪಿಸಿವೆ. ಅದೇ ಮಾದರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಬದ್ಧತೆ ತೋರುತ್ತಾರೆ ಎಂಬ ವಿಶ್ವಾಸವಿದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಬಿಜೆಪಿ ಸರ್ಕಾರದ ಅವಧಿಯಲ್ಲೇ ಎಸ್‌ಸಿ ಮೀಸಲಾತಿಯನ್ನು ಶೇ 15ರಿಂದ 17ಕ್ಕೆ, ಎಸ್‌ಟಿ ಮೀಸಲಾತಿಯನ್ನು ಶೇ 3ರಿಂದ 7ಕ್ಕೆ ಏರಿಕೆ ಮಾಡಲಾಯಿತು. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರ ದಲ್ಲಿತ್ತು. ಸಂವಿಧಾನಕ್ಕೆ ತಿದ್ದುಪಡಿ ತಂದು ಆಗಲೇ ಕಾನೂನು ರೂಪಿಸುವ ಎಲ್ಲಾ ಅವಕಾಶಗಳು ಇದ್ದವು. ಈಗಲಾದರೂ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇಡಬ್ಲ್ಯುಎಸ್) ಮೀಸಲಾತಿಗೆ ಕಾನೂನು ರೂಪಿಸಿದಂತೆ ಎಸ್‌ಸಿ, ಎಸ್‌ಟಿ ಮೀಸಲಾತಿಗೂ ಕಾನೂನು ರೂಪ ನೀಡಬೇಕು' ಎಂದು ಒತ್ತಾಯಿಸಿದರು.

'ಕುತಂತ್ರಿಗಳ ಶಿಕ್ಷಿಸುವ ಕಾನೂನು ಬರಲಿ'

'ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿ ಎಕೆ, ಎಡಿ, ಎಎ ಗುಂಪು ಪ್ರಕ್ಷೇಪಿಸಿ ಮೀಸಲಾತಿ ನೀಡಲಾಗಿತ್ತು. ಆದರೆ ಸರ್ಕಾರ ಅದನ್ನು ಪರಿಷ್ಕರಿಸಿ ಮೂಲ ಜಾತಿಯ ವಿವರ ನೀಡಿ ಎ ಅಥವಾ ಬಿ ವರ್ಗಕ್ಕೆ ಸೇರಿಕೊಳ್ಳುವಂತೆ ಆದೇಶಿಸಿತು. ಈಗ ಕೆಲ ಕುತಂತ್ರಿಗಳು ಇದನ್ನು ದುರುಪಯೋಗ ಮಾಡಿಕೊಂಡು ದುರ್ಬಲರಾಗಿರುವ ಮಾದಿಗರ ಮೀಸಲಾತಿ ಕಸಿಯಲು ಎ ವರ್ಗಕ್ಕೆ ನುಸುಳುತ್ತಿದ್ದಾರೆ ಅವರಿಗೆ ಕಠಿಣ ಶಿಕ್ಷೆ ವಿಧಿಸುವ ಕಾನೂನು ಬರಬೇಕು' ಎಂದು ಆಂಜನೇಯ ಒತ್ತಾಯಿಸಿದರು.

ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಕ್ಯಾಂಪಸ್‌ನ ವಿಜ್ಞಾನ ಭವನದಲ್ಲಿ ಶುಕ್ರವಾರ ನಡೆದ ವಲಯ ಮಟ್ಟದ 'ಪ್ರಜಾವಾಣಿ ರಸಪ್ರಶ್ನೆ ಚಾಂಪಿಯನ್‌ಶಿಪ್' ಸ್ಪರ್ಧೆಯಲ್ಲಿ ವಿಜೇತರಾಗಿ ರಾಜ್ಯಮಟ್ಟಕ್ಕೆ ಆಯ್ಕೆಯಾದ ಶ್ರೀರಾಮಕೃಷ್ಣ ವಿದ್ಯಾಶಾಲೆಯ ರಿಷಿ ಭಾರ್ಗವ್ ಶ್ರಾಫ್ ಹಾಗೂ ಹಿರೇನ್ ಬಿ.ರೈ ಅವರಿಗೆ ವಿವಿಯ ಮಾಳವೀಯ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ಎಚ್‌.ಪಿ. ಅವರು ₹5 ಸಾವಿರ ನಗದು ಬಹುಮಾನದ ಚೆಕ್ ವಿತರಿಸಿದರು. ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಇದ್ದರು –ಪ್ರಜಾವಾಣಿ ಚಿತ್ರ

'ಟಿಬೆಟ್ ಪರಂಪರೆ ಜೀವಂತ'

ಪ್ರಜಾವಾಣಿ ವಾರ್ತೆ

ಮುಂಡಗೋಡ (ಉತ್ತರ ಕನ್ನಡ): 'ಟಿಬೆಟ್‌ನ ಪರಂಪರೆಯನ್ನು ಚೀನಾ ಹಾಳು ಮಾಡಲು ಪ್ರಯತ್ನಿಸಿತು. ಆದರೆ, ಭಾರತದಲ್ಲಿ ಬೌದ್ಧ ಅಧ್ಯಯನ-ವನ್ನು ನಿರಂತರವಾಗಿ ಮಾಡುತ್ತ, ಟಿಬೆಟ್ ಪರಂಪರೆಯನ್ನು ಜೀವಂತವಾಗಿಡಲು ಸಾಧ್ಯವಾಗಿದೆ' ಎಂದು ಟಿಬೆಟಿಯನ್ ಧರ್ಮ ಗುರು 14ನೇ ದಲೈ ಲಾಮಾ ಹೇಳಿದರು.

ಇಲ್ಲಿನ ಟಿಬೆಟ್ ಕ್ಯಾಂಪ್‌ಗೆ ಶುಕ್ರವಾರ ಆಗಮಿಸಿ ಬೌದ್ಧ ಮಂದಿರದಲ್ಲಿ ಬಿಕ್ಕುಗಳನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಳಂದಾ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಲು, ಬಿಕ್ಕುಗಳು ನಿರಂತರ ಅಧ್ಯಯನ ಮಾಡಬೇಕು' ಎಂದರು.

ಹುಬ್ಬಳ್ಳಿಯಿಂದ ಮುಂಡಗೋಡಿಗೆ ಪಯಣ

ಹುಬ್ಬಳ್ಳಿಗೆ ವಿಮಾನ ಮೂಲಕ ಬಂದಿಳಿದ ದಲೈ ಲಾಮಾ ಅವರನ್ನು ಧಾರವಾಡ ಜಿಲ್ಲಾಧಿಕಾರಿ ದಿವ್ಯಪ್ರಭು, ಹುಬ್ಬಳ್ಳಿ ವಿಮಾನ ನಿಲ್ದಾಣದ ನಿರ್ದೇಶಕ ರೂಪೇಶ್‌ಕುಮಾರ್ ಲೋಹಾನಿ, ವಿವಿಧ ಇಲಾಖೆಗಳ ಅಧಿಕಾರಿಗಳು, ಟಿಬೆಟ್ ಕ್ಯಾಂಪ್‌ನ ಪ್ರಮುಖರು ಸ್ವಾಗತಿಸಿದರು. ಕೆಲ ಹೊತ್ತು ಅಧಿಕಾರಿಗ-ಳೊಂದಿಗೆ ಸಂವಾದ ನಡೆಸಿದ ದಲೈ ಲಾಮಾ ಅವರು ವಿಶೇಷ ಭದ್ರತೆಯುಳ್ಳ ವಾಹನಗಳೊಂದಿಗೆ ಮುಂಡಗೋಡಿಗೆ ಪ್ರಯಾಣ ಬೆಳೆಸಿದರು.

'ಜಗತ್ತಿನಲ್ಲಿ ಶಾಂತಿ ನೆಲೆಸುವಂತೆ ಮಾಡಲು ಬೌದ್ಧ ಅಧ್ಯಯನ ಅವಶ್ಯ. ಬೌದ್ಧ ತತ್ವ ಮತ್ತು ವಿಜ್ಞಾನ ನಡುವೆ ಸಂಬಂಧವಿದೆ. ಬೌದ್ಧ ಅಧ್ಯಯನ-ದಲ್ಲಿ ಹಲವು ವಿಜ್ಞಾನಿಗಳು ಆಸಕ್ತಿ ತೋರುತ್ತಿರುವುದು ಇದಕ್ಕೆ ಸಾಕ್ಷಿ. ನಾನು 130 ವರ್ಷಗಳವರೆಗೆ ಬದುಕುತ್ತೇನೆ' ಎಂದರು.

ಇದಕ್ಕೂ ಮುನ್ನ ಆರು ವರ್ಷಗಳ ಬಳಿಕ ಭೇಟಿ ನೀಡಿದ ದಲೈ ಲಾಮಾ ಅವರನ್ನು ಬೌದ್ಧ ಮುಖಂಡರು ಸಾಂಪ್ರ-ದಾಯಿಕವಾಗಿ ಬರಮಾಡಿಕೊಂಡರು. ಕೈಯಲ್ಲಿ ಬಿಳಿ ರುಮಾಲು (ಖತಾ) ಹಿಡಿದು ಬಿಕ್ಕುಗಳು ನಮಸ್ಕರಿಸಿದರು.

90 ವಯಸ್ಸಿನ ದಲೈ ಲಾಮಾ ಅವರು ಇಲ್ಲಿ 45 ದಿನ ವಾಸವಿರಲಿದ್ದು, ವಿವಿಧ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವರು. ಅವರನ್ನು ಭೇಟಿಯಾಗುವವರು, ಟಿಬೆಟ್ ಸಂಘಟನೆಯಿಂದ ಮುಂಚಿತವಾಗಿ ಅನುಮತಿ ಪಡೆಯಬೇಕು.

ಕಡ್ಡಾಯ ಶಿಕ್ಷಣ ಸುಧಾಮೂರ್ತಿ ನಿರ್ಣಯ

ನವದೆಹಲಿ: ಪೂರ್ವ ಪ್ರಾಥಮಿಕ ಕಲಿಕೆ ಸೇರಿದಂತೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಬೇಕೆಂದು ಕೋರಿ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರು ರಾಜ್ಯಸಭೆಯಲ್ಲಿ ಶುಕ್ರವಾರ ನಿರ್ಣಯ ಮಂಡಿಸಿದ್ದಾರೆ.

ಸಂವಿಧಾನದಲ್ಲಿ ಹೊಸ ವಿಧಿ 21 ಬಿ ಸೇರಿಸಿ 3ರಿಂದ 6 ವರ್ಷದ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯವಾಗಿ ಶೈಶವಾವಸ್ಥೆಯ ಸಮಯದಲ್ಲಿ ಆರೈಕೆ, ಆರೋಗ್ಯ ಹಾಗೂ ಶಿಕ್ಷಣ ಕೊಡಬೇಕೆಂದು ನಿರ್ಣಯದಲ್ಲಿ ತಿಳಿಸಿದ್ದಾರೆ. ದೇಶದ ಎಲ್ಲ ಮಕ್ಕಳಿಗೂ ಗುಣಮಟ್ಟದ ಸೌಲಭ್ಯ ಒದಗಿಸಬೇಕು ಎಂದೂ ಅವರು ಹೇಳಿದ್ದಾರೆ.

ಚಕ್ರದ ಕಟ್ಟಿಗೆ ಮುರಿದು ಅರ್ಧಕ್ಕೇ ನಿಂತ ರಥ

ಯಡ್ರಾಮಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ ಶುಕ್ರವಾರ ರಥದ ಚಕ್ರದ ಕಟ್ಟಿಗೆ ಮುರಿದು ಮಡಿವಾಳೇಶ್ವರರ ರಥೋತ್ಸವವು ಅರ್ಧಕ್ಕೆ ಸ್ಥಗಿತಗೊಂಡಿತು.

ಸಂಜೆ ನಡೆಯಬೇಕಿದ್ದ ರಥೋತ್ಸವ ಕಣ್ತುಂಬಿಕೊಳ್ಳಲು ಸಾವಿರಾರು ಭಕ್ತರು ಬಂದಿದ್ದರು. ರುದ್ರಮುನಿ ಶಿವಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ, ಪಲ್ಲಕ್ಕಿ ಉತ್ಸವ ಮಠದ ಸ್ವಾಮೀಜಿ ಸೇರಿ ಅನೇಕರು ರಥಕ್ಕೆ ಐದು ಸುತ್ತು ಸುತ್ತುವರೆದ ರಥ ಏರಿದರು. ಭಕ್ತರ ಜಯಘೋಷದೊಂದಿಗೆ ರಥೋತ್ಸವಕ್ಕೆ ಚಾಲನೆ ದೊರೆಯಿತು. ರಥವು, ಸುಮಾರು 20 ಮೀ. ದೂರ ಸಾಗುತ್ತಿದ್ದಂತೆ, ಚಕ್ರದಲ್ಲಿ ವ್ಯತ್ಯಾಸ ಆಗಿರುವುದು ಹಾಗೂ ಮುರಿಯುವ ಶಬ್ದ ಕೇಳಿತು. ತಕ್ಷಣ ಭಕ್ತರು ರಥ ನಿಲ್ಲಿಸಿದ್ದಾರೆ. ನಂತರ ಪರೀಕ್ಷಿಸಿದಾಗ ಚಕ್ರದ ಕಟ್ಟಿಗೆ (ಗಾಲಿ ಹಚ್ಚ) ಮುರಿದಿರುವುದು ಗೊತ್ತಾಗಿ, ರಥೋತ್ಸವವನ್ನು ಸ್ಥಗಿತಗೊಳಿಸಿ-ದ್ದಾರೆ. ರಥದಲ್ಲಿದ್ದ ಸ್ವಾಮೀಜಿಯವರನ್ನು ಕೆಳಗಿಳಿಸಿದ್ದಾರೆ.

'ನಮಗೆ ಅನ್ಯಾಯ ಮಾಡಬೇಡಿ' ಎಂದ ಅತಿಥಿ ಉಪನ್ಯಾಸಕರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸೇವೆ ಕಾಯಂ ಮಾಡಬೇಕು ಎಂಬುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅತಿಥಿ ಉಪನ್ಯಾಸಕರು, ಇಲ್ಲಿನ ಸುವರ್ಣ ವಿಧಾನಸೌಧದ ಬಳಿ ಶುಕ್ರವಾರ ಪ್ರತಿಭಟನೆ ಮಾಡಿದರು.

ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ಅತಿಥಿ ಉಪನ್ಯಾಸಕರು, 'ನ್ಯಾಯ ಸಿಗುವವರೆಗೆ ನಾವು ಇಲ್ಲಿಂದ ಕದಲುವುದಿಲ್ಲ. ನಮ್ಮ ಸಾವು ಇಲ್ಲಿಯೇ ಆಗಲಿ. ನಮ್ಮನ್ನು ಇದೇ ಸ್ಥಳದಲ್ಲಿ ಮಣ್ಣು ಮಾಡಿ, ಇಲ್ಲವೇ ನ್ಯಾಯ ಕೊಡಿ. ಶಿಕ್ಷಣ ಮತ್ತು ಕಾನೂನು ಸಚಿವರು ಬಂದು ನ್ಯಾಯ ಕೊಡಿಸಬೇಕು' ಎಂದರು. ಮಧ್ಯಾಹ್ನ ಸ್ಥಳಕ್ಕೆ ಬಂದ ಸಚಿವ ಶರಣಬಸಪ್ಪ ದರ್ಶನಾಪೂರ ಮನವಿಪತ್ರ ಸ್ವೀಕರಿಸಿದರು. ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿ ತೆರಳಿದರು. ಅಷ್ಟಕ್ಕೆ ಸಮಾಧಾನವಾಗದ ಪ್ರತಿಭಟನಕಾರರು ಧರಣಿ ಮುಂದುವರಿಸಿದರು.

ಸ್ಥಳಕ್ಕೆ ಬಂದ ವಿಧಾನ ಪರಿಷತ್ ಸದಸ್ಯ ಸಂಕನೂರ ಎದುರು ಕಣ್ಣೀರು ಹಾಕಿದ ಅತಿಥಿ ಉಪನ್ಯಾಸಕಿಯರು,'20 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿ-ರುವ ಅತಿಥಿ ಉಪನ್ಯಾಸಕರನ್ನು ಅರ್ಹತೆ ಇಲ್ಲ ಎಂಬ ನೆಪವೊಡ್ಡಿ ಕರ್ತವ್ಯದಿಂದ ತೆಗೆದು ಹಾಕಿ, ಬೀದಿಪಾಲು ಮಾಡಿದ್ದೀರಿ. ನಮ್ಮ ಕುಟುಂಬ ನಿತ್ಯವೂ ಕಣ್ಣೀರಲ್ಲಿ ಕೈ ತೊಳೆಯುತ್ತಿದೆ' ಎಂದು ನೋವು ತೋಡಿಕೊಂಡರು.

ಭರವಸೆಗಳನ್ನು ನಂಬಿ ಹೋರಾಟ ಕೈ ಬಿಡುವುದಿಲ್ಲ ಎಂದು ಪಟ್ಟು ಹಿಡಿದ ಪ್ರತಿಭಟನಕಾರರು, ಸೌಧಕ್ಕೆ ಮುತ್ತಿಗೆ ಹಾಕಿತ್ತೇವೆ ಎಂದು ಹೊರಟರು. ಪೊಲೀಸರು ಅವರನ್ನು ಸ್ಥಳದಲ್ಲೇ ಹಿಡಿದಿಡಲು ಯತ್ನಿಸಿದರು. ನೂಕಾಟ–ತಳ್ಳಾಟ ನಡೆಯಿತು.

ಸಂಜೆ 5ರ ನಂತರ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಧರಣಿನಿರತ ರೊಂದಿಗೆ ಕೆಳಗೆ ಕುಳಿತರು. ಕೆಲವು ಬೇಡಿಕೆಗಳನ್ನು ಈಗಲೇ ಈಡೇರಿಸಲು ಸಾಧ್ಯವಿದೆ. ಮತ್ತೆ ಕೆಲವರು ಸರ್ಕಾರದ ಮಟ್ಟದಲ್ಲಿ ಆಗಬೇಕು. ಸಚಿವರ ಗಮನಕ್ಕೆ ತಂದು, ಸಭೆ ಏರ್ಪಾಡು ಮಾಡುತ್ತೇನೆ ಎಂದು ಭರವಸೆ ನೀಡಿದರು.ನಂತರ ಧರಣಿಯನ್ನು ತಾತ್ಕಾಲಿಕವಾಗಿ ಹಿಂತೆಗೆ-ದುಕೊಳ್ಳಲಾಯಿತು.

ಕಾಂತಾವರ: ರಾಧಾಕೃಷ್ಣಗೆ 'ಸಾಹಿತ್ಯ ಪ್ರಶಸ್ತಿ'

ಮಂಗಳೂರು: ಕಾಂತಾವರ ಕನ್ನಡ ಸಂಘದ ವಾರ್ಷಿಕ ಪ್ರಶಸ್ತಿಗಳ-ನ್ನು ಘೋಷಿಸಲಾಗಿದ್ದು ಮೊಗಸಾಲೆ ಪ್ರತಿಷ್ಠಾನ ನೀಡುವ ಸಾಹಿತ್ಯ ಪ್ರಶಸ್ತಿಗೆ ಕಾಸರಗೋಡಿನ ಕವಿ ರಾಧಾಕೃಷ್ಣ ಉಳಿಯತ್ತಡ್ಕ ಅವರನ್ನು ಆಯ್ಕೆ ಮಾಡಲಾಗಿದೆ.

ರಾಧಾಕೃಷ್ಣ

ಅಶೋಕ

ಜಯರಾಮ

ಶಶಿರಾಜ

ಮಂಗಳೂರಿನ ರಂಗಕರ್ಮಿ ಶಶಿರಾಜ ಕಾವೂರು ಅವರನ್ನು ಶ್ರೀಪತಿ ಮಂಜನಬೈಲು ದತ್ತಿನಿಧಿಯ 'ರಂಗ ಸನ್ಮಾನ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು, ಸರೋಜಿನಿ ನಾಗಪ್ಪಯ್ಯ ಈಶ್ವರಮಂಗಲ ದತ್ತಿನಿಧಿಯ 'ಯಕ್ಷಗಾನ ಸಾಹಿತ್ಯ ಸಂಶೋಧನ ಪ್ರಶಸ್ತಿ'ಗೆ ಶಿರಸಿಯ ಸಾಹಿತಿ ಅಶೋಕಹಾಸ್ಯಗಾರಆಯ್ಕೆಯಾಗಿದ್ದಾರೆ.

ಸಂಘದ ವಾರ್ಷಿಕ ಗೌರವ ಪ್ರಶಸ್ತಿಗೆ ಹುಲಿಮನೆ ಜಯರಾಮ ಹೆಗಡೆ ಮಿಜಾರು ಭಾಜನರಾಗಿದ್ದಾರೆ.

ದತ್ತಿ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು, ವಾರ್ಷಿಕ ಪ್ರಶಸ್ತಿ ₹ 5 ಸಾವಿರ ನಗದು ಒಳಗೊಂಡಿದೆ. ಪ್ರಶಸ್ತಿ ಪ್ರದಾನ ಸಮಾರಂಭ ಡಿ.28ರಂದು ಕಾಂತಾವರ ಕನ್ನಡ ಭವನದಲ್ಲಿ ಧರ್ಮದರ್ಶಿ ಹರಿಕೃಷ್ಣ ಪುನರೂರು ಅವರ ಅಧ್ಯಕ್ಷ-ತೆಯಲ್ಲಿ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ನಾ ಮೊಗಸಾಲೆ ಮತ್ತು ಪ್ರಧಾನ ಕಾರ್ಯದರ್ಶಿ ಸದಾನಂದ ನಾರಾವಿ ತಿಳಿಸಿದ್ದಾರೆ.

ಪಂಚಾಯತ್ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಗದಗ: ಅಖಿಲ ಭಾರತ ಪಂಚಾಯತ್ ಪರಿಷತ್‌ನ 18ನೇ ರಾಷ್ಟ್ರೀಯ ಸಮ್ಮೇಳನ ಡಿ.13 ಮತ್ತು 14ರಂದು ಇಲ್ಲಿನ ಮಹಾತ್ಮಗಾಂಧಿ ಗ್ರಾಮೀಣಾ-ಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ.

'ಅಖಿಲ ಭಾರತ ಪಂಚಾಯತ್ ಪರಿಷತ್ ಅಧ್ಯಕ್ಷ ಸುಭೋದ್ ಕಾಂತ್ ಸಹಾಯ್, ಕಾರ್ಯಾಧ್ಯಕ್ಷ ಡಾ. ಅಶೋಕ್ ಚೌಹಾಣ್, ಕಾನೂನು ಸಚಿವ ಎಚ್.ಕೆ.ಪಾಟೀಲ, ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ ಸೇರಿ ಪ್ರಮುಖರು ಸಮ್ಮೇಳನದಲ್ಲಿ ಭಾಗವಹಿಸುವರು ಎಂದು ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್. ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ
ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ–04, ಭೂತರಾಯನಹಟ್ಟಿ, ಬೆಳಗಾವಿ–591156
(ನ್ಯಾಕ್ ಮಾನ್ಯತೆ B+ ಗ್ರೇಡ್ –2021) PM USHA (MERU)
ಪರೀಕ್ಷಾ ವಿಭಾಗ
Email: registrareval@rcub.ac.in Website: www.rcub.ac.in Phone No.: 0831-2565237
ಸಂ: ರಾಚವಿ/ಬೆಳಗಾವಿ/ಪವಿ/2025–26/8428 ದಿನಾಂಕ: 12–12–2025
ಅಲ್ಪಾವಧಿ ಮರುಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ)
ಕುಲಸಚಿವರು (ಮೌಲ್ಯಮಾಪನ), ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಪರೀಕ್ಷಾ ವಿಭಾಗದ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳ ನಂತರದ ಕಾರ್ಯಗಳನ್ನು UUCMS ತಂತ್ರಾಂಶ ಅಳವಡಿಸಿಕೊಂಡು ನಿರ್ವಹಿಸುವ ಕಾರ್ಯವನ್ನು ಕೈಗೊಳ್ಳಲು ನೋಂದಾಯಿತ ಸಂಸ್ಥೆಗಳಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ದಿನಾಂಕ: 11–12–2025ರಂದು ಅಲ್ಪಾವಧಿ ಮರುಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ನೋಂದಾಯಿತ ಸಂಸ್ಥೆಗಳು, Website: http://kppp.karnataka.gov.in ಮೂಲಕ ದಿನಾಂಕ: 19.12.2025ರ ಬೆಳಿಗ್ಗೆ 10.30 ಗಂಟೆಯೊಳಗಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್‌ನ ಇ.ಎಮ್.ಡಿ. ಮೊತ್ತ ರೂ. 8,00,000/– ಗಳಾಗಿದ್ದು ಹೆಚ್ಚಿನ ಮಾಹಿತಿಗಾಗಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವೆಬ್ ಸೈಟ್: www.rcub.ac.in ನಲ್ಲಿ ನೋಡಬಹುದು ಹಾಗೂ ಪರೀಕ್ಷಾ ವಿಭಾಗದಿಂದ ಪಡೆಯಬಹುದಾಗಿದೆ.
ಸಹಿ/– ಕುಲಸಚಿವರು ಮೌಲ್ಯಮಾಪನ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್ ಬಾದ್, ಮೈಸೂರು – 10
Ph.No: 0821-2979772 E-mail:-khsdrp.divmys@gmail.com
ಸಂಖ್ಯೆ: ಆಕುಕ/ಇಂ.ವಿ/ಕಾ.ಆ/ಮೈ/ಸಇ–2/ಟೆಂಡರ್–10–2&3ನೇ ಕರೆ/530ನೇ ಪಟ್ಟಿ/AAM-2025-26 ದಿ: 09.12.2025
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವಿಭಾಗ ವ್ಯಾಪ್ತಿಗೆ ಒಳಪಡುವ ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಒಟ್ಟಾರೆ 9 ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿದ್ದು, ಕನಿಷ್ಟ ಅಂದಾಜು ಮೊತ್ತ ರೂ. 53.15 ಲಕ್ಷಗಳಾಗಿರುತ್ತವೆ.
ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 09.12.2025 ರಂದು 16.00 ಗಂಟೆಯವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 10.12.2025 ರಂದು 16.30 ಗಂಟೆಗೆ, ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp.karnataka.gov.in ದಿಂದ ಡ್‌ನ್‌ಲೋಡ್ ಮಾಡಿಕೊಳ್ಳಬಹುದು.
ಸೂಚನೆ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.
DIPR/DDMYS/1341/KSMCA/771/2025-26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಚೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052
ಸಂಖ್ಯೆ: ಉಪ್ರವ್ಯ–3/ಬಿ.ಎಸ್.ಡಬ್ಲ್ಯೂ.ಎಂ.ಎಲ್/ಟೆಂಡರ್/17/2025–26 ದಿನಾಂಕ: 12.12.2025
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಬಿ) (ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಟೆಂಡರ್ ಡಾಕ್ಯುಮೆಂಟ್ ಗಳನ್ನು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ (https://karnataka.gov.in) ಮುಖಾಂತರ ಪ್ರತಿ ಕೆಲಸದ ಮುಂದೆ ನಿಗದಿತ ಶುಲ್ಕವನ್ನು (ಮರುಪಾವತಿ ಮಾಡಲಾಗುವುದಿಲ್ಲ) ಇ–ಪಾವತಿ ರೂಪದಲ್ಲಿ ಪಾವತಿಸುವ ಮೂಲಕ ಡೌನ್‌ಲೋಡ್ ಮಾಡಬಹುದು. ಬಿಡ್‌ದಾರರು ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರಗಳು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	Shifting of Refused Derived Fuel (RDF) from Dry Waste Collection Centres (DWCCs) and Processing plants to Bidadi KPCL Waste to Energy Plant and Shifting of Ash from Waste to Energy Plant to Landfill, Phase-3.	992.00	1.00 ಲಕ್ಷಗಳು/– ಅನ್ನು ಇ–ಪಾವತಿ ಮೂಲಕ, ಅಂದರೆ ಆನ್‌ಲೈನ್ / ಆರ್‌ಟಿಜಿಎಸ್/ ಎನ್‌ಇಎಫ್‌ಟಿ/ಒಟಿಸಿ ಮತ್ತು ಉಳಿದ ರೂ.13,88,000/– ಅನ್ನು ರಾಷ್ಟ್ರೀಕೃತ / ಕೋಷ್ಟಕ ಬ್ಯಾಂಕ್ ನೀಡಿದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸಲಾಗುತ್ತದೆ.

ಸೇವಾ ಒಪ್ಪಂದದ ನಿಗದಿತ ಅವಧಿ : 7 ತಿಂಗಳು
ವೇಳಾಪಟ್ಟಿ:
1. ಪೂರ್ವಭಾವಿ ಸಭೆಯ ದಿನಾಂಕ : 18.12.2025, ಮಧ್ಯಾಹ್ನ 3.00 ಗಂಟೆಗೆ. ಮುಖ್ಯ ಅಭಿಯಂತರರು ಮತ್ತು ಮುಖ್ಯ ಮಹಾ ಪ್ರಬಂಧಕರು (ತಾಂತ್ರಿಕ) ರವರ ಕಚೇರಿ, ಬಿ ಎಸ್ ಡಬ್ಲ್ಯೂ ಎಂ ಎಲ್, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.
2. ಕೆ ಪಿ ಪಿ ಪೋರ್ಟಲ್ ನಲ್ಲಿ ಬಿಡ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 22.12.2025, ಸಂಜೆ 4.00 ಗಂಟೆ ಒಳಗೆ.
3. ಕೆ ಪಿ ಪಿ ಪೋರ್ಟಲ್ ನಲ್ಲಿ ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ : 23.12.2025, ಸಂಜೆ 4.30 ಗಂಟೆ ನಂತರ.
ಯಾವುದೇ ತಿದ್ದುಪಡಿ/ ಸೇರ್ಪಡೆಗಳನ್ನು ಕೆ ಪಿ ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
DIPR/CP/4437/Zen/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ
ಕನೀನಿನಿ. ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ–591116
ತಾಲೂಕು: ಸವದತ್ತಿ. ಜಿಲ್ಲಾ : ಬೆಳಗಾವಿ. ರಾಜ್ಯ: ಕರ್ನಾಟಕ
Dn. e-mail: eemlbcnth@gmail.com Ph: - 08330-224500
ಟೆಂಡರ್ ಪ್ರಕಟಣೆ ಸಂಖ್ಯೆ/ಮಕಾನಿವಿ.2/ಡಿಬಿ/4701 KTR HRN-3/E-tender/2025-26/1889,1890 &1891, ದಿನಾಂಕ: 09-12-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ) (ದ್ವಿ ಲಕೋಟೆ ಪದ್ಧತಿಯಲ್ಲಿ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಮ.ಎ.ಕಾ.ನಿರ್ಮಾಣ ವಿಭಾಗ ನಂ.2 ನವಿಲುತೀರ್ಥ ಕಚೇರಿ ಅಡಿಯಲ್ಲಿ 4701 ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳಿಗೆ (as per KTPP act 2000) ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ ಪ್ರಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ಇ–ಸಂಗ್ರಹಣಾ ಕೋಶದ ಮುಖಾಂತರ) ಶೇಕಡಾವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ
ಕಾಮಗಾರಿಯ ಅಂದಾಜು ಮೊತ್ತ ರೂ.50.00 ರಿಂದ 300.00 ಲಕ್ಷಗಳು.
For Work Indent Number. 3283, 3284 & 3591
1) ಪ್ರಿ ಬಿಡ್ ಮೀಟಿಂಗ್ ದಿನಾಂಕ: 15–12–2025 ರಂದು 11.00 ಗಂಟೆಗೆ 2) ಗುತ್ತಿಗೆದಾರರು ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20–12–2025 ರಂದು ಸಂಜೆ 4.00 ಗಂಟೆವರೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 22–12–2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 23–12–2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ
ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್ ಸಿಸ್ಟಮ್ ಮುಖಾಂತರ www.kppp.karnataka.gov.in ಸಂಪರ್ಕಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ. 08330 224500 ಕಚೇರಿ ವೇಳೆಯಲ್ಲಿ ಸಂಪರ್ಕಿಸುವದು.
ಸಹಿ/– (ಶ್ರೀ. ವಿ. ಕೆ. ಮುದಿಗೌಡರ)
ಕಾರ್ಯನಿರ್ವಾಹಕ ಇಂಜಿನೀಯರ,(ಪ್ರ)
ಕನೀನಿನಿ. ಮ.ಎ.ಕಾ.ನಿ.ವಿಭಾಗ.ನಂ.2 ನವಿಲುತೀರ್ಥ.
ಡಿಐಪಿಆರ್/ಬೆಳಗಾವಿ/1480/ಮಣಿಪಾಲ್/2025–26

ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು
ನಂ. ಆಇ 25 ಜಂ.ಕಾ(ಆ ಮತ್ತು ಸಂ) 2025 ಬೆಂಗಳೂರು, 13ನೇ ಡಿಸೆಂಬರ್ 2025
ಪತ್ರಿಕಾ ಪ್ರಕಟಣೆ
ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2015(P), ದಿನಾಂಕ: 08ನೇ ಜನವರಿ 2016ರ ನಿಬಂಧನೆಯ ಮೇರೆಗೆ ಹೊರಡಿಸಲಾದ 8.27% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2026, (Karnataka SDL 2026) ದಿನಾಂಕ : 12ನೇ ಜನವರಿ 2026 ದಿನಾಂಕವೂ ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 13ನೇ ಜನವರಿ 2026 ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 13ನೇ ಜನವರಿ 2026 ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.
2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ– ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.
3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 8.27% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2025, (Karnataka SDL 2026) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.
"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ."
4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೇ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.
5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.
ಸಹಿ/– (ಇಕ್ರಂ ಶರೀಫ್)
ಸರ್ಕಾರದ ಜಂಟಿ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ
DIPR/CP/4326/Zen/2025-26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕ.ನೀ.ನಿ.ನಿ., ನಂ. 2, ಕಾಲುವೆ ವಿಭಾಗ, ವಡ್ಡರಹಟ್ಟಿ ಕ್ಯಾಂಪ್.
ಸಂಖ್ಯೆ : ಕಾ.ವಿ.2./ಮಾ.ಸಂ.ಸ.ಸೇ.ಟೆಂ/ತಾ.ಶಾ./ಸ.ಇ–2/2025–26/1223
ದಿನಾಂಕ : 10–12–2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ - 3
(ಕೆ.ಪಿ.ಪಿ. ಪೋರ್ಟಲ್ ಪದ್ಧತಿ ಮುಖಾಂತರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕ.ನೀ.ನಿ.ನಿ., ಬೆಂಗಳೂರು ರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ನಂ. 2, ಕಾಲುವೆ ವಿಭಾಗ, ವಡ್ಡರಹಟ್ಟಿ ಕಛೇರಿಯಿಂದ ಲೆಕ್ಕ ಶೀರ್ಷಿಕೆ 2701 ಅಡಿಯಲ್ಲಿ ಕಾಲುವೆ ಹಾಗೂ ಕಾಲೋನಿಗಳ ನಿರ್ವಹಣೆಗಾಗಿ ಮಾನವ ಸಂಪನ್ಮೂಲ ಸರಬರಾಜು ಸೇವೆಗೆ ದ್ವಿ–ಲಕೋಟೆಯಲ್ಲಿ Lumpsum ಟೆಂಡರ್‌ನ್ನು Indent No. : SE0151 ಕರೆಯಲಾಗಿರುತ್ತದೆ.
ಟೆಂಡರಿನ ಪ್ರೀ–ಬಿಡ್ ಸಭೆ ದಿನಾಂಕ : 17–12–2025 ರ ಬೆಳಿಗ್ಗೆ 11.30 ಘಂಟೆಗೆ, ನಂ. 2, ಕಾಲುವೆ ವಿಭಾಗ ವಡ್ಡರಹಟ್ಟಿ ಕ್ಯಾಂಪ್ ಕಛೇರಿಯಲ್ಲಿ ನಿಗಿಧಿಪಡಿಸಲಾಗಿರುತ್ತದೆ. ಅದರಂತೆ ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 22–12–2025 ರ ಸಂಜೆ 5.05 ಘಂಟೆಯವರೆಗೆ ಮತ್ತು ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 23–12–2025 ರ ಸಂಜೆ 5.06 ಘಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ : 26–12–2025 ರ ಬೆಳಿಗ್ಗೆ 11.00 ಘಂಟೆಗೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದೆಂದು ನಿಗಧಿಪಡಿಸಲಾಗಿರುತ್ತದೆ.
ವಿವರಗಳನ್ನು (https://kppp.karnataka.gov.in) ಜಾಲದಲ್ಲಿ ಪಡೆಯಬಹುದು. ಟೆಂಡರ್‌ನ್ನು ಯಾವುದೆ ಸಂದರ್ಭದಲ್ಲಿ ಯಾವುದೇ ಕಾರಣಗಳನ್ನು ನೀಡದೆ ಮುಂದೂಡುವ ಅಥವಾ ರದ್ದುಗೊಳಿಸುವ ಅಧಿಕಾರವಿರುತ್ತದೆ. ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ನಂ. 2, ಕಾಲುವೆ ವಿಭಾಗ,
ವಡ್ಡರಹಟ್ಟಿ ಕ್ಯಾಂಪ್
ಡಿಐಪಿಆರ್/ಕೊಪ್ಪಳ/528/ಮಣಿಪಾಲ್/2025–26

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇಲ್: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ: 08152–200049
ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಪ್ರಕಟಣೆ/1894/2025–26/ ದಿನಾಂಕ:10.12.2025
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:19/2025–26/ ದಿನಾಂಕ:10.12.2025
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಕೆ.ಸಿ–6 (01 ಕಾಮಗಾರಿ), ಕೆ.ಸಿ–5 (01 ಕಾಮಗಾರಿ) ಮತ್ತು ಕೆಡಬ್ಲ್ಯೂ–1 (02 ಕಾಮಗಾರಿಗಳು) ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮಾವಳಿ ಅನ್ವಯ ಎರಡು ಲಕೋಟೆ ಪದ್ಧತಿಯಲ್ಲಿ 4702 ಏತ ನೀರಾವರಿ ಯೋಜನೆ, 4702 ಅಣೆಕಟ್ಟು ಪಿಕಪ್ ಬಂದಾರ, ಎಸ್.ಸಿ.ಪಿ & ಟಿ.ಎಸ್.ಪಿ ಯೋಜನೆಯಡಿಯಲ್ಲಿ 04 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಗರಿಷ್ಠ ಮೊತ್ತ ರೂ.245.00 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 1.06 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಕೆಪಿಪಿ–ಪೋರ್ಟ್‌ಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಕೆಪಿಪಿ–ಪೋರ್ಟ್‌ಲ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ **ದಿನಾಂಕ: 10.12.2025 ರ ಸಂಜೆ 04:30 ಗಂಟೆಯಿಂದ ಪಡೆಯಬಹುದು (Download).** ಕೆಸಿ–6 ಕಾಮಗಾರಿಗೆ ಪ್ರೀ ಬಿಡ್ ಸಭೆಯನ್ನು ದಿನಾಂಕ: **16.12.2025 ರಂದು ಬೆಳಗ್ಗೆ 11.30 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ** ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ (Upload) ದಿನಾಂಕ: **20.12.2025 ಸಂಜೆ 04:30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 22.12.2025ರ ಸಂಜೆ 04:30 ಗಂಟೆಯ ನಂತರ.** ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.kppp.karnataka.gov.in ಅಂತರ್ಜಾಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು. ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ಅನುಮೋದಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:399/ಕೆಎಸ್ಎಂಸಿಎ/2025–26

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ರಾಕ್ಷಸಶಕ್ತಿ ಹೊಂದಿರುವುದು ಒಳ್ಳೆಯದು; ಆದರೆ, ಅದನ್ನು ರಾಕ್ಷಸನಂತೆ ಉಪಯೋಗಿಸುವುದು ಕೆಟ್ಟದ್ದು.
–ವಿಲಿಯಂ ಷೇಕ್ಸ್‌ಪಿಯರ್

ಸಂಪಾದಕೀಯ

ಜೀವವೈವಿಧ್ಯ ತಾಣ ರದ್ದು ನಿರ್ಧಾರ ಜನವಿರೋಧಿ, ಪರಿಸರಕ್ಕೆ ಮಾರಕ

ಬೆಂಗಳೂರಿನ ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳಿರುವ 8.61 ಎಕರೆ ಪ್ರದೇಶವನ್ನು 'ಜೀವವೈವಿಧ್ಯ ಪಾರಂಪರಿಕ ತಾಣ' ('ಬಿಎಚ್‌ಎಸ್') ಎಂದು ಹೊರಡಿಸಿದ್ದ ಆದೇಶವನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹಿಂಪಡೆದಿದೆ. ಈ ನಿರ್ಧಾರ, ಪರಿಸರ ಸಂರಕ್ಷಣೆಯ ಬಗ್ಗೆ ಸರ್ಕಾರಕ್ಕಿರುವ ಬದ್ಧತೆಯ ಕೊರತೆಯನ್ನು ಸಂಕೇತಿಸುವಂತಿದೆ. ಹಸಿರು ವಲಯಗಳ ವಿಸ್ತರಣೆಯ ಅಗತ್ಯ ಹೆಚ್ಚಾಗಿರುವ ಸಂದರ್ಭದಲ್ಲಿ, ಪಾರಿಸರಿಕ ಪ್ರದೇಶಗಳಿಗೆ ಇರುವ ಕಾನೂನಿನ ಸುರಕ್ಷತೆಯನ್ನು ದುರ್ಬಲಗೊಳಿಸುವ ನಿರ್ಧಾರಗಳನ್ನು ಆತ್ಮಹತ್ಯಾತ್ಮಕ ಕೃತ್ಯವೆಂದೇ ಭಾವಿಸಬೇಕಾಗುತ್ತದೆ. ಈ ಮೊದಲು, ಬೆಂಗಳೂರು ಉಪನಗರ ರೈಲ್ವೆ ಯೋಜನೆಗೆ ನಿಧಿ ಸಂಗ್ರಹಿಸುವುದಕ್ಕಾಗಿ ರೈಲ್ವೆ ಭೂಮಿ ಅಭಿವೃದ್ಧಿ ಪ್ರಾಧಿಕಾರ, ವಾಣಿಜ್ಯಾತ್ಮಕ ದಂಡು ಪ್ರದೇಶದ ಬಳಿಯಿರುವ ಕಾಲೊನಿಯಲ್ಲಿನ ಈ ಪ್ರದೇಶವನ್ನು ಖಾಸಗಿ ಸಂಸ್ಥೆಯೊಂದಕ್ಕೆ 60 ವರ್ಷಗಳ ಗುತ್ತಿಗೆ ನೀಡಿತ್ತು. ಗುತ್ತಿಗೆ ಪಡೆದವರು ಬೃಹತ್ ಮರಗಳನ್ನು ಕಡಿಯಲು ಮುಂದಾದಾಗ, ನಾಗರಿಕರು ಮತ್ತು ಪರಿಸರ ಕಾರ್ಯಕರ್ತರ ಪ್ರತಿರೋಧ ಎದುರಾಗಿತ್ತು. ಮರಗಳನ್ನು ಕಡಿಯುವುದರ ವಿರುದ್ಧ ಸಾವಿರಾರು ಜನರು ಸರ್ಕಾರಕ್ಕೆ ಪತ್ರ ಹಾಗೂ ಇ–ಮೇಲ್ ಬರೆಯುವ ಮೂಲಕ ಆಂದೋಲನ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಆ ಹೋರಾಟದಿಂದಾಗಿ, ಜೀವವೈವಿಧ್ಯ ಕಾಯ್ದೆ–2002ರ ನಿಬಂಧನೆಗಳ ಅಡಿಯಲ್ಲಿ 8.61 ಎಕರೆ ಪ್ರದೇಶವನ್ನು 'ಬಿಎಚ್‌ಎಸ್' ಎಂದು 2025ರ ಸೆಪ್ಟೆಂಬರ್‌ನಲ್ಲಿ ಘೋಷಿಸಲಾಗಿತ್ತು. ಈಗ ಆ ಪ್ರಕಟಣೆಯನ್ನು ಇದ್ದಕ್ಕಿದ್ದಂತೆ ಹಿಂದಕ್ಕೆ ಪಡೆದಿರುವುದರಿಂದ, ಮರಗಳ ಸುರಕ್ಷತೆಗೆ ಮತ್ತೆ ಗಂಡಾಂತರ ಎದುರಾದಂತಾಗಿದೆ. ಸಸ್ಯಪ್ರಭೇದಗಳ ಜೊತೆಗೆ, ಅಲ್ಲಿನ ಪರಿಸರದಲ್ಲಿ ಆಸರೆ ಕಂಡುಕೊಂಡಿರುವ ಪಕ್ಷಿ ಹಾಗೂ ಕೀಟ ಸಂಕುಲಗಳೂ ಅಪಾಯ ಎದುರಿಸುವಂತಾಗಿದೆ.



ಬೆಂಗಳೂರು ಮಹಾನಗರದ ಪರಿಸರವನ್ನು ಗಾಸಿಗೊಳಿಸುವ ನಿರ್ಧಾರಗಳನ್ನು ಸರ್ಕಾರ ತೆಗೆದುಕೊಳ್ಳುತ್ತಿದೆ. ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಸಮತೋಲನದಲ್ಲಿ ಎಡವಟ್ಟುಗಳಾಗುತ್ತಿವೆ.

ಮೂರು ತಿಂಗಳ ಹಿಂದಷ್ಟೇ ಹೊರಡಿಸಲಾಗಿದ್ದ ಆದೇಶವನ್ನು ಹಿಂಪಡೆದಿರುವುದಕ್ಕೆ ಅರಣ್ಯ ಇಲಾಖೆ ಯಾವುದೇ ಸ್ಪಷ್ಟ ಕಾರಣಗಳನ್ನು ನೀಡಿಲ್ಲ. ರೈಲ್ವೆ ಇಲಾಖೆಯ ಲಾಭದಾಯಕ ಯೋಜನೆಗಳಿಗೆ ಉತ್ತೇಜನ ನೀಡುವುದಕ್ಕೆ ಉತ್ಸುಕವಾಗಿರುವಂತಿರುವ ಸರ್ಕಾರ, ಅದಕ್ಕೆ ತರಾತುರಿಯಲ್ಲಿ ಬೆಲೆಯನ್ನು ನಿಗದಿಪಡಿಸಿದೆ. ಪರಿಸರ ಕಾಳಜಿ ಹಾಗೂ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಸರ್ಕಾರ ತನ್ನ ನಿಲುವನ್ನು ಹಿಂದಕ್ಕೆ ಪಡೆದು, 8.61 ಎಕರೆ ಪ್ರದೇಶಕ್ಕೆ ನೀಡಿದ್ದ 'ಬಿಎಚ್‌ಎಸ್' ಮಾನ್ಯತೆಯ ಸುರಕ್ಷತೆಯನ್ನು ವಿಳಂಬವಿಲ್ಲದೆ ಮತ್ತೆ ಜಾರಿಗೊಳಿಸಬೇಕು. ಅರಣ್ಯ ಇಲಾಖೆ ನಿರ್ಧಾರ ಬದಲಿಸುವುದರ ಹಿಂದೆ ಇರುವ ಕಾರಣಗಳು ಬಹಿರಂಗವಾಗಬೇಕು. ರಿಯಲ್ ಎಸ್ಟೇಟ್ ಉದ್ಯಮದ ಒತ್ತಡಕ್ಕೆ ಮಣಿದು ಅರಣ್ಯ ಇಲಾಖೆ ತನ್ನ ಬದ್ಧತೆಯಿಂದ ಹಿಂದಕ್ಕೆ ಸರಿದಿದೆ ಎಂದು ಹೇಳಲಾಗುತ್ತಿದೆ. ಸರ್ಕಾರದ ಈ ಕ್ರಮ ಸಾರ್ವಜನಿಕ ಹೋರಾಟಗಳನ್ನು ಅಗೌರವಿಸುವ ನಡೆಯೂ ಆಗಿದೆ.

ಬೆಂಗಳೂರು ಮಹಾನಗರದ ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರದ ಚಿಂತನೆಗಳು ದೂರದೃಷ್ಟಿಯ ಕೊರತೆಯನ್ನು ಹೊಂದಿವೆ. ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ನೆಪದಲ್ಲಿ ರಾಜ್ಯ ಸರ್ಕಾರ ನಿರ್ಮಿಸಲು ಉದ್ದೇಶಿಸಿರುವ ಜೋಡಿ ಸುರಂಗ ರಸ್ತೆ ನಿರ್ಮಾಣ ಯೋಜನೆಯಿಂದ, ಲಾಲ್‌ಬಾಗ್ ಉದ್ಯಾನದ ಜೀವವೈವಿಧ್ಯಕ್ಕೆ ಧಕ್ಕೆಯುಂಟಾಗುವ ಆತಂಕವನ್ನು ಪರಿಸರ ತಜ್ಞರು ವ್ಯಕ್ತಪಡಿಸಿದ್ದಾರೆ. ಒಳಚರಂಡಿ ಮತ್ತು ರಾಜಕಾಲುವೆ ಮಾರ್ಗಗಳ ಮೇಲೂ ಸುರಂಗ ಮಾರ್ಗ ಪರಿಣಾಮ ಬೀರಬಹುದು ಎಂದು ಹೇಳಲಾಗುತ್ತಿದೆ. ಕೆರೆಗಳ ಕಡ್ಡಾಯವಾದ 30 ಮೀಟರ್ ಸಂರಕ್ಷಿತ ಪ್ರದೇಶವನ್ನು ಕಡಿತಗೊಳಿಸುವ ಮೂಲಕ, ಆ ಪ್ರದೇಶದಲ್ಲಿ ನಾಗರಿಕರಿಗೆ ಅನುಕೂಲವಾಗುವ ಮೂಲಸೌಕರ್ಯ ಕಾಮಗಾರಿಗಳನ್ನು ನಡೆಸುವ ಸರ್ಕಾರದ ಚಿಂತನೆಗೂ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಆ ವಿವಾದಾತ್ಮಕ ನಿಲುವುಗಳ ಸಾಲಿಗೆ ಕಂಟೋನ್ಮೆಂಟ್ ಕಾಲೊನಿಯನ್ನು 'ಜೀವವೈವಿಧ್ಯ ಪಾರಂಪರಿಕ ತಾಣ' ವ್ಯಾಪ್ತಿಯಿಂದ ಹೊರಗಿಟ್ಟಿರುವ ಪ್ರಸ್ತುತ ನಿರ್ಧಾರವೂ ಸೇರಿಕೊಂಡಿದೆ. ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವಿನ ಸಮತೋಲನವನ್ನು ಕಾಯ್ದುಕೊಳ್ಳುವ ವಿವೇಕವನ್ನು ಸರ್ಕಾರ ಪ್ರದರ್ಶಿಸದೆ, ಅನಾಹುತಕಾರಿ ಯೋಜನೆಗಳಿಗೆ ಅವಕಾಶ ಕಲ್ಪಿಸಿದರೆ ಅಪಾಯ ಕಟ್ಟಿಟ್ಟ ಬುತ್ತಿ. ನಗರದ ನಿರ್ಮಾಣವೆಂದರೆ ರಸ್ತೆ ಹಾಗೂ ಬೃಹತ್ ಕಟ್ಟಡಗಳ ನಿರ್ಮಾಣ ಮಾತ್ರವಲ್ಲ; ಹಸುರು ವಲಯವನ್ನು ನಿಧಿಯಂತೆ ಜತನವಾಗಿ ಇರಿಸುವುದೂ ನಗರ ನಾಗರಿಕತೆಯ ಲಕ್ಷಣವೇ ಆಗಿದೆ ಹಾಗೂ ಅದು ಸರ್ಕಾರದ ಕರ್ತವ್ಯವೂ ಆಗಿದೆ.

ಚಾವಡಿ

ನಾವೇ ಅಲ್ಲವೆ?

ನೀರು, ನೆಲ, ಗಾಳಿ, ಆಹಾರ, ಆಚಾರ ವಿಚಾರ ಎಲ್ಲವೂ ಕಲುಷಿತಗೊಂಡಿದೆ ಎನ್ನುವುದಾದರೆ, ಅದನ್ನು ಹದಗೆಡಿಸಿದವರಾರು? ಇಲ್ಲಿ ಯಾವುದೂ ಸರಿ ಇಲ್ಲ ಎನ್ನುವುದಾದರೆ, ಸರಿ ಮಾಡಬೇಕಾದವರು ಯಾರು?

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಪರಿಶಿಷ್ಟ ಜಾತಿಯ ಒಳ ಮೀಸಲಾತಿಯ ನೆಪವೊಡ್ಡಿ ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಸ್ಥಗಿತಗೊಳಿಸಿದೆ. ಉತ್ತರ ಕರ್ನಾಟಕ ಸೇರಿದಂತೆ ರೈತರು ಮತ್ತು ದಲಿತರ ಸಮಸ್ಯೆ ಕುರಿತು ಸದನದಲ್ಲಿ ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಪರಿತಪಿಸುತ್ತಿದೆ.

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 13-12-2000

• ಜೆ.ಎಚ್. ಪಟೇಲ್ ಇನ್ನಿಲ್ಲ; ಇಂದು ಅಂತ್ಯಕ್ರಿಯೆ

ಬೆಂಗಳೂರು, ಡಿ. 12– ಕರ್ನಾಟಕ ಕಂಡ ಅತ್ಯಂತ ವರ್ಣರಂಜಿತ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಮತ್ತು ಹಿರಿಯ ಸಮಾಜವಾದಿ ಧುರೀಣ ಜಯದೇವಪ್ಪ ಹಾಲಪ್ಪ ಪಟೇಲ್ (71) ಇನ್ನಿಲ್ಲ.

ಕಳೆದ 12 ದಿನಗಳಿಂದ ಪಿತ್ತಕೋಶದ ಸಮಸ್ಯೆಯಿಂದ ತೀವ್ರ ಅಸ್ವಸ್ಥರಾಗಿದ್ದ ಅವರು, ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಇಂದು ಬೆಳಗಿನ ಜಾವ 2.30ಕ್ಕೆ ಅಸುನೀಗಿದರು. ಕಳೆದ ಒಂದು ವರ್ಷದಿಂದ ಕಾಮಾಲೆ ರೋಗದಿಂದ ಬಳಲಿದ ಅವರು ಈಚೆಗೆ ರಸ್ತೆ ಅಪಘಾತದಲ್ಲಿ ತಮ್ಮ ಇಬ್ಬರು ಸಹೋದರಿಯರು ಮತ್ತು ಮೊಮ್ಮಗಳನ್ನು ಕಳೆದುಕೊಂಡ ನಂತರ ತೀವ್ರ ಜರ್ಜರಿತರಾಗಿದ್ದರು. ಅವರ ಅಂತ್ಯಕ್ಷಣಗಳಲ್ಲಿ ಪತ್ನಿ ಸರ್ವಮಂಗಳಾ, ಪುತ್ರ ಮಹಿಮ ಪಟೇಲ್ ಬಳಿ ಇದ್ದರು. ಪಟೇಲರು ಪತ್ನಿ ಮತ್ತು ಮೂವರು ಪುತ್ರರನ್ನು ಅಗಲಿದ್ದಾರೆ.

• ನಾಲ್ವರು ಬಾಲಕರ ಶವ ಪತ್ತೆ

ಚಾಮರಾಜನಗರ, ಡಿ. 12– ತಾಲ್ಲೂಕಿನ ಚಂದಕವಾಡಿ ಗ್ರಾಮದ ಬಳಿಯಿರುವ ಹೊನ್ನೊಳೆ ನದಿಯಲ್ಲಿ ಸ್ನಾನ ಮಾಡಲೆಂದು ನದಿಗೆ ಇಳಿದ ನಾಲ್ವರು ಬಾಲಕರು ಈಜು ಬಾರದೆ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದು, ಮತ್ತೊಬ್ಬ ಬಾಲಕ ಅಪಾಯದಿಂದ ಪಾರಾಗಿರುವ ಘಟನೆ ನಡೆದಿದೆ.

75 ವರ್ಷಗಳ ಹಿಂದೆ

ಬುಧವಾರ, 13-12-1950

• ಉಕ್ಕಿನ ಕೈಗಾರಿಕೆ ವಿಸ್ತರಣೆ ಯೋಜನೆ

ನವದೆಹಲಿ, ಡಿ. 12– ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ಪ್ರಮುಖ ಉತ್ಪಾದಕರ ವಿಸ್ತರಣೆ ಯೋಜನೆ ಕಾರ್ಯಗತವಾದರೆ ಈಗ ಕೆಲಸ ಮಾಡುತ್ತಿರುವ ಕಾರ್ಖಾನೆಗಳಲ್ಲಿ ಉತ್ಪಾದನೆ ನಾಲ್ಕೂವರೆ ಲಕ್ಷ ಟನ್ ಗಳಷ್ಟು ಹೆಚ್ಚುವುದು.

ಕಳೆದ ಶನಿವಾರ ಯೋಜನಾ ಸಮಿತಿಯು ತಯಾರಕರ ಮತ್ತು ಸರ್ಕಾರದ ಪ್ರತಿನಿಧಿಗಳೊಡನೆ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ಅಭಿವೃದ್ಧಿ ಯೋಜನೆಯ ಬಗ್ಗೆ ಚರ್ಚಿಸಿದಾಗ ಈ ಅಂಶ ಹೊರಬಿತ್ತು.

• ನೂರು ಗಂಟೆಗಳ ಕಾಲ ನೆಲ ಸಮಾಧಿಯಾಗಿದ್ದ ಯೋಗಿ

ಬರೇಲಿ, ಡಿ. 12– ಬ್ರಹ್ಮಋಷಿ ಶಾಂತಾನಂದ ನರಸಿಂಹ ಯೋಗೀಶ್ವರ ಎಂಬ ಯೋಗಿಯು ನಿನ್ನೆ 100 ಗಂಟೆಗಳ ಕಾಲ ನೆಲಸಮಾಧಿಯಲ್ಲಿ ಇದ್ದರು.

ಸಮಾಧಿಗೆಂದು ತೆಗೆಯಲಾಗಿದ್ದ ಗುಂಡಿಯೊಳಕ್ಕೆ ಅವರು ಇಳಿದ ಮೇಲೆ ಬಾಯಿಯ ಮುಚ್ಚಿಗೆಯನ್ನು ಸಿಮೆಂಟಿನಿಂದ ಭದ್ರಪಡಿಸಲಾಗಿತ್ತು.

ಪತನದತ್ತ 'ಸರ್ಕಾರಿ' ಶಾಲೆ?



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

> ಸರ್ಕಾರಿ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ ಕರ್ನಾಟಕ ಸೇರಿದಂತೆ ದೇಶದೆಲ್ಲೆಡೆ ತೀವ್ರಗತಿಯಲ್ಲಿ ನಡೆದಿದೆ. ಶಿಕ್ಷಣವನ್ನು ಮಾರುಕಟ್ಟೆಯ ಸರಕಾಗಿರುವ 'ರಾಜಕೀಯ ಅರ್ಥಶಾಸ್ತ್ರ'ವನ್ನು ಜನ ಅರ್ಥ ಮಾಡಿಕೊಳ್ಳದೆ ಹೋದರೆ ಸಾರ್ವಜನಿಕ ಶಿಕ್ಷಣಕ್ಕೆ ಉಳಿಗಾಲವಿಲ್ಲ.

ಸಾರ್ವಜನಿಕ ಶಿಕ್ಷಣ ರಾಷ್ಟ್ರದ ಅಭಿವೃದ್ಧಿಗೆ ಬುನಾದಿ. ಸಾಮಾಜಿಕ, ಆರ್ಥಿಕ, ರಾಜಕೀಯ ಅಥವಾ ಸಾಂಸ್ಕೃತಿಕ ಬದಲಾವಣೆಯ ತಳಹದಿಗೆ ಗುಣಮಟ್ಟದ ಶಿಕ್ಷಣ ಅಗತ್ಯ ಎಂಬುದನ್ನು ಜಗತ್ತಿನ ಹಲವು ರಾಷ್ಟ್ರಗಳು ನಿರೂಪಿಸಿವೆ. ಇದನ್ನರಿತ ನಮ್ಮ ಸಂವಿಧಾನ ರಚನಕಾರರು ಹದಿನಾಲ್ಕು ವರ್ಷದೊಳಗಿನ ಎಲ್ಲ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒಂದು ಕಾಲಮಿತಿ ಅವಕಾಶವನ್ನಾಗಿ ರಾಜ್ಯ ನಿರ್ದೇಶಕ ತತ್ತ್ವಗಳಲ್ಲಿ ಕಲ್ಪಿಸಿದ್ದರು. ಸಂವಿಧಾನದ ಆಶಯದಂತೆ ಎಲ್ಲ ಮಕ್ಕಳಿಗೆ ಸಂವಿಧಾನ ಜಾರಿಯಾದ ಹತ್ತು ವರ್ಷಗಳಲ್ಲಿ, ಅಂದರೆ 1960ರೊಳಗೆ ಶಿಕ್ಷಣ ಲಭಿಸಬೇಕಿತ್ತು. ಅದು ಸಾಧ್ಯವಾಗಲಿಲ್ಲ.

ಸಂವಿಧಾನದ ಆಶಯವನ್ನು ಈಡೇರಿಸುವಲ್ಲಿ ನಿರೀಕ್ಷಿತ ಸಾಧನೆಯಾಗದ ಕಾರಣಕ್ಕೆ ಶಿಕ್ಷಣ ಕ್ಷೇತ್ರದ ಎಲ್ಲ ಆಯಾಮಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿ ವರದಿ ನೀಡುವಂತೆ 1964ರಲ್ಲಿ ಕೇಂದ್ರ ಸರ್ಕಾರ ಶಿಕ್ಷಣ ಆಯೋಗವನ್ನು ನೇಮಿಸಿತು. ಕೊಥಾರಿ ಆಯೋಗವೆಂದೇ ಹೆಸರಾಗಿರುವ ಆ ಆಯೋಗ, ಶಿಕ್ಷಣ ವ್ಯವಸ್ಥೆಯ ಎಲ್ಲ ಕ್ಷೇತ್ರಗಳನ್ನು ಬಹುಮುಖ ದೃಷ್ಟಿಕೋನದಿಂದ ವಿಶ್ಲೇಷಿಸಿ, 1966ರಲ್ಲಿ 'ದೇಶದ ಭವಿಷ್ಯ ಆಕೆಯ ತರಗತಿಗಳಲ್ಲಿ ರೂಪುಗೊಳ್ಳುತ್ತದೆ' ಎಂಬ ಘೋಷವಾಕ್ಯದೊಂದಿಗೆ ವರದಿ ನೀಡಿತು. ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಶೇ 6ರಷ್ಟನ್ನು ಶಿಕ್ಷಣಕ್ಕೆ ತೊಡಗಿಸುವ ಮೂಲಕ, ಸಮಾನ ಶಾಲಾ ಶಿಕ್ಷಣ ತತ್ತ್ವದ ಅಡಿಯಲ್ಲಿ ಬಲಿಷ್ಠ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕೆಂದು ಶಿಫಾರಸು ಮಾಡಿತ್ತು. ಅದರ ಅನ್ವಯ, 1968, 1986 ಮತ್ತು 1992ರಲ್ಲಿ ರಾಷ್ಟ್ರೀಯ ಶಿಕ್ಷಣನೀತಿಗಳನ್ನು ಜಾರಿಗೊಳಿಸಲಾಯಿತು.

ಈ ಪ್ರಯತ್ನಗಳಿಂದ 70, 80 ಮತ್ತು 90ರ ದಶಕದಲ್ಲಿ ಒಂದು ಉತ್ತಮ ಶಿಕ್ಷಣ ವ್ಯವಸ್ಥೆ ರೂಪಿಸಲು ಸಾಧ್ಯವಾಯಿತು. ಶಿಕ್ಷಣದ ಸಾರ್ವತ್ರೀಕರಣದಿಂದ ಸಮಾನತೆಯ ನೆಲೆಯಲ್ಲಿ ಬಲಿಷ್ಠ ಶಿಕ್ಷಣ ವ್ಯವಸ್ಥೆ ಕಟ್ಟಿಕೊಳ್ಳಲು ಉತ್ತಮ ಭೂಮಿಕೆ ದೇಶದಲ್ಲಿ ಸಿದ್ಧವಾಗಿತ್ತು. ಹೆಚ್ಚಿನ ಶ್ರಮವಿಲ್ಲದೆ, ಸಮಾನ ಶಾಲಾ ಶಿಕ್ಷಣ ವ್ಯವಸ್ಥೆ ಜಾರಿಯಲ್ಲಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಆಯಾ ಊರಿನ ಮಕ್ಕಳು, ಬಡವರು ಶ್ರೀಮಂತರೆನ್ನದೆ, ಸಮೀಪದಲ್ಲಿದ್ದ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿದ್ದರು. ಇಂದು, ಉನ್ನತ ಸ್ಥಾನದಲ್ಲಿರುವ ಬಹುತೇಕ ಮಹನೀಯರು ಕಲಿತು ಬಂದ ವ್ಯವಸ್ಥೆ ಅದಾಗಿತ್ತು. ಸಮಸ್ಯೆಯೇ ಇರಲಿಲ್ಲವೆಂದಲ್ಲ. ಅಲ್ಲಿಯೂ, ಜಾತಿ- ಧರ್ಮದ ಹೆಸರಿನಲ್ಲಿ ತಾರತಮ್ಯ ಇತ್ತು. ಆದರೆ, ಎಲ್ಲರೂ ಒಂದೇ ಶಾಲೆಯಲ್ಲಿ ಸಮಾನ ಅವಕಾಶದ ನೆಲೆಯಲ್ಲಿ ಕಲಿಯುತ್ತಿದ್ದರು.

ಸಮಾನ ಅವಕಾಶದ ಕಲಿಕೆಯ ವ್ಯವಸ್ಥೆ ಹೆಚ್ಚು ದಿನ ಮುಂದುವರಿಯಲಿಲ್ಲ. 1991ರ ನಂತರ ಭಾರತ ಅನುಷ್ಠಾನಗೊಳಿಸಿದ ಉದಾರೀಕರಣ–ಖಾಸಗೀಕರಣ–ಜಾಗತೀಕರಣ ನೀತಿ ಹೊಸ ಬಗೆಯ ಸಂಕಥನವನ್ನು ಪ್ರಾರಂಭಿಸಿತು. ಸರ್ಕಾರಿ ವಲಯದಲ್ಲಿರುವುದೆಲ್ಲ ಕಳಪೆ–ಕನಿಷ್ಠ, ಖಾಸಗಿ ವಲಯದಲ್ಲಿರುವುದು ಉತ್ತಮ–ಶ್ರೇಷ್ಠ ಎಂಬ ಧೋರಣೆಯನ್ನು ಹುಟ್ಟುಹಾಕುವ ಮೂಲಕ, ಶಿಕ್ಷಣದ ಖಾಸಗೀಕರಣ ಪ್ರಾರಂಭವಾಯಿತು. ಅಲ್ಲಿಯವರೆಗೆ ಭಾರತದ ಸಂವಿಧಾನದ ಅನ್ವಯ ಸಮಾನತೆ, ಸಮಾಜವಾದ, ಸಮಾನ ಅವಕಾಶದ ನೆಲೆಯಲ್ಲಿ ರೂಪಿಸಿದ್ದ ಸಾರ್ವತ್ರಿಕ ಶಿಕ್ಷಣ, ಸಾರ್ವತ್ರಿಕ ಆರೋಗ್ಯ, ಸಾರ್ವಜನಿಕ ಉದ್ದಿಮೆ, ಇತ್ಯಾದಿ ಸಾಮಾಜಿಕ ಒಳಿತಿನ ಸೇವಾ ಕ್ಷೇತ್ರಗಳನ್ನು ಖಾಸಗಿ ಲಾಭದಾಯಕ ಉದ್ದಿಮೆಗಳನ್ನಾಗಿಸುವ ಕೆಲಸ ಪ್ರಾರಂಭವಾಯಿತು. ಇದಕ್ಕಾಗಿ ಸರ್ಕಾರಗಳು ನೀಲನಕಾಶೆಯನ್ನು ರೂಪಿಸಿದವು. ಅಲ್ಲಿಂದ ಸಾರ್ವಜನಿಕ ಶಿಕ್ಷಣದ ಅವನತಿ ಪ್ರಾರಂಭವಾಯಿತು.

ಇವೆಲ್ಲದರ ಮಧ್ಯೆಯೂ, ನ್ಯಾಯಾಂಗದ ಕ್ರಿಯಾಶೀಲತೆಯಿಂದ, ರಾಜ್ಯ ನಿರ್ದೇಶಕ ತತ್ತ್ವಗಳ ಅಡಿಯಲ್ಲಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣ, ಸುಪ್ರೀಂ ಕೋರ್ಟ್ ತೀರ್ಪಿನ ಅನ್ವಯ 1993ರಲ್ಲಿ ಮೂಲಭೂತ ಹಕ್ಕೆಂದು ಘೋಷಣೆಯಾಯಿತು. ಮೂಲಭೂತ ಹಕ್ಕಾಗಿರುವ ಜೀವಿಸುವ ಹಕ್ಕಿನ ಭಾಗವಾಗಿ ಶಿಕ್ಷಣದ ಹಕ್ಕು ಪ್ರಾಪ್ತವಾಗುತ್ತದೆ ಎಂಬ ಐತಿಹಾಸಿಕ ತೀರ್ಪು, ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸಿತು. 2002ರಲ್ಲಿ ಸಂವಿಧಾನದ 86ನೇ ತಿದ್ದುಪಡಿಯ ಮೂಲಕ, ಸಂವಿಧಾನದಲ್ಲಿ ಶಿಕ್ಷಣ ಮೂಲಭೂತ ಹಕ್ಕಾಗಿ ಸೇರಿತು (ಅನುಚ್ಛೇದ 21–ಎ). ಇದರ ಅನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ' ನೀಡುವ ಬದ್ಧತೆ ಮತ್ತು ಹೊಣೆಗಾರಿಕೆ ಹೊಂದಿದ್ದವು. ಆ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಕೇಂದ್ರ ಸರ್ಕಾರ 2009ರಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ, 2010ರಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು– ರೂಪಿಸಿ ಜಾರಿಗೊಳಿಸಿತು. ಕರ್ನಾಟಕದಲ್ಲಿ ಈ ನಿಯಮಗಳು 2012ರಲ್ಲಿ ಜಾರಿಯಾದವು.

ಸಂವಿಧಾನದಲ್ಲಿ ಶಿಕ್ಷಣ ಮೂಲಭೂತ ಹಕ್ಕಾದರೇನು? ಅದನ್ನು ಬದ್ಧತೆಯಿಂದ ಜಾರಿಗೊಳಿಸಬೇಕಾದ ಸರ್ಕಾರಗಳಿಗೆ ಅದು ಮೂಲಭೂತ ಕರ್ತವ್ಯವೆನಿಸಲಿಲ್ಲ. ಮೂಲಭೂತ ಹಕ್ಕನ್ನು ಜಾರಿಗೊಳಿಸಬೇಕಿದ್ದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದಿವ್ಯ ನಿರ್ಲಕ್ಷ್ಯ ತಳೆದಿವೆ. ಕಳೆದ ಎರಡು ದಶಕದಿಂದ, ದೇಶದಾದ್ಯಂತ ಸರ್ಕಾರಿ ಶಾಲೆಗಳು ದೊಡ್ಡ ಸಂಖ್ಯೆಯಲ್ಲಿ ಮುಚ್ಚಿವೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ–ಹಾಜರಾತಿ ಗಣನೀಯವಾಗಿ ಕುಸಿದಿದೆ.

ಸಂಸತ್ತಿನಲ್ಲಿ ಶಿಕ್ಷಣ ಖಾತೆಯ ರಾಜ್ಯ ಸಚಿವರು ನೀಡಿದ ಉತ್ತರದ ಪ್ರಕಾರ, 2024–25ನೇ ಶೈಕ್ಷಣಿಕ ವರ್ಷದಲ್ಲಿ 11.7 ಲಕ್ಷ ಮಕ್ಕಳು ದೇಶದಲ್ಲಿ ಶಾಲೆಯಿಂದ ಹೊರಗಿದ್ದಾರೆ. ಶಾಲೆಯಿಂದ ಹೊರಗುಳಿದ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಶಾಲೆಯಿಂದ ಅತಿಹೆಚ್ಚು ಮಕ್ಕಳು (7,84,228) ಹೊರಗುಳಿದ ಕುಖ್ಯಾತಿ ಉತ್ತರ ಪ್ರದೇಶದ್ದಾಗಿದೆ. ಕರ್ನಾಟಕದಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸಂಖ್ಯೆ 9,448.

ಒಂದೆಡೆ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದರೆ, ಇನ್ನೊಂದೆಡೆ ಸರ್ಕಾರಿ ಶಾಲೆಗಳು ಹೆಚ್ಚಿನ ಪ್ರಮಾಣದಲ್ಲಿ ಮುಚ್ಚುತ್ತಿವೆ. 2014–15ನೇ ಸಾಲಿನಲ್ಲಿ, ಭಾರತದಲ್ಲಿ ಒಟ್ಟು 11,07,101 ಸರ್ಕಾರಿ ಶಾಲೆಗಳಿದ್ದವು. 2024–25ರಲ್ಲಿ ಇವುಗಳ ಸಂಖ್ಯೆ 10,13,322ಕ್ಕೆ ಇಳಿದಿದೆ. ಅಂದರೆ, ಕಳೆದ ಒಂದು ದಶಕದಲ್ಲಿ ಬರೋಬ್ಬರಿ 93,779 ಶಾಲೆಗಳನ್ನು ಮುಚ್ಚಿದ್ದೇವೆ. ಶೇಕಡಾವಾರು ಅತಿಹೆಚ್ಚು ಶಾಲೆಗಳನ್ನು ಮುಚ್ಚಿದ ರಾಜ್ಯಗಳಲ್ಲಿ ಕ್ರಮವಾಗಿ ಮಧ್ಯಪ್ರದೇಶ (ಶೇ 24.1), ಜಮ್ಮು ಮತ್ತು ಕಾಶ್ಮೀರ (ಶೇ 21.4), ಒಡಿಶಾ (ಶೇ 17.1), ಅರುಣಾಚಲ ಪ್ರದೇಶ (ಶೇ 16.4), ಉತ್ತರ ಪ್ರದೇಶ (ಶೇ 15.5), ನಾಗಾಲ್ಯಾಂಡ್ (ಶೇ 14.4), ಜಾರ್ಖಂಡ್ (ಶೇ 13.4), ಗೋವಾ (ಶೇ 12.9), ಉತ್ತರಾಖಂಡ (ಶೇ 8.7) ಮತ್ತು ಕರ್ನಾಟಕ (ಶೇ 6.46) ಸೇರಿವೆ. ಇದೇ ಅವಧಿಯಲ್ಲಿ, ಖಾಸಗಿ ಶಾಲೆಗಳ ಸಂಖ್ಯೆ 2,88,164ರಿಂದ 3,31,108ಕ್ಕೆ ಏರಿದೆ.

2023–24ರಲ್ಲಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ 12.75 ಕೋಟಿಯಿದ್ದದ್ದು, 2024–25ರಲ್ಲಿ 12.16 ಕೋಟಿಗೆ ಇಳಿದಿದೆ. ಇದೇ ಅವಧಿಯಲ್ಲಿ ಖಾಸಗಿ ಶಾಲೆಗಳಲ್ಲಿ ದಾಖಲಾತಿ 9 ಕೋಟಿಯಿಂದ 9.58 ಕೋಟಿಗೆ ಹೆಚ್ಚಿದೆ. ಕರ್ನಾಟಕದಲ್ಲಿ 2023–24ರಲ್ಲಿ ಸರ್ಕಾರಿ ಶಾಲೆಯಲ್ಲಿ ದಾಖಲಾಗಿದ್ದ 49.86 ಲಕ್ಷ ಮಕ್ಕಳ ಸಂಖ್ಯೆ 2024–25ರಲ್ಲಿ 47.34 ಲಕ್ಷಕ್ಕೆ ಇಳಿದಿದೆ. ಇದೇ ಅವಧಿಯಲ್ಲಿ ಖಾಸಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ 54.81 ಲಕ್ಷದಿಂದ 56.64 ಲಕ್ಷಕ್ಕೆ ಏರಿದೆ. ಶೂನ್ಯ ಅಥವಾ ಹತ್ತಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳ ಸಂಖ್ಯೆ 2023–24ರಲ್ಲಿ 59,510 ಇದ್ದುದು 2024–25ರಲ್ಲಿ 65,054 ಏರಿದೆ. ಇದು ಕರ್ನಾಟಕದಲ್ಲಿ ಕ್ರಮವಾಗಿ 4,523 ಮತ್ತು 5,327.

ಮೂಲಭೂತ ಸೌಕರ್ಯಗಳ ಸ್ಥಿತಿಗತಿ ನೋಡಿದರೆ, ಶೇ 8.7ರಷ್ಟು ಪ್ರಾಥಮಿಕ ಹಾಗೂ ಶೇ 5.7ರಷ್ಟು ತರಗತಿ ಕೋಣೆಗಳು ಶಿಥಿಲಾವಸ್ಥೆಯಲ್ಲಿವೆ. ಕರ್ನಾಟಕದಲ್ಲಿ ಈ ಸಂಖ್ಯೆ ಕ್ರಮವಾಗಿ ಶೇ 7.6 ಹಾಗೂ ಶೇ 2.5ರಷ್ಟಿದೆ. ಶಿಕ್ಷಣ ಹಕ್ಕು ಕಾಯ್ದೆ ಅನ್ವಯ ಒಂಬತ್ತು ಮೂಲಸೌಕರ್ಯ ಮಾನದಂಡಗಳನ್ನು ಪೂರೈಸುವ ವಿಷಯದಲ್ಲಿ ಅನುಪಾಲನೆಯಾಗಿರುವ ರಾಷ್ಟ್ರೀಯ ಸರಾಸರಿ ಶೇಕಡಾವಾರು ಪ್ರಮಾಣ ಬರೀ 25.5 ಮಾತ್ರ. ಕರ್ನಾಟಕದಲ್ಲಿ ಇದು ಶೇ 23.6ರಷ್ಟಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮೂಲಸೌಕರ್ಯ ಒದಗಿಸಲು ಸೋತಿರುವುದು, ಸರ್ಕಾರಿ ಶಾಲೆಗಳನ್ನು ದುರ್ಬಲಗೊಳಿಸುವ ವೇಗವನ್ನು ಮತ್ತಷ್ಟು ಹೆಚ್ಚಿಸಿದೆ. ನೋಮ್ ಚೋಮ್‌ಸ್ಕಿ ಹೇಳುವಂತೆ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ನಾಶ ಮಾಡಬೇಕೆಂದರೆ, ಅದಕ್ಕೆ ಹೂಡುವ ಹಣವನ್ನು ಕಡಿಮೆ ಮಾಡುತ್ತ ಮೂಲಸೌಕರ್ಯಗಳು ಇಲ್ಲದಂತೆ ಮಾಡಿದರೆ, ಜನರು ತಾವಾಗಿಯೇ ಸಾರ್ವಜನಿಕ ಶಿಕ್ಷಣ–ಆರೋಗ್ಯ ವ್ಯವಸ್ಥೆಯಿಂದ ದೂರ ಸರಿಯುತ್ತಾರೆ.

ಶಿಕ್ಷಣದ ಉದ್ಯಮಿಗಳೂ ಆಗಿರುವ ರಾಜಕಾರಣಿಗಳು ಲಾಭದಾಯಕ ಶಿಕ್ಷಣ ಸಂಸ್ಥೆಗಳನ್ನು ಉಳಿಸಿಕೊಳ್ಳಲು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸುವುದನ್ನು ತಮ್ಮ ರಾಜಕೀಯ ಕಾರ್ಯಸೂಚಿ ಮಾಡಿಕೊಂಡಿದ್ದಾರೆ. 2029ರ ವೇಳೆಗೆ ಸುಮಾರು 11.83 ಟ್ರಿಲಿಯನ್ ಡಾಲರ್ ಮೊತ್ತವನ್ನು ಜಾಗತಿಕ ಶಿಕ್ಷಣ ಮಾರುಕಟ್ಟೆಯ ಭಾಗವಾಗಿಸುವ ಪ್ರಯತ್ನ ರಾಜಕಾರಣಿಗಳದು.

ಶಿಕ್ಷಣದ 'ರಾಜಕೀಯ ಅರ್ಥಶಾಸ್ತ್ರ' ಜನರಿಗೆ ಅರ್ಥವಾಗದ ಹೊರತು, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಉಳಿಸುವ ಹೋರಾಟ ಯಶಸ್ವಿಯಾಗುವುದು ಕಷ್ಟ.



ವಾಚಕರ ವಾಣಿ

ನದಿಗಳ ಒಡಲು; ಕೊಳಕಾಗುವ ದಿಗಿಲು

ಪ್ರತಿದಿನವೂ ಸಾಂಸ್ಕೃತಿಕ ಮತ್ತು ಧಾರ್ಮಿಕವಾಗಿ ನದಿಗಳ ಮಹತ್ವದ ಕುರಿತು ಮಾತನಾಡುತ್ತೇವೆ. ಆದರೆ, ಅಂತಿಮವಾಗಿ ಎಲ್ಲವೂ ವ್ಯಾವಹಾರಿಕವಾಗಿ ಕೊನೆಯಾಗುತ್ತದೆ. ನದಿಗಳ ಆರ್ತನಾದ ಕೇಳಿಸಿಕೊಳ್ಳುವ ವ್ಯವಧಾನ ನಮಗೆಲ್ಲಿದೆ? ಸೂಕ್ಷ್ಮ ಜೀವಪರಿಸರ ಒಳಗೊಂಡಿರುವ ಆಯಕಟ್ಟು ಪ್ರದೇಶವೇ ನದಿಗಳ ಜೀವಾಳ. ಚರಂಡಿ ನೀರು, ಕೈಗಾರಿಕೆಗಳು ಹೊರಹಾಕುವ ವಿಷಯುಕ್ತ ತ್ಯಾಜ್ಯ ಈ ಪ್ರದೇಶ ಸೇರುತ್ತಿದೆ. ಅಲ್ಲಿ ಜೀವಿಸುತ್ತಿರುವ ಕೋಟ್ಯಂತರ ಜೀವಸಂಕುಲದ ಗಂಟಲು ಕಟ್ಟುತ್ತಿದೆ. ನದಿಗಳ ಮಾಲಿನ್ಯ ಮಾನವನ ಬದುಕು ಮತ್ತು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರವು, ರಾಜಕೀಯ ಲಾಭ–ನಷ್ಟವನ್ನು ಬದಿಗೊತ್ತಿ ನದಿಗಳ ಸಂರಕ್ಷಣೆಗೆ ಮುಂದಾಗಬೇಕಿದೆ. ಅವುಗಳ ಜೀವಪರಿಸರವನ್ನು ಸಂರಕ್ಷಿಸದಿದ್ದರೆ ನಮಗೆ ಉಳಿಗಾಲವಿಲ್ಲ.

ಹನುಮಂತಿ, ಗಂಗಾವತಿ

ಸರ್ಕಾರಿ ಶಾಲೆಗಳಿಗೆ 'ಕೆಪಿಎಸ್' ಗ್ರಹಣ!

ಕಳೆದ ಹದಿನೈದು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಿಗೆ ದಾಖಲಾಗುವ ಮಕ್ಕಳ ಸಂಖ್ಯೆ 17 ಲಕ್ಷದಷ್ಟು ಕಡಿಮೆಯಾಗಿರುವುದು ಆತಂಕಕಾರಿ. ಇದಕ್ಕೆ ಸರ್ಕಾರದ ದಿವ್ಯ ನಿರ್ಲಕ್ಷ್ಯವೇ ಕಾರಣ. ಸರ್ಕಾರಿ ಶಾಲೆಗಳ ಅಭಿವೃದ್ಧಿಯ ಜೊತೆಗೆ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮಕ್ಕಳನ್ನು ಈ ಶಾಲೆಗಳತ್ತ ಕರೆತರುವ ಹೊಸ ಯೋಜನೆ ರೂಪಿಸುವುದು ಒಳಿತು. ಮತ್ತೊಂದೆಡೆ, ಸರ್ಕಾರ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಕೆಪಿಎಸ್–ಮ್ಯಾಗ್ನೆಟ್ ಯೋಜನೆಯು ಅವೈಜ್ಞಾನಿಕ ಮತ್ತು ಜನವಿರೋಧಿಯಾಗಿದೆ. ಇದರಿಂದ 40 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಶಾಶ್ವತವಾಗಿ ಬೀಗ ಬೀಳಲಿದೆ. ಈ ಯೋಜನೆ ಕೈಬಿಡುವುದೇ ಉತ್ತಮ.

ಕಾಶಿನಾಥ ಎಸ್.ಎಂ., ಕಲಬುರಗಿ

ಅಧಿಕಾರಿಗಳಿಗೂ ಬೇಕಿದೆ 'ಗಾಂಧಾರಿ'

ಬಳ್ಳಾರಿಯ ಖಾಸಗಿ ಶಾಲೆಯೊಂದರ ವಿದ್ಯಾರ್ಥಿನಿ ಹಿಮಾಬಿಂಧು 'ಗಾಂಧಾರಿ ವಿದ್ಯೆ' ನೆರವಿನಿಂದ ಪರೀಕ್ಷೆ ಬರೆದಿರುವುದು ವರದಿಯಾಗಿದೆ. ಈಕೆಯ ಸಾಧನೆ ಶ್ಲಾಘನೀಯ. ಎಂಟನೇ ತರಗತಿಯ ಈಕೆ ತನ್ನ ಸಹಪಾಠಿಗಳೊಂದಿಗೆ ನೆಲದಲ್ಲಿ ಕುಳಿತು ಪರೀಕ್ಷೆ ಬರೆದಿದ್ದಾಳೆ. ಇದೊಂದು ಖಾಸಗಿ ಶಾಲೆಯಾಗಿದ್ದು, ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯುವಂತಹ ಪರಿಸ್ಥಿತಿ ಇರುವುದು ಶೋಚನೀಯ. ಶಿಕ್ಷಣ ಇಲಾಖೆಯು ಇದರತ್ತ ಗಮನ ಹರಿಸಬೇಕು. ಅಲ್ಲದೆ, ಅಧಿಕಾರಿಗಳು ಈ ವಿದ್ಯಾರ್ಥಿನಿಯಂತೆ 'ಗಾಂಧಾರಿ ವಿದ್ಯೆ' ಕಲಿತು, ಕಣ್ಣುಮುಚ್ಚಿಕೊಂಡರೂ ಸುತ್ತಮುತ್ತಲಿನ ಆಗುಹೋಗುಗಳನ್ನು ಆತ್ಮಸಾಕ್ಷಿಯ ಅರಿವಿಗೆ ತಂದುಕೊಳ್ಳುವುದನ್ನು ಕಲಿಯಲಿ.

ಎ.ಜೆ. ಜಾವೀದ್, ಹಾಸನ

ಜಿ.ಪಂ. – ತಾ.ಪಂ. ಚುನಾವಣೆ ನಡೆಯಲಿ

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧಿಕಾರಾವಧಿ ಪೂರ್ಣಗೊಂಡು ನಾಲ್ಕೂವರೆ ವರ್ಷವಾಗಿದೆ. ಆದರೆ, ಈಗಲೂ ಚುನಾವಣೆ ನಡೆಸಲು ಸರ್ಕಾರ ಮನಸ್ಸು ಮಾಡುತ್ತಿಲ್ಲ. ಇದರಿಂದ ಅಧಿಕಾರ ವಿಕೇಂದ್ರೀಕರಣದ ಆಶಯಕ್ಕೆ ಕೊಡಲಿ ಪೆಟ್ಟು ಬಿದ್ದಿದೆ. ಕಾಲಮಿತಿಯೊಳಗೆ ಚುನಾವಣೆ ನಡೆಸುವ ತನ್ನ ಹೊಣೆಗಾರಿಕೆಯನ್ನು ಸರ್ಕಾರ ಮರೆತಿದೆ. ತ್ವರಿತಗತಿಯಲ್ಲಿ ಚುನಾವಣೆ ನಡೆಸುವಂತೆ ಹೈಕೋರ್ಟ್ ಕೂಡ ಹೇಳಿದೆ. ಯುವಜನರ ರಾಜಕೀಯ ಪ್ರವೇಶಕ್ಕೆ ಸ್ಥಳೀಯ ಸರ್ಕಾರಗಳೇ ಪ್ರಾಥಮಿಕ ಮೆಟ್ಟಿಲು. ಹಾಗಾಗಿ, ಅಂತಿಮ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಿಕೊಂಡು ಚುನಾವಣೆ ಘೋಷಿಸಬೇಕಿದೆ.

ಶಾನು ಯಲಿಗಾರ, ಯರಗುಪ್ಪಿ

ಅರ್ಥಪೂರ್ಣ ಬದುಕಿಗಾಗಿ ಮೌಲಿಕ ಶಿಕ್ಷಣ

ಡಿಜಿಟಲೀಕರಣ ಮತ್ತು ಕೃತಕ ಬುದ್ಧಿಮತ್ತೆಯಂತಹ ಆವಿಷ್ಕಾರದ ನಡುವೆ ಮಾನವೀಯ ಮೌಲ್ಯ, ಕೌಟುಂಬಿಕ ವ್ಯವಸ್ಥೆ ಹಾಗೂ ಮನುಷ್ಯ ಸಹಜ ಸಂಬಂಧಗಳು ಸಡಿಲಗೊಳ್ಳುತ್ತಿವೆ. ಮನುಷ್ಯ ಸಂವೇದನಾಶೀಲತೆಯ ಪೊರೆಯನ್ನು ಕಳಚಿಕೊಂಡು ತಾಂತ್ರಿಕತೆಯ ಮಾಂತ್ರಿಕ ಬಲೆಯಲ್ಲಿ ಸಿಲುಕಿ ಕುಬ್ಜನಾಗುತ್ತಿದ್ದಾನೆ. ಗ್ಯಾಜೆಟ್ ಲೋಕದಲ್ಲಿ ಯುವಜನತೆ ಮಿಂದೇಳುತ್ತಿದೆ. ಅಗಾಧ ಅವಕಾಶಗಳ ಈ ಯುಗದಲ್ಲಿ ದಿನಬೆಳಗಾಗುವುದರೊಳಗೆ ವಿಶ್ವವೇ ಗುರುತಿಸುವ ವ್ಯಕ್ತಿಯಾಗುವುದು ಪ್ರತಿಯೊಬ್ಬರ ಹಂಬಲ. ಸಮಾಜದ ಗಮನ ಸೆಳೆಯಲು ಜೀವದ ಹಂಗು ತೊರೆದು ಅಪಾಯಕಾರಿ ಚಟುವಟಿಕೆಗಳತ್ತ ಹೊರಳಿದ್ದಾರೆ. ಇದಕ್ಕೆ ಸಾಮಾಜಿಕ ಜಾಲತಾಣಗಳೇ ಪ್ರೇರಣೆ. ಇದು ಪೋಷಕರು ಮತ್ತು ಸಮಾಜಕ್ಕೆ ಭಯಾನಕ ಭವಿಷ್ಯದ ದಿನಗಳ ಸ್ಪಷ್ಟ ಮುನ್ನುಡಿಯಂತಿದೆ. ಯುವಸಮೂಹ ಮೌಲಿಕ ಶಿಕ್ಷಣ ಪಡೆದು ಸ್ವಾಭಿಮಾನದ ಬದುಕು ರೂಪಿಸಿಕೊಳ್ಳುವತ್ತ ಹೆಜ್ಜೆ ಇಡಬೇಕಿದೆ.

ಚಂದ್ರಪ್ಪ ಎಚ್., ವಿಜಯನಗರ

ಕಾಡುಪ್ರಾಣಿ ಉಪಟಳ: ರೈತರು ಕಂಗಾಲು

ರೈತರು ಅಡಿಕೆ ಧಾರಣೆಯಿಂದ ಭತ್ತದ ಕಡೆ ಮುಖ ಮಾಡದಿದ್ದರೂ, ಶಿವಮೊಗ್ಗ ತಾಲ್ಲೂಕಿನಲ್ಲಿ 6,500 ಹೆಕ್ಟೇರ್‌ನಲ್ಲಿ ಭತ್ತ ಬೆಳೆಯಲಾಗುತ್ತಿದೆ. ಆದರೆ ಕಾಟಿ, ಆನೆ, ಚಿರತೆ, ಮಂಗ, ನವಿಲುಗಳ ನಿರಂತರ ದಾಳಿಯಿಂದಾಗಿ ತೆನೆಹೊತ್ತ ಗದ್ದೆಗಳು ನಾಶವಾಗುತ್ತಿವೆ. ಸೋಮೇಶ್ವರ, ಮೂಕಾಂಬಿಕಾ, ಶೆಟ್ಟಿಹಳ್ಳಿ ವನ್ಯಜೀವಿ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಬೆಳೆ ರಕ್ಷಣೆ ಕೃಷಿಕರಿಗೆ ದೊಡ್ಡ ಸವಾಲಾಗಿದೆ. ಚಿರತೆ ಊರೊಳಗೆ ನುಗ್ಗಿ ಸಾಕುಪ್ರಾಣಿಗಳ ಮೇಲೆ ದಾಳಿ ನಡೆಸುತ್ತಿದ್ದರೆ, ಪ್ರವಾಸಿಗರ ಆಹಾರದಿಂದ ಮಂಗಗಳ ಹಾವಳಿ ಹೆಚ್ಚಿದೆ. ಬ್ಯಾಂಡ್‌ಸೆಟ್, ಮೈಕ್ ಬಳಸಿ ರಾತ್ರಿ ನಿದ್ರೆಗೆಟ್ಟು ಪ್ರಾಣಿ ಓಡಿಸಿದರೂ ಫಸಲು ಕೈಸೇರುತ್ತಿಲ್ಲ. ಬಂದೂಕು ಪರವಾನಗಿ ಸಿಗದೆ ರೈತರು ಅಸಹಾಯಕರಾಗಿದ್ದಾರೆ. ಮಾನವ ಮತ್ತು ವನ್ಯಜೀವಿ ಸಂಘರ್ಷ ಮಿತಿಮೀರಿದ್ದು, ರೈತರ ಸಂಕಷ್ಟಕ್ಕೆ ಸರ್ಕಾರ ತುರ್ತು ಪರಿಹಾರ ಒದಗಿಸಬೇಕಿದೆ.

ನಿರಂಜನ್ ಎಚ್.ಬಿ., ಶಿವಮೊಗ್ಗ

ಚುರುಮುರಿ

ಗೋ ಗೋ ಇಂಡಿ–ಗೋ!

• ತುರುವೇಕೆರೆ ಪ್ರಸಾದ್

'ಒಂದೊಂದ್ ಕಿತ ಏನೆಲ್ಲಾ ಪಂಪು ವಡ್ದು, ಆನಿವರ್ ಮಾರ್ಚ್ ಗೆಟ್ ಸೆಟ್ ಗೋ... ಅಂದ್ರೂ ಮುಂದಕ್ಕೇ ಓಗಕಿಲ್ಲ ಕಣ್ಲಾ' ಎಂದು ಸಿಬಿರೆಬ್ಬಿದ ಗುದ್ಲಿಂಗ.

'ಊ ಕಣ್ಲಾ, ಇಂಡಿಗೊ ತರ ಆರಾಡಲ್ಲ ಅಂತ ಹಟ ಇಡಿದು ಬಂಡೆ ಅಂಗೆ ಜಪ್ಪಯ್ಯ ಅಂದ್ರೂ ಅಲ್ಲಾಡ್ದೆ ಕುಂತ್ ಬಿಡ್ತದೆ' ಎಂದ ಮಾಲಿಂಗ.

'ಕೈ ಕತೆ ಅಂಗೇ ಆಗದೆ. ರಾಜೀವಣ್ಣನೇ ಪೈಲಟ್ ಆದ್ರೂ ರಾಹುಲ್ ಇಮಾನ ಎಲ್ಲಾ ಕಡೆ ಪಲ್ಟಿ ಒಡ್ದು ಇಂಡಿ–ಗೋ ಅನ್ನೋ ಅಂಗಾಗದೆ'.

'ಆರ್ದೇ ಇರೋ ಇಮಾನಗಳು ಏರ್‌ಪೋರ್ಟ್‌ಲ್ಲೆಲ್ಲಾ ನಿಂತ್ಕಂಡ್ರೆ ಶಾನೆ ತೊಂದ್ರೆ ಆಯ್ತದೆ. ಅವನ್ನ ಸ್ಪೇಸ್‌ಸ್ಟೇಷನ್ನಲ್ಲೇ ನಿಲ್ಲೊ ಅಂಗ್ ಮಾಡ್ಬೇಕು'.

'ರಾಕೆಟ್ಗಳ್ಗೆ ಇದ್ದಂಗೇ ಪಕ್ಷಗಳಿಗೂ ಒಂದು ಸ್ಪೇಸ್‌ಸ್ಟೇಷನ್ ಬೇಕಾಯ್ತದೆ. ಆರಾಡ್ದೇ ಕೆಟ್ ಗುಜರಿ ಇಡ್ದೋವಕ್ಕೆ ನೆಲೆ ಅಂತ ಬೇಕಾಯ್ತದಲ್ಲ...'

'ವ್ಹಾ, ಅದೇ ಲಾಂಚಿಂಗು, ಲಂಚಿಂಗು, ಲ್ಯಾಂಡಿಂಗು, ಫಂಡಿಂಗು ಸ್ಟೇಷನ್'.

'ಕೈ ಪಾಲಿಗೆ ಕರುನಾಡೇ ಕರ್ಮಭೂಮಿ. ಇಂತಾ ಕಡೆನೇ ಇಮಾನ ರಿಪೇರಿ ಮಾಡ್ದೆ ಬುಟ್ಕಂಡ್ ಬತ್ತಾವ್ರಲ್ಲ ಅಂತ' ಮಾಲಿಂಗ ವಿಷಾದದಿಂದ ಹೇಳಿದ.

'ಊ ಕಣ್ಲಾ, ಇಂಡಿಗೊ ಫ್ಲೈಟ್ ಸರಿಯಾಯ್ತದೆ, ಆದ್ರೆ ಈ ರಾಜಕೀಯದೋರ ಈಗೋ ಫೈಟ್ ಮುಗಿಯಕ್ಕಿಲ್ಲ. ಕುದ್ರೆ ಯಾಪಾರ ಸುರುವಾದ್ರೆ 'ಹಿಂದೆ–ಗೋ', 'ಹಿಂಡಿ–ಗೋ', 'ಹುಂಡಿ–ಗೋ!' ಕುದುರೆಗಳು ಅಶ್ವಮೇಧ ಅಂತ ಸಿಕ್‌ಸಿಕ್ ಕಡೆ ಡಿನ್ನರ್ ಮೇಯಕ್ ಶುರುಮಾಡ್ತವೆ' ಎಂದು ಗುದ್ಲಿಂಗ ತನ್ನ ರಾಜಕೀಯ ಜ್ಞಾನ ಪ್ರದರ್ಶಿಸಿದ.

'ಸಾರಥಿ ಗಟ್ಟಿಮುಟ್ಟಾಗವ್ರೆ, ಕಿಂಗ್ ಈಸ್ ಅಲೈವ್ ಅಂತ ಭೈರತಿ ಅಣ್ಣೋರು ಯೋಳಿಲ್ವಾ?'

'ಅದು ಮುಖ್ಯ ಅಲ್ಲ ಕಣ್ಲಾ, 'ಕ್ವೀನ್ ಡಸ್ ನಾಟ್ ಲೀವ್' ಅದು ಮುಖ್ಯ. ಹೈಕಮಾಂಡ್ ಮೇಡಮ್ ಬಿಟ್‌ಕೊಡ್ದೇ ಇರೋಗಂಟ ರಾಜಂಗೆ ಎಷ್ಟು ಚೆಕ್‌ಮೇಟ್ ಆಕುದ್ರೂ ಪ್ರಯೋಜನ ಇಲ್ಲ ಕಣ್ರಲಾ' ಎಂದು ಪರ್ಮೇಶಿ ಕಟುಸತ್ಯ ಹೇಳುವವನಂತೆ ಮುಗುಳ್ನಕ್ಕ.

ಪರ್ಮೇಶಿಯ ನಗೆಯನ್ನು ಅನುಮೋದಿಸುವಂತೆ ಎಲ್ಲರೂ ಹೌದೌದು ಎಂದು ತಲೆಯಾಡಿಸಿದರು.

ಸಂಗತ

ಏಕಸ್ವಾಮ್ಯದ ಬಲೂನಿಗೆ ಸೂಜಿಮೊನೆ ಮದ್ದು

ಇಂಡಿಗೊ ವಿಮಾನಗಳ ಹಾರಾಟದಲ್ಲಿ ಆದ ವ್ಯತ್ಯಯ ಹಾಗೂ ಅದರ ಪರಿಣಾಮ, ಏಕಸ್ವಾಮ್ಯದ ಅಪಾಯಗಳಿಗೆ ಪಥ್ಯದ ರೂಪದಲ್ಲಿ ಉಳಿಯುವ ವಿದ್ಯಮಾನ.

• ವಿಶಾಖ ಎನ್.

ಮೂವತ್ತು ವರ್ಷಗಳ ಹಿಂದಿನ ಮಾತು. ತಾಲ್ಲೂಕು ಕೇಂದ್ರದಿಂದ ನಾಲ್ಕೇ ಕಿ.ಮೀ. ದೂರದ ಹಳ್ಳಿ. ಅಡುಗೆ ಅನಿಲದ ಸಿಲಿಂಡರ್ ಪೂರೈಕೆ ಆಗುತ್ತಿದ್ದುದು ಆ ತಾಲ್ಲೂಕು ಕೇಂದ್ರದ ಒಬ್ಬಾಕೆಯ ಮನೆಯಲ್ಲಿ. ಪರವಾನಗಿ ಅವರೊಬ್ಬರಿಗೇ ಹೇಗೋ ಸಿಕ್ಕಿತ್ತು. ಸಿಲಿಂಡರ್ ಬುಕ್ ಮಾಡಿ, ಕನಿಷ್ಠ ಹತ್ತು ದಿನ ಕಾಯಬೇಕಿತ್ತು. ತರುವುದು ಒಂದು ದಿನ ವಿಳಂಬ ಆದರೂ ಮತ್ತೆ ಅಷ್ಟೇ ದಿನ ಕಾಯಬೇಕಾದ ಅನಿವಾರ್ಯ. ಹೆಚ್ಚು ಬೆಲೆಗೆ ಬೇರೆ ಯಾರಿಗೋ ಅದನ್ನು ಮಾರಿಕೊಳ್ಳುವುದು ಮುಕ್ತವಾಗಿ ನಡೆದಿತ್ತು. ಮುಂದೆ ಸಿಲಿಂಡರ್ ಪರವಾನಗಿ ಒಬ್ಬ ಸ್ಥಳೀಯ ರಾಜಕಾರಣಿಯ ಸಂಬಂಧಿಕರಿಗೆ ಸಿಕ್ಕಿತು. ಆಗಲೂ ಅದೇ ಸ್ಥಿತಿ. ಒಂದೇ ಕಂಪನಿಯ, ಒಬ್ಬರೇ ಏಜೆಂಟರು ಇಡೀ ತಾಲ್ಲೂಕಿಗೆ ಸಿಲಿಂಡರ್‌ಗಳನ್ನು ಪೂರೈಸುತ್ತಿದ್ದರು. ದಶಕಗಳ ಕಾಲ ಈ ಏಕಸ್ವಾಮ್ಯ ಒಡ್ಡಿದ್ದ ಸಾಮಾಜಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಲೇ ಗ್ರಾಹಕರು ಏಗಬೇಕಾಗಿ ಬಂದದ್ದು ಚೋದ್ಯ.

ಇಂಡಿಗೊ ವಿಮಾನಗಳು ಕಳೆದ ವಾರ ಪುಂಖಾನುಪುಂಖವಾಗಿ ರದ್ದಾದ ವಿದ್ಯಮಾನವೂ ಇದೇ ವ್ಯಾಪಾರಿ ಧೋರಣೆಯನ್ನು ಬಿಂಬಿಸುತ್ತದೆ. ಏರ್ ಇಂಡಿಯಾ ಸಂಸ್ಥೆಯ ನೆರವಿಗೆ ಟಾಟಾ ಸಂಸ್ಥೆ ಬಂದ ನಂತರವೂ ಅದರ ಪರಿಸ್ಥಿತಿ ಹೆಚ್ಚೇನೂ ಚೇತರಿಸಿಕೊಂಡಿಲ್ಲ.

ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಕೆಂಪು ಬಣ್ಣದ ತಳುಕು ಉಲ್ಕಾಪಾತದಂತೆ ಉದುರಿದ್ದನ್ನೂ ಕಂಡೆವು. ಜೆಟ್ ಏರ್‌ವೇಸ್, ಗೋ ಏರ್ ಇವೆಲ್ಲವೂ ಅಸ್ತಿತ್ವಕ್ಕಾಗಿ ಪರದಾಡುತ್ತಿರುವ ಹೊತ್ತಿನಲ್ಲೇ ಇಂಡಿಗೊ ವಿಮಾನಯಾನ ಸಂಸ್ಥೆಯು ತನ್ನ ಕಬಂಧಬಾಹುಗಳ ಒಳಗೆ ಗ್ರಾಹಕರನ್ನು ಸೆಳೆದುಕೊಂಡಿತು. ಇಂತಹ ಏಕಸ್ವಾಮ್ಯ ಏನೆಲ್ಲ ಅನಾಹುತಗಳನ್ನು ಮಾಡಬಹುದು ಎಂಬುದಕ್ಕೆ ಸಾವಿರಾರು ಉದಾಹರಣೆಗಳನ್ನು ನಾವು ಕಂಡುಂಡಿದ್ದೇವೆ, ಈಗಲೂ ಆಗಾಗ ಅನುಭವಿಸುತ್ತಿದ್ದೇವೆ.



ಸಿಬ್ಬಂದಿ ಕೊರತೆಯ ನಡುವೆಯೂ ದೀರ್ಘಾವಧಿ ವಿಮಾನಯಾನ ಮುಂದುವರಿಸಿಕೊಂಡು ಬಂದಿದ್ದ ಸಂಸ್ಥೆಗೆ, ಪೈಲಟ್‌ಗಳು ದಿನವೊಂದರಲ್ಲಿ ಇಷ್ಟೇ ಅವಧಿ ವಿಮಾನ ಹಾರಾಟ ನಡೆಸಬೇಕು ಎನ್ನುವುದೂ ಸೇರಿ ಕೆಲವು ನಿಯಮಗಳು ಬಿಸಿತುಪ್ಪದಂತೆ ಆದವು. ಎಂಟು ತಿಂಗಳ ಕಾಲಾವಕಾಶ ಇದ್ದರೂ ಅಗತ್ಯ ಸಿಬ್ಬಂದಿಯನ್ನು ಇಂಡಿಗೊ ಸಂಸ್ಥೆಯು ನೇಮಕ ಮಾಡಿಕೊಳ್ಳಲಿಲ್ಲ. ಇದು ಏಕಸ್ವಾಮ್ಯ ತಂದುಕೊಡುವ ನಿರ್ಲಕ್ಷ್ಯ ಹಾಗೂ ಉಡಾಫೆಗೆ ಸಾಕ್ಷಿ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಒಟ್ಟಾರೆ ವ್ಯಾಪಾರಿ ಪರಿಸರವೇ ಈ ಬದಲಾವಣೆಯಿಂದ ನಲುಗಿಹೋಯಿತು. ವಿಮಾನಗಳು ರದ್ದಾಗುವುದು ಹೆಚ್ಚಾದದ್ದೇ ಮನೆಗೆ ವಾಪಸ್ ತೆರಳಲು ಹೊರಟ ಗ್ರಾಹಕರಲ್ಲಿ ಟ್ಯಾಕ್ಸಿವಾಲಾಗಳು ಹಣ ಪೀಕಿದರು. ಒಂದೆರಡು ದಿನ ಕಳೆದದ್ದೇ, ಅದೇ ಟ್ಯಾಕ್ಸಿವಾಲಾಗಳು ಕೇಳುವವರೇ ಇಲ್ಲದೆ ಕಂಗಾಲಾದರು. ವಿಮಾನ ನಿಲ್ದಾಣದ ಸುತ್ತಮುತ್ತಲಿನ ಹೋಟೆಲ್‌ಗಳೂ ದರಗಳನ್ನು ಗಗನಕ್ಕೆ ಏರಿಸಿದವು. 'ಹುಚ್ಚನ ಮದುವೆಯಲ್ಲಿ ಉಂಡೋನೇ ಜಾಣ' ಎನ್ನುವ ನಡೆ ಇದು.

ಇವೆಲ್ಲವೂ ವಿಮಾನ ನಿಲ್ದಾಣದ ಸುತ್ತಮುತ್ತಲಿನ ವಹಿವಾಟಿನ ಬಿಂಬಗಳಾದರೆ, ಒಳಗೆ ಇತರ ವಿಮಾನಯಾನ ಸಂಸ್ಥೆಗಳೂ ನಿಯಂತ್ರಣವಿಲ್ಲದಂತೆ ಪ್ರಯಾಣ ದರವನ್ನು ದಿಢೀರ್ ಏರಿಸಿಬಿಟ್ಟವು. ನಾಗರಿಕ ವಿಮಾನಯಾನ ಸಚಿವಾಲಯವು ಪ್ರಯಾಣ ದರಕ್ಕೆ ಮಿತಿ ಹೇರುವಷ್ಟರಲ್ಲಿ ಸಂಸ್ಥೆಗಳು ಎಷ್ಟು ಸಾಧ್ಯವೋ ಅಷ್ಟೂ ಹಣ ಬಾಚಿಕೊಂಡವು.

ಇಂಡಿಗೊ ತಂದೊಡ್ಡಿದ ಬಿಕ್ಕಟ್ಟನ್ನು ನಾವು ಏಕಸ್ವಾಮ್ಯದ ಅವಘಡದ ರೂಪಕವಾಗಿ ನೋಡಬೇಕು. ಇವತ್ತು ಜಿಯೊ ಹಾಗೂ ಏರ್‌ಟೆಲ್ ಕಂಪನಿಗಳು ದೂರಸಂಪರ್ಕ ಕ್ಷೇತ್ರದ ಸುಮಾರು ಶೇ 90ರಷ್ಟು ಗ್ರಾಹಕರನ್ನು ತಮ್ಮ ತೆಕ್ಕೆಯಲ್ಲಿ ಇಟ್ಟುಕೊಂಡಿವೆ. ಒಂದು ಕಾಲದಲ್ಲಿ ಉಚಿತ ಇಂಟರ್ನೆಟ್ ಸಂಪರ್ಕದ ಗಾಳವನ್ನು ಜಿಯೊ ಹೇಗೆಲ್ಲ ಹಾಕಿತ್ತೆನ್ನುವ ನೆನಪೂ ನಮಗೆ ಇರಬೇಕು. ಒಂದು ವೇಳೆ ಇಂಡಿಗೊ ಸೃಷ್ಟಿಸಿದ ಪರಿಸ್ಥಿತಿಯನ್ನು ಈ ದೂರಸಂಪರ್ಕ ಕಂಪನಿಗಳು ತಂದೊಡ್ಡಿದರೆ ಏನಾಗಬಹುದು ಎಂಬ ಪ್ರಶ್ನೆ ಹಾಕಿಕೊಳ್ಳೋಣ. ಮೊಬೈಲ್‌ಗಳ ರಿಂಗಣ ನಿಲ್ಲುತ್ತದೆ. ಇಂಟರ್ನೆಟ್ ಸಂಪರ್ಕವೇ ಇಲ್ಲವಾದರೆ ಬಹುತೇಕ ಕಚೇರಿ ಚಟುವಟಿಕೆಗಳು ಬಂದ್ ಆಗುತ್ತವೆ. ಯಾವುದೋ ದೇಶದಲ್ಲಿ ಇರುವ ತಮ್ಮವರ ಸಂಪರ್ಕವೇ ಸಾಧ್ಯವಾಗದೆ ಚಡಪಡಿಕೆ ಶುರುವಾಗುತ್ತದೆ. ಜನಸಾಮಾನ್ಯರ ರಂಜನೆಯ ಅಂಗೈಕನ್ನಡಿ ಚೂರಾಗುತ್ತದೆ. ಏಕಸ್ವಾಮ್ಯವು ಸಾಮಾಜಿಕ ನ್ಯಾಯವನ್ನು ನೀಡಲಾರದು ಎನ್ನುವುದನ್ನು ಈ ಕಲ್ಪನಾ ಪ್ರಕರಣ ಸ್ಪಷ್ಟಪಡಿಸುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಏಕಸ್ವಾಮ್ಯ ದೊಡ್ಡಮಟ್ಟದ ಅಹಂಭಾವ ತುಂಬುತ್ತದೆ. ಅದು ಉಡಾಫೆಯ ಧೋರಣೆ, ಯಾಜಮಾನಿಕೆಯ ರಕ್ತ–ಮಾಂಸ ತುಂಬಿ, ತಾತ್ಕಾಲಿಕವಾದರೂ ಅನೇಕರು ನಿಟ್ಟುಸಿರು ಬಿಡುವಂತಹ ಪರಿಸ್ಥಿತಿಗಳನ್ನು ರೂಪಿಸುತ್ತದೆ. ಹೀಗಾಗಿ ಅಂತಹ ಅಹಂಭಾವದ ಬಲೂನಿಗೆ ಸೂಜಿಮೊನೆ ತಾಕಿಸುವ ಸಾಮಾಜಿಕ ವ್ಯಾಪಾರ ವ್ಯವಸ್ಥೆಯೊಂದು ಇರಬೇಕು. ಇಂಡಿಗೊ ಕಂಬಂಧಬಾಹುವಿನ ಬದಲು, ಕೆಲವಾದರೂ ಕಂಪನಿಗಳ ಬಿಗಿಯಪ್ಪುಗೆ ಬೇಕು.

ಕೆಲವೊಮ್ಮೆ ನಮ್ಮ ನಿರೀಕ್ಷೆಗಳನ್ನೆಲ್ಲ ಮೀರಿ ಯಾವುದೋ ಕ್ಷೇತ್ರದಲ್ಲಿ ಏಕಸ್ವಾಮ್ಯ ರೂಪುಗೊಂಡು, ಅದರಿಂದ ಬಿಕ್ಕಟ್ಟು ತಲೆದೋರಿ ನಾಗರಿಕರು ಸಮಸ್ಯೆಗೊಳಗಾದಾಗ, ಸರ್ಕಾರದ ಪಾತ್ರ ಏನು ಎನ್ನುವ ಪ್ರಶ್ನೆಯನ್ನೂ ನಾವು ಕೇಳಿಕೊಳ್ಳಬೇಕು. ನಾಗರಿಕರ ಸುಲಿಗೆಯನ್ನು ಸರ್ಕಾರ ನೋಡಿಕೊಂಡು ಸುಮ್ಮನಿರುವುದೂ ರಾಜಕಾರಣದಲ್ಲಿನ ಒಂದು ಬಗೆಯ ಏಕಸ್ವಾಮ್ಯದ ಪರಿಣಾಮ ಇರಬಹುದೆ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಧಾರಣಾ ಸಾಮರ್ಥ್ಯ ಮುಗಿದ ನೆಲದ ಮೇಲೆ ಮತ್ತೆ ಮತ್ತೆ ಪ್ರಹಾರದ ಆರೋಪ; ಮತ್ತೊಂದು ಸುತ್ತಿನ ಹೋರಾಟಕ್ಕೆ ಸಿದ್ಧತೆ

ಯೋಜನೆಗಳ ಹೊರೆ ನಲುಗಿದ ಉತ್ತರ ಕನ್ನಡ

ಬೇಸಿಗೆಯಲ್ಲಿ ನೀರಿಲ್ಲದೆ ಬತ್ತಿರುವ ಸ್ಥಿತಿಯಲ್ಲಿರುವ ಬೇಡ್ತಿ ನದಿ.

ನಾಲ್ಕು ದಶಕಗಳಿಂದ ನಿರಂತರವಾಗಿ ಹಲವು ಯೋಜನೆಗಳ ಹೇರಿಕೆಗೆ ಒಳಗಾಗಿರುವ ಉತ್ತರ ಕನ್ನಡ ಜಿಲ್ಲೆಯ ಜನರು ಈಗ ಉದ್ದೇಶಿತ ಬೇಡ್ತಿ–ವರದಾ ಮತ್ತು ಅಘನಾಶಿನಿ–ವೇದಾವತಿ ನದಿ ಜೋಡಣೆ ಯೋಜನೆಗಳು ಮತ್ತು ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ವಿರುದ್ಧ ಪ್ರಬಲ ಧ್ವನಿ ಎತ್ತಿದ್ದಾರೆ. ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ನೇತೃತ್ವದಲ್ಲಿ ಯೋಜನೆ ವ್ಯಾಪ್ತಿ ಪ್ರದೇಶಗಳಲ್ಲಿ ಸರಣಿ ಪ್ರತಿಭಟನೆಗಳು ನಡೆದಿವೆ. ಈಗ ಮತ್ತೊಂದು ಸುತ್ತಿನ ತೀವ್ರ ಹೋರಾಟಕ್ಕೆ ಜನರು ಸಿದ್ಧತೆ ನಡೆಸುತ್ತಿದ್ದಾರೆ

• ಗಣಪತಿ ಹೆಗಡೆ

ರಾಜ್ಯದಲ್ಲೇ ಅತಿ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ಜೊತೆಗೆ ಕರಾವಳಿ, ಮಲೆನಾಡು ಮತ್ತು ಬಯಲುಸೀಮೆಯನ್ನು ಒಳಗೊಂಡಿರುವ ಬಹುರೂಪದ ಭೌಗೋಳಿಕ ತಾಣ ಉತ್ತರ ಕನ್ನಡ. ಇಲ್ಲಿನ ದಟ್ಟ ಕಾಡಿನ ನಡುವೆ ಅಣುವಿದ್ಯುತ್ ಸ್ಥಾವರ ನಿರ್ಮಾಣಗೊಂಡಿತು. ಕಡಲತೀರದಲ್ಲಿ ನೌಕಾನೆಲೆ ಮೈಚಾಚಿಕೊಂಡಿತು. ಕಾಳಿ ನದಿಯ ಸ್ವಚ್ಛಂದ ಹರಿವಿಗೆ ಐದು ಅಣೆಕಟ್ಟೆಗಳು ತಡೆಯೊಡ್ಡಿದವು. ಸಾಲು ಸಾಲು ಯೋಜನೆಗಳ ಹೇರಿಕೆಯಿಂದ ಉತ್ತರ ಕನ್ನಡ ಜಿಲ್ಲೆ ನಲುಗಿದ್ದರೂ, ಈಗ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳನ್ನು ಪೂರ್ವಾಭಿಮುಖಕ್ಕೆ ತಿರುಗಿಸುವ ಯೋಜನೆಗಳ ಜಾರಿಗೆ ಸರ್ಕಾರ ಮುಂದಡಿ ಇಟ್ಟಿದೆ. ಜೊತೆಗೆ ಶರಾವತಿ ಕಣಿವೆಗೆ ಧಕ್ಕೆ ತರಲಿದೆ ಎಂಬ ಆರೋಪ ಹೊತ್ತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಯ ತರಾತುರಿಯೂ ಕಾಣುತ್ತಿದೆ.

ಏನಿದು ಯೋಜನೆ?

ಧಾರವಾಡ ಜಿಲ್ಲೆಯಲ್ಲಿ ಉಗಮಗೊಂಡು ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಹರಿದು ಅರಬ್ಬಿ ಸಮುದ್ರ ಸೇರುವ ಬೇಡ್ತಿ ನದಿಯನ್ನು ಹಾವೇರಿ ಮತ್ತು ಗದಗ ಜಿಲ್ಲೆಯ ವ್ಯಾಪ್ತಿಗೆ ನೀರು ಪೂರೈಕೆಗೆ ವರದಾ ನದಿಗೆ ಜೋಡಿಸಲು 'ಬೇಡ್ತಿ–ವರದಾ ನದಿ ಜೋಡಣೆ ಯೋಜನೆ' ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಯೋಜನೆಯ ಪೂರ್ವ ಕಾರ್ಯಸಾಧ್ಯತಾ ವರದಿ ಪುರಸ್ಕರಿಸಿ, ಯೋಜನೆ ಜಾರಿ ಸಲುವಾಗಿ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ.

ಉತ್ತರ ಕನ್ನಡದಲ್ಲೇ ಹುಟ್ಟಿ, ಇಲ್ಲಿಯೇ ಹರಿದು ಅರಬ್ಬಿ ಸಮುದ್ರ ಸೇರುವ ಅಘನಾಶಿನಿ ನದಿಯನ್ನು ಚಿತ್ರದುರ್ಗ ಜಿಲ್ಲೆಯ ವೇದಾವತಿ ನದಿಗೆ ಜೋಡಿಸುವ ಇನ್ನೊಂದು ಯೋಜನೆಗೆ ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿ (ಎನ್‌ಡಬ್ಲ್ಯುಡಿಎ) ಪೂರ್ವ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಿದೆ. ಈ ಯೋಜನೆ ಇನ್ನೂ ಆರಂಭಿಕ ಹಂತದಲ್ಲಿದೆ.

ಎರಡು ದಶಕಗಳಿಂದ ಪ್ರಯತ್ನ

ಪಶ್ಚಿಮ ಘಟ್ಟದ ಕಣಿವೆಗಳ ಮೂಲಕ ಹರಿಯುವ ನದಿಗಳನ್ನು ಪೂರ್ವಾಭಿಮುಖವಾಗಿ ತಿರುಗಿಸುವ ನದಿ ಜೋಡಣೆ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎರಡು ದಶಕಗಳಿಂದಲೂ ಪ್ರಯತ್ನ ನಡೆಸುತ್ತಿವೆ. ಜನರ ಪ್ರಬಲ ವಿರೋಧದ ಕಾರಣದಿಂದ ಇಲ್ಲಿಯವರೆಗೆ ಯೋಜನೆ ಜಾರಿಗೆ ತರುವುದು ಸಾಧ್ಯವಾಗಿಲ್ಲ. 2004ರಲ್ಲಿಯೇ ಬೇಡ್ತಿ-ವರದಾ ನದಿ ಜೋಡಣೆ ಯೋಜನೆ ಜಾರಿಗೆ ಯೋಜಿಸಲಾಗಿತ್ತು.

ಬೇಡ್ತಿ–ವರದಾ ನದಿ ಜೋಡಣೆ ಯೋಜನೆಯ ನೀಲನಕ್ಷೆ

- ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ರಾಜ್ಯ ಜಲಸಂಪನ್ಮೂಲ ಇಲಾಖೆ ಜಂಟಿಯಾಗಿ ಜಾರಿಗೊಳಿಸುತ್ತಿರುವ ಯೋಜನೆ
- ಹಾವೇರಿ, ಗದಗ, ರಾಯಚೂರು ಜಿಲ್ಲೆ ವ್ಯಾಪ್ತಿಯಲ್ಲಿ ನೀರಾವರಿ, ಕುಡಿಯುವ ನೀರು ಪೂರೈಕೆ, ಕೈಗಾರಿಕೆಗಳ ಉದ್ದೇಶಕ್ಕೆ ನೀರು ಪೂರೈಕೆಯ ಉದ್ದೇಶ
- ನದಿ ನೀರು ಸಂಗ್ರಹಕ್ಕೆ ಶಿರಸಿಯ ಸಹಸ್ರಲಿಂಗ ಮತ್ತು ಪಟ್ಟಣದ ಹೊಳೆ ಬಳಿ ಹಾಗೂ ಯಲ್ಲಾಪುರದ ಬೇಡ್ತಿ ಸೇತುವೆ ಸಮೀಪ ಕಿರು ಅಣೆಕಟ್ಟೆ ನಿರ್ಮಾಣ ಅಲ್ಲಿಂದ ಪೈಪ್ ಲೈನ್ ಮೂಲಕ ನೀರು ಪೂರೈಕೆ

ನಕ್ಷೆ: ಜಲಸಂಪನ್ಮೂಲಗಳ ಸಚಿವಾಲಯ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ

ಉತ್ತರ ಕನ್ನಡ ಜಿಲ್ಲೆ ಬೃಹತ್ ಯೋಜನೆಗಳ ಭಾರದಿಂದ ನಲುಗಿದೆ. ಪರಿಸರ ಧಾರಣಾ ಸಾಮರ್ಥ್ಯದ ಅಧ್ಯಯನ ಆಗದೇ ಹೊಸ ಯೋಜನೆ ಪ್ರಸ್ತಾಪ ಬೇಡವೆಂದು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಎದುರು ವಾದಿಸಲಾಗಿತ್ತು. ಪರಿಣಾಮವಾಗಿ ಯೋಜನೆ ಮುಂದುವರಿದಿರಲಿಲ್ಲ.

ಅಘನಾಶಿನಿ ನದಿಗೆ ಸಿದ್ದಾಪುರ ತಾಲ್ಲೂಕಿನ ಬಾಳೆಕೊಪ್ಪ ಸಮೀಪ ಅಣೆಕಟ್ಟು ನಿರ್ಮಿಸಿ, ಅಲ್ಲಿಂದ ನೀರನ್ನು ಚಿತ್ರದುರ್ಗ ಜಿಲ್ಲೆಯತ್ತ ತಿರುಗಿಸುವ ಯೋಜನೆ ಜಾರಿಗೆ 90ರ ದಶಕದಲ್ಲಿ ಪ್ರಯತ್ನ ನಡೆದಿತ್ತು. ಆಗಲೂ ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ನಡೆಸಿದ ನಿರಂತರ ಹೋರಾಟದ ಫಲವಾಗಿ ಯೋಜನೆ ಪ್ರಗತಿ ಕಂಡಿರಲಿಲ್ಲ.

ವಿರೋಧ ಏಕೆ?

'ಉತ್ತರ ಕನ್ನಡದ ಯಲ್ಲಾಪುರ, ಶಿರಸಿ, ಅಂಕೋಲಾ ತಾಲ್ಲೂಕುಗಳ 1.5 ಲಕ್ಷ ರೈತರು ಕೃಷಿ ಚಟುವಟಿಕೆಗೆ ಬೇಡ್ತಿ ನದಿ ನೀರನ್ನು ಅವಲಂಬಿಸಿದ್ದಾರೆ. ಶಿರಸಿ ನಗರ, ಯಲ್ಲಾಪುರ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯೂ ಬೇಡ್ತಿ ನದಿಯನ್ನು ಅವಲಂಬಿಸಿದೆ. ಯೋಜನೆಯ ಭಾಗವಾಗಿ ಬೇಡ್ತಿ ಕಣಿವೆಯ ಹಳ್ಳಗಳಿಗೆ 15 ಸ್ಥಳಗಳಲ್ಲಿ ಕಿರು ಅಣೆಕಟ್ಟುಗಳನ್ನು ನಿರ್ಮಾಣ ಮಾಡಲಾಗಿದೆ. ಬೇಡ್ತಿಯ ಮುಂದುವರಿದ ಭಾಗವಾಗಿರುವ ಗಂಗಾವಳಿ ನದಿಯ ನೀರನ್ನು ಕಾರವಾರ ನಗರ, ಅಂಕೋಲಾ ಪಟ್ಟಣ, ಕದಂಬ ನೌಕಾನೆಲೆ, ನೂರಾರು ಹಳ್ಳಿಗಳಿಗೆ ಕುಡಿಯುವ ಉದ್ದೇಶಕ್ಕೆ ಪೂರೈಸಲಾಗುತ್ತಿದೆ. ಬೇಸಿಗೆಯ ಆರಂಭದಲ್ಲೇ ಹರಿವು ಕಡಿಮೆಯಾಗುವ ಈ ನದಿಯನ್ನು ತಿರುಗಿಸಿದರೆ ಲಕ್ಷಾಂತರ ಜನರಿಗೆ ಕುಡಿಯುವ ನೀರು ಪೂರೈಕೆಗೆ ತೊಂದರೆಯಾಗಲಿದೆ' ಎಂಬುದು ಯೋಜನೆಯನ್ನು ವಿರೋಧಿಸುತ್ತಿರುವವರ ವಾದ.

'ಯೋಜನೆ ಅನುಷ್ಠಾನಗೊಂಡರೆ ಬೆಟ್ಟ-ಅರಣ್ಯ, ಗುಡ್ಡ, ಕಣಿವೆ ತುಂಡು ತುಂಡಾಗುತ್ತವೆ. ಭೂಕುಸಿತ ವ್ಯಾಪಕವಾಗುತ್ತದೆ. ವನ್ಯಜೀವಿಗಳು ಅತಂತ್ರವಾಗಲಿವೆ. ವನ್ಯಜೀವಿಗಳ ಹಾವಳಿ ಮಲೆನಾಡಿಗರಿಗೆ ಇನ್ನೂ ಗಂಭೀರ ಸಂಕಷ್ಟ ತಂದೊಡ್ಡಲಿದೆ. 12 ವರ್ಷಗಳ ಹಿಂದೆಯೇ ವನ್ಯಜೀವಿ ಮಂಡಳಿ ಶಾಲ್ಮಲಾ–ಬೇಡ್ತಿ ನದಿ ಕಣಿವೆ ಪ್ರದೇಶವನ್ನು ಸಂರಕ್ಷಿತ ಅರಣ್ಯ ಪ್ರದೇಶ ಎಂದು ಘೋಷಿಸಿದೆ. ಯೋಜನೆ ಜಾರಿಯಿಂದ ಸಂರಕ್ಷಿತ ಪ್ರದೇಶ ಮತ್ತು ಅದರಲ್ಲಿನ ಜೀವವೈವಿಧ್ಯಗಳು ನಾಶವಾಗಲಿವೆ' ಎಂದು ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯು ಅಧ್ಯಯನ ನಡೆಸಿ, ಸಿದ್ಧಪಡಿಸಿದ ವಿಶ್ಲೇಷಣೆ ವರದಿ ಹೇಳುತ್ತಿದೆ.

ಶರಾವತಿ ಅಭಯಾರಣ್ಯದಲ್ಲಿ ಕರ್ನಾಟಕ ವಿದ್ಯುತ್ ನಿಗಮವು 2,000 ಮೆಗಾ ವ್ಯಾಟ್ ಭೂಗತ ಜಲವಿದ್ಯುತ್ ಯೋಜನೆ ಸ್ಥಾಪಿಸಲು ಮುಂದಾಗಿದೆ. ಜಿಲ್ಲಾಡಳಿತವು ಇದಕ್ಕೆ ಸಾರ್ವಜನಿಕ ಅಹವಾಲು ಸಭೆಯನ್ನು ಇತ್ತೀಚೆಗೆ ನಡೆಸಿದಾಗ, ಹತ್ತಾರು ಸಾವಿರ ಸ್ಥಳೀಯ ಜನರು ಬಂದು ಅಧಿಕೃತವಾಗಿ ಯೋಜನೆಯನ್ನು ವಿರೋಧಿಸಿ ಮನವಿ ನೀಡಿದ್ದಾರೆ.

'ಈ ಯೋಜನೆ ಪ್ರಸ್ತಾಪವಾಗಿರುವುದು ಪಶ್ಚಿಮಘಟ್ಟದ ದಟ್ಟ ಮಳೆಕಾಡಿರುವ ಸೂಕ್ಷ್ಮ ಪರ್ವತಶ್ರೇಣಿ ಪ್ರದೇಶದಲ್ಲಿ. ಮೇಲುಗಡೆ ಅನತಿ ದೂರದಲ್ಲಿ ವಿಶ್ವಪ್ರಸಿದ್ಧ ಜೋಗ ಜಲಪಾತ ಹಾಗೂ ಲಿಂಗನಮಕ್ಕಿ ಅಣೆಕಟ್ಟೆಯಿದೆ. ಕೆಳಗಡೆ ಸಮೀಪದಲ್ಲಿ ಗೇರುಸೊಪ್ಪೆ ಅಣೆಕಟ್ಟೆಯಿದೆ. ಇಂಥ ಸೂಕ್ಷ್ಮ ಪ್ರದೇಶದಲ್ಲಿ ಈ ಯೋಜನೆಯನ್ನು ಕಾರ್ಯಗತಮಾಡಿದರೆ ಭೂಕುಸಿತ ಘಟಿಸುವ ಅಪಾಯವಿದೆ. ಕಾಡಿನ ವನ್ಯಜೀವಿ ಆವಾಸಸ್ಥಾನ ನಾಶವಾಗಿ, ಅಪರೂಪದ ಕಾಡುಪ್ರಾಣಿಗಳು ಸುತ್ತಲಿನ ಹೊಲ-ತೋಟ ಜನವಸತಿಗಳಿಗೆ ನುಗ್ಗತೊಡಗಿ, ಮಾನವ-ವನ್ಯಜೀವಿ ಸಂಘರ್ಷ ಹೆಚ್ಚುತ್ತದೆ. ಅಭಯಾರಣ್ಯ ನಾಶವಾಗಲಿದೆ. ನದಿಯ ಕೆಳಹರಿವಿನಲ್ಲಿ ನೀರು ಇನ್ನಷ್ಟು ಕಡಿಮೆಯಾಗಿ, ಗೇರುಸೊಪ್ಪ-ಹೊನ್ನಾವರ ವ್ಯಾಪ್ತಿಯ ನದಿಯಂಚಿನ ನೂರಾರು ಹಳ್ಳಿಗಳ ಹತ್ತಾರು ಸಾವಿರ ಜನರ ನೀರಿನ ಬವಣೆ ಇನ್ನಷ್ಟು ಉಲ್ಬಣಿಸುತ್ತದೆ' ಎಂದೂ ಸಮಿತಿಯ ಅಧ್ಯಯನ ಆತಂಕ ವ್ಯಕ್ತಪಡಿಸಿದೆ.

ಪೂರಕ ಮಾಹಿತಿ: ರಾಜೇಂದ್ರ ಹೆಗಡೆ

ವಿಚಾರಗೋಷ್ಠಿ ಇಂದು

ಪಶ್ಚಿಮ ಘಟ್ಟದ ನದಿ ಕಣಿವೆಗಳ ಸಂರಕ್ಷಣೆ ಮಹತ್ವ ಮತ್ತು ಈ ಬೃಹತ್ ಯೋಜನೆಗಳಿಂದ ಆಗುವ ಅಪಾಯಗಳ ಕುರಿತು ತಜ್ಞರೊಂದಿಗೆ ಸಮಾಲೋಚಿಸಲು ಶನಿವಾರ (ಡಿ.13) ಮಧ್ಯಾಹ್ನ 2.30ಕ್ಕೆ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ವಿಚಾರಗೋಷ್ಠಿಯನ್ನು ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಹಮ್ಮಿಕೊಂಡಿದೆ. ಶಿರಸಿಯ ಸೋಂದಾ ಸ್ವರ್ಣವಲ್ಲೀ ಮಠದ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ತೇಜಸ್ವಿನಿ ಅನಂತಕುಮಾರ್, ಉಲ್ಲಾಸ್ ಕಾರಂತ, ಟಿ.ವಿ. ರಾಮಚಂದ್ರ, ಶ್ರೀನಿವಾಸ ರೆಡ್ಡಿ, ಸುರೇಶ್ ಹೆಬ್ಳೀಕರ್ ಈ ಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ.

ನದಿ ತಿರುವು ಯೋಜನೆ ವಿರೋಧಿಸಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಹೆಗ್ಗರಣಿಯಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದರು.

ಅಘನಾಶಿನಿ–ವೇದಾವತಿ ನದಿ ಜೋಡಣೆ

- ಕೇಂದ್ರ ಜಲಶಕ್ತಿ ಸಚಿವಾಲಯ ಮತ್ತು ರಾಜ್ಯ ಜಲಸಂಪನ್ಮೂಲ ಇಲಾಖೆ ಜಂಟಿಯಾಗಿ ಅನುಷ್ಠಾನ
- ಅಂದಾಜು ₹**23,000** ಕೋಟಿ ವೆಚ್ಚ
- **199** ಕಿ.ಮೀ ಉದ್ದದ ಪೈಪ್‌ಲೈನ್
- ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಅಂದಾಜು **600** ಎಕರೆ ಅರಣ್ಯ ಭೂಮಿ ಬಳಕೆ
- ಸಿದ್ದಾಪುರ ತಾಲ್ಲೂಕಿನ ಬಾಳೆಕೊಪ್ಪ ಬಳಿ ಅಣೆಕಟ್ಟೆ ನಿರ್ಮಿಸಿ, ನೀರು ಪಂಪ್ ಮಾಡಿ ಗೋಳಿಮಕ್ಕಿ, ಹಾರ್ಸಿಕಟ್ಟಾ, ಸಿದ್ದಾಪುರ, ಸಾಗರ, ಶಿವಮೊಗ್ಗ, ತರೀಕೆರೆ, ಅಜ್ಜಂಪುರ ಮಾರ್ಗವಾಗಿ ವಾಣಿವಿಲಾಸ ಜಲಾಶಯಕ್ಕೆ ನೀರು ತುಂಬಿಸುವ ಯೋಜನೆ
- **1.20** ಲಕ್ಷ ಮರಗಳು ಬಲಿ ಸಾಧ್ಯತೆ

ಶರಾವತಿ ಪಂಪ್ಡ್ ಸ್ಟೋರೇಜ್

- ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್) ಜಾರಿಗೊಳಿಸುತ್ತಿರುವ ಯೋಜನೆ
- ಅಂದಾಜು ₹**10,500** ಕೋಟಿ ವೆಚ್ಚ
- **54.55** ಹೆಕ್ಟೇರ್ ಯೋಜನೆಗೆ ಬಳಕೆಯಾಗಲಿರುವ ಅರಣ್ಯ ಪ್ರದೇಶ
- **16,041** ಹನನವಾಗಲಿರುವ ಮರಗಳು
- **7** ಕಿ.ಮೀ ಉದ್ದದ ಸುರಂಗ ಮಾರ್ಗ



ನದಿ ಜೋಡಣೆ, ಪಂಪ್ಡ್ ಸ್ಟೋರೇಜ್, ವಾಣಿಜ್ಯ ಬಂದರು ಯೋಜನೆಗಳ ಕಾರ್ಯಾನುಷ್ಠಾನದ ವಿರುದ್ಧ ಕಾನೂನಾತ್ಮಕ ಹೋರಾಟ ನಡೆಸುವ ಅಗತ್ಯವಿದೆ. ಯೋಜನೆ ವಿರೋಧಕ್ಕೆ ಸೂಕ್ತ ದತ್ತಾಂಶ ಸಂಗ್ರಹಿಸಲಾಗಿದೆ

ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಸ್ವರ್ಣವಲ್ಲೀ ಮಠ ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯ ಗೌರವಾಧ್ಯಕ್ಷ

ಉತ್ತರ ಕನ್ನಡ ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯ ಮುಗಿದ ಬಗ್ಗೆ ಈ ಹಿಂದೆಯೇ ಸಮಗ್ರ ವರದಿ ಸರ್ಕಾರಕ್ಕೆ ಸಲ್ಲಿಸಿದ್ದರೂ ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗುತ್ತಿರುವುದು ಗೊಂದಲ ಮೂಡಿಸುತ್ತಿದೆ

ಅನಂತ ಹೆಗಡೆ ಅಶೀಸರ, ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಅಧ್ಯಕ್ಷ


ಬೇಡ್ತಿ–ವರದಾ ನದಿ ಜೋಡಿಸುವ ಯೋಜನೆ ಪ್ರಸ್ತಾವ ಮೂರು ದಶಕಗಳಿಂದ ಇದೆ. ನೀರಾವರಿ ಬಳಕೆಗೆ ಯೋಜನೆ ಜಾರಿ ಅಗತ್ಯವಿದೆ. ಈಗ ಪರಿಸರಕ್ಕೆ ಧಕ್ಕೆಯಾಗದ ರೀತಿಯಲ್ಲಿ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ

ಬಸವರಾಜ ಬೊಮ್ಮಾಯಿ, ಹಾವೇರಿ ಸಂಸದ

ಉತ್ತರ ಕನ್ನಡ ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯವನ್ನು ಅಧ್ಯಯನ ಮಾಡದೆ ಯಾವುದೇ ಬೃಹತ್ ಯೋಜನೆ ಜಾರಿಗೆ ತರುವ ಕೆಲಸ ಆಗಬಾರದು. ಈ ಬಗ್ಗೆ ರಾಜ್ಯ ಸರ್ಕಾರ ಜವಾಬ್ದಾರಿ ನಿಭಾಯಿಸಬೇಕು

ವಿಶ್ವೇಶ್ವರ ಹೆಗಡೆ ಕಾಗೇರಿ, ಉತ್ತರ ಕನ್ನಡ ಸಂಸದ

'ಸಮುದ್ರ ಸೇರುವ ನೀರು ಪೋಲಲ್ಲ'

'ಬಯಲು ಸೀಮೆಯ ನೀರಿನ ಕೊರತೆ ನೀಗಿಸಲು ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳನ್ನು ಪೂರ್ವಾಭಿಮುಖವಾಗಿ ತಿರುಗಿಸುವ ಪ್ರಯತ್ನಗಳು ನಡೆಯುತ್ತಿವೆ. 'ಸಮುದ್ರಕ್ಕೆ ನೀರು ಹರಿದು ಪೋಲಾಗುತ್ತಿದೆ. ಅದೇ ನೀರನ್ನು ಬಯಲುಸೀಮೆಗೆ ಹರಿಸಿದರೆ ಅನುಕೂಲವಾಗುತ್ತದೆ' ಎಂಬ ಕಾರಣ ನೀಡಿ ಯೋಜನೆ ಜಾರಿಗೆ ಯತ್ನಿಸಲಾಗುತ್ತಿದೆ. ಸಮುದ್ರಕ್ಕೆ ನೀರು ಸೇರುವುದು ಪೋಲು ಎಂಬ ಧೋರಣೆಯೇ ಅಪಾಯಕಾರಿ ಸಂಗತಿ. ಸಮುದ್ರಕ್ಕೆ ಸಿಹಿ ನೀರು, ಫಲವತ್ತಾದ ನೀರು ಬರಬೇಕು. ಅದಿಲ್ಲವಾದರೆ ಮೀನು ಸಂತತಿ ಬೆಳೆಯಲು ಅನುಕೂಲಕರ ವಾತಾವರಣ ಇರುವುದಿಲ್ಲ. ನದಿಯ ನೀರು ಸಮುದ್ರ ಸೇರದಿದ್ದರೆ ಅದು ಇಡೀ ನೀರಿನ ಚಕ್ರವನ್ನೇ ಗೊಂದಲಕ್ಕೆ ಸಿಲುಕಿಸುತ್ತದೆ. ಎಷ್ಟು ಪ್ರಮಾಣದಲ್ಲಿ ನದಿಯ ನೀರು ಸಾಗರವನ್ನು ಸೇರುತ್ತದೆ ಎಂಬುದು, ಮುಂಗಾರಿನ ಸಮಯದಲ್ಲಿ ಎಷ್ಟು ಮಳೆಯಾಗುತ್ತದೆ ಎಂಬುದನ್ನು ನಿರ್ಧರಿಸುತ್ತದೆ. ನದಿಯು ಸಾಗರ ತಲುಪುವುದನ್ನು ತಡೆಯುವುದರಿಂದ ಕಡಲತೀರದ ಪ್ರದೇಶಗಳಿಗೂ ಹಾನಿಯಾಗುತ್ತದೆ. ಲವಣಯುಕ್ತ (ಉಪ್ಪಿನಂಶದ) ನೀರು ಅಂತರ್ಜಲದ ಒಳನುಗ್ಗುತ್ತದೆ' ಎಂದು ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ನಿಯೋಜಿಸಿದ್ದ ತಜ್ಞರ ವರದಿ ಹೇಳಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

13 ಡಿಸೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ನವಮಿ ಗಂ. 16-39 ನಕ್ಷತ್ರ: ಹಸ್ತ ಆಹೋರಾತ್ರ ಯೋಗ: ಆಯುಷ್ಮಾನ್ ಗಂ. 11-16 ಕರಣ: ಗರ ಗಂ. 16-39 ವೃಶ್ಚಿಕ ಮಾಸದ 27 ನೇ ದಿನ. ಮಳೆ ನಕ್ಷತ್ರ : ಜ್ಯೇಷ್ಠ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 ಸೂರ್ಯೋದಯ : 06-48 ಸೂರ್ಯಾಸ್ತ : 06-02, ಮುಸ್ಲಿಂ ದಿನಾಂಕ : 21 ಜುಮಾದುಸ್ಸಾನಿ , ಅದೃಷ್ಟ ಸಂಖ್ಯೆ : 2, 8

ಮೇಷ: ನೂತನ ಮನೆ ನಿರ್ಮಾಣದಲ್ಲಿರುವ ಸಹೋದರರಿಗೆ ಸಹಾಯ ಹಸ್ತ ನೀಡುವ ಮನಸ್ಸಾಗುವುದು. ಓದಿನಲ್ಲಿ ಹೆಚ್ಚು ಆಸಕ್ತಿ ಹುಟ್ಟುವಂತೆ ಮನೆಯ ಪರಿಸರ ನಿರ್ಮಿಸಿ. ಸತ್ಫಲಗಳಿಗಾಗಿ ಶಾರದೆಯನ್ನು ದರ್ಶಿಸುವುದು ಒಳ್ಳೆಯದು.

ವೃಷಭ: ಪ್ರಯತ್ನ ಬಲ ಹಾಗು ಮನೆಯಲ್ಲಿ ಪಿತೃ ಕಾರ್ಯವನ್ನು ನಡೆಸಿದರೆ, ಕೌಟುಂಬಿಕ ವಿವಾದಗಳು ರಾಜೀ ಮನೋಭಾವಗಳಿಂದ ಸಮಾಪ್ತಿ ಹೊಂದಲಿವೆ. ನಿಧಾನಗತಿಯ ಕಾರ್ಯಗಳು ಚುರುಕಾಗಿ ನೆಮ್ಮದಿ ಸಿಗಲಿದೆ.

ಮಿಥುನ: ಕೌಟುಂಬಿಕವಾಗಿ ಖರ್ಚುಗಳು ಅಧಿಕವೆನಿಸಿದರೂ ಆರ್ಥಿಕವಾಗಿ ಆದಾಯ ಯಾವುದೇ ರೀತಿಯ ಏರಿಳಿತಗಳಿಲ್ಲದೆ ಸಮನಾಗಿರುವುದು. ಹಿರಿಯರ ಆರೋಗ್ಯದ ಕಾರಣ ಪ್ರಯಾಣವನ್ನು ಮುಂದೂಡುವುದು ಉತ್ತಮ.

ಕರ್ಕಾಟಕ: ಹೆಚ್ಚಿನ ಗಮನ ಸಹೋದ್ಯೋಗಿಗಳಲ್ಲಿ ಇಡುವುದರಿಂದ ನಿಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳುವ ಮಾರ್ಗ ದೊರೆಯುತ್ತದೆ. ಮನೆಯ ಕೆಲಸಗಳನ್ನು ನಿಭಾಯಿಸುವುದರಲ್ಲಿ ಸಮಯವನ್ನು ಕಳೆಯುವಿರಿ.

ಸಿಂಹ: ಆರ್ಥಿಕವಾಗಿ ಚೇತರಿಕೆ ಕಂಡುಬರದಿದ್ದರೂ ಜೀವನಕ್ಕೆ ಕೊರತೆ ಇರಲಾರದು. ಬಹಳ ದಿನಗಳ ನಂತರ ಸೋದರನ ಆಗಮನದಿಂದ ಸಂಭ್ರಮದ ವಾತಾವರಣ ಇರುವುದು. ಲಾಭ ನಷ್ಟಗಳ ಬಗ್ಗೆ ಅವಲೋಕನ ಅಗತ್ಯ.

ಕನ್ಯಾ: ಕೆಲಸದಲ್ಲಿ ಆತುರ ಬೇಡ. ಸದ್ಯಕ್ಕೆ ವೃತ್ತಿಯ ಬದಲಾವಣೆಯ ಯೋಚನೆ ಸರಿಯಲ್ಲ. ಆಧ್ಯಾತ್ಮಿಕ ಪುಸ್ತಕಗಳನ್ನು ಪಠಿಸಿದ ಕಾರಣವಾಗಿ ದೈವಿಕ ಅನುಭವ ಪದೇ ಪದೇ ಆಗುತ್ತದೆ. ದಾಂಪತ್ಯದಲ್ಲಿ ಬಿರುಕು ಬರದಂತೆ ನೋಡಿಕೊಳ್ಳಿ.

ತುಲಾ: ಹೊಸ ವೃತ್ತಿಯ ವಿಚಾರವಾಗಿ ಯಾವ ಜಾಗದಲ್ಲಿ ವೃತ್ತಿಯನ್ನು ಮಾಡುವುದೆಂದು ಚಿಂತಿಸುವಿರಿ. ಆಹಾರ ಸೇವನೆ ವಿಧಾನ ಬದಲಾಯಿಸಿಕೊಳ್ಳಿ. ಮುಂಗೋಪಿತನದ ತೀರ್ಮಾನ ಸರಿಯಲ್ಲ.

ವೃಶ್ಚಿಕ: ಊರಿನ ರಾಜಕಾರಣದ ವಿಷಯಗಳಲ್ಲಿ ಹೆಚ್ಚು ಸಮಯ ಕಳೆಯುವಂತಾಗುವುದು. ಪರಿಸ್ಥಿತಿಗೆ ನೀವೇ ಹೊಂದುಕೊಳ್ಳುವ ತೀರ್ಮಾನ ಮಾಡಿರಿ. ಇಂದಿನ ನಡವಳಿಕೆ ಸಮಾಜದಲ್ಲಿ ಎಲ್ಲರ ಕೇಂದ್ರ ಬಿಂದುವಾಗಲಿದೆ.

ಧನು: ಮನೆಯಲ್ಲಿ ನಡೆಯಬೇಕಾದ ಮಂಗಳ ಕಾರ್ಯದ ಕುರಿತು ಹಿರಿಯರೊಂದಿಗೆ ಸಮಾಲೋಚನೆ ನಡೆಸುವಿರಿ. ವ್ಯವಸ್ಥಿತವಾಗಿ ನಡೆಯಲಿದೆ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆಯಿಂದ ಇರುವುದು ಒಳ್ಳೆಯದು.

ಮಕರ: ಯೋಗಪಟುಗಳಿಗೆ ದೊಡ್ಡ ಕಾರ್ಯಕ್ರಮದಲ್ಲಿ ಯೋಗ ಪ್ರದರ್ಶನ ಮಾಡುವ ಅವಕಾಶ ದೊರೆಯುತ್ತದೆ. ಮಾಂಗಲ್ಯ ಯೋಗ ತೋರಿ ಬಂದರೂ ನಿಮ್ಮ ನಿರ್ಧಾರವೇ ಮುಖ್ಯವೆನಿಸಲಿದೆ. ಮಾತಿನಲ್ಲಿ ಹಿಡಿತವಿರಲಿ.

ಕುಂಭ: ಮನೆಯ ಹಿರಿಯರ ಮುಂದೆ ಪರಂಪರೆಗಳನ್ನು ಹಾಗೂ ನೀತಿ ನಿಯಮಗಳನ್ನು ಮೀರಿ ನಡೆದು ಅವರ ಅಸಮಾಧಾನಕ್ಕೆ ಕಾರಣವಾಗುವಿರಿ. ಮಕ್ಕಳ ಭವಿಷ್ಯದ ಮೇಲಿನ ಚಿಂತೆ ಅವರ ಕೆಲವು ನಡವಳಿಕೆಯಿಂದ ಹೆಚ್ಚಲಿದೆ.

ಮೀನ: ಮಿತ್ರನ ಮನೆಯ ಸಮಾರಂಭದಲ್ಲಿ ಭಾಗವಹಿಸುವುದರಿಂದ ಹಳೆಯ ಮಿತ್ರರನ್ನು ಭೇಟಿಯಾದ ಸಂಭ್ರಮ ನಿಮ್ಮದಾಗುತ್ತದೆ. ವಿದ್ಯಾರ್ಥಿಗಳಿಗೆ ಸಾಧನೆಗೆ ಪೂರಕವಾದ ದಿನವಾಗಿದೆ. ನೀರಾವರಿ ಬೆಳೆಗಳು ಲಾಭ ತರಲಿವೆ.

ಪದಬಂಧ 6252

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉದಾಹರಣೆ ನೀಡುವಾಗ ಆದ ಬಾಯಾರಿಕೆ (2)
3.ಭೀಷ್ಮನ ಇನ್ನೊಂದು ಹೆಸರು (3)
6.ದೇವತೆ ಮತ್ತು ರಾಕ್ಷಸರು ಒಟ್ಟಿಗಿದ್ದಾರಲ್ಲಾ! (4)
8.ಮಾವನಲ್ಲಿರುವ ಕೋಮಲತೆ ಕಾಣುತ್ತಿದೆಯೇ? (3)
9.ಕಾಣಿಸುತ್ತಲೇ ಬಾಚಿಕೊಂಡಿರುವ ಹಣ! (2)
10.ಕೂಲಂಕಷವಾದ ವಿಚಾರಣೆ (4)
13.ಮನಸ್ಸಿನ ಬಯಕೆ (4)
15.ಹಿರಿಯ ಸಹೋದರನಿವನು (2)
16.ಅಗಲವಾದ ಹರಿವಾಣ (3)
17.ತುಸುವೆ ಬೀರಿದ ಮಂದಹಾಸ (4)
18.ಉತ್ತರದವರ ವಿಪುಲತೆ (3)
19.ಬುದ್ಧಿವಂತ ಇಲ್ಲಿ ಉಲ್ಟಾ ನಿಂತಿದ್ದಾನೆ (2)

ಮೇಲಿಂದ ಕೆಳಕ್ಕೆ

2.ಕರುವಿನ ತಾಯಿಯ ಹತ್ತಿರವಿರುವ ಎಳೆಮಗು (4)
3.ನಗರದಲ್ಲಿರುವ ಮನುಷ್ಯ (2)
4.ಮಾವ ನಡುವಿದ್ದಾಗಲೇ ಇದು ಸಂಗ್ರಹ! (4)
5.ಅಭಾವ ಕಾಲದಲ್ಲಿ ಬಂದಿರುವ ಅಕ್ಕನ ಗಂಡ (2)
7.ಆಯುರ್ವೇದ ಚಿಕಿತ್ಸಾ ಶಾಸ್ತ್ರವನ್ನು ಬರೆದಿರುವ ಋಷಿ (3)
9.ಕಾರ್ಮಿಕ ಹಿಡಿದಿರುವ ಬಿಲ್ಲು! (3)
11.ಮರದ ಹತ್ತಿರ ನಿಂತಿರುವವನು ತಿಳುವಳಿಕೆ ಇಲ್ಲದವನು (3)
12.ಚಿನ್ನ ಬಣ್ಣವನ್ನು ಹೀಗೂ ಹೇಳುತ್ತಾರೆ (3)
13.ಪರಿವರ್ತನೆಯ ಕಾಲ ಮರದಲ್ಲಿದೆ! (4)
14.ಒಳ್ಳೆಯ ಹಾದಿ ಉಲ್ಟಾ ಕಾಣುತ್ತಿದೆಯಲ್ಲಾ! (3)
15.ಅವನ ಕೆಟ್ಟಗುಣ! (4)
16. ತಾಪತ್ರಯದಲ್ಲಿದ್ದಾಗ ಬಂದಿರುವ ಓಲೆ (2)
17.ನಡುಗುತ್ತಿರುವವಳ ಸೊಂಟ! (2)

6251ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ರಾಟೆ 3.ನಟರಾಜ 5.ರಮಣಿ 6.ಸುಧಾರಕ 8.ಸಮಾಗಮ 12.ಅಂತರ್ಧಾನ 14.ಅವಧೂತ 15.ಕಣಜ 16.ತಳಮಳ 17.ಭವಿ

ಮೇಲಿಂದ ಕೆಳಕ್ಕೆ:
1.ಉರವಣಿಗೆ 2.ರಾಣಿವಾಸ 3.ನವಸುಮ 4.ಜಟಕ 7.ರಚ್ಚು 9.ಗಣಿತ 10.ಅಪ್ರಯೋಜಕ 11.ಜಾವ 12.ಅಂತರಾಳ 13.ನವ್ಯಕವಿ 14.ಅಹಿತ

ಸುಡೊಕು 6636

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8			9		5		
6		5					1	
			1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

6635 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,898
ಇಂದಿನ ಅಂತ್ಯ:	26,046
ದಿನದ ಗರಿಷ್ಠ:	26,057
	148

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹680
	12 ಕ್ಕೆ	₹96
ಮೈಸೂರು:	100 ಕ್ಕೆ	₹680

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹180
ಆರ್‌ಎಸ್‌ಎಸ್-5	₹175
ಗುಡ್ ಲಾಟ್	₹163

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹444-741
ದ್ವಿತಳಿ (ಬಿ.ವಿ)	₹411-900

ಮುದ್ರೆಮನೆ ಕಾಫಿ

ಎಪಿ	₹28600
ಎಸಿ	₹15680
ಆರ್‌ಪಿ	₹18900
ಆರ್‌ಸಿ	₹10325

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1520 (1515)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1490 (1490)
ಪಾಮೋಲಿನ್	₹1250 (1250)

ಎಫ್‌ಪಿಒ: 5 ವರ್ಷ ವಿಸ್ತರಣೆ

ರೈತ ಉತ್ಪಾದಕ ಸಂಸ್ಥೆಗಳ ಹಣಕಾಸಿನ ನೆರವಿಗೆ ಇರುವ ಅಡೆತಡೆ ಪರಿಹರಿಸಲು ವಿಸ್ತರಣೆ



ನವದೆಹಲಿ (ಪಿಟಿಐ): 'ತನ್ನ ಪ್ರಾಯೋಜಕತ್ವದ ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಯೋಜನೆಯನ್ನು ಮತ್ತೆ ಐದು ವರ್ಷ ಕೇಂದ್ರ ಸರ್ಕಾರ ವಿಸ್ತರಿಸಲಿದೆ' ಎಂದು ಕೇಂದ್ರ ಕೃಷಿ ಸಚಿವಾಲಯದ ಕಾರ್ಯದರ್ಶಿ ದೇವೇಶ್ ಚತುರ್ವೇದಿ ಹೇಳಿದ್ದಾರೆ.

ಸರ್ಕಾರದ ನಿಯಮಗಳ ಪಾಲನೆ ಮತ್ತು ಹಣಕಾಸಿನ ಅಡೆತಡೆಗಳನ್ನು ಪರಿಹರಿಸಲು 2026ರಿಂದ 31ರವರೆಗೆ ಈ ವಿಸ್ತರಣೆ ಮಾಡಲಾಗುತ್ತಿದೆ ಎಂದು ಶುಕ್ರವಾರ ಹೇಳಿದ್ದಾರೆ.

ದೇಶದಲ್ಲಿ 10 ಸಾವಿರ ರೈತ ಉತ್ಪಾದಕ ಸಂಸ್ಥೆಗಳ ರಚನೆಗೆ ಕೇಂದ್ರ ಸರ್ಕಾರವು 2020ರ ಫೆಬ್ರುವರಿಯಲ್ಲಿ ಚಾಲನೆ ನೀಡಿತ್ತು. ಈಗಾಗಲೇ 10 ಸಾವಿರ ಎಫ್‌ಪಿಒ ನೋಂದಣಿ ಆಗಿದ್ದು, ಈ ಪೈಕಿ ಹಲವು ಎಫ್‌ಪಿಒ ಕಳೆದ ಎರಡು ವರ್ಷದಲ್ಲಿ ರಚನೆ ಆಗಿವೆ. ಹೀಗಾಗಿ, ಈ ಸಂಘಗಳ ಸಶಕ್ತಗೊಳಿಸುವ ಅಗತ್ಯವಿದೆ ಎಂದು ಹೇಳಿದ್ದಾರೆ.

ರೈತರಿಗೆ ಹೆಚ್ಚಿನ ಪ್ರತಿಫಲ ನೀಡಲು ಸಾಧ್ಯವಾಗುವ ರೀತಿಯಲ್ಲಿ ಎಫ್‌ಪಿಒ ರೂಪಿಸಲಾಗಿದೆ ಎಂದು ತಿಳಿಸಿದ್ದಾರೆ.

ಕಂಪನಿ ಕಾಯ್ದೆ ಅಡಿಯಲ್ಲಿನ ಮಾನದಂಡಗಳನ್ನು ಪಾಲಿಸುವುದೇ ಎಫ್‌ಪಿಒಗೆ ದೊಡ್ಡ ಸವಾಲಾಗಿದೆ. 3ರಿಂದ 5 ವರ್ಷದವರೆಗೆ ದಂಡದಿಂದ ವಿನಾಯಿತಿ ನೀಡುವಂತೆ ಸಂಸದೀಯ ವ್ಯವಹಾರ ಸಚಿವಾಲಯಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ.

2024-25ರ ಆರ್ಥಿಕ ವರ್ಷದಲ್ಲಿ ಎಫ್‌ಪಿಒ ವಾರ್ಷಿಕ ವಹಿವಾಟು ₹9 ಸಾವಿರ ಕೋಟಿ ಆಗಿದೆ ಎಂದ ಅವರು, ಒಟ್ಟು ವ್ಯವಹಾರ ₹10 ಸಾವಿರ ಕೋಟಿ ದಾಟುವ ಅಂದಾಜಿದೆ. ದೇಶದ 52 ಲಕ್ಷ ರೈತರಿಗೆ ಎಫ್‌ಪಿಒದಿಂದ ಅನುಕೂಲವಾಗಿದೆ ಎಂದು ಹೇಳಿದ್ದಾರೆ.

> ಕೆಲವು ಎಫ್‌ಪಿಒಗಳು ಸರ್ಕಾರದ ಪ್ರಯೋಜನಗಳನ್ನು ಪಡೆಯಲು ಕಾಗದದ ಮೇಲೆ ಮಾತ್ರ ಅಸ್ತಿತ್ವದಲ್ಲಿದ್ದು, ನೈಜ ರೈತರ ಭಾಗವಹಿಸುವಿಕೆ ಇಲ್ಲದೆ ಕೇವಲ 3ರಿಂದ 4 ಜನರನ್ನು ಒಳಗೊಂಡಿವೆ
>
> **ದೇವೇಶ್ ಚತುರ್ವೇದಿ,** ಕೇಂದ್ರ ಕೃಷಿ ಸಚಿವಾಲಯದ ಕಾರ್ಯದರ್ಶಿ

ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಪ್ರತ್ಯೇಕವಾಗಿ ನೋಂದಾಯಿಸಲಾದ 40 ಸಾವಿರದಿಂದ 50 ಸಾವಿರ ಎಫ್‌ಪಿಒಗಳನ್ನು ಸೇರಿಸಿದರೆ, ಒಟ್ಟು ಎಫ್‌ಪಿಒಗಳ ಸಂಖ್ಯೆಯು ಇನ್ನಷ್ಟು ಹೆಚ್ಚಳವಾಗುತ್ತದೆ.

ಪ್ರಸ್ತುತ, ದೊಡ್ಡ ಗಾತ್ರದ ವಹಿವಾಟು ನಡೆಸಲು ಎಫ್‌ಪಿಒ ಮಿತಿ ₹30 ಲಕ್ಷದಷ್ಟಿದ್ದು, ಇದು ಸಾಕಾಗುವುದಿಲ್ಲ. ಬೆಳೆ ಖರೀದಿ ವೇಳೆ ಅಥವಾ ರೈತರಿಗೆ ಮುಂಗಡ ಪಾವತಿ ಮಾಡುವಾಗ ಇದು ಕನಿಷ್ಠ ₹50 ಲಕ್ಷದಿಂದ ₹1 ಕೋಟಿ ಆಗಿರಬೇಕು ಎಂದು ಹೇಳಿದ್ದಾರೆ.

ಸರ್ಕಾರವು ಎಫ್‌ಪಿಒಗಳಿಗೆ ಸಾಲದ ಗ್ಯಾರಂಟಿ ಅಥವಾ ಹಣಕಾಸಿನ ನೆರವು ಸೌಲಭ್ಯಗಳನ್ನು ವಿಸ್ತರಿಸಲು ಪ್ರಯತ್ನಿಸುತ್ತಿದೆ ಎಂದಿದ್ದಾರೆ.

ಏನಿದು ಎಫ್‌ಪಿಒ: ಸಾಮೂಹಿಕ ಕೃಷಿಯನ್ನು ಬೆಂಬಲಿಸುವುದು ಮತ್ತು ಉತ್ತೇಜಿಸುವುದು ಎಫ್‌ಪಿಒ ರಚನೆಯ ಹಿಂದಿನ ಉದ್ದೇಶ. ಈ ಸಂಸ್ಥೆಗಳು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಂತ್ರಜ್ಞಾನ, ಸಾಲ, ಮಾರುಕಟ್ಟೆಗಳು ಮತ್ತು ಕೃಷಿಗೆ ಸಂಬಂಧಿತ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸುವ ಮೂಲಕ ತಮ್ಮ ಆದಾಯವನ್ನು ಸುಧಾರಿಸಲು ಸಹಾಯ ಮಾಡುತ್ತವೆ. ರೈತ ಉತ್ಪಾದಕ ಸಂಸ್ಥೆಗಳ ಮೇಳಗಳು ರೈತರಿಗೆ ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಗೆ ತಲುಪಿಸಲು, ಹೊಸ ತಂತ್ರಜ್ಞಾನಗಳನ್ನು ಅಳವಡಿಸಲು, ಪರಸ್ಪರ ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆಗಳಾಗಿವೆ.

'2 ಲಕ್ಷ ಉದ್ಯೋಗ ಸೃಷ್ಟಿ ನಿರೀಕ್ಷೆ'

ಮುಂಬೈ (ಪಿಟಿಐ): ದೇಶದ ಏರೋಸ್ಪೇಸ್, ಡ್ರೋನ್ ಮತ್ತು ಬಾಹ್ಯಾಕಾಶ ತಂತ್ರಜ್ಞಾನ ಉದ್ಯಮವು 2033ರ ವೇಳೆಗೆ ಐದು ಪಟ್ಟು ಬೆಳವಣಿಗೆ ಕಂಡು ₹3.97 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆ ಇದೆ ಎಂದು ಕಾರ್ಮಿಕ ಸೇವೆಗಳ ವಲಯದಲ್ಲಿ ಕಾರ್ಯನಿರ್ವಹಿಸುವ ಅಡೆಕ್ಕೊ ಇಂಡಿಯಾ ವರದಿ ತಿಳಿಸಿದೆ.

ಇದೇ ಅವಧಿಯಲ್ಲಿ ಈ ಉದ್ಯಮಗಳಲ್ಲಿ 2 ಲಕ್ಷಕ್ಕೂ ಅಧಿಕ ಉದ್ಯೋಗಗಳು ಸೃಷ್ಟಿಯಾಗಬಹುದು ಎಂದು ತಿಳಿಸಿದೆ.

ಸರ್ಕಾರದ ನಿಯಮಗಳಲ್ಲಿನ ಸುಧಾರಣೆಗಳು, ಖಾಸಗಿ ವಲಯದ ಪಾಲ್ಗೊಳ್ಳುವಿಕೆ ಮತ್ತು ಅಂತರರಾಷ್ಟ್ರೀಯ ಸಹಯೋಗದಿಂದ ಉದ್ಯಮವು ತ್ವರಿತವಾಗಿ ಬೆಳವಣಿಗೆ ಕಾಣುತ್ತಿದೆ. ಈ ಉದ್ಯಮದಲ್ಲಿ ಎಂಜಿನಿಯರ್‌ಗಳು, ಸಂಶೋಧಕರು, ಡೇಟಾ ಸೈಂಟಿಸ್ಟ್ ಮತ್ತು ವ್ಯವಹಾರ ವೃತ್ತಿಪರರು ಸೇರಿದಂತೆ 2 ಲಕ್ಷಕ್ಕೂ ಅಧಿಕ ಹೊಸ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಹೆಚ್ಚುವರಿಯಾಗಿ, ಬಾಹ್ಯಾಕಾಶ ನೀತಿ ವಿಶ್ಲೇಷಕರು, ರೊಬೊಟಿಕ್ಸ್ ಎಂಜಿನಿಯರ್‌ಗಳು, ಏವಿಯಾನಿಕ್ಸ್ ತಜ್ಞರಂತಹ ಹೊಸ ಹುದ್ದೆಗಳು ಬಾಹ್ಯಾಕಾಶ ವಲಯಕ್ಕೆ ಪ್ರಮುಖ-ವಾಗಲಿವೆ. ಅಡೆಕ್ಕೊ ಇಂಡಿಯಾ ತನ್ನ 100ಕ್ಕೂ ಹೆಚ್ಚು ಗ್ರಾಹಕರಿಂದ ಪಡೆದ ಮಾಹಿತಿಯನ್ನು ಆಧರಿಸಿ ವರದಿ ಸಿದ್ಧಪಡಿಸಿದೆ.

ಬೆಂಗಳೂರು, ಹೈದರಾಬಾದ್, ಚೆನ್ನೈ, ಅಹಮದಾಬಾದ್, ಪುಣೆ ಮುಂತಾದ ಪ್ರದೇಶಗಳು ಗರಿಷ್ಠ ಅವಕಾಶಗಳನ್ನು ಒದಗಿಸುವ ನಿರೀಕ್ಷೆಯಿದೆ.

ಪ್ರಸ್ತುತ ಜಾಗತಿಕ ಮಾರುಕಟ್ಟೆಗೆ ದೇಶದ ಬಾಹ್ಯಾಕಾಶ ಆರ್ಥಿಕತೆಯ ಕೊಡುಗೆ ಶೇ 2ರಷ್ಟು ಮಾತ್ರ. ಇದನ್ನು 2033ರ ವೇಳೆಗೆ ₹3.97 ಲಕ್ಷ ಕೋಟಿಗೆ ಹೆಚ್ಚಿಸಲು ಸರ್ಕಾರ ಮಹತ್ವಾಕಾಂಕ್ಷೆ ಹೊಂದಿದೆ. ಈ ಪೈಕಿ ₹1 ಲಕ್ಷ ಕೋಟಿ ಮೌಲ್ಯದಷ್ಟು ರಫ್ತು ಗುರಿ ಇದೆ. ಈ ಮೂಲಕ ಜಾಗತಿಕ ಬಾಹ್ಯಾಕಾಶ ಆರ್ಥಿಕತೆಯಲ್ಲಿ ದೇಶದ ಪಾಲನ್ನು ಶೇ 7ರಿಂದ ಶೇ 8ಕ್ಕೆ ಹೆಚ್ಚಿಸಲು ಗುರಿ ಹೊಂದಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಚಿತ್ರದುರ್ಗ		ಕೋಕ	20000-35000	ತಟ್ಟಿಬೆಟ್ಟೆ	30219-56699
ಬೆಟ್ಟೆ	36600-37000	ಹೊಸತು	26000-41000	**ಯಲ್ಲಾಪುರ**	
ಕೆಂಪುಗೋಟು	30600-31000	ಹಳತು	45000-54000	ಆಪಿ	55269-73875
ರಾಶಿ	50700-51100	**ಸಿದ್ದಾಪುರ**		ಬಿಳಿಗೋಟು	11209-35496
ಕುಮಟಾ		ಬಿಳಿಗೋಟು	26109-35399	ಕೋಕ	12619-30689
ಚಾಲಿ	42569-46899	ಚಾಲಿ	41055-47499	ಹಳೆಚಾಲಿ	30609-48333
ಚಿಪ್ಪು	25629-33569	ಕೋಕ	20899-32899	ಹೊಸಚಾಲಿ	34899-39691
ಕೋಕ	11569-30099	ಹೊಸಚಾಲಿ	33099-43699	ಕೆಂಪುಗೋಟು	12109-37969
ಫ್ಯಾಕ್ಟರಿ	6999-23269	ಕೆಂಪುಗೋಟು	30219-31029	ರಾಶಿ	52500-64950
ಹೊಸಚಾಲಿ	33029-37655	ರಾಶಿ	54899-58699	ತಟ್ಟಿಬೆಟ್ಟೆ	34506-52219
ಪುತ್ತೂರು					

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-19600
ದಾವಣಗೆರೆ	₹13650-14350
ಹಿರಿಯೂರು	₹16666-16666
ವಿಜಯಪುರ	₹9200-9200

ಥಾಯ್ಲೆಂಡ್ ಸಂಸತ್ತು ವಿಸರ್ಜನೆ

ಬ್ಯಾಂಕಾಕ್ (ಎಪಿ): ಥಾಯ್ಲೆಂಡ್ ಸಂಸತ್ತು ಶುಕ್ರವಾರ ವಿಸರ್ಜನೆ-ಗೊಂಡಿದ್ದು, ಮುಂದಿನ ವರ್ಷದ ಆರಂಭದಲ್ಲಿ ಸಾರ್ವತ್ರಿಕ ಚುನಾವಣೆಗೆ ವೇದಿಕೆ ಸಿದ್ಧಗೊಂಡಿದೆ.

ಥಾಯ್ಲೆಂಡ್ ದೊರೆ ವಜಿರಲೊಂಗ್‌ಕಾರ್ನ್ ಅವರ ಒಪ್ಪಿಗೆ ದೊರೆತ ನಂತರ ಪ್ರಧಾನಿ ಅನುಟಿನ್ ಚರ್ನ್‌ವಿರಕುಲ್ ಅವರು ಸಂಸತ್ತನ್ನು ವಿಸರ್ಜಿಸಿದರು. 'ನಾನು ಅಧಿಕಾರವನ್ನು ಜನರಿಗೆ ಹಿಂದಿರುಗಿಸಲು ಬಯಸುತ್ತೇನೆ' ಎಂದು ಅನುಟಿನ್ ಅವರು ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಸತ್ತು ವಿಸರ್ಜಿಸಲು ದೊರೆಯ ಒಪ್ಪಿಗೆ ಲಭಿಸಿದ 45ರಿಂದ 60 ದಿನಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಬೇಕು. ಈ ಅವಧಿಯಲ್ಲಿ ಅನುಟಿನ್ ನೇತೃತ್ವದ ಹಂಗಾಮಿ ಸರ್ಕಾರ ಆಡಳಿತವನ್ನು ನೋಡಿಕೊಳ್ಳಲಿದೆ. ಈ ಸರ್ಕಾರ ಸೀಮಿತ ಅಧಿಕಾರವನ್ನಷ್ಟೇ ಹೊಂದಿರಲಿದ್ದು, ಬಜೆಟ್‌ಗೆ ಅನುಮೋದನೆಯಂತಹ ಪ್ರಮುಖ ಅಧಿಕಾರ ಚಲಾಯಿಸುವಂತಿಲ್ಲ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

35ನೇ ವರ್ಷದ ನೆನಪು



ಶ್ರೀ ದಿಬ್ಬೂರ್ ಕುಮಾರ್
31.3.36 – 13.12.90
ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

ಎಲೆಕ್ಟ್ರಾನಿಕ್ಸ್, ಲೋಹ, ವಾಹನ, ಜವಳಿ ಉದ್ಯಮದ ಮೇಲೆ ಪರಿಣಾಮ

ಭಾರತದ ರಫ್ತಿಗೆ ಮೆಕ್ಸಿಕೊ ಸುಂಕ ಪೆಟ್ಟು

ನವದೆಹಲಿ (ಪಿಟಿಐ): ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳದ ದೇಶಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಮೆಕ್ಸಿಕೊ ಸುಂಕ ಹೆಚ್ಚಳ ಮಾಡಿರುವುದು, ಭಾರತದ ಎಲೆಕ್ಟ್ರಾನಿಕ್ಸ್, ಲೋಹ, ವಾಹನಗಳ ಬಿಡಿಭಾಗಗಳು, ರಾಸಾಯನಿಕ ರಫ್ತಿನ ಮೇಲೆ ಭಾರಿ ಹೊಡೆತ ಬೀಳಲಿದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

2026ರ ಜನವರಿ 1ರಿಂದ ಪರಿಷ್ಕೃತ ಸುಂಕ ಜಾರಿಗೆ ಬರಲಿದೆ. ಕೆಲವು ಸರಕುಗಳಿಗೆ ಕನಿಷ್ಠ ಶೇ 5ರಿಂದ ಗರಿಷ್ಠ ಶೇ 50ರವರೆಗೆ ಸುಂಕ ಹೆಚ್ಚಿಸಲಾಗಿದೆ.

ಭಾರತದಿಂದ ಮೆಕ್ಸಿಕೊಕ್ಕೆ ರಫ್ತಾಗುವ ಸರಕುಗಳಲ್ಲಿ ವಾಹನಗಳು ಮತ್ತು ವಾಹನಗಳ ಬಿಡಿಭಾಗಗಳ ಪಾಲು ಗರಿಷ್ಠ ಮಟ್ಟದಲ್ಲಿದೆ. ಆಮದು ಸುಂಕ ಹೆಚ್ಚಳವು ಈ ಕ್ಷೇತ್ರದ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರಲಿದೆ ಎಂದು ಜಾಗತಿಕ ವ್ಯಾಪಾರ ಸಂಶೋಧನಾ ಉಪಕ್ರಮ (ಜಿಟಿಆರ್‌ಐ) ಹೇಳಿದೆ.

ಮೆಕ್ಸಿಕೊ ವಿಧಿಸಿರುವ ಆಮದು ಸುಂಕ (ಶೇಕಡವಾರು)

ಸರಕು	ಈಗಿನ ದರ	ಪರಿಷ್ಕೃತ ದರ
ದ್ವಿಚಕ್ರ ವಾಹನ	20	35
ಸ್ಮಾರ್ಟ್‌ಫೋನ್	0	35
ಅಲುಮಿನಿಯಂ	10	35
ಕಬ್ಬಿಣ, ಉಕ್ಕು	15	35
ಜವಳಿ	15	35
ಕಾಫಿ, ಟೀ	5	15

ಭಾರತದಿಂದ ಆಮದು ಮಾಡಿಕೊಳ್ಳುವ ಪ್ರಯಾಣಿಕ ವಾಹನಗಳಿಗೆ ಮೆಕ್ಸಿಕೊ ಸದ್ಯ ಶೇ 20ರಷ್ಟು ಸುಂಕ ವಿಧಿಸುತ್ತಿದೆ. 2026ರ ಜನವರಿಯಿಂದ ಇದು ಶೇ 35ಕ್ಕೆ ಏರಿಕೆಯಾಗಲಿದೆ. ಕಳೆದ ಹಣಕಾಸು ವರ್ಷದಲ್ಲಿ ಭಾರತವು 938.35 ದಶಲಕ್ಷ ಡಾಲರ್ ಮೊತ್ತದ (₹8,500 ಕೋಟಿ) ವಾಹನಗಳನ್ನು ಮತ್ತು 507.26 ದಶಲಕ್ಷ ಡಾಲರ್ (₹4,595 ಕೋಟಿ) ಮೊತ್ತದ ವಾಹನಗಳ ಬಿಡಿಭಾಗಗಳನ್ನು ಮೆಕ್ಸಿಕೊಕ್ಕೆ ರಫ್ತು ಮಾಡಿತ್ತು.

ಭಾರತದ ಜವಳಿ, ಪ್ಲಾಸ್ಟಿಕ್, ಸಾವಯವ ರಾಸಾಯನಿಕಗಳು, ಎಲೆಕ್ಟ್ರಾನಿಕ್ಸ್, ಔಷಧ, ಎಲೆಕ್ಟ್ರಿಕ್ ವಸ್ತುಗಳ ರಫ್ತಿನ ಮೇಲೆ ಮೆಕ್ಸಿಕೊದ ಆಮದು ಸುಂಕ ಹೆಚ್ಚಳವು ಪರಿಣಾಮ ಬೀರಲಿದೆ ಎಂದು ಭಾರತೀಯ ರಫ್ತುದಾರರ ಒಕ್ಕೂಟದ (ಎಫ್‌ಐಇಒ) ಪ್ರಧಾನ ನಿರ್ದೇಶಕ ಅಜಯ್ ಶಾಹಿ ಅಭಿಪ್ರಾಯಪಟ್ಟಿದ್ದಾರೆ.

ಭಾರತವು ಕಳೆದ ಹಣಕಾಸು ವರ್ಷದಲ್ಲಿ ಮೆಕ್ಸಿಕೊಕ್ಕೆ 284.53 ದಶಲಕ್ಷ ಡಾಲರ್ ಮೊತ್ತದ (₹2,577 ಕೋಟಿ) ಸ್ಮಾರ್ಟ್‌ಫೋನ್‌ಗಳನ್ನು ರಫ್ತು ಮಾಡಿತ್ತು. ಜನವರಿಯಿಂದ ಸ್ಮಾರ್ಟ್‌ಫೋನ್ ಆಮದು ಸುಂಕವು ಶೇ 35ಕ್ಕೆ ಏರಿಕೆಯಾಗಲಿದೆ. ಇದು ಭಾರತದ ಸ್ಮಾರ್ಟ್‌ಫೋನ್ ತಯಾರಿಕಾ ಕಂಪನಿಗಳಿಗೆ ಪೆಟ್ಟು ನೀಡಲಿದೆ. ಭಾರತದಿಂದ ಕೈಗಾರಿಕಾ ಯಂತ್ರೋಪಕರಣಗಳನ್ನು ಮೆಕ್ಸಿಕೊ ಆಮದು ಮಾಡಿಕೊಳ್ಳುತ್ತಿದ್ದು, ಈ ಉದ್ಯಮದ ಮೇಲೂ ಶೇ 35ರಷ್ಟು ಸುಂಕ ಹೆಚ್ಚಳವು ಬರೆ ಎಳೆಯಲಿದೆ ಎಂದು ಮಾರುಕಟ್ಟೆ ತಜ್ಞರು ವಿಶ್ಲೇಷಿಸಿದ್ದಾರೆ.

ಚೀನಾ ವೃತ್ತಿಪರರಿಗೆ ಸುಲಭದಲ್ಲಿ ಭಾರತ ವೀಸಾ

ನವದೆಹಲಿ (ಪಿಟಿಐ): ಅಲ್ಪಾವಧಿಗೆ ಭಾರತಕ್ಕೆ ಭೇಟಿ ನೀಡುವ ಚೀನಾ ವೃತ್ತಿಪರರಿಗೆ ಕ್ಷಿಪ್ರವಾಗಿ ಬ್ಯುಸಿನೆಸ್ ವೀಸಾ ನೀಡುವ ಉದ್ದೇಶದಿಂದ ಭಾರತ ನಿಯಮಾ-ವಳಿಗಳಲ್ಲಿ ಬದಲಾವಣೆ ತಂದಿದೆ.

ಪೂರ್ವ ಲಡಾಖ್ ಸಂಘರ್ಷದ ಬಳಿಕ ಭಾರತ-ಚೀನಾ ಸಂಬಂಧ ಹದಗೆಟ್ಟಿತ್ತು. ಸದ್ಯ ಉಭಯ ದೇಶಗಳ ನಡುವಣ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಎರಡೂ ಕಡೆಯಿಂದ ಪ್ರಯತ್ನಗಳು ನಡೆಯುತ್ತಿರುವ ನಡುವೆಯೇ ಭಾರತ ಈ ನಿರ್ಧಾರ ಕೈಗೊಂಡಿದೆ.

'ಈಗಾಗಲೇ ಅರ್ಜಿ ಸಲ್ಲಿಸಿರುವ ಚೀನಾ ಅರ್ಜಿದಾರರ ದಾಖಲೆ ಪರಿಶೀಲನೆಯಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಪಾವಧಿಗೆ ಭಾರತಕ್ಕೆ ಬರುತ್ತಿದ್ದ ಚೀನಾ ವೃತ್ತಿಪರರಿಗೆ ಮೊದಲು ಉದ್ಯೋಗ ವೀಸಾ ಅಥವಾ ಇ-ವೀಸಾ ನೀಡಲಾಗುತ್ತಿತ್ತು. ಇದಕ್ಕೆ ಆರು ತಿಂಗಳು ಅಥವಾ ಅದಕ್ಕಿಂತ ಹೆಚ್ಚಿನ ಅವಧಿ ಸಿಂಧುತ್ವ ಇರುತ್ತಿತ್ತು. ಸದ್ಯ ಇವರಿಗೆ ಅಲ್ಪಾವಧಿಗೆ ಬ್ಯುಸಿನೆಸ್ ವೀಸಾ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಬ್ಯುಸಿನೆಸ್ ವೀಸಾಕ್ಕೆ ಅರ್ಜಿ ಸಲ್ಲಿಸಿದ ಮೂರರಿಂದ ನಾಲ್ಕು ವಾರದ ಒಳಗಾಗಿ ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ ಎಂದು ಹೇಳಿದರು.

ಎಲ್ಲಾ ದೇಶಗಳ ವೀಸಾ ಅರ್ಜಿದಾರರಿಗೆ ನೂತನ ಬದಲಾವಣೆಗಳು ಅನ್ವಯವಾಗಲಿವೆ. ಆದರೆ ಈ ಬದಲಾವಣೆಯಿಂದ ಚೀನಾ ಪ್ರಜೆಗಳು ಹೆಚ್ಚು ಅನುಕೂಲ ಪಡೆಯಲಿದ್ದಾರೆ ಎಂದು ನಿರೀಕ್ಷಿಸಲಾಗಿದೆ.

ಮುಂಬೈ ಧಾರಣೆ (ಶೇಂಗಾ)

12-12-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8900-9000
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1525)
ಒಂದು ವಾರದ ಡೆಲಿವರಿ	1525 (1520)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,32,500 (1,28,000)
ಬೆಳ್ಳಿ ಕೆ.ಜಿಗೆ	1,95,000 (1,88,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ 2 ನಿಮಿಷ

ಅಂಚೆ ಇಲಾಖೆ ಮೂಲಕ ಎಂ.ಎಫ್‌ನಲ್ಲಿ ಹೂಡಿಕೆ

ನವದೆಹಲಿ (ಪಿಟಿಐ): ಹೂಡಿಕೆದಾರರಿಗೆ ಅಂಚೆ ಇಲಾಖೆ ಮೂಲಕವೂ ಮ್ಯೂಚುವಲ್ ಫಂಡ್‌ನಲ್ಲಿ (ಎಂ.ಎಫ್) ಹೂಡಿಕೆಗೆ ಅನುಕೂಲ ಕಲ್ಪಿಸಲು ಮುಂಬೈ ಷೇರು ವಿನಿಮಯ ಕೇಂದ್ರವು (ಬಿಎಸ್‌ಇ) ನಿರ್ಧರಿಸಿದ್ದು, ಅಂಚೆ ಇಲಾಖೆ ಜೊತೆ ಪಾಲುದಾರಿಕೆ ಮಾಡಿಕೊಂಡಿದೆ.

ಈ ಪಾಲುದಾರಿಕೆಯ ಭಾಗವಾಗಿ ಅಂಚೆ ಇಲಾಖೆಯ ಆಯ್ದ ನೌಕರರು ಮತ್ತು ಏಜೆಂಟ್‌ಗಳಿಗೆ ತರಬೇತಿ ನೀಡಿ, ಅಧಿಕೃತ ಮ್ಯೂಚುವಲ್ ಫಂಡ್ ವಿತರಕರಾಗಿ ನೇಮಕ ಮಾಡಲಾಗುತ್ತದೆ.

ಅಂಚೆ ಇಲಾಖೆಯ ಬೃಹತ್ ಜಾಲವನ್ನು ಬಳಸಿಕೊಂಡು ಪ್ರಮುಖವಾಗಿ ಗ್ರಾಮೀಣ ಮತ್ತು ಅರೆನಗರ ಪ್ರದೇಶದಲ್ಲಿನ ಜನರು ಆರ್ಥಿಕ ಪಾಲ್ಗೊಳ್ಳುವಿಕೆಯಲ್ಲಿ ಹೆಚ್ಚಿಸುವ ಉದ್ದೇಶವನ್ನು ಈ ಪಾಲುದಾರಿಕೆ ಹೊಂದಿದೆ. ದೇಶದ ಅತಿದೊಡ್ಡ ಆನ್‌ಲೈನ್ ಮ್ಯೂಚುವಲ್ ಫಂಡ್ ವಿತರಣೆಯ ವ್ಯವಸ್ಥೆಯಾದ ಮುಂಬೈ ಷೇರು ವಿನಿಮಯ ಕೇಂದ್ರದ ಸ್ಟಾರ್ ಎಂಎಫ್ ವೇದಿಕೆಯನ್ನು ಬಳಸಿಕೊಂಡು ಈ ಸೇವೆ ನೀಡಲಿದೆ ಎಂದು ಬಿಎಸ್‌ಇ ತಿಳಿಸಿದೆ.

ದೇಶದಲ್ಲಿ ವಿನಿಮಯ ಆಧಾರಿತ ವಹಿವಾಟುಗಳಲ್ಲಿ ಈ ವೇದಿಕೆಯು ಶೇ 85ಕ್ಕೂ ಹೆಚ್ಚು ಖಾತೆಗಳನ್ನು ನಿರ್ವಹಣೆ ಮಾಡುತ್ತದೆ. ಪ್ರತಿ ತಿಂಗಳು 7 ಕೋಟಿಗೂ ಹೆಚ್ಚು ವಹಿವಾಟು ನಡೆಸುತ್ತದೆ ಎಂದು ತಿಳಿಸಿದೆ.

'ಈ ಪಾಲುದಾರಿಕೆಯಿಂದ ಗ್ರಾಹಕರಿಗೆ ಆಧುನಿಕ ಹೂಡಿಕೆಯ ಆಯ್ಕೆಯನ್ನು ಅಂಚೆ ಇಲಾಖೆ ಒದಗಿಸಲಿದೆ. ಟಯರ್-2 ಮತ್ತು ಟಯರ್-3 ನಗರಗಳಲ್ಲಿ ಮ್ಯೂಚುವಲ್ ಫಂಡ್ ಉದ್ಯಮವು ವೇಗ ಪಡೆದುಕೊಳ್ಳಲಿದ್ದು, ಹೂಡಿಕೆದಾರರ ವಿಶ್ವಾಸವನ್ನು ಹೆಚ್ಚಿಸುವ ನಿರೀಕ್ಷೆ ಇದೆ' ಎಂದು ಅಂಚೆ ಇಲಾಖೆಯ ಪ್ರಧಾನ ವ್ಯವಸ್ಥಾಪಕ ನಿರ್ದೇಶಕಿ (ಸಿಸಿಎಸ್ ಮತ್ತು ಆರ್‌ಬಿ) ಮನೀಷಾ ಬನ್ಸಾಲ್ ಬಾದಲ್ ಹೇಳಿದ್ದಾರೆ.

ಚಿಲ್ಲರೆ ಹಣದುಬ್ಬರ ಹೆಚ್ಚಳ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಬೆಲೆಯಲ್ಲಿನ ಹೆಚ್ಚಳದಿಂದ ಚಿಲ್ಲರೆ ಹಣದುಬ್ಬರವು ನವೆಂಬರ್ ತಿಂಗಳಿನಲ್ಲಿ ಶೇ 0.71ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ 0.25ಕ್ಕೆ ಇಳಿಕೆಯಾಗಿತ್ತು. ಜಿಎಸ್‌ಟಿ ದರ ಪರಿಷ್ಕರಣೆಯು ಇಳಿಕೆಗೆ ನೆರವಾಗಿತ್ತು. ಹಣದುಬ್ಬರವು ಸತತ ಎರಡನೇ ತಿಂಗಳೂ ಶೇ 1ರೊಳಗೆ ಇದೆ.

ಆಹಾರ ಪದಾರ್ಥಗಳ ಹಣದುಬ್ಬರವು ನವೆಂಬರ್‌ನಲ್ಲಿ ಶೇ 3.91ರಷ್ಟಿದೆ. ತರಕಾರಿಗಳು, ಮೊಟ್ಟೆ, ಮಾಂಸ ಮತ್ತು ಮೀನು, ಮಸಾಲೆ ಪದಾರ್ಥಗಳು, ಇಂಧನ ಬೆಲೆಯಲ್ಲಿನ ಹೆಚ್ಚಳವೇ ಹಣದುಬ್ಬರ ಏರಿಕೆಗೆ ಕಾರಣ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಕೆ.ಜಿ ಬೆಳ್ಳಿ ₹2.06 ಲಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ / ಬೆಂಗಳೂರು (ಪಿಟಿಐ): ಬೆಂಗಳೂರಿನ ರಿಟೇಲ್ ಮಾರುಕಟ್ಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಕೆ.ಜಿ ಬೆಳ್ಳಿ ಧಾರಣೆ ₹2.06 ಲಕ್ಷದಂತೆ ಮಾರಾಟವಾಗಿದೆ.

ಬೆಂಗಳೂರಿನ ಸಗಟು ಮಾರುಕಟ್ಟೆಯಲ್ಲಿ ಬೆಳ್ಳಿ ದರವು ಕೆ.ಜಿ ₹2 ಲಕ್ಷವಿದೆ ಎಂದು ಬೆಂಗಳೂರು ಜ್ಯುವೆಲರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಆರ್. ಶ್ರೀನಿವಾಸ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು. ಇದೇ ಅಕ್ಟೋಬರ್ 15ರಂದು ಬೆಳ್ಳಿ ಧಾರಣೆ ಇದೇ ಮಟ್ಟಕ್ಕೆ ತಲುಪಿತ್ತು.

ನವದೆಹಲಿಯ ಚಿನಿವಾರ ಪೇಟೆಯಲ್ಲಿ ಬೆಳ್ಳಿ ದರವು ಕೆ.ಜಿಗೆ ₹5,100 ಹೆಚ್ಚಳವಾಗಿ, ₹1,99,500ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ₹1,110 ಏರಿಕೆಯಾಗಿ, ₹1,33,600 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ರೂಪಾಯಿ ಮೌಲ್ಯ ಇಳಿಕೆ ಮತ್ತು ಬೆಳ್ಳಿಯಲ್ಲಿ ಹೆಚ್ಚುತ್ತಿರುವ ನಿರಂತರ ಹೂಡಿಕೆಯು ಬೆಳ್ಳಿ ದರ ಏರಿಕೆಗೆ ಕಾರಣ ಎಂದು ತಿಳಿಸಿದೆ.

ವಿಮಾ ವಲಯ: ಎಫ್‌ಡಿಐ ಶೇ 100ಕ್ಕೆ ಹೆಚ್ಚಿಸುವ ಮಸೂದೆಗೆ ಒಪ್ಪಿಗೆ

ಒಂದನೇ ಪುಟದಿಂದ....

ವಿಮಾ ವಲಯದಲ್ಲಿ ಎಫ್‌ಡಿಐ ಅನ್ನು ಶೇ 100ಕ್ಕೆ ಹೆಚ್ಚಿಸುವುದು ಸೇರಿದಂತೆ 1938ರ ವಿಮಾ ಕಾಯ್ದೆಯ ವಿವಿಧ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಹಣಕಾಸು ಸಚಿವಾಲಯ ಪ್ರಸ್ತಾಪಿಸಿದೆ.

ಈ ಪ್ರಕ್ರಿಯೆಯ ಭಾಗವಾಗಿ, ಜೀವ ವಿಮಾ ನಿಗಮ ಕಾಯ್ದೆ 1956 ಮತ್ತು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1999 ಅನ್ನು ವಿಮಾ ಕಾಯ್ದೆ 1938ರ ಜೊತೆಗೆ ತಿದ್ದುಪಡಿ ಮಾಡಲಾಗುತ್ತಿದೆ.

ಎಲ್‌ಐಸಿ ಕಾಯ್ದೆಗೆ ತರಲು ಉದ್ದೇಶಿಸಿರುವ ಬದಲಾವಣೆಗಳು, ಭಾರತೀಯ ಜೀವ ವಿಮಾ ನಿಗಮದ ಆಡಳಿತ ಮಂಡಳಿಗೆ ಕಾರ್ಯಾಚರಣೆ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರ ನೀಡುವ ಪ್ರಸ್ತಾವ ಹೊಂದಿವೆ. ತಿದ್ದುಪಡಿಯು ಕಾನೂನಾಗಿ ಜಾರಿಗೆ ಬಂದರೆ ಶಾಖೆಗಳ ವಿಸ್ತರಣೆ, ನೇಮಕಾತಿಯಂತಹ ತೀರ್ಮಾನಗಳನ್ನು ಆಡಳಿತ ಮಂಡಳಿಯೇ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಪ್ರಸ್ತಾವಿತ ತಿದ್ದುಪಡಿಗಳು ವಿಮಾ ಪಾಲಿಸಿ ಹೊಂದಿರುವವರ ಹಿತಾಸಕ್ತಿ ರಕ್ಷಿಸಿ, ಅವರ ಹಣಕಾಸಿನ ಭದ್ರತೆಯನ್ನು ಹೆಚ್ಚಿಸಲಿದೆ. ಜೊತೆಗೆ ವಿಮಾ ವಲಯಕ್ಕೆ ಇನ್ನಷ್ಟು ಹೆಚ್ಚು ಕಂಪನಿಗಳು ಪ್ರವೇಶಿಸುವುದಕ್ಕೆ ನೆರವು ಒದಗಿಸುವ, ಆ ಮೂಲಕ ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುವ ಉದ್ದೇಶ ಹೊಂದಿವೆ.

ನೇಪಾಳ: ನಾಲ್ವರು ಸಚಿವರ ಸೇರ್ಪಡೆ

ಕಠ್ಮಂಡು (ಪಿಟಿಐ): ನೇಪಾಳ ಪ್ರಧಾನಿ ಸುಶೀಲಾ ಕಾರ್ಕಿ ಅವರು ತಮ್ಮ ಸಂಪುಟಕ್ಕೆ ನಾಲ್ವರು ಹೊಸ ಸಚಿವರನ್ನು ಸೇರ್ಪಡೆ ಮಾಡಿಕೊಂಡಿದ್ದಾರೆ. ಇದರಿಂದ ಸಚಿವ ಸಂಪುಟದ ಬಲ 14ಕ್ಕೆ ಏರಿದೆ.

ಅಧ್ಯಕ್ಷರ ಕಚೇರಿಯಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಶ್ರದ್ಧಾ ಶ್ರೇಷ್ಠಾ, ಮಾಧವ್ ಚೌಲಗೈನ್, ರಾಜೇಂದ್ರ ಸಿಂಗ್ ಭಂಡಾರಿ ಮತ್ತು ಕುಮಾರ್ ಇಂಗ್ನಮ್ ಅವರಿಗೆ ಅಧ್ಯಕ್ಷ ರಾಮಚಂದ್ರ ಪೌದೆಲ್ ಅವರು ಪ್ರಮಾಣ ವಚನ ಬೋಧಿಸಿದರು.

ಶ್ರದ್ಧಾ ಶ್ರೇಷ್ಠಾ ಅವರಿಗೆ ಮಹಿಳೆ, ಮಕ್ಕಳು ಮತ್ತು ಹಿರಿಯ ನಾಗರಿಕರ ಖಾತೆ, ಮಾಧವ್ ಚೌಲಗೈನ್ ಅವರಿಗೆ ಅರಣ್ಯ ಮತ್ತು ಪರಿಸರ, ರಾಜೇಂದ್ರ ಸಿಂಗ್ ಭಂಡಾರಿ ಅವರಿಗೆ ಕಾರ್ಮಿಕ ಮತ್ತು ಸಾಮಾಜಿಕ ಭದ್ರತೆ, ಕುಮಾರ್ ಇಂಗ್ನಮ್ ಅವರಿಗೆ ಭೂ ನಿರ್ವಹಣೆ, ಸಹಕಾರಿ ಮತ್ತು ಬಡತನ ನಿರ್ಮೂಲನೆ ಖಾತೆ ನೀಡಲಾಗಿದೆ.

ಚಲನಚಿತ್ರೋತ್ಸವ

ಪಿಟಿಐ ಚಿತ್ರ

ತಿರುವನಂತಪುರದಲ್ಲಿ ಶುಕ್ರವಾರ ಆರಂಭವಾದ 30ನೇ ಕೇರಳ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಕ್ಕಿಟ್ಟಿದ್ದ ವಿವಿಧ ಕ್ಯಾಮೆರಾಗಳನ್ನು ಸಿನಿಮಾಪ್ರಿಯರು ಉತ್ಸಾಹದಿಂದ ವೀಕ್ಷಿಸಿದರು

ಪ್ರವಾಹಕ್ಕೆ ತತ್ತರಿಸಿದ ವಾಷಿಂಗ್ಟನ್

ಮೌಂಟ್ ವೆರ್ನಾನ್/ಅಮೆರಿಕ (ಎಪಿ): ವಾಷಿಂಗ್ಟನ್‌ನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಪ್ರವಾಹ ಉಂಟಾಗಿದ್ದು, ಹಲವೆಡೆ ಸೇತುವೆಗಳು, ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ಕೆಲವು ಪ್ರದೇಶಗಳಲ್ಲಿ ಜನರು ಮನೆಗಳ ಚಾವಣಿ ಏರಿ ರಕ್ಷಣೆ ಪಡೆದಿದ್ದಾರೆ.

'ಮಳೆ ಮತ್ತು ಪ್ರವಾಹ ಹೆಚ್ಚುವ ಸಾಧ್ಯತೆ ಇದ್ದು, ಜನರು ಎಚ್ಚರ ವಹಿಸುವಂತೆ, ಸುರಕ್ಷಿತ ಸ್ಥಳಕ್ಕೆ ಸ್ಥಳಾಂತ-ರಗೊಳ್ಳುವಂತೆ' ವಾಷಿಂಗ್ಟನ್ ಗವರ್ನರ್ ಬಾಬ್ ಫರ್ಗುಸನ್ 'ಎಕ್ಸ್' ಪೋಸ್ಟ್ ಮೂಲಕ ಮನವಿ ಮಾಡಿದ್ದಾರೆ.

ಪ್ರಮುಖ ಕೃಷಿ ಪ್ರದೇಶವಾದ ಉತ್ತರ ಸಿಯಾಟಲ್ ಪ್ರವಾಹದಿಂದ ತತ್ತರಿಸಿದ್ದು, ಇಲ್ಲಿನ ಸ್ಕಗಿಟ್ ನದಿ ಪಾತ್ರದಿಂದ ಸುಮಾರು 78 ಸಾವಿರ ಕುಟುಂಬಗಳಿಗೆ ತಕ್ಷಣವೇ ಸ್ಥಳಾಂತರಗೊಳ್ಳುವಂತೆ ಸೂಚನೆ ನೀಡಲಾಗಿದೆ. ಸ್ಕಗಿಟ್ ಮತ್ತು ಸ್ನೋಹೋಮಿಶ್ ನದಿಗಳು ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿವೆ.

ಅಮೆರಿಕ-ಕೆನಡಾ ಗಡಿ ಪ್ರದೇಶದ ಸುಮಾಸ್, ನೂಕ್ಸಾಕ್, ಎವರ್‌ಸನ್ ನಗರಗಳಿಂದ ಜನರನ್ನು ಈಗಾಗಲೇ ಸ್ಥಳಾಂತರಿಸಲಾಗಿದೆ. ಸುಮಾಸ್ ಗಡಿಯಲ್ಲಿ ವಾಹನ ಸಂಚಾರವನ್ನು ನಿಷೇಧಿಸಲಾಗಿದೆ.

'ನಾಲ್ಕು ವರ್ಷಗಳ ಹಿಂದೆ ಪ್ರವಾಹಕ್ಕೆ ಸಿಲುಕಿ ಸುಮಾಸ್ ನಗರ ಬಹುತೇಕ ನಾಶವಾಗಿತ್ತು. ಇದೀಗ ಮತ್ತೊಂದು ಮಹಾ ದುರಂತ ಎದುರಾಗಿದೆ' ಎಂದು ಮೇಯರ್ ಬ್ರೂಸ್ ಬಾಷ್ ಹೇಳಿದರು.

ಸಿಖ್ ವಿರೋಧಿ ಗಲಭೆ: 36 ಅವಲಂಬಿತರಿಗೆ ಉದ್ಯೋಗ

ನವದೆಹಲಿ (ಪಿಟಿಐ): 1984ರ ಸಿಖ್ ವಿರೋಧಿ ಗಲಭೆಯಲ್ಲಿ ನಲುಗಿದ ಕುಟುಂಬಗಳ 36 ಮಂದಿ ಅವಲಂಬಿತರಿಗೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಶುಕ್ರವಾರ ಉದ್ಯೋಗ ನೇಮಕಾತಿ ಪತ್ರವನ್ನು ಹಸ್ತಾಂತರಿಸಿದರು.

'ಇದು ದೆಹಲಿ ಸರ್ಕಾರ ನೀಡುತ್ತಿರುವ ಉದ್ಯೋಗ ಮಾತ್ರವಲ್ಲ, ಈ ಕಾರ್ಯವು ಮಾನವ ಘನತೆಯನ್ನು ಪುನಃಸ್ಥಾಪಿಸುವುದಾಗಿದೆ' ಎಂದು ಅವರು ಅಭಿಪ್ರಾಯಪಟ್ಟರು.

'1984ರ ಸಿಖ್ ಗಲಭೆಯು ಮರೆಯಲಾಗದ ದುರಂತ. ಈ ಕುಟುಂಬಗಳು ಅನುಭವಿಸಿದ ನಷ್ಟವನ್ನು ಯಾವುದೇ ಪರಿಹಾರದಿಂದ ತುಂಬಿಕೊಡಲು ಸಾಧ್ಯವಿಲ್ಲ. ದೆಹಲಿ ಸರ್ಕಾರವು ಈ ಕುಟುಂಬಗಳ ಅವಲಂಬಿತರಿಗೆ ಘನತೆಯ ಬದುಕನ್ನು ಕಟ್ಟಿಕೊಡಲು ಬದ್ಧವಾಗಿದೆ' ಎಂದು ರೇಖಾ ಗುಪ್ತಾ ಹೇಳಿದರು.

ವಿಶೇಷ ತನಿಖಾ ತಂಡವನ್ನು(ಎಸ್‌ಐಟಿ) ರಚಿಸುವ ಮೂಲಕ ಪ್ರಧಾನಿ ಮೋದಿ ಅವರು ಸಂತ್ರಸ್ತ ಕುಟುಂಬಗಳಿಗೆ ತ್ವರಿತವಾಗಿ ನ್ಯಾಯ ಲಭಿಸುವಂತೆ ಮಾಡಿದ್ದಾರೆ. ಗಲಭೆಯಿಂದ ಸಂಕಷ್ಟಕ್ಕೀಡಾದ ಕುಟುಂಬದ ಒಟ್ಟು 55 ಮಂದಿಗೆ ವಿವಿಧ ಇಲಾಖೆಗಳಲ್ಲಿ ಬಹು ಕಾರ್ಯ ಸಿಬ್ಬಂದಿ (ಎಂಟಿಎಸ್) ಉದ್ಯೋಗ ಲಭಿಸಿದೆ ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

ಪ್ಯಾಕೇಜ್ ಪ್ರವಾಸಗಳು ದುಬಾಯಿ, ಅಬುದಾಬಿ, ಶಾರ್ಜಾ 21.01.2026, ರಿಂದ 6 ದಿನಗಳು, ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 30.01.2026 ರಿಂದ 5/11 ದಿನಗಳು. ಜಪಾನ್ ಪ್ರವಾಸ 08.04.2026 ರಿಂದ 8 ದಿನಗಳು. ವಿಯೆಟ್ನಾಂ, ಕಾಂಬೋಡಿಯಾ 25.02.2026 ರಿಂದ 11 ದಿನಗಳು. ಕಾಶಿ, ಗಯಾ, ಚಿತ್ರಕೂಟ, ನೈಮಿಶಾರಣ್ಯ 05.02.2026, 04.03.2026 ರಿಂದ 8 ದಿನಗಳು. ಗುಜರಾತ್/ ಮಧ್ಯಪ್ರದೇಶ 20.01.2026, 28.01.2026 ರಿಂದ 8/11 ದಿನಗಳು. ರಾಜಸ್ಥಾನ 18.02.2026 ರಿಂದ 11 ದಿನಗಳು. ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂದ್ರಂ 25.12.2025, 21.01.2026 ರಿಂದ 7 ದಿನಗಳು ಆನಂದ್ ವಿಹಾರಿ. ಬೆಂಗಳೂರು23 080 23385837, 8088887677

26.12.25 5ದಿನಗಳು ದೆಹಲಿ,ಆಗ್ರಾ,ಜೈಪುರ್, ಫತೇಪುರ್ ಶಿಕ್ರಿ,ಇತ್ಯಾದಿ 38000 16.01.26 ಮತ್ತು`02.02.26 ಮಾಘಮೇಳ ಪ್ರಯುಕ್ತ 6ದಿನಗಳು ವಿಮಾನದಲ್ಲಿ ಪ್ರಯಾಗ್‌ರಾಜ್, ಕಾಶಿ,ಗಯಾ,ಅಯೋಧ್ಯ`33000 20.02.26 11ದಿನಗಳು ನೇಪಾಳ ಮುಕ್ತಿನಾಥ ಇತ್ಯಾದಿ.48000 ''ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'' 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 17,000/ ರಿಂದ 20,000/. ESI, PF ಸೌಲಭ್ಯವಿರುತ್ತದೆ. ಬೆಂಗಳೂರು76. ಸಂಪರ್ಕಿಸಿ: 96063 85001, 96063 84001

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ನೈವೇದ್ಯ ಪ್ರಸಾದ ಮಾಡಲು ಗೊತ್ತಿರುವ ಅರ್ಚಕರಿಗೆ ಆದ್ಯತೆ ನೀಡಲಾಗುತ್ತದೆ. ವಯೋಮಿತಿ 50 ವರ್ಷ, ಸಂಪರ್ಕಿಸಿ: 7019132200, 080 25300714

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಗಳಿಗೆ ಪುರುಷರಿಗೆ, ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ ಆದ್ಯತೆ. 19,000ರಿಂದ 25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9019593297, 8095133188.

Wanted

ತನ್ಮಯಿ OIL Companyಗೆ PUC Degree Basic Tally Computer ಕಲಿತವರು ಕೆಲಸಕ್ಕೆ ಬೇಕಾಗಿದ್ದಾರೆ. ವೇತನ 16000 ರಿಂದ 20000 ಶೇಷಾದ್ರಿಪುರಂ ಬೆಂಗಳೂರು 9019626612.

ವೈಯಕ್ತಿಕ

Announcements

ವಿವಿಧ ಸಬ್ಸಿಡಿಗಳ ಮಾಹಿಗಾಗಿ ಸಂಪರ್ಕಿಸಿ: 9110499099

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Jigani

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan Call : 70260 13388

CONNECT

ಚಾಲಕರಿಂದ ಮಾಲಿಕರಾಗಲು ಅತ್ಯುತ್ತಮ ಅವಕಾಶಗಳೊಂದಿಗೆ, ಪೆಟ್ರೋಲ್ ಮತ್ತು ಸಿ.ಎನ್.ಜಿ ಅಳವಡಿತ ಹೊಚ್ಚ ಹೊಸ ಟಯೋಟ ಹೈರೈಡರ್ ಕಾರನ್ನು ಸ್ವಂತ ಮಾಡಿಕೊಳ್ಳುವ ಸುವರ್ಣ ಅವಕಾಶ.

1) ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ 24 /7 ಗ್ರಾಹಕರ ಸೇವೆ
2) ಡಬಲ್ ಡ್ರೈವರ್‌ಗೆ ಅವಕಾಶ
3) 24 /7 ಏರ್‌ಪೋರ್ಟ್ ಆರ್.ಎಫ್.ಐ.ಡಿ ಕಾರ್ಡ ಸೌಲಭ್ಯ
4) ಬೆಂಗಳೂರು ನಗರದಿಂದ ಏರ್‌ಪೋರ್ಟ್‌ಗೆ ರಿಟರ್ನ್‌ಟ್ರಿಪ್ ಅವಕಾಶ
5) 24 /7 ಕಾಲ್‌ಸೆಂಟರ್ ಸೌಲಭ್ಯ

ಕಾರ್ ಬುಕಿಂಗ್ ಮಾಡಿಕೊಳ್ಳಲು ಈ ಕೂಡಲೇ ಸಂಪರ್ಕಿಸಿ ಮೊದಲು ಬಂದವರಿಗೆ ಮೊದಲ ಆದ್ಯತೆ ಕೂಡಲೇ ಸಂಪರ್ಕಿಸಿ

ಅಮರ್ ಬಾಬು 7019530368 | ಜಯಕುಮಾರ್ 9900221021 | ಪ್ರದೀಪ್ 9632411024 | ಆನಂದ್ 9972790713

ಬೆಂಗಳೂರು ಮೆಗಾ ಕ್ಯಾಬ್ಸ್ ಪ್ರೈವೆಟ್ ಲಿಮಿಟೆಡ್, ಕಂಟ್ರಿ ಕ್ಲಬ್ ಮುಂಭಾಗ, ಬಾಗಲೂರು ಮುಖ್ಯ ರಸ್ತೆ, ಯಲಹಂಕ, ಬೆಂಗಳೂರು-560064

Vishweshwariah Layout

VISHWESHWARAIAH LAYOUT 6th Block 40'*60' BDA site available, near to KLE Law College. Direct Owner. Contact: 9845061398, 9880245430

ಭವಿಷ್ಯ

Astrology

★ಸಂಕಷ್ಟದಲ್ಲಿದ್ದಿರಾ?★ ನಿಮ್ಮ ಪ್ರೇಮಕಥೆ, ಆನಾರೋಗ್ಯ, ಶತ್ರುನಾಶ, ದಾಂಪತ್ಯ ಮತ್ತು ಸಂತಾನ ವೇದನೆಗಳ ಪರಿಹಾರಕ್ಕೆ ಇಂದೇ ಸಂಪರ್ಕಿಸಿರಿ. ವಿಜಯನಗರ, ಬೆಂಗಳೂರು. 9353143216

EDUCATION
To Place your Classified Ads Contact:
9845114560

ಸೂರ್ಯವಂಶಿ 'ವೈಭವ'ದ ಶತಕ

ಯುಎಇ ವಿರುದ್ಧ ಭಾರತಕ್ಕೆ 234 ರನ್‌ಗಳ ಭಾರಿ ಜಯ ● ಜಾರ್ಜ್, ವಿಹಾನ್ ಅರ್ಧಶತಕ

19 ವರ್ಷದೊಳಗಿನವರ ಏಷ್ಯಾ ಕಪ್ 2025

ದುಬೈ (ಪಿಟಿಐ): ಉದಯೋನ್ಮುಖ ತಾರೆ ವೈಭವ್ ಸೂರ್ಯವಂಶಿ, ಆಟದ ಉತ್ತುಂಗದಲ್ಲಿರುವಂತೆ ಕಾಣಿಸಿ ಕೇವಲ 95 ಎಸೆತಗಳಲ್ಲಿ 171 ರನ್ ಸಿಡಿಸಿದರು. ಭಾರತ ತಂಡ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಶುಕ್ರವಾರ ಯುಎಇ ತಂಡದ ವಿರುದ್ಧ 234 ರನ್‌ಗಳ ಭಾರಿ ಜಯ ದಾಖಲಿಸಿತು.

ಬಿಹಾರದ ಸಮಷ್ಟಿಪುರದ 14 ವರ್ಷ ವಯಸ್ಸಿನ 'ಸ್ಫೋಟಕ ಹೊಡೆತ'ಗಳ ಆಟಗಾರ 14 ಸಿಕ್ಸರ್‌ಗಳನ್ನು ಬಾರಿಸಿ ಪರಾಕ್ರಮ ಮೆರೆದರು. 19 ವರ್ಷದೊಳಗಿನವರ ಮಟ್ಟದಲ್ಲಿ ಇಷ್ಟೊಂದು ಸಿಕ್ಸರ್ ಯಾರೂ ಹೊಡೆದಿರಲಿಲ್ಲ. ಜೊತೆಗೆ 9 ಬೌಂಡರಿಗಳನ್ನೂ ಬಾರಿಸಿದರು.

ವಿಹಾನ್ ಮಲ್ಹೋತ್ರಾ (69) ಮತ್ತು ಆರನ್ ಜಾರ್ಜ್ (69) ಅವರೂ ಅರ್ಧ ಶತಕಗಳನ್ನು ಹೊಡೆದ ಪರಿಣಾಮ ಭಾರತ 50 ಓವರುಗಳಲ್ಲಿ 6 ವಿಕೆಟ್‌ಗೆ 433 ರನ್ ಪೇರಿಸಿತು. ಇದು 19 ವರ್ಷದೊಳಗಿನವರ ಕ್ರಿಕೆಟ್‌ನಲ್ಲಿ ಭಾರತದ ಅತ್ಯಧಿಕ ಮೊತ್ತ ಮತ್ತು ಏಷ್ಯಾ ಕಪ್ ಇತಿಹಾಸದಲ್ಲೇ ಅತಿ ದೊಡ್ಡ ಮೊತ್ತವೆನಿಸಿತು.

ಈ ಹಿಮಾಲಯದಂತಹ ಮೊತ್ತದೆದುರು, ಯುಎಇ ತಂಡ ಯಾವುದೇ ಹಂತದಲ್ಲಿ ಹೋರಾಟ ತೋರುವಂತೆ ಕಾಣಲಿಲ್ಲ. ಪೃಥ್ವಿ ಮಧು (50) ಮತ್ತು ಉದ್ದೀಶ್ ಸೂರಿ (ಅಜೇಯ 78) ಅವರ ಹೋರಾಟದ ಅರ್ಧ ಶತಕಗಳ ಹೊರತಾಗಿಯೂ ತಂಡ 7 ವಿಕೆಟ್‌ಗೆ 199 ರನ್ ಗಳಿಸಿ 50 ಓವರುಗಳನ್ನು ಮುಗಿಸಿತು.

ಸೂರ್ಯವಂಶಿ ಗಳಿಸಿದ ಮೊತ್ತವು ಯುವ ಏಕದಿನ ಪಂದ್ಯದಲ್ಲಿ ಭಾರತದ ಆಟಗಾರನೊಬ್ಬನ ಎರಡನೇ ಅತ್ಯಧಿಕ ಮೊತ್ತ ಎನಿಸಿತು. ಈ ಹಿಂದೆ 2002ರಲ್ಲಿ ಇಂಗ್ಲೆಂಡ್ ವಿರುದ್ಧ ಅಂಬಟಿ ರಾಯುಡು ಔಟಾಗದೇ 177 ರನ್ ಗಳಿಸಿದ್ದರು. ಇದು ಒಟ್ಟಾರೆ ಪುರುಷರ 19 ವರ್ಷದೊಳಗಿನ ಕ್ರಿಕೆಟ್‌ನಲ್ಲಿ 9ನೇ ಅತಿ ದೊಡ್ಡ ವೈಯಕ್ತಿಕ ಮೊತ್ತ ಎನಿಸಿತು.

ಬ್ಯಾಟಿಂಗ್‌ಗೆ ಕಳುಹಿಸಲ್ಪಟ್ಟ ಭಾರತ ತಂಡ ಆಯುಷ್ ಮ್ಹಾತ್ರೆ ಅವರನ್ನು ಬೇಗ ಕಳೆದುಕೊಂಡಿತು. ಆದರೆ ಮತ್ತೊಂದು ಕಡೆ ಬೀಸಾಟವಾಡುತ್ತಲೇ ಹೋದ ವೈಭವ್ 30 ಎಸೆತಗಳಲ್ಲಿ 50 ಮತ್ತು 56 ಎಸೆತಗಳಲ್ಲಿ 100ರ ಗಡಿ ದಾಟಿದರು. ಎದುರಾಳಿ ದಾಳಿಯನ್ನು ಪುಡಿಗಟ್ಟಿದ ವೈಭವ್ ಮತ್ತು ಜಾರ್ಜ್ ಎರಡನೇ ವಿಕೆಟ್‌ಗೆ 212 ರನ್ ಸೇರಿಸಿದರು. ಕೊನೆಗೂ 33ನೇ ಓವರಿನಲ್ಲಿ ವೈಭವ್ ವಿಕೆಟ್ ಪಡೆದ ಉದ್ದೀಶ್ ಸೂರಿ ಅವರು ಈ ಜೊತೆಯಾಟ ಮುರಿದರು.

ವೇದಾಂತ್ ತ್ರಿವೇದಿ (38), ಅಭಿಜ್ಞಾನ್ ಕುಂದು (ಔಟಾಗದೇ 32, 17ಎ), ಕನಿಷ್ಕ್ ಚೌಹಾನ್ (28, 12ಎ) ಅವರು ಮಿಂಚಿನ ಆಟವಾಡಿ ತಂಡದ ಮೊತ್ತ 400 ದಾಟಲು ನೆರವಾದರು.

23 ರನ್‌ಗಳಾಗುವಷ್ಟರಲ್ಲಿ ಆರಂಭ ಆಟಗಾರರನ್ನು ಕಳೆದುಕೊಂಡ ಮತ್ತು 48 ರನ್‌ಗಳಾಗುವಷ್ಟರಲ್ಲಿ ಅರ್ಧದಷ್ಟು ವಿಕೆಟ್‌ಗಳನ್ನು ಕಳೆದುಕೊಂಡ ಆತಿಥೇಯ ತಂಡ ಯಾವ ಹಂತದಲ್ಲೂ ಹೋರಾಟ ತೋರುವಂತೆ ಕಾಣಲಿಲ್ಲ. ಆದರೆ ಆಲೌಟ್ ಸಹ ಆಗದೇ ಇನಿಂಗ್ಸ್ ಮುಗಿಸಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರುಗಳಲ್ಲಿ 6 ವಿಕೆಟ್‌ಗೆ 433 (ವೈಭವ ಸೂರ್ಯವಂಶಿ 171, ಆರನ್ ಜಾರ್ಜ್ 69, ವಿಹಾನ್ ಮಲ್ಹೋತ್ರಾ 69); ಯುಎಇ: 50 ಓವರುಗಳಲ್ಲಿ 7 ವಿಕೆಟ್‌ಗೆ 199 (ಪೃಥ್ವಿ ಮಧು 50, ಉದ್ದೀಶ್ ಸೂರಿ ಔಟಾಗದೇ 78, ದೀಪೇಶ್ ದೇವೇಂದ್ರನ್ 21ಕ್ಕೆ2).

ವೈಭವ್ ಸೂರ್ಯವಂಶಿ ಶತಕ ಸಂಭ್ರಮ — ಬಿಸಿಸಿಐ ಚಿತ್ರ

19 ವರ್ಷದೊಳಗಿನವರ ಏಕದಿನ ಕ್ರಿಕೆಟ್‌ನಲ್ಲಿ ಅತಿಹೆಚ್ಚು ಸಿಕ್ಸರ್

ಸಿಕ್ಸರ್	ಆಟಗಾರ	ದೇಶ	ವಿರುದ್ಧ	ವರ್ಷ
14	ವೈಭವ್ ಸೂರ್ಯವಂಶಿ	ಭಾರತ	ಯುಎಇ	2025
12	ಮೈಕೆಲ್ ಹಿಲ್	ಆಸ್ಟ್ರೇಲಿಯಾ	ನಮೀಬಿಯಾ	2008
11	ಕ್ರೇಗ್ ಸಿಮನ್ಸ್	ಆಸ್ಟ್ರೇಲಿಯಾ	ಕೆನ್ಯಾ	2002
10	ಶಾಜೈಬ್ ಖಾನ್	ಪಾಕಿಸ್ತಾನ	ಭಾರತ	2024

ಐಸಿಸಿ ಜತೆಗಿನ ಒಪ್ಪಂದಕ್ಕೆ ಬದ್ಧ: ಜಿಯೊಸ್ಟಾರ್

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಜೊತೆ ಮಾಡಿಕೊಂಡಿರುವ ಮಾಧ್ಯಮ ಹಕ್ಕುಗಳ ಒಪ್ಪಂದಕ್ಕೆ ಸಂಪೂರ್ಣ ಬದ್ಧವಿರುವುದಾಗಿ ಮಾಧ್ಯಮ ಸಂಸ್ಥೆ ಜಿಯೊಸ್ಟಾರ್ (ಜಿಯೊ ಹಾಟ್‌ಸ್ಟಾರ್) ಶುಕ್ರವಾರ ತಿಳಿಸಿದೆ. ಐಸಿಸಿ ಜೊತೆಗಿನ ಒಪ್ಪಂದದಿಂದ ಜಿಯೊಸ್ಟಾರ್ ಹಿಂದೆಸರಿದಿದೆ ಎಂಬ ವರದಿಗಳು ಸತ್ಯದಿಂದ ಕೂಡಿಲ್ಲ ಎಂದು ಪ್ರಕಟಣೆಯಲ್ಲಿ ಹೇಳಿದೆ.

'ಒಪ್ಪಂದದ ನಿಯಮಗಳನ್ನು ಪಾಲಿಸಲು ಬದ್ಧವಿರುವುದಾಗಿ ಜಿಯೊಸ್ಟಾರ್ ತಿಳಿಸಿದೆ' ಎಂಬುದಾಗಿ ಐಸಿಸಿ ಪ್ರತ್ಯೇಕ ಪ್ರಕಟಣೆಯಲ್ಲಿ ಖಚಿತಪಡಿಸಿದೆ.

ನಷ್ಟದ ಕಾರಣದಿಂದಾಗಿ, ಐಸಿಸಿ ಜೊತೆಗಿನ ನೇರ ಪ್ರಸಾರ ಹಕ್ಕುಗಳ ಒಪ್ಪಂದದಿಂದ ಅವಧಿಗೂ ಮುನ್ನವೇ ಹೊರಬರಲು ಜಿಯೊಸ್ಟಾರ್ ನಿರ್ಧರಿಸಿದೆ. ಈ ಕಾರಣ, ಪುರುಷರ ಟಿ20 ವಿಶ್ವಕಪ್‌ಗೂ ಮೊದಲು ಇತರ ಪ್ರಸಾರಕರಿಗಾಗಿ ಐಸಿಸಿ ಹುಟುಕಾಟ ನಡೆಸುತ್ತಿದೆ ಎಂಬ ವರದಿಗಳು ಹರಿದಾಡಿದ್ದವು. ಹೀಗಾಗಿ ಒಪ್ಪಂದದ ಬಗ್ಗೆ ಜಿಯೊಸ್ಟಾರ್ ಸ್ಪಷ್ಟನೆಯನ್ನು ನೀಡಿದೆ.

2024–27ನೇ ಸಾಲಿನ ಐಸಿಸಿ ಟೂರ್ನಿಗಳ ಭಾರತದಲ್ಲಿನ ಪ್ರಸಾರದ ಹಕ್ಕನ್ನು 3 ಶತಕೋಟಿ ಡಾಲರ್ (ಅಂದಾಜು 27 ಸಾವಿರ ಕೋಟಿ) ಕೊಟ್ಟು ಜಿಯೊಸ್ಟಾರ್ ಖರೀದಿಸಿತ್ತು.

ಅನ್ವಯ್ ದ್ರಾವಿಡ್ ಪಡೆಗೆ ಇನಿಂಗ್ಸ್ ಜಯ

ಪ್ರಜಾವಾಣಿ ವಾರ್ತೆ

ರತನ್ ಬಿ.ಆರ್.

ಬೆಂಗಳೂರು: ಎಡಗೈ ಸ್ಪಿನ್ನರ್ ರತನ್ ಬಿ.ಆರ್. (55ಕ್ಕೆ6) ಅವರ ಕೈಚಳಕದ ನೆರವಿನಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ (19 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಒಡಿಶಾ ವಿರುದ್ಧ ಇನಿಂಗ್ಸ್ ಹಾಗೂ 53 ರನ್‌ಗಳ ಗೆಲುವು ಸಾಧಿಸಿತು. ಅದರೊಂದಿಗೆ ಅನ್ವಯ್ ದ್ರಾವಿಡ್ ಪಡೆಯು ಪಾಯಿಂಟ್ಸ್ ಪಟ್ಟಿಯಲ್ಲಿ 20 ಅಂಕಗಳೊಡನೆ ಸಿ ಗುಂಪಿನ ಅಗ್ರಸ್ಥಾನವನ್ನು ತನ್ನದಾಗಿಸಿಕೊಂಡಿತು.

ಒಡಿಶಾದ ಬಲಾಂಗಿರ್‌ನಲ್ಲಿ ನಡೆದ ಪಂದ್ಯದ ಅಂತಿಮ ದಿನವಾದ ಶುಕ್ರವಾರ, 7 ವಿಕೆಟ್‌ಗೆ 211 ರನ್‌ಗಳೊಂದಿಗೆ ಆಟ ಮುಂದುವರಿಸಿದ ಒಡಿಶಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 77.5 ಓವರ್ ಗಳಲ್ಲಿ 246 ರನ್‌ಗಳಿಗೆ ಕುಸಿಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಒಡಿಶಾ: 58.4 ಓವರ್‌ಗಳಲ್ಲಿ 170; ಕರ್ನಾಟಕ: 126.4 ಓವರ್‌ಗಳಲ್ಲಿ 8 ವಿಕೆಟ್‌ಗೆ 469 ಡಿ.; ಎರಡನೇ ಇನಿಂಗ್ಸ್: ಒಡಿಶಾ: 77.5 ಓವರ್‌ಗಳಲ್ಲಿ 246 (ಅರ್ಪಿತ್ ಮೊಹಾಂತಿ 44; ರತನ್ ಬಿ.ಆರ್. 55ಕ್ಕೆ6).

ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಗುರಿ

ನಿವೃತ್ತಿ ಹಿಂಪಡೆದ ವಿನೇಶ್

ನವದೆಹಲಿ (ಪಿಟಿಐ): 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಕ್ರೀಡೆಗಳಲ್ಲಿ ಪದಕಕ್ಕಾಗಿ ಮತ್ತೊಂದು ಪ್ರಯತ್ನ ನಡೆಸಲು ತಾವು ನಿವೃತ್ತಿಯಿಂದ ಹೊರಬರುವುದಾಗಿ ಭಾರತದ ಸ್ಟಾರ್ ಕುಸ್ತಿಪಟು ವಿನೇಶ್ ಫೋಗಟ್ ಅವರು ಶುಕ್ರವಾರ ಪ್ರಕಟಿಸಿದ್ದಾರೆ. 'ನನ್ನೊಳಗಿನ ಕಿಚ್ಚು ಇನ್ನೂ ಆರಿಲ್ಲ. ದಣಿವು ಮತ್ತು ಗದ್ದಲದಲ್ಲಿ ಅದು ಹುದುಗಿಹೋಗಿತ್ತು' ಎಂದು ಹೇಳಿದ್ದಾರೆ.

2024ರ ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆ.ಜಿ. ವಿಭಾಗದ ಸ್ಪರ್ಧೆಗೆ ಮೊದಲು ನಿಗದಿಗಿಂತ 100 ಗ್ರಾಂ ಹೆಚ್ಚುವರಿ ತೂಕ ಇದ್ದ ಕಾರಣ ಅವರನ್ನು ಚಿನ್ನದ ಪದಕದ ಸ್ಪರ್ಧೆಯ ವೇಳೆ ಅನರ್ಹಗೊಳಿಸಲಾಗಿತ್ತು. 31 ವರ್ಷ ವಯಸ್ಸಿನ ವಿನೇಶ್ ತೀವ್ರ ನಿರಾಸೆಗೆ ಒಳಗಾಗಿ, ಕೆಲವೇ ದಿನಗಳ ನಂತರ ನಿವೃತ್ತಿ ಪ್ರಕಟಿಸಿದ್ದರು.

ತಮಗೆ ಜಂಟಿಯಾಗಿ ಬೆಳ್ಳಿ ಪದಕ ನೀಡುವಂತೆ ವಿನೇಶ್ ಅವರು ಕ್ರೀಡಾ ನ್ಯಾಯಮಂಡಳಿಗೆ (ಸಿಎಎಸ್) ಮೊರೆಹೋಗಿದ್ದರು. ಆದರೆ ಸಿಎಎಸ್ ಇದಕ್ಕೆ ಒಪ್ಪಿರಲಿಲ್ಲ. ಇದರ ಬೆನ್ನಲ್ಲೇ ವಿನೇಶ್ ಅವರು ಕುಸ್ತಿಗೆ ವಿದಾಯ ಹೇಳಿದ್ದರು. ರಾಜಕೀಯಕ್ಕೆ ಸೇರ್ಪಡೆಗೊಂಡ ಅವರು ಹರಿಯಾಣದ ಜುಲಾನಾ ಕ್ಷೇತ್ರದಿಂದ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಶಾಸಕಿಯಾಗಿದ್ದರು.


ವಿನೇಶ್ ಫೋಗಟ್

'ನಿಮ್ಮ ಪಾಲಿಗೆ ಪ್ಯಾರಿಸ್ ಕೂಟ ಕೊನೆಯೇ ಎಂದು ಜನ ಕೇಳುತ್ತಲೇ ಬಂದಿದ್ದರು. ನನ್ನ ಬಳಿ ಉತ್ತರವಿರಲಿಲ್ಲ. ನಾನು ಒತ್ತಡ, ನಿರೀಕ್ಷೆಯ ಭಾರ ಮತ್ತು ನನ್ನದೇ ಮಹತ್ವಾಕಾಂಕ್ಷೆಯ ಪರಿಣಾಮ ಮ್ಯಾಟ್ ತೊರೆಯಬೇಕಾಯಿತು. ವರ್ಷಗಳಲ್ಲಿ ಮೊದಲ ಬಾರಿ ಈಗ ನಿರಾಳಭಾವ ಮೂಡಿದೆ' ಎಂದು ವಿನೇಶ್ ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಸೋಮವೀರ್ ರಾಠಿ ಅವರನ್ನು ವಿವಾಹವಾಗಿರುವ ವಿನೇಶ್ ಜುಲೈನಲ್ಲಿ ಗಂಡುಮಗುವಿಗೆ ತಾಯಿಯಾಗಿದ್ದರು.

'ಹೊಸ ಸ್ಫೂರ್ತಿಯೊಡನೆ ಲಾಸ್ ಏಂಜಲೀಸ್ 28 ಕ್ರೀಡೆಗಳಿಗೆ ಹೊಸದಾಗಿ ಪಯಣ ಆರಂಭಿಸುವುದಾಗಿ ವಿನೇಶ್ ತಿಳಿಸಿದ್ದಾರೆ.

'ಅಂಜಿಕೆಯಿಲ್ಲದ ಹೃದಯ, ಬತ್ತದ ಸ್ಫೂರ್ತಿಯೊಡನೆ ಲಾಸ್ ಏಂಜಲೀಸ್ 2028ರತ್ತ ಹೆಜ್ಜೆಯಿಡುತ್ತಿದ್ದೇನೆ. ಈ ಬಾರಿ ನಾನೊಬ್ಬಳೇ ಇಲ್ಲ, ನನ್ನ ಮಗನೂ ನನ್ನ ಜೊತೆಯಲ್ಲಿದ್ದಾನೆ. ಲಾಸ್ ಏಂಜಲೀಸ್ ಹಾದಿಯಲ್ಲಿ ನನ್ನ ಅತಿ ದೊಡ್ಡ ಪ್ರೇರಣೆ ಮತ್ತು ನನ್ನ ಪುಟ್ಟ ಚಿಯರ್‌ಲೀಡರ್ ಇದ್ದಾನೆ' ಎಂದು ಹೇಳಿದ್ದಾರೆ.

ಒಲಿಂಪಿಕ್ ಸ್ಪರ್ಧೆಯೊಂದರ ಚಿನ್ನದ ಪದಕದ ಸ್ಪರ್ಧೆಗೆ ಅರ್ಹತೆ ಪಡೆದ ಭಾರತದ ಮೊದಲ ಮಹಿಳಾ ಕುಸ್ತಿಪಟು ಎಂಬ ಶ್ರೇಯ ಈಗಾಗಲೇ ಅವರದಾಗಿದೆ. ಮೂರು ಬಾರಿಯ ಒಲಿಂಪಿಯನ್ ಆಗಿರುವ ವಿನೇಶ್, ಏಷ್ಯನ್ ಕ್ರೀಡೆ ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದಿದ್ದಾರೆ.

ಮೆಸ್ಸಿ ಭಾರತ ಪ್ರವಾಸ ಇಂದಿನಿಂದ

ಕೋಲ್ಕತ್ತ (ಎಎಫ್‌ಪಿ/ಪಿಟಿಐ): ಫುಟ್‌ಬಾಲ್ ದಿಗ್ಗಜ, ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ ಅವರ ಮೂರು ದಿನಗಳ ಭಾರತ ಪ್ರವಾಸ ಶನಿವಾರ ಆರಂಭವಾಗಲಿದೆ.

'ಗೋಟ್ (GOAT - Greatest Of All Time) ಟೂರ್ ಆಫ್ ಇಂಡಿಯಾ 2025' ಕಾರ್ಯಕ್ರಮದ ಅಂಗವಾಗಿ ಮೆಸ್ಸಿ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ. ಈ ಪ್ರವಾಸದಲ್ಲಿ ಅವರು ನಾಲ್ಕು ನಗರಗಳಿಗೆ (ಕೋಲ್ಕತ್ತ, ಅಹಮದಾಬಾದ್, ಮುಂಬೈ ಮತ್ತು ನವದೆಹಲಿ) ಭೇಟಿ ನೀಡುವರು. ಸೋಮವಾರ ಪ್ರಧಾನಿ ನರೇಂದ್ರ ಮೋದಿ ಜೊತೆಗಿನ ಭೇಟಿಯೊಂದಿಗೆ 38 ವರ್ಷದ ಸೂಪರ್ ಸ್ಟಾರ್ ಆಟಗಾರನ ಭಾರತ ಪ್ರವಾಸ ಮುಕ್ತಾಯವಾಗಲಿದೆ.

ಕೋಲ್ಕತ್ತದಲ್ಲಿ ನಿರ್ಮಿಸಲಾಗಿರುವ ತಮ್ಮ 70 ಅಡಿ ಎತ್ತರದ ಪ್ರತಿಮೆಯನ್ನು ಶನಿವಾರ ಬೆಳಿಗ್ಗೆ ಮೆಸ್ಸಿ ಅವರು ವರ್ಚುವಲ್ ಆಗಿ ಅನಾವರಣ ಮಾಡುವರು. ಭದ್ರತಾ ಕಾರಣದಿಂದಾಗಿ ಅವರು ಖುದ್ದಾಗಿ ಹಾಜರಾಗುತ್ತಿಲ್ಲ.

ಮೆಸ್ಸಿ ಅವರು ಕೋಲ್ಕತ್ತದಲ್ಲಿ ಬಾಲಿವುಡ್ ನಟ ಶಾರುಕ್ ಖಾನ್ ಮತ್ತು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರನ್ನು ಭೇಟಿಯಾಗಲಿದ್ದಾರೆ. ಬಳಿಕ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಅವರು ಪ್ರದರ್ಶನ ಪಂದ್ಯವನ್ನು ಆಡಲಿದ್ದಾರೆ.

ಸಂಜೆ ಹೈದರಾಬಾದ್‌ಗೆ ತೆರಳಲಿರುವ ಮೆಸ್ಸಿ, ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮತ್ತೊಂದು ಪ್ರದರ್ಶನ ಪಂದ್ಯವನ್ನು ಆಡುವರು. ಈ ಪಂದ್ಯದಲ್ಲಿ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರೂ ಕಣಕ್ಕಿಳಿಯಲಿದ್ದಾರೆ.

ಭಾನುವಾರ ಮುಂಬೈನ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದಲ್ಲಿ ನಡೆಯುವ ಸಹಾಯಾರ್ಥ ಪಂದ್ಯದಲ್ಲಿ ಮೆಸ್ಸಿ ಭಾಗವಹಿಸುವರು. ಬಳಿಕ ಸತ್ಕಾರ್ಯದ ಉದ್ದೇಶದಿಂದ ಹಮ್ಮಿಕೊಂಡಿರುವ ಫ್ಯಾಷನ್ ಶೋದಲ್ಲಿ ರ‍್ಯಾಂಪ್ ಮೇಲೆ ಹೆಜ್ಜೆ ಹಾಕುವರು. ಸೋಮವಾರ ಅವರು ದೆಹಲಿಗೆ ಭೇಟಿ ನೀಡುವರು.

'ಭಾರತ ನನಗೆ ಬಹಳ ವಿಶೇಷವಾದ ದೇಶ. 14 ವರ್ಷಗಳ ಹಿಂದೆ ಅಲ್ಲಿ ಕಳೆದ ಅಮೂಲ್ಯ ಕ್ಷಣಗಳು ನನ್ನ ನೆನಪಿನಲ್ಲಿವೆ. ಅದ್ಭುತವಾದ ಅಭಿಮಾನಿಗಳನ್ನು ನೋಡಿದ್ದೆ' ಎಂದು ಮೆಸ್ಸಿ ಪ್ರವಾಸ ಆರಂಭಕ್ಕೂ ಮುನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೋಲ್ಕತ್ತದಲ್ಲಿ ನಿರ್ಮಿಸಲಾದ 70 ಅಡಿ ಎತ್ತರದ ಲಯೊನೆಲ್ ಮೆಸ್ಸಿ ಪ್ರತಿಮೆ — ಎಎಫ್‌ಪಿ ಚಿತ್ರ

ಸೆಮಿಫೈನಲ್‌ಗೆ ಉನ್ನತಿ, ಕಿರಣ್

ಕಟಕ್ (ಪಿಟಿಐ): ಭಾರತದ ಶಟ್ಲರ್‌ಗಳಾದ ಉನ್ನತಿ ಹೂಡಾ, ತಸ್ನಿಮ್ ಮಿರ್, ಇಶಾರಾಣಿ ಬರೂವ, ಕಿರಣ್ ಜಾರ್ಜ್ ಮತ್ತು ರೌನಕ್ ಚೌಹಾಣ್ ಅವರು ಒಡಿಶಾ ಮಾಸ್ಟರ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ಪುರುಷರ ಸಿಂಗಲ್ಸ್‌ನ ಕಾರ್ಟರ್ ಫೈನಲ್‌ನಲ್ಲಿ ಎರಡನೇ ಶ್ರೇಯಾಂಕದ ಕಿರಣ್ 21-11, 21-17ರಿಂದ ಸ್ವದೇಶದ ರಿತ್ವಿಕ್ ಸಂಜೀವಿ ಅವರನ್ನು ಮಣಿಸಿದರು. ಅವರು ನಾಲ್ಕರ ಘಟ್ಟದ ಪಂದ್ಯದಲ್ಲಿ ರೌನಕ್ ಅವರನ್ನು ಎದುರಿಸಲಿದ್ದಾರೆ. ರೌನಕ್ ಅವರು 21-19, 22-20ರಿಂದ ಏಳನೇ ಶ್ರೇಯಾಂಕದ ಶಂಕರ್ ಮುತ್ತುಸಾಮಿ ಸುಬ್ರಮಣಿಯನ್ ಅವರಿಗೆ ಆಘಾತ ನೀಡಿದರು. ಇಂಡೊನೇಷ್ಯಾದ ಮುಹಮ್ಮದ್ ಯೂಸುಫ್ 49 ನಿಮಿಷಗಳ ಹೋರಾಟದಲ್ಲಿ 21-9, 22-20ರಿಂದ ಅಗ್ರಶ್ರೇಯಾಂಕದ ತರುಣ್ ಮನ್ನೆಪಳ್ಳಿ ಅವರನ್ನು ಸೋಲಿಸಿದರು.

ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ತನ್ವಿ ಶರ್ಮಾ ಅವರಿಗೆ ಆಘಾತವಾಯಿತು. ತಾನ್ಯಾ ಹೇಮಂತ್ 21-18, 21-17 ರಿಂದ ತನ್ವಿ ಅವರನ್ನು ಹಿಮ್ಮೆಟ್ಟಿಸಿದರು. ತಾನ್ಯಾ ಮುಂದಿನ ಸುತ್ತಿನಲ್ಲಿ ಸ್ವದೇಶದ ಇಶಾರಾಣಿ ಬರೂವ ಅವರನ್ನು ಎದುರಿಸಲಿದ್ದಾರೆ.

ಉನ್ನತಿ ಹೂಡಾ

ಎರಡನೇ ಶ್ರೇಯಾಂಕದ ಪೊರ್ನ್‌ಪಿಚಾ ಚೊಯೀಕಿವಾಂಗ್ (ಮಲೇಷ್ಯಾ) ಅವರನ್ನು ಮಣಿಸಿ ಅಭಿಯಾನ ಆರಂಭಿಸಿದ್ದ ಇಶಾರಾಣಿ ಅವರು ಕ್ವಾರ್ಟರ್ ಫೈನಲ್‌ನಲ್ಲಿ 21-16, 21-14ರಿಂದ ಆರನೇ ಶ್ರೇಯಾಂಕದ ಅನ್ಮೋಲ್ ಖರ್ಬ್ ಅವರನ್ನು ಸೋಲಿಸಿದರು.

ಅಗ್ರ ಶ್ರೇಯಾಂಕದ ಉನ್ನತಿ 21-16, 21-15 ರಿಂದ ಅನುಪಮಾ ಉಪಾಧ್ಯಾಯ ವಿರುದ್ಧ ಜಯ ಸಾಧಿಸಿದರು. ಅವರು ಮುಂದಿನ ಸುತ್ತಿನಲ್ಲಿ ತಸ್ನಿಮ್ ಅವರ ಸವಾಲನ್ನು ಎದುರಿಸುವರು. ತಸ್ನಿಮ್ 21-19, 21-6ರಿಂದ ಏಳನೇ ಶ್ರೇಯಾಂಕದ ತೈವಾನ್‌ನ ತುಂಗ್ ಸಿಯೊ-ಟಾಂಗ್ ಅವರನ್ನು ಮಣಿಸಿದರು.

ಟೆಸ್ಟ್: ಕಿವೀಸ್‌ಗೆ ಸುಲಭ ಜಯ

ವೆಲಿಂಗ್ಟನ್ (ಎಎಫ್‌ಪಿ): ವೇಗಿ ಜೇಕಬ್ ಡಫಿ (38ಕ್ಕೆ5) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ನ್ಯೂಜಿಲೆಂಡ್ ತಂಡ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರ ವೆಸ್ಟ್ ಇಂಡೀಸ್ ತಂಡವನ್ನು 9 ವಿಕೆಟ್‌ಗಳಿಂದ ಸೋಲಿಸಿತು. ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ವೆಸ್ಟ್ ಇಂಡೀಸ್ ಎರಡನೇ ಇನಿಂಗ್ಸ್‌ನಲ್ಲಿ 128 ರನ್‌ಗಳಿಗೆ ಕುಸಿಯಿತು. ಮೊದಲ ಇನಿಂಗ್ಸ್‌ನಲ್ಲಿ 73 ರನ್ ಮುನ್ನಡೆ ಪಡೆದಿದ್ದ ನ್ಯೂಜಿಲೆಂಡ್ ಗೆಲ್ಲಲು ಬೇಕಿದ್ದ 56 ರನ್‌ಗಳನ್ನು 10 ಓವರುಗಳಲ್ಲಿ ಗಳಿಸಿತು.

ಮೂರನೇ ಹಾಗೂ ಅಂತಿಮ ಟೆಸ್ಟ್ ಗುರುವಾರ ಮೌಂಟ್ ಮಾಂಗಾನೂಯಿಯಲ್ಲಿ ಆರಂಭವಾಗಲಿದೆ.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 205 ಮತ್ತು 46.2 ಓವರುಗಳಲ್ಲಿ 128 (ಕವೆಮ್ ಹಾಜ್ 35, ಜಸ್ಟಿನ್ ಗ್ರೀವ್ಸ್ 25; ಜೇಕಬ್ ಡಫಿ 38ಕ್ಕೆ5, ಮೈಕೆಲ್ ರೇ 45ಕ್ಕೆ3); ನ್ಯೂಜಿಲೆಂಡ್: 9ಕ್ಕೆ278 ಡಿ. ಮತ್ತು 10 ಓವರುಗಳಲ್ಲಿ 1ಕ್ಕೆ 57 (ಡೆವಾನ್ ಕಾನ್ವೆ ಔಟಾಗದೇ 28).

ಡಬ್ಲ್ಯುಟಿಸಿ ರ‍್ಯಾಂಕಿಂಗ್: 3ನೇ ಸ್ಥಾನಕ್ಕೆ ಕಿವೀಸ್

ದುಬೈ (ಪಿಟಿಐ): ವೆಸ್ಟ್ ಇಂಡೀಸ್ ವಿರುದ್ಧ ಎರಡನೇ ಟೆಸ್ಟ್ ಪಂದ್ಯದಲ್ಲಿ ಭರ್ಜರಿ ಜಯಗಳಿಸಿದ ಪರಿಣಾಮ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿಯಲ್ಲಿ ನ್ಯೂಜಿಲೆಂಡ್ ಮೂರನೇ ಸ್ಥಾನಕ್ಕೇರಿತು. ಭಾರತ ಒಂದು ಸ್ಥಾನ ಕೆಳಗೆ ಸರಿದು ಆರನೇ ಸ್ಥಾನಕ್ಕಿಳಿಯಿತು.

ಮೊದಲ ಎರಡು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ಗಳಲ್ಲಿ ಭಾರತ ರನ್ನರ್ ಅಪ್ ಆಗಿತ್ತು. ದಕ್ಷಿಣ ಆಫ್ರಿಕಾಕ್ಕೆ ತವರಿನಲ್ಲಿ 0–2ರಲ್ಲಿ ಸರಣಿ ಸೋತ ನಂತರ ಭಾರತ ಐದನೇ ಸ್ಥಾನಕ್ಕಿಳಿದಿತ್ತು. ನ್ಯೂಜಿಲೆಂಡ್ ಆರನೇ ಸ್ಥಾನದಲ್ಲಿತ್ತು. ಆದರೆ ವೆಲಿಂಗ್ಟನ್‌ನ ಬೇಸಿನ್ ರಿಸರ್ವ್‌ನಲ್ಲಿ ಶುಕ್ರವಾರ ಎರಡನೇ ಟೆಸ್ಟ್ ಗೆದ್ದ ಪರಿಣಾಮ ಕಿವೀಸ್ ಮೂರನೇ ಸ್ಥಾನಕ್ಕೇರಿತು.

ಆಸ್ಟ್ರೇಲಿಯಾ 100 ಪರ್ಸೆಂಟೇಜ್ ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದಲ್ಲಿದೆ. ದಕ್ಷಿಣ ಆಫ್ರಿಕಾ (75 ಪರ್ಸೆಂಟೇಜ್ ಪಾಯಿಂಟ್) ಎರಡನೇ ಸ್ಥಾನದಲ್ಲಿದೆ. ಶ್ರೀಲಂಕಾ (66.67) ನಾಲ್ಕನೇ ಮತ್ತು ಪಾಕಿಸ್ತಾನ (50) ಕ್ರಮವಾಗಿ ನಾಲ್ಕು ಮತ್ತು ಐದನೇ ಸ್ಥಾನದಲ್ಲಿವೆ.

ರಾಜ್ಯಕ್ಕೆ ಅನುದಾನ ಬರದ ಬರೆ

ಒಂದನೇ ಪುಟದಿಂದ..

ಬಳಕೆ ಪ್ರಮಾಣಪತ್ರ ಸಲ್ಲಿಸಿದರಷ್ಟೇ ಅನುದಾನ

ಅನುದಾನ ಬಳಕೆಯ ಪ್ರಮಾಣಪತ್ರ ಸಲ್ಲಿಸಿದರಷ್ಟೇ ಜಲ ಜೀವನ್ ಮಿಷನ್‌ನ ಉಳಿದ ಅನುದಾನವನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಸ್ಪಷ್ಟಪಡಿಸಿದರು.

ಲೋಕಸಭೆ ಯಲ್ಲಿ ಪ್ರಶ್ನೋತ್ತರ ಅವಧಿ ಯಲ್ಲಿ ಬಳ್ಳಾರಿ ಸಂಸದ ಇ.ತುಕಾರಾಂ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, 'ಈಗಾಗಲೇ ಬಿಡುಗಡೆ ಆಗಿರುವ ಅನುದಾನದ ಬಳಕೆ ಪ್ರಮಾಣಪತ್ರವನ್ನು ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳು ಸಲ್ಲಿಸಿಲ್ಲ. ಬಳಕೆ ಪ್ರಮಾಣಪತ್ರ ಸಲ್ಲಿಸದೇ ಉಳಿದ ಅನುದಾನ ಬಿಡುಗಡೆ ಮಾಡುವುದಿಲ್ಲ ಎಂದು ಕರ್ನಾಟಕದ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರಿಗೆ ಪತ್ರದ ಮೂಲಕ ತಿಳಿಸಿದ್ದೇವೆ' ಎಂದರು.

ಸಿ.ಆರ್. ಪಾಟೀಲ

ಜಲ ಜೀವನ್ ಮಿಷನ್ ಅನುದಾನ ಬಿಡುಗಡೆಗೆ ಸಂಬಂಧಿಸಿ ಮುಂದಿನ ವಾರ ಇನ್ನೊಂದು ಸಭೆ ನಡೆಯಲಿದೆ ಎಂದರು.

ಇ.ತುಕಾರಾಂ ಮಾತನಾಡಿ, 'ಈ ಯೋಜನೆಯಲ್ಲಿ ರಾಜ್ಯ ಅದ್ಭುತ ಸಾಧನೆ ಮಾಡಿದೆ. ಆದರೆ, ಕೇಂದ್ರ ಸರ್ಕಾರವು ₹13,500 ಕೋಟಿಯಷ್ಟು ಅನುದಾನ ಉಳಿಸಿಕೊಂಡಿದೆ. ಈ ಅನುದಾನವನ್ನು ಶೀಘ್ರ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಕೇಂದ್ರದಿಂದ ₹22,476 ಕೋಟಿ ಬಾಕಿ

'ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಕೇಂದ್ರ ಸರ್ಕಾರ ಈ ಸಲ ₹56,549 ಕೋಟಿ ಬಿಡುಗಡೆ ಮಾಡಿದೆ. ಆದರೆ, ಡಿಸೆಂಬರ್ 6ರ ವರೆಗೆ ₹34,073 ಕೋಟಿಯಷ್ಟೇ ಬಿಡುಗಡೆ ಮಾಡಿದೆ. ₹22,476 ಕೋಟಿಯನ್ನು ಬಾಕಿ ಉಳಿಸಿಕೊಂಡಿದೆ' ಎಂದು ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯಕ್ಕೆ ಆಗಿರುವ ಅನ್ಯಾಯದ ಬಗ್ಗೆ ಸಂಸತ್‌ನಲ್ಲಿ ಪ್ರಸ್ತಾಪಿಸುವಂತೆ ರಾಜ್ಯ ಸರ್ಕಾರವು ಎಲ್ಲ ಸಂಸದರಿಗೆ ಪತ್ರ ಬರೆದಿದೆ. ಕೇಂದ್ರ ಸರ್ಕಾರದ ತಾರತಮ್ಯ ನೀತಿ ವಿರುದ್ಧ ರಾಜ್ಯಸಭೆಯಲ್ಲಿ ಮಂಗಳವಾರ ಧ್ವನಿ ಎತ್ತುತ್ತೇನೆ' ಎಂದು ತಿಳಿಸಿದರು.

ಚಂದ್ರಶೇಖರ್

'ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ 2020ರಲ್ಲಿ ರಾಜ್ಯದಲ್ಲಿ 8 ಲಕ್ಷ ರೋಗಿಗಳು ಇದ್ದರು. ಈಗ ರೋಗಿಗಳ ಸಂಖ್ಯೆ 34 ಲಕ್ಷಕ್ಕೆ ಏರಿದೆ. ಆದರೆ, ಕೇಂದ್ರದ ಅನುದಾನ ₹2,500 ಕೋಟಿಯಷ್ಟೇ ಇದೆ. ರಾಜ್ಯ ಸರ್ಕಾರವು ₹7,400 ಕೋಟಿ ಖರ್ಚು ಮಾಡಿದೆ. ಕೇಂದ್ರ ಸರ್ಕಾರವು ಯೋಜನೆಯ ಶೇ 60 ಮೊತ್ತ ಭರಿಸಬೇಕು. ಈಗ ಕೊಡುತ್ತಿರುವುದು ಶೇ 25ರಷ್ಟು ಪಾಲು ಮಾತ್ರ' ಎಂದು ಅವರು ದೂರಿದರು.

ನಟಿ ಮೇಲೆ ಅತ್ಯಾಚಾರ: ಅಪರಾಧಿಗಳಿಗೆ 20 ವರ್ಷ ಸಜೆ

ತಿರುವನಂತಪುರ: ಕೇರಳದಲ್ಲಿ ನಟಿ ಅಪಹರಣ ಮತ್ತು ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾದ ಆರು ಜನರಿಗೆ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆಯನ್ನು ಎರ್ನಾಕುಲಂನ ನ್ಯಾಯಾಲಯವೊಂದು ಶುಕ್ರವಾರ ವಿಧಿಸಿದೆ.

ಸುನಿಲ್ ಎನ್.ಎಸ್. ಅಲಿಯಾಸ್ ಪಲ್ಸರ್ ಸುನಿ ಹಾಗೂ ಮಾರ್ಟಿನ್ ಆಂಟನಿ, ಮಣಿಕಂಠನ್ ಬಿ, ವಿಜೇಶ್ ವಿ.ಪಿ, ಸಲೀಂ ಎಚ್. ಮತ್ತು ಪ್ರದೀಪ್ ಶಿಕ್ಷೆಗೊಳಗಾದವರು. ಇದೇ ಪ್ರಕರಣದಲ್ಲಿ ಡಿಸೆಂಬರ್ 8ರಂದು ನಟ ದಿಲೀಪ್ ಮತ್ತು ಇತರ ಮೂವರನ್ನು ಖುಲಾಸೆಗೊಳಿಸಲಾಗಿದೆ.

ಎರ್ನಾಕುಲಂ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಹನಿ ಎಂ. ವರ್ಗೀಸ್ ಅವರು ಈ ತೀರ್ಪು ನೀಡಿದರು.

ಗರ್ಗ್ ಸಾವು: ನಾಲ್ವರ ವಿರುದ್ಧ ಕೊಲೆ ಆರೋಪ

ಗುವಾಹಟಿ (ಪಿಟಿಐ): ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ಶುಕ್ರವಾರ ಗುವಾಹಟಿ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದು, ನಾಲ್ವರು ಆರೋಪಿಗಳ ವಿರುದ್ಧ ಕೊಲೆ ಆರೋಪ ಹೊರಿಸಲಾಗಿದೆ.

ಜುಬಿನ್ ಗರ್ಗ್

ಆರೋಪಿಗಳಾದ ಶ್ಯಾಮಕಾನು ಮಹಾಂತ, ಸಿದ್ಧಾರ್ಥ ಶರ್ಮಾ, ಶೇಖರ್ ಜ್ಯೋತಿ ಗೋಸ್ವಾಮಿ ಮತ್ತು ಅಮೃತಪರ್ವ ಮಹಾಂತ ವಿರುದ್ಧ ಕೊಲೆ ಆರೋಪ ಹೊರಿಸಲಾಗಿದೆ.

ಸೆಪ್ಟೆಂಬರ್ 19ರಂದು ಸಿಂಗಪುರದಲ್ಲಿ ಸಮುದ್ರದಲ್ಲಿ ಈಜುತ್ತಿದ್ದಾಗ ಜುಬಿನ್ ಸಾವು ಸಂಭವಿಸಿತ್ತು. 'ಈಶಾನ್ಯ ಭಾರತ ಉತ್ಸವ'ದಲ್ಲಿ ಭಾಗವಹಿಸಲು ಜುಬಿನ್ ಸಿಂಗಪುರಕ್ಕೆ ಬಂದಿದ್ದರು. ಈ ಉತ್ಸವದ ಮುಖ್ಯ ಆಯೋಜಕ ಶ್ಯಾಮಕಾನು ಮಹಾಂತ ಆಗಿದ್ದು, ದೋಷಾರೋಪ ಪಟ್ಟಿಯಲ್ಲಿ ಈತನನ್ನು ಪ್ರಮುಖ ಆರೋಪಿಯಾಗಿ ಸೇರ್ಪಡೆ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ಅಧಿಕಾರಿಗಳು ಇದುವರೆಗೆ 7 ಜನರನ್ನು ಬಂಧಿಸಿದ್ದಾರೆ.

ಗರ್ಗ್ ಅವರ ಸೋದರ ಸಂಬಂಧಿ, ಅಮಾನತುಗೊಂಡಿರುವ ಅಸ್ಸಾಂನ ಪೊಲೀಸ್ ಅಧಿಕಾರಿ ಸಂದೀಪನ್ ಗರ್ಗ್ ವಿರುದ್ಧವೂ ಕೊಲೆ ಆರೋಪ ಹೊರಿಸಲಾಗಿದೆ. ವಿಶೇಷ ಡಿಜಿಪಿ ಎಂ.ಪಿ. ಗುಪ್ತಾ ನೇತೃತ್ವದ ಎಸ್‌ಐಟಿ ತಂಡವು ಶುಕ್ರವಾರ ಬೆಳಿಗ್ಗೆ 3,500 ಪುಟಗಳ ದೋಷಾರೋಪ ಪಟ್ಟಿಯನ್ನು ಇಲ್ಲಿನ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಸಲ್ಲಿಸಿತು.

ಜುಬಿನ್ ಗರ್ಗ್ ಅವರ ಸಾವು 'ಸ್ಪಷ್ಟವಾಗಿ ಒಂದು ಕೊಲೆ' ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಇತ್ತೀಚೆಗೆ ವಿಧಾನಸಭೆಯಲ್ಲಿ ಹೇಳಿದ್ದರು. ಗರ್ಗ್ ಸಾವಿನ ಬಗ್ಗೆ ಸಿಂಗಪುರ ಪೊಲೀಸ್ ಪಡೆ (ಎಸ್‌ಪಿಎಫ್) ಸ್ವತಂತ್ರ ತನಿಖೆ ನಡೆಸುತ್ತಿದ್ದು, ಪ್ರಾಥಮಿಕ ತನಿಖೆ ಪ್ರಕಾರ, ಅವರ ಸಾವಿನಲ್ಲಿ ಯಾವುದೇ ಅಕ್ರಮ ನಡೆದಿಲ್ಲ ಎಂದು ಹೇಳಿದೆ. ಈ ತನಿಖೆ ಪೂರ್ಣಗೊಳ್ಳಲು ಇನ್ನೂ ಮೂರು ತಿಂಗಳು ಸಮಯ ತೆಗೆದುಕೊಳ್ಳಬಹುದು ಎಂದು ಎಸ್‌ಪಿಎಫ್ ಹೇಳಿದೆ.

7 ಸಾವಿರ ವಕ್ಫ್ ಆಸ್ತಿ ನಷ್ಟ: ಮುಸ್ಲಿಮರಿಗೆ ಹೊಡೆತ

ಶ್ರೀನಗರ (ಪಿಟಿಐ): ಜಮ್ಮು– ಕಾಶ್ಮೀರವು ಒಂದು ವರ್ಷದಲ್ಲಿ ಏಳು ಸಾವಿರಕ್ಕೂ ಹೆಚ್ಚು ನೋಂದಾಯಿತ ವಕ್ಫ್ ಆಸ್ತಿಗಳನ್ನು ಕಳೆದುಕೊಂಡಿದೆ ಎಂದು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿಯ (ಪಿಡಿಪಿ) ಮುಖ್ಯಸ್ಥರಾದ ಮೆಹಬೂಬಾ ಮುಫ್ತಿ ಶುಕ್ರವಾರ ಹೇಳಿದ್ದಾರೆ.

'ಇದು ಮುಸ್ಲಿಮರ ವಿರುದ್ಧದ ಈಚೆಗಿನ ಹೊಡೆತ' ಎಂದಿದ್ದಾರೆ.

'ದೇಶದಾದ್ಯಂತ 3.55 ಲಕ್ಷ ವಕ್ಫ್ ಆಸ್ತಿಗಳು ನೋಂದಣಿಯಾಗಿಲ್ಲ. ಉಮೀದ್ ಪೋರ್ಟಲ್‌ನ ಮಾಹಿತಿಯಂತೆ ಜಮ್ಮು– ಕಾಶ್ಮೀರವೊಂದರಲ್ಲೇ 7,240 ಆಸ್ತಿಗಳು ನಮೂದಾಗಿಲ್ಲ. ಈ ಬೃಹತ್ ಅಂತರ ವಕ್ಫ್ ಆಸ್ತಿಗಳ ಪಾರದರ್ಶಕತೆ ಮತ್ತು ರಕ್ಷಣೆ ಬಗ್ಗೆ ಗಂಭೀರ ಪ್ರಶ್ನೆ ಹುಟ್ಟುಹಾಕಿದೆ' ಎಂದು 'ಎಕ್ಸ್'ನಲ್ಲಿ ಉಲ್ಲೇಖಿಸಿದ್ದಾರೆ.

ಮೆಹಬೂಬಾ ಮುಫ್ತಿ

'ಹಿಂಸಾಚಾರ, ನೆಲಸಮಗೊಳಿಸುವಿಕೆ ಮತ್ತು ಹಕ್ಕು ನಿರಾಕರಣೆಯ ಮಾದರಿ ಮೂಲಕ ವಕ್ಫ್ ಆಸ್ತಿಗಳ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಮುಸ್ಲಿಮರ ವಿರುದ್ಧದ ಪ್ರಹಾರದಂತೆ ಭಾಸವಾಗುತ್ತಿದೆ' ಎಂದಿದ್ದಾರೆ. ಜಮ್ಮು–ಕಾಶ್ಮೀರ 2024ರ ಡಿ.9ರಂದು 32,553 ನೋಂದಾಯಿತ ವಕ್ಫ್ ಆಸ್ತಿಗಳನ್ನು ಹೊಂದಿದ್ದರೆ, 2025ರ ಡಿ.7ರಂದು 25,293 ವಕ್ಫ್ ಆಸ್ತಿ ಹೊಂದಿದೆ. 7,240 ಆಸ್ತಿಗಳು ನಮೂದಾಗಿಲ್ಲ ಎಂದಿದ್ದಾರೆ.

ಮುಂಬೈಗೆ ಹೈದರಾಬಾದ್ ಆಘಾತ

ಪುಣೆ (ಪಿಟಿಐ): ಬೌಲರ್‌ಗಳ ಸಾಂಘಿಕ ಪ್ರದರ್ಶನದ ನೆರವಿನಿಂದ ಹೈದರಾಬಾದ್ ತಂಡ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ 'ಬಿ' ಗುಂಪಿನ ಸೂಪರ್ ಲೀಗ್ ಪಂದ್ಯದಲ್ಲಿ ಶುಕ್ರವಾರ ಮುಂಬೈ ತಂಡದ ಮೇಲೆ 9 ವಿಕೆಟ್‌ಗಳ ಸುಲಭ ಗೆಲುವು ಪಡೆಯಿತು.

ಕುಮಾರ್ ಕುಶಾಗ್ರ

ಚಾಮಾ ಮಿಲಿಂದ್ (36ಕ್ಕೆ2), ತನಯ್ ತ್ಯಾಗರಾಜನ್ (27ಕ್ಕೆ2) ಮತ್ತು ಅನುಭವಿ ಮೊಹಮ್ಮದ್ ಸಿರಾಜ್ (21ಕ್ಕೆ3) ಅವರ ದಾಳಿಗೆ ಸಿಲುಕಿದ ಮುಂಬೈ 18.5 ಓವರುಗಳಲ್ಲಿ 131 ರನ್‌ಗಳಿಗೆ ಉರುಳಿತು. ಆರಂಭ ಆಟಗಾರ ಯಶಸ್ವಿ ಜೈಸ್ವಾಲ್ ಮತ್ತು ಮಧ್ಯಮ ಕ್ರಮಾಂಕದ ಹಾರ್ದಿಕ್ ತಮೋರೆ ತಲಾ 29 ರನ್ ಗಳಿಸಿದರು.

ಹೈದರಾಬಾದ್ 11.5 ಓವರುಗಳಲ್ಲಿ 1 ವಿಕೆಟ್ ಕಳೆದುಕೊಂಡು 132 ರನ್ ಗಳಿಸಿತು. ಆರಂಭ ಆಟಗಾರರಾದ ಅಮನ್ ರಾವ್ (ಅಜೇಯ 59, 29ಎ) ಮತ್ತು ತನ್ಮಯ್ ಅಗರವಾಲ್ (75, 40ಎ, 4x7, 6x4) ಅರ್ಧಶತಕಗಳನ್ನು ಗಳಿಸಿದರಲ್ಲದೇ, ಮೊದಲ ವಿಕೆಟ್‌ಗೆ 127 ರನ್ ಸೇರಿಸಿ ಗೆಲುವು ತ್ವರಿತಗೊಳಿಸಿದರು.

'ಬಿ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಹರಿಯಾಣ 7 ವಿಕೆಟ್‌ಗಳಿಂದ ರಾಜಸ್ತಾನ ತಂಡವನ್ನು ಸೋಲಿಸಿತು.

ಸಂಕ್ಷಿಪ್ತ ಸ್ಕೋರು: ರಾಜಸ್ತಾನ: 20 ಓವರುಗಳಲ್ಲಿ 8ಕ್ಕೆ 132 (ಶುಭಂ ಗರ್ವಾಲ್ 33, ಮಹಿಪಾಲ್ ಲೊಮ್ರೋರ್ ಔಟಾಗದೇ 37; ಅನ್ಶುಲ್ ಕಾಂಬೋಜ್ 24ಕ್ಕೆ2, ಇಶಾಂತ್ ಭಾರದ್ವಾಜ್ 24ಕ್ಕೆ2); ಹರಿಯಾಣ: 16.2 ಓವರುಗಳಲ್ಲಿ 3ಕ್ಕೆ 133 (ಅಂಕಿತ್ ಕುಮಾರ್ 60, ಪಾರ್ಥ್ ವತ್ಸ್ ಔಟಾಗದೇ 27).

ಕುಶಾಗ್ರ ಮಿಂಚು– ಜಾರ್ಖಂಡ್‌ಗೆ ಜಯ: ಕುಮಾರ್ ಕುಶಾಗ್ರ ಅವರ ಅಜೇಯ 86 ರನ್‌ಗಳ (42ಎ, 4x8, 6x4) ನೆರವಿನಿಂದ ಜಾರ್ಖಂಡ್ ತಂಡ 'ಎ' ಗುಂಪಿನ ಪಂದ್ಯದಲ್ಲಿ ಪಂಜಾಬ್ ತಂಡವನ್ನು ಆರು ವಿಕೆಟ್‌ಗಳಿಂದ ಮಣಿಸಿತು.

ಪಂಜಾಬ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್ ಸಲೀಲ್ ಅರೋರಾ ಅವರ ಅಬ್ಬರದ ಶತಕ (ಔಟಾಗದೇ 125, 45ಎ, 4x9, 6x11) ಫಲಪ್ರದವಾಗಲಿಲ್ಲ. ಪಂಜಾಬ್ ತಂಡವು 20 ಓವರುಗಳಲ್ಲಿ 6 ವಿಕೆಟ್‌ಗೆ 235 ರನ್ ಗಳಿಸಿದರೆ, ಜಾರ್ಖಂಡ್ 18.1 ಓವರುಗಳಲ್ಲಿ 4 ವಿಕೆಟ್‌ಗೆ 237 ರನ್ ಬಾರಿಸಿತು.

ಕುಶಾಗ್ರ ಅವರ ಜೊತೆ ಇಶಾನ್ ಕಿಶನ್ 47 (23ಎ), ಅನುಕೂಲ್ ರಾಯ್ (37, 17ಎ) ಮತ್ತು ಪಂಕಜ್ ಕುಮಾರ್ (ಅಜೇಯ 39, 18ಎ) ಅವರೂ ಜಾರ್ಖಂಡ ತಂಡ ಬೇಗ ಗುರಿತಲುಪಲು ನೆರವಾದರು.

ಫಲ ನೀಡದ ರೆಡ್ಡಿ ಹ್ಯಾಟ್ರಿಕ್: ಭಾರತ ತಂಡದ ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ (25, ಹ್ಯಾಟ್ರಿಕ್ ಸಹಿತ 17ಕ್ಕೆ3) ಅವರ ಆಲ್‌ರೌಂಡ್ ಆಟ ಆಂಧ್ರದ ಗೆಲುವಿಗೆ ಸಾಕಾಗಲಿಲ್ಲ. ಅಲ್ಪಸ್ಕೋರುಗಳನ್ನು ಕಂಡ 'ಎ' ಗುಂಪಿನ ಇನ್ನೊಂದು ಪಂದ್ಯದಲ್ಲಿ ಮಧ್ಯಪ್ರದೇಶ 4 ವಿಕೆಟ್‌ಗಳಿಂದ ಆಂಧ್ರ ಮೇಲೆ ಜಯಗಳಿಸಿತು.

ಇನಿಂಗ್ಸ್‌ನ ಮೂರನೇ ಓವರಿನಲ್ಲಿ ರೆಡ್ಡಿ ಅವರು ಸತತ ಎಸೆತಗಳಲ್ಲಿ ಹರ್ಷ ಗಾವಳಿ, ಹರ್‌ಪ್ರೀತ್ ಸಿಂಗ್ ಭಾಟಿಯಾ ಮತ್ತು ನಾಯಕ ರಜತ್ ಪಾಟೀದಾರ್ ಅವರ ವಿಕೆಟ್‌ಗಳನ್ನು ಪಡೆದರು.

ಸ್ಕೋರುಗಳು: ಆಂಧ್ರ: 19.1 ಓವರುಗಳಲ್ಲಿ 112 (ಕೆ.ಎಸ್.ಭರತ್ 39, ನಿತೀಶ್ ಕುಮಾರ್ ರೆಡ್ಡಿ 25; ಶಿವಂ ಶುಕ್ಲಾ 23ಕ್ಕೆ4, ತ್ರಿಪುರೇಶ್ ಸಿಂಗ್ 31ಕ್ಕೆ3); ಮಧ್ಯಪ್ರದೇಶ: 17.3 ಓವರುಗಳಲ್ಲಿ 6ಕ್ಕೆ 113 (ರಿಷಭ್ ಚೌಹಾನ್ 47, ರಾಹುಲ್ ಬಾತಮ್ ಅಜೇಯ 35, ನಿತೀಶ್ ಕುಮಾರ್ ರೆಡ್ಡಿ 17ಕ್ಕೆ3).

ಅಸ್ಸಾಂನ ನಾಲ್ವರು ಕ್ರಿಕೆಟಿಗರ ಅಮಾನತು

ಗುವಾಹಟಿ (ಪಿಟಿಐ): ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಅಕ್ರಮ ಚಟುವಟಿಕೆ ನಡೆಸಿದ ಆರೋಪದ ಮೇಲೆ ಅಸ್ಸಾಂ ಕ್ರಿಕೆಟ್ ಸಂಸ್ಥೆಯು (ಎಸಿಎ) ನಾಲ್ವರು ಆಟಗಾರರನ್ನು ಶುಕ್ರವಾರ ಅಮಾನತುಗೊಳಿಸಿದೆ.

ಅಮಿತ್ ಸಿನ್ಹಾ, ಇಶಾನ್ ಅಹ್ಮದ್, ಅಮನ್ ತ್ರಿಪಾಠಿ ಮತ್ತು ಅಭಿಷೇಕ್ ಠಾಕೂರಿ ಅಮಾನತುಗೊಂಡ ಆಟಗಾರರು. ವಿವಿಧ ಹಂತಗಳ ಟೂರ್ನಿಗಳಲ್ಲಿ ಅಸ್ಸಾಂ ತಂಡವನ್ನು ಪ್ರತಿನಿಧಿಸಿರುವ ಈ ಆಟಗಾರರ ವಿರುದ್ಧ ರಾಜ್ಯ ಪೊಲೀಸ್ ಅಪರಾಧ ವಿಭಾಗವು ಎಫ್‌ಐಆರ್ ದಾಖಲಿಸಿದೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಭಾಗವಹಿಸಿದ್ದ ಅಸ್ಸಾಂನ ಕೆಲ ಆಟಗಾರರ ಮೇಲೆ ಪ್ರಭಾವ ಬೀರಿ, ಪ್ರಚೋದಿಸಲು ಪ್ರಯತ್ನಿಸಿದ ಆರೋಪ ಈ ನಾಲ್ವರ ಮೇಲಿದೆ.

ಎಸ್‌ಎಂಎಟಿ ಟೂರ್ನಿಯಲ್ಲಿ ಅಸ್ಸಾಂ ತಂಡದ ಲೀಗ್ ಪಂದ್ಯಗಳು ನವೆಂಬರ್ 26ರಿಂದ ಡಿಸೆಂಬರ್ 8 ರವರೆಗೆ ಲಖನೌದಲ್ಲಿ ನಡೆದಿದ್ದವು. ಸೂಪರ್ ಲೀಗ್ ಹಂತವನ್ನು ಪ್ರವೇಶಿಸಲು ತಂಡ ವಿಫಲವಾಗಿತ್ತು.

ಕಬಡ್ಡಿ: ಕೆಂಪೇಗೌಡ ತಂಡಕ್ಕೆ ಜಯ

ಬೆಂಗಳೂರು: ಕೆಂಪೇಗೌಡ ತಂಡ, ಶುಕ್ರವಾರ ಯಂಗ್‌ಸ್ಟರ್ಸ್ ಕಬಡ್ಡಿ ಕ್ಲಬ್ ಆಶ್ರಯದಲ್ಲಿ ಆರಂಭವಾದ ರಾಜ್ಯ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ 23–13 ರಲ್ಲಿ ಹತ್ತು ಪಾಯಿಂಟ್‌ಗಳಿಂದ ಬಿಸಿವೈಎ ತಂಡವನ್ನು ಸೋಲಿಸಿತು.

ಕೋದಂಡರಾಮಪುರ ಆಟದ ಮೈದಾನದಲ್ಲಿ ಎಸ್.ಬಿ.ಶಿವಲಿಂಗಯ್ಯ – ಚಿನ್ನಸ್ವಾಮಿ ರೆಡ್ಡಿ ಸ್ಮರಣಾರ್ಥ ನಡೆಯುತ್ತಿರುವ ಟೂರ್ನಿಯ ಇನ್ನೊಂದು ಪಂದ್ಯದಲ್ಲಿ ಚಿಕ್ಕಬಾಣಾವರ ತಂಡ 34–26ರಲ್ಲಿ 8 ಪಾಯಿಂಟ್‌ಗಳಿಂದ ಬಾಪೂಜಿ ತಂಡವನ್ನು ಮಣಿಸಿತು. ಮೊದಲಾರ್ಧದಲ್ಲಿ ಬಾಪೂಜಿ ತಂಡ 13–11 ಮುನ್ನಡೆ ಸಾಧಿಸಿತ್ತು. ಯಂಗ್‌ಸ್ಟರ್ಸ್ ತಂಡ 35–28ರಲ್ಲಿ ಏಳು ಪಾಯಿಂಟ್‌ಗಳಿಂದ ಬಯಲಾಂಜನೇಯ ತಂಡವನ್ನು ಪರಾಭವಗೊಳಿಸಿತು.

ಕ್ಲಾಸಿಕ್ ನ್ಯಾಷನಲ್ ತಂಡ 62–31 ರಿಂದ ವೈಎಫ್‌ಎ ಹೆಬ್ಬಾಳ ತಂಡವನ್ನು, ಬಾಸ್ ಈಸ್ ಬ್ಯಾಕ್ ತಂಡ 26–24 ರಿಂದ ಭಗತ್ ಬಾಯ್ಸ್ ತಂಡವನ್ನು ಸೋಲಿಸಿದವು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಟೂರ್ನಿಯನ್ನು ಉದ್ಘಾಟಿಸಿದರು. ಧಾರ್ಮಿಕ ದತ್ತಿ ಇಲಾಖೆ ಸದಸ್ಯ ಕೆ.ಎಂ. ನಾಗರಾಜ್, ಯಂಗ್‌ಸ್ಟರ್ಸ್ ಕಬಡ್ಡಿ ಕ್ಲಬ್ ಅಧ್ಯಕ್ಷ ಬಿ.ಕೆ.ಶಿವರಾಂ ಹಾಜರಿದ್ದರು.

'ಉದ್ದೀಪನ ಮದ್ದು ನಿರೋಧಕ: ದೇಶದಲ್ಲೇ ಉತ್ಪಾದಿಸಲಿ'

ನವದೆಹಲಿ: ಉದ್ದೀಪನ ಮದ್ದು ಮುಕ್ತ ರಾಷ್ಟ್ರವನ್ನಾಗಿ ಭಾರತವನ್ನು ರೂಪಿಸುವ ಅಗತ್ಯವಿದ್ದು, ಉದ್ದೀಪನ ಮದ್ದು ನಿರೋಧಕ ಕಿಟ್ ಅನ್ನು ಭಾರತದಲ್ಲೇ ಉತ್ಪಾದಿಸಲು ಸರ್ಕಾರ ಪ್ರೋತ್ಸಾಹ ನೀಡಬೇಕು ಎಂದು ರಾಜ್ಯಸಭೆಯ ನಾಮನಿರ್ದೇಶಿತ ಸದಸ್ಯೆ ಪಿ.ಟಿ ಉಷಾ ಅವರು ಶುಕ್ರವಾರ ಒತ್ತಾಯಿಸಿದರು.

ಪಿ.ಟಿ ಉಷಾ

ರಾಜ್ಯಸಭೆಯಲ್ಲಿ ಮಾತನಾಡಿದ ಅವರು, 'ಮೇಕ್ ಇನ್ ಇಂಡಿಯಾ' ಉಪಕ್ರಮದಡಿ ಉದ್ದೀಪನ ಮದ್ದು ನಿರೋಧಕ ಕಿಟ್‌ಗಳನ್ನು ದೇಶಿಯವಾಗಿ ಉತ್ಪಾದಿಸುವ ಅಗತ್ಯವಿದೆ' ಎಂದರು.

'ಭಾರತವು ಜಾಗತಿಕ ಮಟ್ಟದಲ್ಲಿ ಕ್ರೀಡೆಯ ಶಕ್ತಿ ಕೇಂದ್ರವಾಗಿದೆ. ನಮ್ಮ ಕ್ರೀಡಾಪಟುಗಳು ಅಡೆತಡೆಗಳನ್ನು ಮೀರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕಗಳನ್ನು ಪಡೆದಿದ್ದಾರೆ ಮತ್ತು ಲಕ್ಷಾಂತರ ಜನರಿಗೆ ಸ್ಫೂರ್ತಿಯಾಗಿದ್ದಾರೆ. ಆದರೆ ಉದ್ದೀಪನ ಮದ್ದಿನ ಬಳಕೆಯು ನ್ಯಾಯಯುತ ಆಟ, ಕ್ರೀಡಾಳುಗಳ ಆರೋಗ್ಯ ಮತ್ತು ದೇಶದ ಘನತೆಯ ಮೇಲೆ ಪರಿಣಾಮ ಬೀರುತ್ತದೆ' ಎಂದು ತಿಳಿಸಿದರು.

'ಉದ್ದೀಪನ ಮದ್ದು ಪತ್ತೆ ಮಾಡುವ ಉತ್ತಮ ಗುಣಮಟ್ಟದ ಕಿಟ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ಅಧಿಕ ವೆಚ್ಚ, ಪರೀಕ್ಷೆಯಲ್ಲಿ ವಿಳಂಬ ಮತ್ತು ಇತರ ಏಜೆನ್ಸಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ' ಎಂದು ಹೇಳಿದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

FOR SALE

BDA SITE No. 90, BTM 1st Stage, North facing 40 x 60, 60 ft Road, Adjacent to JALA BHAVAN, Between Bannerghatta Road to Jayanagar East End Road, Approx 100 mtr to Bannerghatta Main Road.

Genuine Buyers Call: Muralidhar
98453 01599

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Mechines (Electrical) for sale.

Contact:
6360605636 / 8431164733

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

50X80 EAST_NORTH Corner BDA Site Sale Banashankari 6th Stage, 3rd Block, Genuine Buyers Call: 9008418631.

ANJANAPURA 8TH Block, BSK 7th Block, Commercial Property for Sale: Contact: 9972720488/ 9880448478.

Hosur Road

ANEPALYA BANGALORE Property, 3360 sq ft. next to CMP Centre off Hosur Road available for sale. Buyers call 9844349701

Hebbal

HEBBAL 30X35 House Sale, Ground 1 BHK, Two Carparking, 1st 2 BHK, 2nd 2 BHK 9845623970/ 9739400838

HSR Layout

"HSR_LAYOUT 20X30 Commercial Building with Rent ₹1,60,000/-per Month, 30x40,40x60, Residential, Commercial sites for sale "Krishna" 9886294610"

Intl Airport Road

EMBASSY SPRINGS 50X80, Jade Gardens 60X100, Century Eden 40X50, Hollywood Town 4800-14500sft, Supreme Estates 9632974714

Jayanagar

40X60 WEST- FACING Site with Building for Sale, Jayanagar 1st Block. Contact: 9611880033.

J P Nagar

"J.P.NAGAR, SRINIDHI LAYOUT 30x51 Residential Site, East Facing, BBMP A_Katha, Full White. Direct Owner: 9845249799/ 9845088449"

Koramangala

KORAMANGALA 8TH Block Commercial property for sale 3200sqft. INR 37.7k/sqft Slightly Negotiable. Whatsapp Message Only 9663766492

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80 Contact Kumar:- 9945119449

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

COMERCIAL PROPERTY KEMPEGOWDA LAYOUT BDA Site 50x80, A Sector 6th Block 100 feet Road Genuine Buyers Only, Broker Excuse: 8884709409

Magadi Road

"BEL 2ND_STAGE Magadi Main Road 1425 Sqft x 2 Sites South West Corner 60`ft Road. 9845500019/ 7019314962"

Mysore Road

PRICE 1900SFT Only Mysore road kengeri Greater Bangalore 40x60 Ekhatha Only Immediately Settlement Contact: 8892731813

Mysore

SITES SALE AT KBL SILICON CITY PH3 Mysore EAST & WEST FACING @ RS. 3800 NO NEGOTIATION CHANDRU 9944754873

Nagarabhavi

"NAGARBHAVI/ VISHVESHWARAIAH / KEMPEGOWDA LAYOUT 30x40,40x60 OR ANY MEASUREMENT SITES REQUIRED`& AVAILABLE PREFERABLY OWNER/`ALLOTE SITES. 9845268611"

DIRECT OWNER 20x30, 30x40 Site House Nagarbhavi BDA Complex Near Metro Station: 9620696913/ 9880781399

Nandini Layout

NANDINI LAYOUT BDA 20x30 East facing, No.19, Narasimhaswamy Layout For Sale. Contact. 9845729728.

Nelamangala

30X40 SITE Available Brundavana Layout Near Vishwashanti Aashram 200 meter from Tumkur Road Arishinakunte: 9590009797

Rajarajeshwari Nagar

RR.NAGAR BEML 5th Stage 6560 Sqft. West Facing, Vastu Site Sale, Suitable for Apartment Contact: 9448121223.

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

Vishweshwariah Layout

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

BDA SITE SALE VISHWESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

"VISHVESWARAIAH 6TH-BLOCK 60ft_Road 75 Squares Building on 50x80 South facing for sale. 9845500019/ 7019314962"

COMMERCIAL SITE 33x65 North Face, RTO41 60ft Road Near 100 Feet Road Upkar Layout 8050705145

BDA AUCTION SITES FOR SALE @ VISHWESHWARAIAH LAYOUT, NPKL, ANJANAPURA, BSK 6th STAGE, ARKAVATHY: 99008-60506.

Mysore

SALE. 6000 Sq ft, site, Mysore University Employee Developments Layout. Only serious buyers Contact:- 8762018445.

Kanakapura Road

KANAKAPURA ROAD, BCC Layout,30x50, G+3 Brand New House 4.60 Cr/ 900 Sqft,3BHK Duplex 2.50Cr: 9845704509

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

Kanakapura Road

HIGH RENTAL INCOME PROPERTIES FOR SALE NEAR METRO STATIONS ON KANAKAPURA ROAD. SARAKKI HOMES: 9663676464

Uttarahalli

4BHK NEW FLATS SALE Ready_to Move A_Khatha, E-swathu, Carparking, Lift, Vaasthu, Maruthi_Layout. Rs.1.10.Cr. 9945224058, 6363181276.

Agricultural Land Converted

Nelamangala

DC CONVERTED land 10000 sqft near Nelamangala check post main road, yellow zone. Contact 9886789567

Vishweshwariah Layout

SMV LAYOUT 4th Block 875.Sqft. BDA Commercial North East`Corner Site`Sale Near 100`Feet Road. 1.30cr. Negotiable. Call:9164089633 9663226688.

Industrial & Factory

Hoskote

INDUSTRIAL LAND for SALE, At Pillagumpe Industrial Area, Hoskote. Dimension: 40x100 square meter, East facing. Contact: 8310098500

FOR RENT/ SALE Fully Furnished Office Old Airport Road VDB TOUCHDOWN Next to HAL Museum 7447Sqft 96 Work Stations 5 Cabins 3 Meeting Room1 Board 1 MD Cabin 6 Carparks. No PHONE CALLS WHATS APP MESSAGE ONLY TO: 9845031550

AUTOMOBILE 1000 Square feet Rental Commercial Building, Ground Floor, Ready Setup Available for Two Wheeler Dealership at 2nd Block, Rajajinagar, Contact: 7348951555/ 9845143415

COMMERCIAL BUILDING for Rent 8000 sq.ft with 40hp; I & II floor Near ABB Nelamangala Contact: 9482802330

VION PROPERTIES PVT. LTD.

(Builders, Devlopers, Promoters)
No 205, 2nd Floor, 6, Salapuria Money Chambers, KH Road, Shanthinagar, Bangalore 560027

PRIME OPPORTUNITY !!!

Invest Rs.800/- Per SQFT In Bangalore south district, next to Bannerghatta National Forest, excellent forest view for Eco nature lovers, Hill Climb- Hilltop- Forest view, Agriculture Farmland plots, close to Bangalore city, Quarter acre (10,000 sqft) & Half acre(20,000 sqft) adjacent to Bannerghatta Forest off Jigani /Anekal - Harohalli main 80 feet road

VICINITY

- 500 Mtrs to Main Road
- 750 Mtrs to Thatekere
- 800 Mtrs to Proposed STRR (Satellite Town Ring Road) 120: Feet
- 4 Kms To IIM (Indian Institute Of Management) New Campus 250 Acres
- 5 Kms To KHB (Karnataka Housing Board) Suryacity
- 5.5 Kms to Proposed International Standard Sports Stadium By Govt Of Karnataka
- 15 Kms to Jigani and Anekal
- 17 Kms to Harohalli
- 38 Kms to Bangalore Via Bannerghatta
- 49 Kms To Bangalore Via Harohalli

ONLY FEW PLOTS AVAILABLE !!!
CONTACT
7411692219 / 9632642940
E-mail: vionproperties@gmail.com

The California Holiday Village

RK ENTERPRISES

Residential
DTCP APPROVED
Sites

DTCP APPROVED
E-KHATA SITES

ದೇವನಹಳ್ಳಿ
ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ
45 ನಿಮಿಷಗಳ ಪ್ರಯಾಣ
ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ

OFFER PRICE Rs.649 per sq ft Onwards

- ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
- 100% ಕಾನೂನಾತ್ಮಕ ದಾಖಲೆ ಪತ್ರಗಳು
- ಅಭಿವೃದ್ಧಿಪಡಿಸಿದ ಲೇಔಟ್
- ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : •ನೀರು •ಬೀದಿ ದೀಪ •ರಸ್ತೆಗಳು •ಪಾರ್ಕ್ •ವಿದ್ಯುತ್ •ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

www.rkcalifornia.com
ಸೈಟ್ ಭೇಟಿಗಾಗಿ ಕರೆ ಮಾಡಿ : 8880665577

BUYING/ SELLING 20x30, 30x40, 40x60, 50x80 BDA Sites VISHVESWARAIAH LAYOUT, KEMPEGOWDA LAYOUT, Contact: 9035470616

DIRECT OWNER 30x40 BDA Site Sale VISHWESHWARAIAH LAYOUT/ KEMPEGWODA LAYOUT. Rs.8100/-. Sreenidhi: 9742681666, 9886634578

BDA SITE Sale 30x40 South Facing Very Good Location Rs. 2Cr Negotiable Vishweshwaraiah Layout 8th Block: 9611577666

Out-Station

PENUKONDA NEAR KIA Car-Factory Madakasira Highway 50X100 (2-SITES) Residential Converted, Gated Community, 499/- PSft: 8310681025

House

BTM Layout

HOUSE AND Site For Sale 30×40,40×60 East &North Facing For sale BTM 2nd Stage 9945377119/ 9844099557

Basavanagudi

SALE BDA Old House 25x35 North Face 30ft Road Vidhyapitta Near Ashok Nagar Basavanagudi, 9845969165

J P Nagar

J.P.NAGAR 1ST Phase_45x60, South, 40' Road 3BHK 3 unit House, 32,000/-, Excellent Residential -9845144365

Vijayanagar

DIRECT OWNER LAVISH HOME 40×65 West Facing BDA Property For Sale 5BHK TRIPLEX HOUSE 9739396969

Varthur

4BHK VILLA 3400 sq.ft. in BDA approved layout at Varthur. Urgent Sale. Owner moving abroad. Plot size 2180 sq.ft. Price 3.25 Cr. negotiable. Ph 9620067580

Flat

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Commercial Building

Malleshwaram

SALE OFFICE_SPACE 3600Sq.ft, Furnished 4th Floor,Vishnupriya Towers, Beside Srirampura Metro Station Price: 15,000/Sq.ft. Call:9900029200

Commerical

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL BUILDING available for Rent 350 sqft Basment, 1st Floor -300sqft, 5th Floor 800sqft all amenities including at Goraguntepalya, Tumkur Road, Bengaluru . Mob-9448274566

REAL ESTATE BUYING

Agricultural Land

Kanakapura Road

5 ACRES LAND REQUIRED between Kaggalipura to Harohalli on NH/ Closer to NH with Good Connectivity Tar Road: 8088600872

General

General

WE_DO FUNDING & Solutions/ Settlements for disputed properties under High Court,Civil/ DC/AC/ Tribunal/ Tahsildar Courts Pending cases. Contact Verna Developers, Barton Centre, MG Road, Bangalore. 9620253180.

Sites

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Vishweshwariah Layout

WANTED BDA Sites NRI, Vishweshwaraiah Layout, Kempegowda Layout, Nagarbhavi, Magadi Road, Banashankari Contact: 9620696913/ 9880781399

EDUCATIONAL

Financial

YOGI NAREYANA Education Trust (R) invites applications from Balija students (Karnataka) for Scholarships for 2025-2026. Eligibility: I Ph.D. I PG- 85% in Degree I UG- 95% IN II PUC I PUC- 98% IN SSLC Last Date: 31.12.25 Application only by Post/ Courier Forms: www.yneducationtrust .com / office 080- 22442277 / 9986043027

BUSINESS

Business to Business

Business

VENUSCAST
THE POWER OF DIGITAL BEAUTIFULLY DELIVERED.
Best Branding Solutions

OUR SERVICES
- ✓ Branding
- ✓ Digital
- ✓ Social Media Marketing
- ✓ Bus Back & Auto Back
- ✓ Hoardings
- ✓ No Parking Boards
- ✓ Flyers
- ✓ Four & Three Wheeler

Branding Solutions for Corporates, Government Dept., Educational Institutions, boutiques, Jewellery and All Business Needs.

CONTACT
VENUSCAST TECHNOLOGIES PVT. LTD.
9482303339
8722123445
9838123445
www.venuscast.com
UAE & INDIA

JOB OPPORTUNITIES

Wanted

WANTED EXPERIENCED Dhobis for a laundry washing unit in Bannerghatta, Bangalore Salary : 18,000 to 25,000 Call: 9880266007 / 8050666007

PERSONAL

Change of Name

I, NAGABHUSHAN SINGRI R/a#B403 Gouthami Comforts Basapura Main Road, Near Brightway International School, Bengaluru 560100, have`changed name NAGABHUSHAN SHANTHARAM SINGRI vide`affidavit 12.12.2025 before`Notary Hemalatha Bengaluru.

I, SUCHITRA S D/O Siddalingaiah and W/O Banandur Kempaiah, born on 06/06/1957 residing at P108, 7th Main, 10th Sector, LIC Colony, HAL 3rd stage Jeevanbhima Nagar, Bengaluru 560075, have changed my name to Suchiyamma S vide affidavit dated 11/12/25 at Bengaluru

I, MAHAMMAD DAWOOD LAIN, Residing at #151/7 Rajeshwarinagar Chamundipura Laggere, Bangalore-58 have changed my name as MAHAMMAD DAWOOD, vide affidavit dated 4/12/2025 before Notary V.Nagarajan, Bangalore

CHANGE OF NAME
K G Lokesh @ Lokesh K @ K Lokesh, residing at Kalegowdanadoddi Village, Maralawadi Hobli, Harohalli Taluk, Bangalore South-562112, State that the above names are one and the same and they belong to me only. Vide affidavit dated 28-11-2025 before notary Ramachandra, Kanakapura.

I, AMEENA_KHANUM KHAN R/a#78,Church Street, 2nd`Cross, Basavanagudi Bengaluru 560004, have changed name AMEENA KHAN vide`affidavit 12.12.2025 before`Notary Hemalatha Bengaluru.

I, VICTORIA_MARY W/o.Satish Amal Alexander R/a#36 4th.cross, Neelasandra VivekNagar_Post Bengaluru 560047 have`changed my`Name to REVATHI VICTORIA_MARY vide`affidavit dated: 17.11.2025 before`Notary A.Gerard Bangalore.

PUBLIC NOTICE

PUBLIC NOTICE

Our client, Mr. R.Rajshekar, has filed Regular First Appeal No. 2429/2023 before the Hon'ble High Court ofKarnataka against Ms. T.R.Nirmala & Others challenging the judgement and decree dated 29.08.2023 passed by the Hon'ble XIX Addl. City Civil & Sessions Judge At Bengaluru (CCH-18) in OS No. 2841/2017 filed by our client against Ms. T.R.Nirmala & Others in respect of property bearing No. No. 99, 11th Cross, I Stage, Indiranagar, Bengaluru (Schedule Property).

The Hon 'ble High Court of Karnataka by its order dated 12.09.2024, in RFA.No.2429 /2023, directed the Respondent No. 3, Mr. Mithun B. Sethia, not to induct any third parties without the prior permission of the Hon 'ble High Court of Karnataka.

General public are hereby informed and cautioned, that any transactions in relation to the Schedule Property with Mr. Mithun B. Sethia or his agents shall be at their own and sole risks and costs, and the same would not bind our client. Further, any transactions without the permission of the Court also would not bind our client and the same would also render the parties to such transaction liable for contempt of court.

SCHEDULE PROPERTY

All that piece and parcel of property bearing No.99, 2nd Main, 11th Cross, I Stage, Indiranagar, Bengaluru measuring east to west 60 feet and north to south, on eastern side 38.5 feet, on the western side, 35.5 feet with a residential building thereon and bounded on the: East by: Site No. 100, West by: Road, North by: Road and South by: Site No.98.

Bangalore, Date: 11.12.2025

HOLLA & HOLLA Advocates
Level 4, Prestige Nebula, No.8, Cubbon Road, Bangalore - 560001

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

DS MAX®

ಡಿಎಸ್ ಮ್ಯಾಕ್ಸ್
ಸ್ಕೈ ಸ್ಟ್ಯಾಂಜಾ

Just Launched

PRM/KA/RERA/1251/308/PR/281125/008287

DS MAX SKY STANZA
LUXURIOUS 2 & 3-BHK APARTMENTS

Jigani | 5 mins. APC Circle

2-BHK STARTS @ ₹ 59 L*
3-BHK STARTS @ ₹ 75 L*

CONGRATULATIONS TO EVERYONE
Who chose their dream home at the launch!

With an extraordinary 59% bookings, you've not only secured a beautiful home but also made a smart ROI-driven investment for your future.

Dr K V SATISH
Founder & Chairman, DS MAX Group

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/308/PR/280222/004739 G+3
CHANDAPURA
10 MINS. ELECTRONIC CITY
₹ 60.30 - 98.70 Lakhs*
8880 003 003

PRM/KA/RERA/1251/310/PR/151223/006489 G+3
BANASHANKARI
OPP. NPS SCHOOL (3 & 4-BHK)
₹ 1.45 - 2.17 Cr*
8880 461 461

PRM/KA/RERA/1251/308/PR/160824/006972 G+4
HOSA ROAD METRO
NEAR ELECTRONIC CITY
₹ 67.92 L - 1.34 Cr*
8880 013 310

PRM/KA/RERA/1250/301/PR/251024/007178 G+14
YELAHANKA
5 MINS. RAJANUKUNTE
₹ 54.85 - 97.21 Lakhs*
8880 465 465

PRM/KA/RERA/1251/310/PR/210324/006724 G+14
SILKBOARD
NEAR SINGASANDRA METRO STN.
₹ 87.62 L - 1.31 Cr*
8880 013 310

PRM/KA/RERA/1250/304/PR/251024/007179 G+14
WHITEFIELD
10 MINS. HOPE FARM METRO STN.
₹ 77.91 L - 1.32 Cr*
8880 461 461

PRM/KA/RERA/1251/472/PR/250225/007524 G+14
AIRPORT ROAD
NEAR PRESTIGE TECH IT PARK
₹ 87.89 L - 1.21 Cr*
8880 465 465

PRM/KA/RERA/1250/304/PR/150224/006622 G+14
WHITEFIELD
SOUKYA ROAD
₹ 70.65 L - 1.06 Cr*
8880 461 461

PRM/KA/RERA/1251/308/PR/160824/006973 G+14
BANNERGHATTA RD.
NEAR KOPPA GATE
₹ 62.42 - 82.18 Lakhs*
8880 013 310

PRM/KA/RERA/1251/308/PR/290122/004660 G+4
SARJAPURA
SARJAPUR - ATTIBELE ROAD
₹ 63.60 - 83.25 Lakhs*
8880 003 003

PRM/KA/RERA/1251/310/PR/150223/005721 G+14
MYSORE ROAD
NEAR CHALLAGHATTA METRO STN.
₹ 67.28 - 95.28 Lakhs*
8880 461 461

Visit our website or talk to our advisors for the complete portfolio
www.dsmaxproperties.com

ಡಿಎಸ್ ಮ್ಯಾಕ್ಸ್

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

*T & C Apply

CREDAI BENGALURU

FACILITY MANAGEMENT SERVICES

We Manage and Maintain Your Apartment
9164 022 000

INTERIORS

We design and style your home.
9164 056 000

REFER A DS-MAX HOME

Refer a buyer to earn big
9164 043 000

REFER A LAND TO DS-MAX

Offer a Land, Get a Home.
8880 463 463

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331